KARNATAKA

MRIGHHAKATIKA.

A DRAMA IN TEN ACTS,

BY

G. V. KRISHNACHARYAR,

Kanarese Pandit, Madras Christian College.

ಮಹಾಕವಿ ಶೂದ್ರಕನೃಪತಿ ಪ್ರಣೀತವಾದ

ರಸಾಲಂಕಾರಭರಿತಮುಂ ಲೋಕಾನುಭವನೀತಿಬೋಧಕಮು ಮೆನಿಸಿದ

ಮೃಚ್ಛಕಟಿಕಪ್ರಕರಣಂ.

ಶ್ರೀ ॥ ಗರಣಿ- ವೈಯಾಕರಣ- ಕೃಷ್ಣಾಚಾರ್ಯರಿಂದ

ಪಳೆಗನ್ನಡ ಪೊಸಗನ್ನಡ ನುಡಿಗಳಿಂ ಕಡುಚೆಲ್ವೆನಿಸಿ ಕಂಗೊಳಿಪಂತೆ

ಕ ನ್ನ ಡಿ ಸ ಲ್ಪ ಟ್ಟು

ದೇಶೀಯರ ಉಪಯೋಗಾರ್ಥವಾಗಿ ಮುದ್ರಿಸಿ ಪ್ರಕಟಿಸಲ್ಪಟ್ಟುದು.

MADRAS.

PRINTED AT THE "VEERARAGHAVA" PRESS.

1890.

PREFACE

The whole field of Kanarese Literature divides itself into two parts, the one meant for the stage, the other not so meant. The former is, unlike the English drama, divided into as many as ten different classes. Of the latter, the classes known as the Nātaka and the Prakarana are the most important. The original of the present translation belongs to the second of the aforesaid classes.

The hero of the play is Chārudatta, an ornament to the Brahmin community, and possessed of all the qualities characteristic of a hero. He amassed enormous wealth in trade and lived at Ujjain. But, being exceedingly lavish in his expenditure, he spent all his wealth in liberality to the poor, in erecting temples and digging wells, in planting arbours and orchards for the use of the people and in otherwise embellishing the country. In the end he became poor. Reduced, as he was, to this condition, he was loved for his noble and virtuous qualities by Vasanthasénе, a woman born in the Dancing girls' caste, but who was nevertheless chaste and virtuous. She underwent many hardships on his account and befriended him to the very last so that she came to be known as the *Vadhu*. Making this story the groundwork of his plot, the poet has, with great skill, produced the very interesting and instructive Drama before us. Besides showing the skill of the master artist in embellishing his work with all the figures of Rhetoric, he has succeeded in presenting the characters of the different personages in so clear a light that the life-picture herein drawn will not fail to highly interest and instruct the readers.

An admiration of the work and the encouragement of friends has induced me to place before such of my country-

occasion to point out the several instances of bad *grammar* found in some modern books. I remarked then that there were many more of the same sort and made a request that gentlemen interested in the matter would further examine such works. Full two years have elapsed since then. But compare the result. No citizen, no student, not one of the many gentlemen in whose hands the valuable trust of educating our youth is placed, has paid the least heed to the request. What does all this signify ? What inference does this suggest ? Is there none who loves Kanarese? Or, is it that those who profess a regard for the language give their mute consent to the present state ? Or, is this due to the want of union between the Kanarese people who dwell in countries governed by different rulers ? Or, is this because people can find no difference in the writings of a Shadakshari, a Kumára Vyása, a Kumára Válmíki, and the poets of the present day ?

We have only to lament the apathy of our educated classes who have not risen to the call for removing the evil that now threatens to shake the foundations of our national language. Perhaps the few who do really feel the desire to do good are lagging in zeal because they feel that to restore the language to its pristine purity they have neither the help of capable friends, nor the encouragement of good rulers, both so essential to an undertaking like this. In these days everyone is a warrior who buckles a sword, everyone a poet who has learnt to scrawl a few broken verses or even learnt to hold the pen, and every boy fresh from the College is a pundit, examiner, what is worse, a critic. One thing appears clear all round. The present generation has forgotten all the ancient beauties of the Kanarese language. Their sole aim and object seems to be to understand the meaning of words with ease ; and here their ideal of scholarship in the language seems o stop abruptly. Such then, in brief, are the evils that threaten our noble

men as cannot resort to the original, the means of deriving a portion of that pleasure through this translation. In doing this I have endeavoured to proceed on the best reading of the various copies. With a view to preserve the difference between the vulgar and the noble characters who speak Prákrit and Sanskrit respectively in the original, I have adopted the novel, but none the less valuable, method of making the characters talk in *Hosagannada* and *Halagannada* where in the original there was Prákrit or Sanskrit. The *vrittás* have been invariably rendered into *padyagalu*, while the *vachanas* have been changed to *gadyagalu*. I have tried to be faithful to the original though in attempting this I have in some places been literal—very literal. I have further without sticking to the words and the literal meaning, sometimes taken the idea only and worked it out as well as I could. In some other instances, I have departed from the original where a too literal following of the same would have been undesirable. My aim on the whole has been to follow the original as closely as I could and present the thoughts of the author to my readers. *S'akára*, by far the most difficult character to follow in a translation, is the store-house of all vulgarity and barbarism. I have made him talk *Grámmya*.

I have elsewhere written the story of the present drama in simple modern Kanarese in a prose work called *Mrichhakatikakathe*. Such of my readers as wish the plain story only are referred to that work.

Here I feel bound to notice one sad result of the two aspects of our language,——the old and the new. Although these modifications are only of recent growth, yet it is not very encouraging to find men of little learning calling themselves poets and writing verses which are not bound by any rules. We cannot feel too sorry for this. In the preface to a previous work of mine, the *Nágánanda Nátaka*, I took

language. Gentlemen, hasten lest you be too late with your help.

In view of all the above, I have lost—nay, rather cast away—my love for good Kanarese, that happy classical Kanarese of the ancients. But without stooping to the vulgar desire for ungrammatical language I have tried to steer my course clear of modern and ancient Kanarese and kept to the level of the time-honored Lakshmísa.

There are not in this book such figures of speech as Metaphors and Hyperboles which abound very largely in Sanskrit works. There is, however, an attempt made in this book of bringing together natural descriptions and thus illustrating moral principles, worldly precepts, and the like. I was persuaded to take up this work by M.R.Ry. M. Seshagiri Sastriar Avergal, M. A., who was of opinion that a work of the above kind would very largely suit the requirements of candidates preparing for the several University Examinations With a view to do this I have tried in this book to meet more the requirements of students than of professionals of the theatre.

I cannot conclude without observing that I have with considerable effort brought out this book at great expense to myself, and only hope that the learned will, keeping in view the good that is to be found herein, pass over what are purely errors of oversight. I shall feel thankful to my generous critics who will help me with their observations on the many points touched in the book.

G. V. K.

ವಿಜ್ಞಾಪನೆ.

ಸಹೃದಯರಿಗೆ ಸಂತೋಷಕರವಾದ ಕಾವ್ಯವು ದೃಶ್ಯವು ಶ್ರವ್ಯವು ಎಂದೆರಡು ಬಗೆಯಾಗಿರುವುದಲ್ಲವೆ! ಅದರಲ್ಲಿ ದೃಶ್ಯಕಾವ್ಯವು "ನಾಟಕಂ, ಸಪ್ರಕರಣಂ, ಭಾಣಃ, ಪ್ರಹಸನಂ, ಡಿಮಃ, ವ್ಯಾಯೋಗ, ಸಮವಾಕಾರೌ, ವೀಥ್ಯಂ, ಕೇ, ಹಾಮೃಗಾ, ದಶ" ಎಂದು ಹತ್ತು ಬಗೆಯಾಗಿರುವುದು. ಅದರೊಳಗೀಕಾವ್ಯವು ಎರಡನೆಯದಾದ ಪ್ರಕರಣವೆನಿಸುವುದು. ಅದರ ಲಕ್ಷಣವೇನೆಂದರೆ— "ಅಥ ಪ್ರಕರಣೇ ವೃತ್ತಮುತ್ಪಾದ್ಯಂ ಲೋಕಸಂಶ್ರಯಂ। ಅಮಾತ್ಯವಿಪ್ರವಣಿಜಾಮೇಕಂ ಕುರ್ಯಾಚ್ಚ ನಾಯಕಂ॥ ಧೀರಪ್ರಶಾಂತಂ ಸಾಪಾಯಂ ಧರ್ಮಕಾಮಾರ್ಥತತ್ಪರಂ। ಶೇಷಂ ನಾಟಕವತ್ಸಂಧಿಪ್ರವೇಶಕರಸಾದಿಕಂ॥ ನಾಯಿಕಾ ತು ದ್ವಿಧಾ ನೇತುಃ ಕುಲಸ್ತ್ರೀ ಗಣಿಕಾ ತಥಾ। ಕ್ವಚಿದೇಕೈವ ಕುಲಜಾ ವೇಶ್ಯಾ ಕ್ವಾಪಿ ದ್ವಯಂ ಕ್ವಚಿತ್॥ ಕುಲಜಾಭ್ಯಂತರಾ ಬಾಹ್ಯಾ ವೇಶ್ಯಾ ನಾತಿಕ್ರಮೋನಯೋಃ। ಆಭಿಃ ಪ್ರಕರಣಂ ತ್ರೇಧಾ ಸಂಕೀರ್ಣಂ ಧೂರ್ತಸಂಕುಲಂ॥"—ಎಂದು ಆಲಂಕಾರಿಕರು ಹೇಳಿರುವುದರಿಂದ ಈ ಪ್ರಕರಣವು ಉತ್ಪಾದ್ಯೇತಿವೃತ್ತವೆನಿಸಿ, ದ್ಯೂತಕರಶಕಾರಾದಿ ಧೂರ್ತಸಂಕುಲವಾಗಿ ಬ್ರಾಹ್ಮಣನಿಗೆ ವೇಶ್ಯಾಸಂಬಂಧವನ್ನೂ ವಾಣಿಜ್ಯಸಂಬಂಧವನ್ನೂ ವರ್ಣಿಸಿಯಿರುವುದರಿಂದ ಸಂಕೀರ್ಣಪ್ರಕರಣವೆಂದೆನಿಸಿರುವುದು.

ಈ ಗ್ರಂಥದ ನಾಯಕನು ವಿಪ್ರವಂಶಾವತಂಸನಾದ ಧೀರಶಾಂತ ನಾಯಕಗುಣಗಣಾಲಂಕೃತನಾದ ಚಾರುಚರಿತ್ರನಾದ ಚಾರುದತ್ತನೆಂಬುವನು. "ಅವನು ವೈಶ್ಯರಿಗೆ ಧನವಿತ್ತು ವ್ಯಾಪಾರವಂ ಮಾಡಿಸುತ್ತ ಬಹುದ್ರವ್ಯಾರ್ಜನೆಯಂ ಮಾಡಿ ಉಜ್ಜಯಿನಿಯಲ್ಲಿ ವಸಿಸುತ್ತೆ, ಅನೇಕ ಸರೋವರೋಪವನ ದೇವಾಲಯ ಪ್ರಪಾ ವಿಶ್ರಮಾಯತನಾದಿ ಲೋಕೋಪಕಾರಕಾರ್ಯಗಳಿಂದ ದೇಶವನ್ನೇ ಅಲಂಕರಿಸುತ್ತೆ, ತಾನುದಾರನಾದುದರಿಂ ಬಡವರಿಗೆ ಬೇಡಿದುದಂ ಕೊಟ್ಟು ಕೊಟ್ಟು ಕಡೆಗೆ ತಾನೇ ಬಡವನಾದನು. ಅಂತಾದ ರೂಪಸೂಳೆಯ ಜಾತಿಯಲ್ಲಿ ಹುಟ್ಟಿದ ಗುಣಗ್ರಾಹಿಣಿಯಾದ ವಸಂತಸೇನೆಯೆಂಬ ವೇಶ್ಯಾಂಗನೆಯು ಪತಿವ್ರತೆಯಂತೆಯೇ ಆ ಚಾರುದತ್ತನಲ್ಲಿ ಅನುರಾಗವಂ ಮಾಡುತ್ತಿದ್ದು ಅನೇಕ ವಿಪತ್ತುಗಳಂ ಕಳೆದುಳಿದು ಕಡೆಗೆ ವಧುವೆನಿಸಿಕೊಂಡಳು," ಎಂಬ ಕಥೆಯನ್ನಿಟ್ಟುಕೊಂಡು ಕವಿಯು ಅತ್ಯದ್ಭುತಬುದ್ಧಿಬಲದಿಂದ ಲೋಕೋತ್ತರವಚನರಚನಾಚಾತುರ್ಯವಂ ತೋರಿಸುತ್ತೆ ರಸಭಾವಾಲಂಕಾರಂಗಳಿಂದಲಂಕರಿಸಿ; ಅನೇಕ ಲೋಕನ್ಯಾಯಗಳನ್ನೂ, ಓದಿದವರಿಗುತ್ತಮ ವಿವೇಕೋದಯವಾಗುವಂತೆ ದುರ್ಜನ ಸಜ್ಜನ ಸ್ವಭಾವಗಳನ್ನೂ, ದೈವಿಕವ್ಯತಾಪ್ರಭಾವಾದಿಗಳನ್ನೂ, ಸ್ಪಷ್ಟಪಡಿಸಿರುವನು. ಆದುದರಿಂದೀಯಪೂರ್ವವಾದ ಕಥಾಶರೀರವನ್ನು ಆಮೂಲಾಗ್ರವಾಗಿ ಒಂದುಸಲವಾದರೂ ನೋಡುವರಸಿಕರಹೃದಯ

ಬುವುದು ತಲಸ್ಪರ್ಶರಾಗಿವಿಮರ್ಶಿಸುವ ಗುಣಜ್ಞರದಿವ್ಯಚಿತ್ತಕ್ಕೆ ವೇದ್ಯವಾಗದಿರದೆಂದು ನಂಬುವೆನು.

ಈಪುಸ್ತಕದಲ್ಲಿ [ ] ಈಗುರುತು ಪಾತ್ರಪ್ರವೇಶವನ್ನೂ, ( ) ಈಗುರುತು ಅಭಿನಯವಿವರಣವನ್ನೂ, :— ಈಗುರುತು ಹಳೆಗನ್ನಡವನ್ನೂ, ಹೆಸರುಗಳಬಳಿಯಿರುವ ॥ ಈಗುರುತು ಹೊಸಕನ್ನಡವನ್ನೂ, —ಇದು ಅರ್ಥೋಕ್ತಿಯನ್ನೂ, “ ” ಇದು ಅನುವಾದವನ್ನೂ, ! ಇದುಸಂಬೋಧನಾಶ್ಚರ್ಯಸಂತಾಪಸ್ಮರಣಗಳನ್ನೂ, ? ಇದು ಪ್ರಶ್ನೆಯನ್ನೂ, . ಇದುವಾಕ್ಯಸಮಾಪ್ತಿಯನ್ನೂ, ಸೂಚಿಸುವುದು. ಈಕಾವ್ಯವು ಸರ್ವಜನಸಾಧಾರಣವಾಗಿ ತಿಳಿಯಬೇಕೆಂಬ ಉದ್ದೇಶದಿಂದಲೇ ಪ್ರಕಟಿಸಿರುವಕಾರಣದಿಂದ ಇದರೊಳಗಣ ಕಠಿನಪದಗಳಿಗೆಲ್ಲಕ್ಕೂ ಅರ್ಥವಿವರಣವೊಂದು ಬೇರೆ ಯಿರುವುದು.

ಧನ ಜನ ಸಹಾಯಗಳಿಲ್ಲದೆಯೂ ತಕ್ಕಮುದ್ರಾಶಾಲೆ ದೊರೆಯದೆಯೂ ಮಾಡಬೇಕೆಂಬುತ್ಸಾಹಮಾತ್ರವಿದ್ದು ಅತಿಪ್ರಯಾಸದಿಂದಾ ದೀಕಾರ್ಯದಲ್ಲಿ ಏನಾದರೂ ಭ್ರಮಪ್ರಮಾದಾದಿ ಸ್ಖಾಲಿತ್ಯಗಳು ಕಾಣಬಂದರೆ ಸಹಜಶಾಂತಿಭೂಷಣರಾದ ಸುಜನರು ದಯೆಯಿಂದ ಅದನ್ನನನಗೆ ತಿದ್ದಿತಿಳುಹಿಸಿದರೆ ನಮ್ರನಾಗಿ ಅವುಗಳಂತೆಗೆದುಕೊಂಡು ಸದಾಕೃತಜ್ಞನಾಗಿರುವೆನು.

ವಿಕೃತಿಸಂವತ್ಸರದ
ವೈಶಾಖಶುಕ್ಲ ಪಂಚಮಿ } ಗ. ವೈ. ಕೃಷ್ಣಾಚಾರ್ಯಂ.

ಕಂ॥ ಮೃಚ್ಛಕಟಿಕಪ್ರಕರಣಂ
ತುಚ್ಛರದುರ್ಗುಣಗಳಿಂ ಸುಜನಸುಗುಣಗಳಿಂ
ದಚ್ಛಾತ್ಮರನಾಗಿಸುಗುಮ
ವಿಚ್ಛಿನ್ನಂತನ್ನನೊಲ್ದುಪಠಿಸಿಪಜನರಂ॥*॥

——(*)——

ಕಂ॥ ಶ್ರೀಮತ್ಕೃಷ್ಣಪದಾರ್ಚಕ
ಭೂಮೀಸುರವರ್ಯಗರಣಿಕೃಷ್ಣಾರ್ಯಂ ಶ್ರೀ
ಚಾಮೇಂದ್ರಕೃಪೆಯನೆಳಸು
ತ್ತೀಮೃಚ್ಛಕಟಿಕಮನಿಂತು ತಾಂ ಪ್ರಕಟಿಸಿದಂ॥*॥

—(*)—

ಕ್ಕೆ ವಿಲಕ್ಷಣಾನಂದವೂ ಸತ್ಯಧರ್ಮಸಾಧುಗುಣಗಳಲ್ಲಿ ಪಕ್ಷಪಾತವೂ ಉಂಟಾಗದಿರಲಾರದೆಂದು ದೃಢವಾಗಿ ನಂಬಿರುವೆನು.

ಇಂತಹ ಕಾವ್ಯದ ರಸಾನುಭವವು ನಮ್ಮ ನಾಡಿಗರಿಗೂ ಆಗುವುದಕ್ಕೆ ಇದನ್ನು ಕನ್ನಡಿಸಿದರೆ ಚೆನ್ನಾಗಿರುವುದೆಂದು ಕೆಲವರಿಂ ಪ್ರೋತ್ಸಾಹಿತನಾಗಿ ಬಹುಪುಸ್ತಕ ಸಂಪತ್ತಿಯಿಂದ ಪ್ರಕ್ಷಿಪ್ತಪಾಠಭೇದವನ್ನು ಕೂಡಬಿಡದೆ ಉತ್ತಮನೀಚಪಾತ್ರಗಳಿಗೆ ಯೋಗ್ಯವಾದ ಸಂಸ್ಕೃತಪ್ರಾಕೃತಸ್ಥಾನಂಗಳಿಗೆ ತಕ್ಕ ಹಳೆಗನ್ನಡ ಹೊಸಕನ್ನಡಗಳನ್ನಿರಿಸಿ ಪ್ರಾಯಿಕವಾಗಿ ಪದ್ಯಕ್ಕೆ ವೃತ್ತವನ್ನು ಗದ್ಯಕ್ಕೆ ವಚನವನ್ನೂ ರಚಿಸಿರುವೆನು. ಇದರಲ್ಲಿ ಕೆಲವುಕಡೆ ಪ್ರತಿಪದಾರ್ಥವೂ, ಕೆಲವುಕಡೆ ಮುಖ್ಯತಾತ್ಪರ್ಯಾರ್ಥವೂ, ಮತ್ತೆ ಕೆಲವುಕಡೆ ಇನ್ನೂ ವಿಶೇಷಾರ್ಥವೂ, ಗ್ರಹಿಸಲ್ಪಟ್ಟಿರುವುದಲ್ಲದೆ; ಅತ್ಯಂತಾಸಂಬದ್ಧಪ್ರಲಾಪಿಯೆನಿಸಿದ ಶಕಾರನೆಂಬ ನೀಚಪಾತ್ರದ ಭಾಷೆಯಲ್ಲಿ ಸಾಧಾರಣವಾಗಿ ಎಲ್ಲ ದೋಷಗಳಿಗೂ ಉದಾಹರಣೆ ಸಿಕ್ಕುವಂತೆ ಗ್ರಾಮ್ಯಭಾಷೆಯನ್ನೇ ಬರೆದಿರುವೆನಾದರೂ - ಕೆಲವುಕಡೆ ವಾಚಕರಿಗೆ ಅರ್ಥವಾಗದೆ ಹೋಗುವುದೆಂಬ ಶಂಕೆಯಿಂದ ಅದನ್ನು ಬಿಟ್ಟು ಸುಲಭವಾಗಿ ತಿಳಿಯುವಂತೆ ಮಾಡಿರುವೆನು. ಸಂಸ್ಕೃತದಲ್ಲಿರುವ ಛಂದಂಶವನ್ನೂ ಬಿಡದೇಯಿರುವುದರಿಂದ ಅದಕ್ಕಿದು ಪ್ರತಿಬಿಂಬವೆನ್ನಬಹುದು. ಇದಕ್ಕೆ ಸಂಗ್ರಹವಾದ ಕಥೆಯನ್ನು ಮಾತ್ರ ಬಯಸುತಕ್ಕವರು ಇನ್ನೊಂದು “ಮೃಚ್ಛಕಟಿಕಕಥೆ” ಎಂಬ ಚಿಕ್ಕಪುಸ್ತಕವನ್ನು ತೆಗೆದುಕೊಂಡು ನೋಡಬಹುದು, ಅದು ಎಲ್ಲರಿಗೂ ತಿಳಿಯುವಂತೆ ರೂಢಿಯಲ್ಲಿರುವ ನುಡಿಗನ್ನಡದಿಂದಲೇ ವಚನವಾಗಿ ಬರೆಯಲ್ಪಟ್ಟಿರುವುದು.

ಹೀಗೆ ಭಾಷೆಯು ಎರಡುಬಗೆಯಾಗಿದ್ದರೂ ಇತರದೇಶಭಾಷೆಗಳಂತೆ ಒಂದು ವಿಧವಾದ ಕಟ್ಟಳೆಯನ್ನು ಹೊಂದದೆ ಅಶಿಕ್ಷಿತರಾದ ಕವಿಗಳು ಹುಟ್ಟಿ ಮನಸ್ಸುಬಂದಂತೆ ಭಾಷೆಯನ್ನು ಕೆಡಿಸುವುದಕಾಗಿ ಎಷ್ಟು ಚಿಂತಿಸಿದರೂ ತೀರದು. ಅಂತಹ ನಮ್ಮ ಕನ್ನಡದ ಭಾಷಾವಿಷಯದಲ್ಲಿರುವ ಲಕ್ಷ್ಯಲಕ್ಷಣವಿರೋಧಗಳನ್ನು ಪೂರ್ವದಲ್ಲಿ ನಾಗಾನಂದನಾಟಕದ ಉಪೋದ್ಘಾತದಲ್ಲಿ ಕೆಲವುಮಟ್ಟಿಗೆ ತೋರಿಸಿ, ಇನ್ನೂ ಹೀಗೆಯೇ ಬಹಳವಿರುವುದೆಂದು ಸೂಚಿಸಿ, ಗುಣಜ್ಞರು ಪರೀಕ್ಷಿಸಬಹುದೆಂದು ಪ್ರಕಟಿಸಿ ಇದುವರೆಗೆ ಎರಡುವರುಷಗಳಾದರೂ- ನಾಡಿಗರಾಗಲೀ ವಿದ್ಯಾರ್ಥಿಗಳಾಗಲೀ ರಾಜಕೀಯಪಾಠಶಾಲಾವಿಚಾರಕರಾಗಲೀ ಬೋಧಕರಾಗಲೀ ತತ್ಪರೀಕ್ಷಕರಾಗಲೀ ಯಾರೊಬ್ಬರಾದರೂ ಅದನ್ನು ಗುಣದೋಷವಿಚಾರದಿಂದ ಸಮರ್ಥಿಸದೆ ಉಪೇಕ್ಷಿಸಿರುವುದಂ ನೋಡಿದರೆ;— ನಮ್ಮ ಕರ್ಣಾಟಭಾಷೆಯಲ್ಲಿ ಭಾಷಾಭಿಮಾನಿಗಳೇ ಇಲ್ಲವೋ; ಇದ್ದವರಿಗಾದರೂ ಯೋಗ್ಯವ್ಯವಸ್ಥೆಯೇ ಸಮ್ಮತವೇನೋ; ಇಲ್ಲದೆ ಭಿನ್ನಪ್ರಭುತ್ವದಿಂದ ದೇಶಗಳೂ ಭಿನ್ನಭಿನ್ನಗಳಾಗಿರಲು ಅಲ್ಲಿ ವಾಸಿಸುವ ದೇಶಾಂತರ ಖಂಡಾಂತರ ಜನಗಳಿಗೆ ಐಕಮತ್ಯವಿಲ್ಲದುದರಿಂದೆ

ಯೋ, ಅಥವಾ ನಮ್ಮ ಭಾಷೆಯಲ್ಲಿ - ಅದೃಶ್ಯಕವಿ, ದೃಶ್ಯಕವಿ, ಜ್ಞಾನಸಿಂಧುಕವಿ, ಕರ್ಣಾಟವ್ಯಾಸಶುಕವಾಲ್ಮೀಕಿಕವಿಗಳು, ಇನ್ನಾವರಕವಿಗಳೇ ಮುಂತಾದ ಪರಮಪಂಡಿತರಿಂದಮಾಡಲ್ಪಟ್ಟ ಬಹುಲಕ್ಷ್ಯಗ್ರಂಥಗಳೂ; ಹೊಸಗನ್ನಡನುಡಿಗನ್ನಡಿ, ಕನ್ನಡಕೌಮುದೀ, ವಾಣೀಮುಕುರ, ವಾಗ್ವಿಧಾಯಿನೀ, ಶಬ್ದಭಾಸ್ಕರಾದಿ ವಿಲಕ್ಷಣಲಕ್ಷಣಗ್ರಂಥಗಳೂ ಪ್ರಚುರವಾಗಿರುವುದರಿಂದ ಸಾಕಲ್ಯವಾಗಿ ಪರಸ್ಪರಲಕ್ಷ್ಯ ಲಕ್ಷಣಸಮನ್ವಯವಂ ಮಾಡುವುದು ಅಸಾಧ್ಯವಾದುದರಿಂದಲೋ; ಉಪೇಕ್ಷಾಕಾರಣವಂತಿಳಿಯದೆ ಅದುಹೇಗಾದರೂ ಇರಲೆಂದುತಿಳಿದು ಮುಂಚೆಯಿದ್ದ ಭಾಷಾಭಿಮಾನವಂ ತೊರೆದುಕೊಂಡು, ಈ ಕಾಲದವರಿಗೆ ಪದಪದಾರ್ಥಗಳು ಚನ್ನಾಗಿತಿಳಿಯುವುದೇ ಮುಖ್ಯೋದ್ದೇಶವಾಗಿರುವ ಕಾರಣದಿಂದನಾನು ಕೇವಲಲಕ್ಷಣಪರವಾದ ಪ್ರಾಚೀನಭಾಷೆಯನ್ನೂ ಕೇವಲಾಸಹ್ಯಕರವಾದ ನಿಂದ್ಯಗ್ರಾಮ್ಯಭಾಷೆಯನ್ನೂ ಬಿಟ್ಟು ಮಧ್ಯಸ್ಥಿತಿಯಲ್ಲಿರುವ ಜೈಮಿನಿಭಾರತಕಾರ ಲಕ್ಷ್ಮೀಶಾದಿಸಮ್ಮತವಾದ ಮಿಶ್ರಭಾಷಾಶೈಲಿಯನ್ನೇ ಪ್ರಕೃತೋಚಿತವಾಗಿ ಅವಲಂಬಿಸುವುದು ಯುಕ್ತವೆಂದು ತಿಳಿದುಹಾಗೆಮಾಡಿರುವೆನು.

ಅಂತಲ್ಲದೆ ನಾವೇ ಕೈಲಾದಮಟ್ಟಿಗೂ ಭಾಷೆಯಂ ಶುದ್ಧಗೊಳಿಸಿ ವಿಧಿಗಳನ್ನೇರ್ಪಡಿಸಿ ಸಮನ್ವಯಮಾಡಿ ಭಾಷೆಯನ್ನಭಿವೃದ್ಧಿಗೆ ತರುವೆವೆಂದರೆ - ಅದಕ್ಕೆತಕ್ಕಷ್ಟು ಧನೋಪಪತ್ತಿಯೂ ರಾಜಕೀಯಸಹಾಯವೂ ಜೀವನಸ್ವಾಸ್ಥ್ಯವೂ ಇಲ್ಲವು. ಇನ್ನುಕೇವಲಕೀರ್ತಿಕಾಮರಾಗಿಯಾದರೂ ಶ್ರಮಪಟ್ಟುಗ್ರಂಥಂಗಳಂರಚಿಸಿ ಪ್ರಕಟಿಸುವೆವೆಂದರೆ. ಈ ಕಾಲದಲ್ಲಿ - “ಸರ್ವೇಯಜಮಾನಾಸ್ಸರ್ವೇಋತ್ವಿಜಃ” ಎಂಬಂತೆಬರೆಹಬಂದವರೆಲ್ಲರೂ ಕವಿಗಳೂ; ಓದಲ್ಬಂದವರೆಲ್ಲರೂ ಉಪನ್ಯಾಸಕರೂ; ಯಕ್ಷಗಾನ ಕಾವ್ಯಮಾಲಾದಿಗಳನ್ನೋದುವ ಶಾಲಾವಿದ್ಯಾರ್ಥಿಗಳೆಲ್ಲರೂ ಪಂಡಿತರೂ, ಪಾಠಶಾಲೆಯಂ ಬಿಟ್ಟುಬಂದವರೆಲ್ಲರೂ ಒಡನೆಯೇಪರೀಕ್ಷಕರೂ, ಮತ್ತೆಕೆಲವರು ಏತದ್ಭಾಷಾಲೇಶಶೂನ್ಯರಾಗಿದ್ದರೂ ಅದಕ್ಕವರು ವಿಚಾರಕರೂ ಶೋಧಕರೂ ನಿಯಾಮಕರೂ ಕೋಶಾಭಿಧಾನಲಕ್ಷಣಕಾರಕರೂ, ಆಗಿರಲು — ತತ್ಪ್ರಮಾಣ್ಯವುಳ್ಳ ಅಜನಗಳನಡವೆ ಜೀವಿಸುವನಮಗೆ “ಶ್ವಾನಾರೋಹೇಕುತಸ್ಸೌಖ್ಯಂಪತನೇಕಾವಮಾನತಾ” ಎಂಬಂತೆ ಅಕಿಂಚಿತ್ಕರವಾದ ಆಕೀರ್ತಿಯು ಆರ್ತಿಯೇತಕ್ಕೆ? ಎಂದುಸುಮ್ಮನಿರುವುದೇ ಉತ್ತಮವು. ಹಾಗಲ್ಲದೆ ಒಂದುವೇಳೆ ಸ್ವಜಾತಿದೇಶಭಾಷಾಭಿನಿವೇಶ ಚಾಪಲ್ಯಗಳಿಂದ ತದುದ್ಯೋಗದಲ್ಲಿ ಪ್ರವರ್ತಿಸುವವನು ಬೆತ್ತಲೆಯಿರುವರನಡುವೆ ಕೌಪೀನವನ್ನುಟ್ಟವನಂತೆಹಾಸ್ಯಾಸ್ಪದನಾಗುವನಲ್ಲದೆ ಪುಣ್ಯಪುರುಷಾರ್ಥಗಳಿಲ್ಲದೀ ಕಾರ್ಯದಲ್ಲಿಪ್ರಯತ್ನಿಸಿ “ಹಾಳುತೋಟಕ್ಕೆನೀರನೆತ್ತಿಬೀಳುರೆಟ್ಟೆಬಿತ್ತು” ಎಂಬಗಾದೆಗೆಸರಿಯಾಗಿ ವೃಥಾಯಾಸಕ್ಕೆ ಗುರಿಯಾಗಬೇಕಾದೀತೆಂಬ ಶಂಕೆಯಿಂದ ವಿರಮಿಸಬೇಕಾಯಿತಲ್ಲದೆ ಅಶಕ್ತಿಯಿಂದಲ್ಲವೆಂ

ಈ ಪ್ರಕರಣದಲ್ಲಿ ಬರುವವರ ಹೆಸರುಗಳು.

ಹಳೆಗನ್ನಡವಂ ಮಾತಾಡುವ ಉತ್ತಮಪಾತ್ರಂಗಳ ವಿವರಣವು.

೧—ಸೂತ್ರಧಾರಂ=ನಟಿಯೊಡನೆಸಲ್ಲಾಪಿಸುತಮುಂದಣಕಥೆಯಂ ಸೂಚಿಸುವನು.

೨—ಚಾರುದತ್ತಂ=ನಾಯಕನು, ಬ್ರಾಹ್ಮಣನು.

೩—ವಿಟಂ=ವಿದ್ವಾಂಸನು, ಎಲ್ಲರಿಗೂ ಪ್ರಿಯನು.

೪—ದರ್ದುರಕಂ=ದ್ಯೂತಸಭಿಕನು.

೫—ಶರ್ವಿಲಕಂ=ಚೋರನಾದಬ್ರಾಹ್ಮಣನು, ಆರ್ಯಕನಗೆಳೆಯನು.

೬—ಆರ್ಯಕಂ=ಗೋಪಾಲನು, ಸಿದ್ಧಾನುಗ್ರಹದಿಂದ ಅರಸಾದವನು.

೭—ಕಾರ್ಯದರ್ಶಿ=ವ್ಯವಹಾರವಿಚಾರಣಾಧಿಕಾರಿ.

೮—(ತೆರೆಯಲ್ಲಿ) ನಾಂದಿಮುಂತಾದವುಗಳು. ಮತ್ತು ಚಂದನಕನು ವಸಂತಸೇನೆ ಎಂಬಿವರು ಕಾರ್ಯವಶದಿಂದ ಹಳೆಗನ್ನಡವನ್ನು ಹೇಳುವರು. ಸೂತ್ರಧಾರನೂ ಕೂಡ ಕಾರ್ಯವಶದಿಂದ ಹೊಸಗನ್ನಡವನ್ನು ಹೇಳಿರುವನು. (೬೬ ನೆಯ ಪುಟದಲ್ಲಿ ನೋಡಬೇಕು.)

—(※)—

ಹೊಸಗನ್ನಡವಂ ಮಾತಾಡುವ ಮಧ್ಯಮಾಧಮಪಾತ್ರಗಳ ವಿವರಣವು.

೧ ॥ ನಟಿ=ಸೂತ್ರಧಾರನ ಮಡದಿ.

೨ ॥ ಮೈತ್ರೇಯನು=ನಾಯಕನಗೆಳೆಯನಾದ ವಿದೂಷಕನು.

೩ ॥ ರದನಿಕೆ=ನಾಯಕನಬಳಿಯಲ್ಲಿರುವಚೇಟಿಯು.

೪ ॥ ಶಕಾರನು=ಅರಸಿನಭಾವನು, ಅತಿನೀಚನು, ಈತನಿಗೆ ರಾಷ್ಟ್ರಿಯ, ಶ್ಯಾಲಕ, ಸಂಸ್ಥಾನಕ ಎಂಬಹೆಸರುಗಳುಂಟು.

೫ ॥ ವಸಂತಸೇನೆ=ಚಾರುದತ್ತನ ಸೂಳೆಯಾಗಿದ್ದು ಕಡೆಗೆ ವಧುವೆನಿಸಿಕೊಂಡವಳು.

೬ ॥ ವರ್ಧಮಾನಕನು=ನಾಯಕನಬಂಡಿಯನ್ನು ಹೊಡೆಯುವ ಸೇವಕನು.

೭ ॥ ಸ್ಥಾವರಕನು=ಶಕಾರನಬಳಿಯಬಚೇಟನು.

೮ ॥ ಮದನಿಕೆ=ವಸಂತಸೇನೆಯ ಕೆಳದಿ, ಶರ್ವಿಲಕನಿಗೆ ಪ್ರಿಯಳು.

೯ ॥ ಚೇಟಿ=ವಸಂತಸೇನೆಯದೂತಿ.

೧೦ ॥ ಸಂವಾಹಕನು=ಜೂಜುಗಾರನಾಗಿದ್ದು ಕಡೆಗೆಬುದ್ಧಸನ್ಯಾಸಿಯಾದವನು.

೧೧ ॥ ಮಾಥುರನು
೧೨ ॥ ದ್ಯೂತಕರನು } =ಜೂಜುಗಾರರೂ ದ್ಯೂತಸಭಿಕರೂ ಆದವರು.
೧೩ ॥ ಕರ್ಣಪೂರಕನು=ವಸಂತಸೇನೆಯ ಆನೆಯಮಾವುತನು.
೧೪ ॥ ರೇಭಿಲನು=ಗಾಯಕನು, ನಾಯಕನ ಗೆಳೆಯನು.
೧೫ ॥ ವಧು=ನಾಯಕನ ಹೆಂಡತಿ, ಈಕೆಯ ಹೆಸರು ಧೂತಾದೇವಿಯು.
೧೬ ॥ ಚೇಟನು=ವಸಂತಸೇನೆಯ ಬಂಡಿಯಾಳಾದ ಕುಂಭೀಲಕನೆಂಬವನು.
೧೭ ॥ ದಾರಕನು=ನಾಯಕನಮಗನಾದ ರೋಹಸೇನನೆಂಬವನು.
೧೮ ॥ ವೀರಕನು=ಉಜ್ಜಯಿನಿನಗರಸಾದ ಪಾಲಕರಾಯನ ಸೇನಾಪತಿ.
೧೯ ॥ ಚಂದನಕನು=ಈತನೂ ಸೇನಾಪತಿಯಾಗಿದ್ದು ಆರ್ಯಕನಗೆಳೆಯನಾದವನು
೨೦ ॥ ಯತಿ=ಸಂವಾಹಕನೆಂಬವನು, ವಸಂತಸೇನೆಯಂ ಬದುಕಿಸಿದವನು.
೨೧ ॥ ಶೋಧನಕನು=(ಕಂಚುಕಿ) ಓಲಗದಾಳು.
೨೨ ॥ ಶ್ರೇಷ್ಠಿ=(ಸರಾಪ್) ನಾಣಕಪರೀಕ್ಷಕನಾದ ವೈಶ್ಯನು.
೨೩ ॥ ಕಾಯಸ್ಥನು=ಗಣಕನಾದರಾಯುಸದವನು.
೨೪ ॥ ವೃದ್ಧಳು=ವಸಂತಸೇನೆಯತಾಯಿ.
೨೫ ॥ ಗೋಹನು-ಆಹೀಂತನು=ಕೊಲೆಗೆವಧ್ಯನಂತೆಗೆದೊಯ್ವುಚಂಡಾಲರುಗಳು

ಶುದ್ಧಪತ್ರಿಕೆ.

ಪುಟ	ಬಂತಿ	ಶುದ್ಧಪಾಠ	ಪುಟ	ಬಂತಿ	ಶುದ್ಧಪಾಠ
4	೧	ವೇದ್ಯವಾಗದಿರದೆಂದು	೨೧	೪	ನಿನ್ನಮೇಲೆಪ್ರೀತಿಯೂ ✓
೨	೫	ವಸಿಸುತ್ತಿರ್ದಳ್ ✓	೨೨	೧೫	ಉರಿಯುವವೇ? ✓
,,	೧೬	ಹಿತಮಿತ್ರನುಮಿಲ್ಲ ✓	೨೩	೧	ಈಸುವರ್ಣ ✓
,,	೨೧	ಏನುತಿರ್ಪುದು. ✓	೨೪	೨೫	ಏನು? ✓
೪	೨೯	ಬೇಗನೆ ಆಗುತ್ತೆ ✓	೨೫	೧೧	ವಸಂತ॥ ✓
೫	೧೪	ಮುಟ್ಟಮುಟ್ಟಯಿಡುತ್ತ ✓	,,	೨೨	ಮರೆಹೊಗಲಿ? ✓
೭	೧೨	ವೆಂಬುದು;— ✓	೨೬	೧೦	ಹೊಕ್ಕನು ✓
೮	೯	ನಡೆಯಿಸಿ ✓	೨೭	೯	ಆಹಾ! ನಾನುಜೂಜು ✓
೧೧	೨೯	ಬಲಾತ್ಕಾರವಲ್ಲ ವಷ್ಟೆ? ✓	,,	೨೯	ಆಹಣವೆಲ್ಲವನೂ ✓
೧೨	೨೪	ಪೋದುವೆಲ್ಲ ಜನದೃಷ್ಟಿಗಳುಂ ✓	೩೩	೨೬	ಈಚರಾಚರಧನವು ✓
೧೬	೧೪	ದೆಂತುಮಿೂ ✓	೩೪	೧೦	ಸಭಿಕದ್ಯೂತ ✓
೧೭	೬	ಕಳೆದುಜನತೃಷ್ಣೆಯುತಾಂ ✓	,,	೨೦	ನೋಡುತ್ತಲ್ ✓

೨೦ ಹೊತ್ತುಕೊಂಡು ಓಡುತ್ತಿರುವ
೨೨ ಯಾದನೆಂದು [ಆನೆಯನ್ನು
೨೧ ಎಂದೆಲ್ಲ ರೂ.
೬ ಗುವನ್ನೈಖಲಂ
೧೬ ವೀಣೆಯಾದೊಡೆ
೧೬ ಕೇಳ್ವನೋಲ್ಪೋದಪೆಂ
೧೪ ಕಳ್ವಕಜ್ಜದೊಳ್
೨೩ ಯಂಗಸಂಧಿಗಳ್
೮ ನೀನೇನುನೋಡಲಿಲ್ಲವೆ?
೨ ಪೋದೊಡ
೨೩ ಬ್ರಾಹ್ಮಣಿ
೩೦ ಯೆನಿಕ್ಕುಂ
೧೩ ಏತಕ್ಕೆ
೨೬ ಕೂಡ ಇವೆ
೨೩ ತೆಗದುಕೊಂಡು
೨೧ ಮಾಗಿಕರ್ಮವೆ
೮ ಚಾಕರಿಯಿಂದ
೯ ಅನುಷ್ಟುಪ್
೧ ವಸಂತಸೇನೆಯಾ
೩ ಅಕಾರ್ಯ
೩ ಳ್ಮಸಣ
೧ ಇದುವೊದಲನೆಯ
೨ ಹೆಂಗಸರ
೨ ತೊಟ್ಟಿಯು
೨ ಚಾರುದತ್ತನು
೩ ಆನೀಯುವಸ್ಥೆ
೩ ಊರುಗಳನ್ನು
ಕಾವಹೆ ಮತ್ತ
ತಟೆದ್ರುಚಿ
ಮೇಣ್
ಗೆ ಸಕಲವಸ್ತು
ನೋಡುನೋಡು
ಮುಂಜೆರಿಯ
ಚೇಟಿ॥ (ನಕ್ಕು)
ಜೋರಾದಮಳೆಯ

೮೫ ೩ ಆರ್ಯಚಾರುದತ್ತನ
೮೬ ೨೫ ಬೇಡವೆಂದುಹೇಳುವಿ
,, ೨೮ ಗು. ಆಡಿಕೋ. (ಆ
,, ೩೦ (ದಾರ-.......... ದಳ್)
೮೭ ೨೩ (ನೋಡಿ) ಇದುಯಾರು?
,, ೨೫ ಅಥವಾ ಈವಿಚಾರ
,, ೨೯ ಯೇನುಆದೀತು?
,, ೩೦ ಮನೆಯುತೋಟದ
೮೮ ೧ (ಎಂದು ------- ನಿಲ್ಲಿಸಿ)
,, ೨ ಬಂದೆನು. (ಎಂದು ಹೊರಟು
,, ೭ (ನಡೆದುಬಂದು) [ಹೋದನು)
,, ೮ ಅಪ್ಪಣೆ (ಎಂ ---- ದಳು)
,, ೯ ವಸಂತೆ॥ (ಬಲ ---- ನ್ನೇರಿ)
,, ೨೬ ಪುರುಷಗ್ಗ್ರರ್ಹಿಕಶಿಕ್ಷಾ
೮೯ ೨೩ (ಎಂದು ---- ವನು)
೯೦ ೧೫ ದಂಡಶೂರರೇ
,, ೨೬ ಗೊಲ್ಲನ
೯೧ ೯ ಇದು ಯಾರದು?
೯೪ ೭ ನೀನೇ
,, ೨೬ ಥಕ್ಕೆಯೆ ನಿಮ್ಮಾ
೯೬ ೬ (ತೆರೆಯಕಡೆನೋಡಿ)
೯೭ ೧೦ ಪ್ರಿಡುಕು
,, ೧೭ ಪರಭೃತದೋಲ್
೯೮ ೧೬ ಮಾಯುತಮು
೯೯ ೫ ಆಂಪ್ರೋಗಲ್ಕೆ
,, ೨೨ ಪೋಗಲ್ತ್ಕಕ್ಕುದು
೧೦೧,೧೮ ದೊಳಗೆದ್ದಪುಳ್ಳೆ
೧೦೪ ೧೪ ತೆಗೆದುಕೊಂಡು
೧೦೯ ೨೨ ವಿಟಂ;—
೧೧೧ ೪ ಎಲ್ಲವನ್ನೂ
೧೧೨ ೨೩ ಮುಂಚೆಯೇ
೧೧೬ ೧೫ ವಿಟಂ,—ಹಾ! ಹತನಾದೆಂ
,, ೧೯ ವಿಟಂ;—
೧೧೮ ೧೦ ಕಟ್ಟ್ಯ ನೀನು ನಮ್ಮ
, ೧೮ ಓದಿಕೊಂಡವನು

೧೧೯	೧೮	ನ್ನಲುಗಿಸುತೋ
—	೨೪	ಆಬುದೋ
೧೨೦	೯	ಸೂಳೆತನಕ್ಕೆ
—	೧೯	ಪರಲೋಕವು
—	೨೧	(ಇಂತೆಲ್ಲರುಂಪೊರಮಟ್ಟರ್)
೧೨೧	೧೯	(ಒಳಕ್ಕೆಹೊಕ್ಕು ನೋಡಿ)
೧೨೩	೨೪	ದೊಡ್ಡವಂಶದಲಿ
೧೨೪	೨೭	ಯಾರಿಗೆಸೇರಿದ್ದು?
೧೨೬	೩	ಮಿತ್ರನಾದರೆ
—	೧೦	ನೋಡಲೆಳ
—	೧೨	ಹೋಗಿಚಾರುದತ್ತನೊಡನೆ
—	೧೩	ಬರಬೇಕು ಬರಬೇಕು
—	೨೪	ತೋರಿಸು
೧೨೯	೩	ನುಡಿನೀಂ,ಧೈರ್ಯದಿನೀಗಳ್
—	೪	ತಿಳಿಯರ್
೧೨೯	೨೮	ಹಿಮವಚ್ಛೈಲದ
೧೩೦	೩	“ಕಡೆಗಣ್ಕೈಮೂಗು,,
—	೫	!ಪೋಗತ್ತಲ್
—	೧೬	ವೊಡವೆಯ
—	೨೦	ಬಾರಮ್ಮಾ!
—	೨೬	ಬೆಳಸಲ್
—	೨೯	ವ್ಯವಹಾರಸ್ಥಾನವು
೧೩೧	೪	ವಿಚಾರಿಸುತ್ತ
—	೬	ತಿಳಿಸಿದೆನು
—	೧೩	ಜೊನ್ನದ
—	೧೫	ಮಿನಿಸಿಲ್ಲದ
—	೧೮	ನೇರಿಪೋಗಿ
—	೨೮	ರಂತನ್ನ್ಯಾಯಮು
೧೩೩	೧೧	ನನ್ನನ್ನು
೧೩೪	೧೫	ಪುಷ್ಪಿಸಿರುವ
—	೧೮	ರ್ಯವನ್ನು ಮಾಡುವ
೧೩೫	೧	ಚಾರು;—
—	೩	ತೊಡವಿರಲಿ
—	೮	ತೊರೆವೆನಗೆ
—	೧೩	ಕೇತುವೊ ಎಂಬೋಲ್
೧೩೫	೧೫	ಅವಳಿಟ್ಟಿದ್ದಡ್ಡೇ
—	೨೮	ಳಿರ್ಪವು
೧೩೬	೧೩	ಸತ್ಯವೆಂಬುವೆರ
—	೨೧	ಯೊಡಲಲಿ
—	೨೨	ಬೀಳ್ವುವುತ್ತೆಳಿ
—	೨೮	ನಗಲ್ದಾಂ
೧೩೮	೨೮	(ಎಂದುಚಾರು
೧೩೯	೨	ಪುತ್ರನೆ ರೋಹ
—	೪	ಎಲಗೇ
—	೧೨	ಪ್ರಕರಣದೊಳ್
೧೪೪	೨೯	ಕಣಿಗಿಲೆಸರವಂ
೧೪೩	೧೯	ಯಿದ್ದೀತೋ
—	೨೧	ಒಂದುವೇಳೆ
೧೪೯	೫	ಬೇಗನೆಕರೆದು ಕೆ
—	೯	ಆದುದರಿಂ
—	೨೪	ಇವನನ್ನು
೧೫೨	೨	ಎಂಬಪದ್ಯವುಂ
೧೫೪	೩	ಇದುವರೆಗೆಕೊಲ್ಲ
೧೫೫	೧೪	ಸೇನೆಯೋ!
೧೫೬	೪	ಪಾಸಕಳಿಂದ
—	೧೫	ಯಾರಿಪುರಾಜ್ಯ
—	೨೩	ಬರ್ದುಂಕಿರ್ದ ಪ
—	೨೬	ಗಾಣದಿಹ
೧೫೭	೩	ನಿನ್ನನೆಮರೆಪೊಕ್ಕ
೧೫೯	೮	ಏನೆಸಗಲ್
—	೯	ಆಂಪೇಳ್ವುದನೇ
೧೬೦	೧೫	ಮೋಹಮಾಂತ
—	೧೬	ಪೋಪುದುಬೇಗನೆ
—	೧೪	ರದನಿಕೆಯುರೊಡ
೧೬೧	೧೨	ಸಿದ್ಧಿಯನ್ನು
—	೧೯	ಕೊಳ್ಳುವ
—	೨೧	ಈಮುಗುವನಾನೇ
೧೬೨	೧೪	ಒಬ್ಬರಿಗೊಬ್ಬರ
—	೨೮	ಯತ್ತಿ॥ ಅದುನ
೧೯೩	೧೮	ನೆರೆತುಂಬುತ್ತೆ

ಲಕ್ಷ್ಮೀಶಪ್ರಸೀದ

ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ

ಪ್ರಥಮಾಂಕಂ.

ನಾಂದಿ

ವೃತ್ತಂ ॥ ನೆರೆಪರ್ಯಂಕಾಸನಕ್ಕೀ ರೆಳೆಯೆಲರುಣಿಯಂ ಜಾನುವೊಳ್ಸುತ್ತಿ ಯುಗ್ಮಂ।
ತರದೊಳ್ಪ್ರಾಣಂಗಳಂಕಟ್ಟಿ ವಿಷಯವಿಮುಖಂಗೊಳ್ಳೆ ಸರ್ವೇಂದ್ರಿಯಂಗಳ್॥
ಕರಣಂಬಿಟ್ಟಾತ್ಮನಂ ತನ್ನೊಳೆ ಚಲಿಸದೆ ತಾಂ ತತ್ತ್ವದೃಕ್ಕಿಂದೆನೋಳ್ಪಾ।
ಹರನಾಶೂನ್ಯೇಕ್ಷಿಯುಕ್ತ ಪ್ರಳಯಕೃತಸಮಾಧಿಕ್ರಮಂ ಕಾಗೆ ನಿಮ್ಮಂ॥ ೧ ॥

ಮತ್ತಂ. ಕಂದಂ॥ ಕರಿಗೊರಲನ ಕಾರ್ಮುಗಿಲಂ
ತಿರೆತೊಳಗುವ ಗೊರಲೆ ಪೊರೆಗೆ ನಿಚ್ಚಂ ನಿಮ್ಮಂ॥
ಗಿರಿಜಾತೆಯತೋಳ್ವಳ್ಳಿಯೆ
ಮೆರೆವಪ್ಪುದಾವೆಡೆಯೊಳಿರ್ದ್ದು ಮಿಂಚಿನಗೆರೆವೋಲ್॥ ೨॥

(ವೃ ॥ ಕೃಷ್ಣಕ್ಷ್ಮಾಪನ ನಾಡೊಳಿರ್ಪ್ಪ ಗರಣಿಗ್ರಾಮಾತ್ತಸೂಕ್ಷ್ಮಾಂಶನಿಂ।
ಕೃಷ್ಣಾನುಗ್ರಹಪಾತ್ರನಪ್ಪುದರಿ ನಾಪ್ತಸ್ತೋಕಕೌಶಲ್ಯನಿಂ।
ಕೃಷ್ಣಾರ್ಯಾಭಿಧನಿಂದೆ ನಾಡೆ ವಿನುತಂ ಶ್ರೀಸತ್ಯಭಾಮಾಯುತಂ।
ಕೃಷ್ಣಂಕೃಷ್ಣನರೇಂದ್ರಭವ್ಯಸುತನಂ ರಕ್ಷಿಕ್ಕೆ ಚಾಮೇಂದ್ರನಂ॥ ೩॥)

[ನಾಂದಿಯಾದೊಡನೆ ಸೂತ್ರಧಾರಂ ಪೊಕ್ಕಪಂ]

ಸೂತ್ರ:—ಸಾಮಾಜಿಕರಕುತೂಹಲಕೆ ವಿಘ್ನಮಂಮಾಳ್ಪೀಪರಿಶ್ರಮಂಸಾಲ್ಗುಂ. ಆನಿಂತು ಮಾನ್ಯರಂ ಮಣಿದು ಬೆಸಗೊಂಡಪೆಂ. ಅದೆಂತೆನೆ-ಈಗಳಾಂ ಮೃಚ್ಛಕಟಿಕ ಮೆಂಬಪ್ರಕರಣಮಂ ಪ್ರಯೋಗಿಸ ಲುಜ್ಜುಗಿಸಿರ್ಪ್ಪೆಂ. ಇದರಕವಿಯಾದೊಡೆ- ಕ್ಷತ್ರಿಯಶ್ರೇಷ್ಠನಾದ ಶೂದ್ರಕನೆಂಬರಾಯಂ. ಈತಂ ಸುಂದರಮಾದಮೆಯ್ಯುಳ್ಳಂ, ಗಾಂಭೀರ್ಯಾದಿಗುಣಂಗಳಿಂ ಸುಪ್ರಸಿದ್ಧಂ, ಕಲ್ಪಕನುಂ,ಆಗಿ; ಋಕ್ಸಾಮವೇದಂಗಳಂ, ಗಣಿತಮಂ,ಚತುಷ್ಷಷ್ಟಿಕಲೆಗಳಂ, ಗಜಶಾಸ್ತ್ರಮೆ ಮುಂತಾದವುಗಳಂ,ಕಲ್ತು; ಶಿವಾನುಗ್ರಹದಿಂಜ್ಞಾನಿಯಾಗಿರ್ದೊಡಂ ಪ್ರಮಾದಮಿಲ್ಲದೆ ಯುದ್ಧಾಭಿನಿವೇಶಮುಳ್ಳವನಾಗಿ, ಇಳೆಯಂಪೊರೆದು, ಅಶ್ವಮೇಧಮಂಮಾಡಿ ಮಗಂಗೆ ಪಟ್ಟಮಂಕಟ್ಟಿ, ತಪಸ್ವಿಯಾಗಿ ಶತವರ್ಷಮುಂ ಪತ್ತುದಿನಮುಂ ಜೀವಿಸಿ ಕಡೆಯೊಳಗ್ನಿ ಪ್ರವೇಶಮಂ ಮಾಡಿದಂ.

:—ಈಗುರುತುಳ್ಳಭಾಗವೆಲ್ಲವೂ ಹಳೆಗನ್ನಡವೆಂದು ತಿಳಿಯಬೇಕು.

ಈತನ ಕೃತಿಯೊಳ್, 'ಅವಂತಿಪುರಿ' ಯೆಂಬ ಉಜ್ಜಯಿನೀ ಪಟ್ಟಣದ
ದ್ವಿಜರಲ್ಲಿ ವಾಣಿಜ್ಯ ವ್ಯವಸಾಯಿಯಾಗಿ ಧನದನೆನಿಸಿದ್ದು ಹರಯದೊಳ್
ಕಡುಬಡವನಾದ ಚಾರುದತ್ತನೆಂಬಂ ನಾಯಕಂ. ಆತನಗುಣಂಗಳೊಳ್ ಅನು-
ರಕ್ತೆಯಾದ ವಸಂತಸೇನೆ ಯೆಂಬ ವಾರನಾರಿಯುಂ, ವಸಂತ ಕಾಂತಿಯಂ
ಪೋಲ್ ವಸಿಸುತ್ತಿರ್ದರ್. ಅವರೀರ್ವರ ಸತ್ಸಂತೋಷ ವೈಭವಮುಂ ಸ್ವಾರ-
ಪ್ರಚಾರಮುಂ, ದುಷ್ಟರ ವ್ಯವಹಾರಮುಂ, ದುರ್ಜನರ ಸ್ವಭಾವಮುಂ, ಭವಿ-
ವ್ಯತಾಪ್ರಭಾವಮುಂ, ಇದೆಲ್ಲಮುಂ ವರ್ಣಿತವಾಗಿರ್ಪುದು. ಇಂತಪ್ಪ ಕವೀಗ-

ಕಂ। ಹರಿಗುರುಭಕ್ತಂ ವೈಯಾ
ಕರಣಂ ಕೃಷ್ಣಾಖ್ಯ ನೊರೆದ ನೊಳ್ಗನ್ನಡದಿಂ
ವರಕರ್ಣಾಟಕದೇಶೀ
ಯರು ಮೊಳ್ಸಿಂ ತಿಳಿಯೆ ಲೋಕಸೀತಿಸ್ಥಿತಿಯಂ ॥ ॥೪॥

(ಅಡಿಯಿಟ್ಟು ನೋಡಿ) ಎಲಾ! ಇದೇಂ ಶೂನ್ಯ ಮಾಗಿರ್ಪುದೆಮ್ಮ ಸಂಗೀತ-
ಶಾಲೆಯುಂ? ಕುಶೀಲವರೆತ್ತ ಪೋಗಿರಲಕ್ಕುಂ? (ಯೋಚಿಸಿ) ಆಃ! ತಿಳಿ-
ದುದದೆಂತೆನೆ.—

ಕಂ॥ ಸುತರಹಿತನಮನೆ ಶೂನ್ಯಂ
ಹಿತಮಿತ್ರನೆಯಿಲ್ಲದಂಗ ಮದು ಸುಖಶೂನ್ಯಂ
ಅತಿಮೂರ್ಖಂಗಂ ಶೂನ್ಯಂ
ತತದಿಗ್ಗಣ ಮಂತು ಬಡವಗೆಲ್ಲಂ ಶೂನ್ಯಂ॥೫॥

ಆದುದರಿಂದಾನೇ ಸಂಗೀತಮಂಪಾಡಿದೆಂ. "ಬಹುಕಾಲ ಮಿಂತುಪಾಡುವುದ
ರಿಂದೆ ಬಿಸಿಲ ಕಾಲದಲ್ಲಿ ನೇಸರ್ಗವಿರಿಂ ಶುಷ್ಕ ವಾದ ಪುಷ್ಕರ ಬೀಜದಂತೆ
ಯೆನ್ನಕಂಗಳ್ಪಸಿವಿಂ ಕಂಪಿಸುತ, 'ಚಟಚಟ' ಎನುತಿದೆ? ಆದುದರಿಂದೆ ಮನೆಗೆ
ಪೋಗಿಮಡದಿಯಂಕರೆದುತಂಗಳನ್ನ ಮೇನಾದೊಡ ಮಿರ್ಪುದೊ? ಎಂದುಕೇಳ್ದ
ಪೆಂ. "ಎಂದು. ಅಯ್ಯಾ! ಇದೊನಾಂ ಕಾರ್ಯವಶದಿಂದೆ ಪೊಸಗನ್ನಡಮಂನು
ಡಿದಪೆಂ॥ ನನಗೆ ಬಹಳ ಹಸಿವಿನಿಂದ ಕೈಕಾಲು ಸೋಥೋಗುತ್ತಿದೆ.ಮನೆಯಲ್ಲಿ
ಹೆಂಡತಿಯುಮಾಡಿದ ತಿಂಡಿ ಯೇನಾದರೂ ಯಿದೆಯೊಯಿಲ್ಲವೊ?(ಅಡಿಯಿಟ್ಟು)
ಇದೇನಮ್ಮಮನೆ,ಒಳಕ್ಕೆ ಹೋಗುವೆನು(ಒಳಪೊಕ್ಕು ನೋಡಿ.) ಇದೇ ನಾಶ್ಚರ್ಯ
ವು? ನಮ್ಮಮನೆಯಲ್ಲಿ ಮತ್ತೇನೋ ವಿಶೇಷವಿದ್ದಂತಿದೆ.ದಾರಿಯೆಲ್ಲಾ ಕಲಗಚ್ಚಿ
ನ ಕಾಲುವೆಯಾಗಿದೆ.ಕಬ್ಬನದ ಕಡಾಯಿಗಳನ್ನೆಳದ್ದರಿಂದ ನೆಲವುತಿಲಕ ವಿಟ್ಟು
ಕೊಂಡಂತಿದೆ.ಜಿಡ್ಡಿನವಾಸನೆಯಿಂದ ನನ್ನಹಸಿವೂ ಹೆಚ್ಚುತ್ತಿದೆ. ಈಹೆ

ನೆ ಹಿರಿಯರಿಟ್ಟಿದ್ದ ನಿಕ್ಷೇಪ ವೇನಾದರೂ ಸಿಕ್ಕಿತೋ? ಅಥವಾ ನಾನೇ ಹಸಿವಿನಿಂದ ಪ್ರಪಂಚವನ್ನೆ ಅನ್ನ ಮಯವನ್ನಾಗಿ ನೋಡುತ್ತೇನೆಯೋ? ಹಳಸಿದ ತಂಗಳಾದರೂ ಇಲ್ಲವಲ್ಲಾ. ಹಸಿವೋ ಪ್ರಾಣ ತೆಗೆಯುತ್ತೆ. ಇಲ್ಲಿ ಯಾದರೋ ಎಲ್ಲವೂ ಹೊಸತಾಗಿಯೇ ಕಾಣುತ್ತೆ. ಒಬ್ಬಳು ಅರಿಸಿನವನ್ನರೆಯುತ್ತಾಳೆ. ಮತ್ತೊಬ್ಬಳು ಹೂವನ್ನು ಕಟ್ಟುತ್ತಾಳೆ. ಇದೇನು ಇದ್ದೀತು? (ಯೋಚಿಸಿ) ಆಗಲಿ, ಹೆಂಡತಿಯನ್ನು ಕರೆದು ನಿಜವನ್ನು ತಿಳಿದುಕೊಳ್ಳುತ್ತೇನೆ. (ತೆರೆಯ ಕಡೆ ನೋಡಿ) ಎಲೇ! ಆರ್ಯೇ! ಇತ್ತ ಬಾ!

[ನಟಿಯು ಬಂದು.]

ನಟಿಯು॥ ಇದೋ ಬಂದೆನು.

ಸೂತ್ರ॥ ಆರ್ಯಳೇ! ನಿನಗೆ ಸ್ವಾಗತವು.

ನಟಿ॥ ಅಪ್ಪಣೆ ಯಾಗಲಿ.

ಸೂತ್ರ॥ ಆರ್ಯಳೇ! ಬಹಳ ಹೊತ್ತು ಹಾಡುವುದರಿಂದ ನನ್ನ ಗಂಟಲು ವೊಣಗುತ್ತದೆ. ಮನೆಯಲ್ಲಿ ತಿಂಡಿಯೇನಾದರೂ ವುಂಟೋ ಯಿಲ್ಲವೋ?

ನಟಿ॥ ಆರ್ಯನೇ! ಯೆಲ್ಲವೂ ಇದೆ.

ಸೂತ್ರ॥ ಏನೇನು ಇದೆ.?

ನಟಿ॥ ಬೆಲ್ಲದನ್ನವು, ತುಪ್ಪ, ಮೊಸರು, ಅಕ್ಕಿ, ಆರ್ಯನು ತಿನ್ನುವ ರಸಾಯನವು, ಇದೆ [illegible] ಗಿಯೇ ಯಿರುವಂತೆ ದೇವರ ಅನುಗ್ರಹವಿರಬೇಕು.

ಸೂತ್ರ॥ ಇದೇನು ನಮ್ಮ ಮನೆಯಲ್ಲಿ ಯಲ್ಲ[illegible] ಇವೆಯೊ? ಅಥವಾ ಪರಿಹಾಸವನ್ನು ಮಾಡುತ್ತೀಯೋ?

ನಟಿ॥ (ಮನಸ್ಸಿನಲ್ಲಿ) ಪರಿಹಾಸ ಮಾಡುವೆನು. (ಪ್ರಕಾಶವಾಗಿ) ಆರ್ಯನೇ! ಇದೆ ಅಂಗಡಿಯಲ್ಲಿ.

ಸೂತ್ರ॥ (ಕೋಪದೊಡನೆ) ಎಲೆ ದುಷ್ಟಳೇ! ಹೀಗೆಯೇ ನಿನಗೆ ಆಶಾಭಂಗವಾದೀತು, ನಾಶವಾಗುತ್ತೀಯೆ, ನನ್ನನ್ನೇನೀಗ ನೀನು ಹೆಂಟೆಯಂತೆ ನಿಕೃಷ್ಟ ತಂ ಮಾಡಿದೆಯಾ?

ನಟಿ॥ ಆರ್ಯನು ಸೈರಿಸಬೇಕು ಸೈರಿಸಬೇಕು! ನಾನು ಪರಿಹಾಸವನ್ನು ಮಾಡಿದೆನಲ್ಲವೆ?

ಸೂತ್ರ॥ ಇದೇನಿಂದು ಹೊಸತಾಗಿದೆ? . ಒಬ್ಬಳು ಅರಿಸಿನವನ್ನು ರುಬ್ಬುತ್ತಾಳೆ. ಮತ್ತೊಬ್ಬಳು ಸರವನ್ನು ಮಾಡುತ್ತಾಳೆ. ? ನೆಲದಮೇಲೆ ಐದು ಬಣ್ಣದ ರಂಗವಲ್ಲಿ ಯಿಟ್ಟದೆ?

ನಟಿ॥ ಈ ದಿನವೇ ಉಪವಾಸವ್ರತವು.

ಸೂತ್ರ॥ ಈ ಯುಪವಾಸವ್ರತಕ್ಕೆ ಹೆಸರೇನು?

ನಟಿ॥ 'ಅಭಿರೂಪಪತಿ' ಯೆಂದು.

ಸೂತ್ರ॥ ಎಲೆ! ಐಹಲೌಕಿಕವೊ? ಪಾರಲೌಕಿಕವೊ?

ನಟಿ॥ ಪಾರಲೌಕಿಕವೇ.

ಸೂತ್ರ॥ ನೋಡಿ! ನೋಡಿ! ಆರ್ಯಮಿಶ್ರರೇ! ನನ್ನ ಅನ್ನವನ್ನು ವೆಚ್ಚ ಮಾಡುವುದ ದ ಪರಲೋಕದ ಗಂಡನನ್ನು ಹುಡುಕಬೇಕಂತೆ.

ನಟಿ॥ ಆರ್ಯನೇ! ಪ್ರಸನ್ನನಾಗು! ಪ್ರಸನ್ನನಾಗು! ಮತ್ತೊಂದುಜನ್ಮದಲ್ಲಿಯೂ ನೀನ ನನಗೆ ಗಂಡನಾಗಬೇಕೆಂದು ಈ ಉಪವಾಸವ್ರತವನ್ನು ಹಿಡಿದೆನು.

ಸೂತ್ರ॥ ಆದರೆ ಯೀಯುಪವಾಸವ್ರತವನ್ನು ನಿನಗೆ ಯಾರು ಹೇಳಿದರು?

ನಟಿ॥ ನಿನ್ನ ಪ್ರಿಯ ಮಿತ್ರನಾದ ಚೂರ್ಣವೃದ್ಧನು.

ಸೂತ್ರ॥ (ಕೋಪದೊಡನೆ) ಆಃ! ಎಲೆ ತೊತ್ತಿನ ಮಗನಾದ ಚೂರ್ಣವೃದ್ಧನೇ! ನೀನ ಯಾವಾಗಲಾದರೂ ಪಾಲಕರಾಯನಿಂದ ನವವಧೂಕೇಶಪಾಶದಂತೆ ಸುವಾ ಸಿತವಾದ ಜುಟ್ಟನ್ನು ಕೊಯಿಸಿ ಕೊಳ್ಳುವನಾಗಿ ಕಾಣಿಸಿಕೊಂಡೀಯೆ.

ನಟಿ॥ ಆರ್ಯನು ಪ್ರಸನ್ನನಾಗಬೇಕು ಪ್ರಸನ್ನನಾಗಬೇಕು! ಆರ್ಯನಿ ಗೋಸುಗವೆ ಈ ಪಾರಲೌಕಿಕವಾದ ಉಪವಾಸವಾಚರಿಸಲ್ಪಡುತ್ತಿದೆ. (ಎಂದು ಕಾಲಿಗೆ ಬೀ ಳುತ್ತಾಳೆ.)

ಸೂತ್ರ॥ ಆರ್ಯಳೇ! ಏಳು ಏಳು; ಹೇಳು! ಹೇಳು! ಈ ವುಪವಾಸವು ಯಾರಿಂದಾಗ ಬೇಕು?

ನಟಿ॥ ನಮ್ಮಂಥಾವರಿಗೆ ತಕ್ಕ ನಿಮಂತ್ರಿತ ಬ್ರಾಹ್ಮಣನಿಂದ.

ಸೂತ್ರ॥ ಆದರೆ ನೀನು ಮನೆಗೆ ಹೋಗಬಹುದು. ನಾನೂ ನಮ್ಮಗೆತಕ್ಕ ಬ್ರಾಹ್ಮಣಗೆ ಔತಣವನ್ನು ಹೇಳಿಬರುವೆನು.

ನಟಿ॥ ಆರ್ಯನ ಅಪ್ಪಣೆಯಂತೆ ಆಗಲಿ. (ಎಂದು ಹೊರಟು ಹೋದಳು.)

ಸೂತ್ರ॥ (ಅಡಿಯಿಟ್ಟು) ಆಶ್ಚರ್ಯವು! ತುಂಬಿದ ಈವುಜ್ಜಯಿನಿಯಲ್ಲಿ ನಮ್ಮಂಥಾ ವ ರಿಗೆ ತಕ್ಕ ಬ್ರಾಹ್ಮಣನನ್ನು ಹೇಗೆ ಹುಡುಕಬೇಕು? (ನೋಡಿ) ಇದೋ ಚಾರು ದತ್ತನ ಮಿತ್ರನಾದ ಮೈತ್ರೇಯನುಇತ್ತಲೇಬರುತ್ತಲಿದ್ದಾನೆ. ಆಗಲಿ. ಅವನನ್ನು ಕೇಳುವೆನು. ಆರ್ಯನಾದ ಮೈತ್ರೇಯನೇ! ನೀನುನಮ್ಮ ಮನೆಗೆ ಆರೋಗಣೆಗೆ ದಯಮಾಡಬೇಕು.

[ತೆರೆಯಲ್ಲಿ] ಅಯ್ಯಾ! ಮತ್ತೊಬ್ಬಬ್ರಾಹ್ಮಣಗೆಹೇಳು. ನಾನೀಗಕಾರ್ಯಾಂ ತರದಲ್ಲಿರುವೆನು.

ಸೂತ್ರ॥ ಆರ್ಯನೇ! ಭೋಜನಕ್ಕೆ ಹೊತ್ತು ಹೋಗುವದಿಲ್ಲ. ಈಗಲೇ ಆಗುತ್ತೆ.

ವಿರುದ್ಧ ಪದಾರ್ಥವೇನೂ ಇಲ್ಲ-ಮತ್ತೂ ನಿನಗೆ ದಕ್ಷಿಣೆ ಯೇನಾದರೂ ಬರುತ್ತೆ. [ಮತ್ತು ತೆರೆಯಲ್ಲಿ] ಮೊದಲೇ ಆಗುವದಿಲ್ಲವೆಂದು ತೆಗದು ಹಾಕಿಸಿಕೊಂಡರೂ ಈಗ ಮತ್ತು ಮತ್ತು ನನ್ನನ್ನು ನಿರ್ಬಂಧಪಡಿಸುವದಕ್ಕೆ ನೀನ್ಯಾರ?

ಸೂತ್ರ॥ ಈತನಿಂದ ನಿರಾಕೃತನಾದೆನು. ಆಗಲಿ, ಮತ್ತೊಬ್ಬನಿಗೆ ಹೇಳುವೆನು.

(ಎಂದು ಹೊರಟು ಹೋದನು)

[ಆಮುಖವು.]

[ಕೈಯಲ್ಲಿ ಉತ್ತರೀಯವಂ ಪಿಡಿದು ಮೈತ್ರೇಯನೆಂಬ ವಿದೂಷಕಂ ಪುಗುವಂ.]

ಮೈತ್ರೇಯಂ॥ ಮತ್ತೊಬ್ಬ ಬ್ರಾಹ್ಮಣಾಗೆ (ಇತ್ಯಾದಿ ಪೂರ್ವದಂತೆ ಹೇಳಿ) ಅಥವಾ ಮೈತ್ರೇಯನಾದ ನಾನೂ ಹೆರವರ ಮನೆಯಲ್ಲಿ ಉಣ್ಣಬೇಕಾಯಿತಲ್ಲಾ; ಅಯ್ಯೋ! ಅವಸ್ಥೆಯೇ! ನನ್ನನ್ನು ಇಷ್ಟು ಹಗುರು ಮಾಡಿದೆಯಾ? ಯಾವನಾನು ಮುಂಚೆ ಪೂಜ್ಯನಾದ ಚಾರುದತ್ತನ ಸಂಪತ್ತಿನಿಂದ ಹಗಲು ರಾತ್ರಿಯು ತೇಗಿದರೆ ವಾಸನೆಬರುವ ದಿವ್ಯಪರಿಮಳವಾದ ಕಡುಬುಗಳನ್ನು ತಿಂದು ನಡುಮನೆಯ ಮೊಗಸಾಲೆಯಲ್ಲಿ ಕೂತುಕೊಂಡು ನೂರಾರು ಬಗೆ ಜಿನಿಸಿನ ಬಟ್ಟಲುಗಳನ್ನು ಚಿತ್ರಕರನಂತೆ ಕೈಯಿಂದ ಮುಟ್ಟಿ ಯಿಡುತ್ತಾ; ಗ್ರಾಮದ ಗೂಳಿಯ ಬಸವನ ಹಾಗೆ ಮೆಲುಕಾಡಿಸುತಲಿದ್ದೆನೋ; ಅಂಥಾ ನಾನು ಈಗ ಅವನಿಗೆ ಬಡತನ ಬಂದದ್ದರಿಂದ ಅಲ್ಲಲ್ಲಿ ಆ- ಗಕ್ಕಾ [illegible] ...ಾಗೆ [illegible]

...ಈ ಹೊತ್ತು ಆ ಚಾರುದತ್ತನ ಮ... [illegible]

ನವಾಸನೆಯುಳ್ಳ ಈ ಬಹಿರ್ವಾಸವನ್ನು ದೇವರಪೂಜೆ ಮಾ...

ದತ್ತನಿಗೆ ಕೊಡಬೇಕೆಂದು ಕಳುಹಿಸಿರುವನು. ಅದರಿಂದ ಬೇಗನ...

ನಂ ನೋಡುತ್ತೇನೆ. (ಅಡಿಯಿಟ್ಟು ನೋಡಿ) ಇದೋ ಚಾರುದತ್ತನು, ... ಕಾರ್ಯವನ್ನು ಮಾಡಿಕೊಂಡು ಗೃಹದೇವತೆಗಳಿಗೆ ಬಲಿಯನ್ನು ಹಾಕಲೋಸು... ಗ ಇತ್ತಲೇ ಬರುತ್ತಿದ್ದಾನೆ.

[ಬಳಿಕ ಹೇಳಿದಂತೆ ಚಾರುದತ್ತನು ರದನಿಕೆಯು ಬರುವರು.]

ಚಾರುದತ್ತಂ:—(ಮೇಲೆ ನೋಡಿ ಚಿಂತೆಯಿಂದ ನಿಟ್ಟುಸಿರ್ಬಿಟ್ಟು)

ಕಂ॥ ಬಲಿಯಿಡೆ ಯಂಚೆ ಗಳಾಗಳೆ
ಯಲಂಕೃತಾವನಿಯೊಳುಂಬು ದಾವಂಗಣದೊಳ್॥
ಸಲೆ ಯೀಗ ಳ್ಪುಲ್ ಬೆಳೆದಾ
ನೆಲದೊಳೆ ಕೀಟಗಳು ದಿರ್ಚುವುದು ಬಿತ್ತುಗಳಂ॥ ೬॥

(ಇಂತೆಂದು ಮೆಲ್ಲ ಮೆಲ್ಲನೆ ಅಡಿಯಿಟ್ಟು ಕುಳ್ಳಿರ್ದ್ದಪಂ)

ವಿದೂ॥ ಇದೋ ಚಾರುದತ್ತನು. ಈಗಲೆ ಹತ್ತಿರಕ್ಕೆ ಹೋಗುತ್ತೇನೆ. (ಬಳಿಗೆ ಬಂ
ಅಯ್ಯಾ! ನಿನಗೆ ಮಂಗಳವು. ಅಭ್ಯುದಯವಾಗಲಿ.

ಚಾರು:—ಎಲೆಯೆಲಾ! ಸರ್ವಕಾಲದಲ್ಲಿಯುಂ ಗೆಳೆಯನಾದ ಮೈತ್ರೇಯಂ ಬಂದ
ಗೆಳೆಯನೇ! ಸುಖವಾಗಿಬಂದೆಯೋ? ಕುಳ್ಳಿರೈ.

ವಿದೂ॥ ಅಪ್ಪಣೆ. ಅಯ್ಯಾ! ಮಿತ್ರನೇ! ನಿನಗೆ ತುಂಬಾಗೆಳೆಯನಾದ ಚೂರ್ಣವೃದ್ಧ
"ಜಾಜಿಯ ಹೂವಿನ ವಾಸನೆಯಾದ ಈಬಹಿರ್ವಾಸವನ್ನು ಕೃತಾಹ್ನಿಕನಾ
ಚಾರುದತ್ತನಿಗೆ ನೀನು ಕೊಡಬೇಕೆಂದು" ಕಳುಹಿಸಿರುವನು. (ಎಂದು ಕೊ
ತ್ತಾನೆ.)

ಚಾರು:— (ತೆಗದುಕೊಂಡು ಚಿಂತಿಸುತ್ತನಿಂದಪಂ.)

ವಿದೂ॥ ಅಯ್ಯಾ! ಏನು ಹೀಗೆ ಚಿಂತಿಸುತ್ತೀಯೇ?

ಚಾರು:— ಮಿತ್ರನೇ! ಕಂದಂ॥ ಮೆರೆಗುಂ ಸುಖಮುದು ದುಃಖಮು
ನುರೆತಿಳಿದೊಡೆ ದೀಪದಂತೆ ಕಗ್ಗಳ್ತಲೆಯೊಳ್॥
ಅರಿದುಂ ಧನದಿಂ ಸುಖಮುಂ
ದರಿದ್ರನಾದೊಡೆ ಬಳಿಕ್ಕ ಜೀವನ್ಮೃತನೈ॥ ೭॥

ವಿದೂ॥ ಅಯ್ಯಾ? ಮಿತ್ರನೇ! 'ಸಾವು,' ಬಡತನ, ಇವೆರಡರಲ್ಲಿ ಯಾವದು ನಿನಗೆ
ಳ್ಳೆ... ತೋರುತ್ತೆ.?

...ದರೊಳ್
ಮಡಿವೆನಗಿಷ್ಟಂ ಸಮಂತು ಬಡತನವಲ್ಲಂ॥
ಮಡಿವಾದೊಡಲ್ಪ ದುಃಖಂ
ಬಡತನವಾವಗಮನಂತ ದುಃಖಮು ನೀಗುಂ॥ ೮॥

ವಿದೂ॥ ಅಯ್ಯಾ ಮಿತ್ರನೇ! ವ್ಯಸನ ಪಡಬೇಡ. ಪ್ರಿಯ ಜನಗಳಿಂದ ಪಡೆಯಲ್ಪಟ್ಟ
ಸಂಪತ್ತುಳ್ಳ ನಿನ್ನ ಬಡತನವು ದೇವತೆಗಳುಂ ಡುಳಿಸಿದಾ ಪ್ರತಿಪಚ್ಚಂದ್ರ ಕಲೆ
ಯಂತೆ ಬಹುರಮಣೀಯವಾಗಿರುವದು.

ಚಾರು:— ವಯಸ್ಯನೇ! ಎನಗೆ ಪಣಮಂ ಕುರಿತು ಬಡತನವಿಲ್ಲಂ. ನೋಡು ಮುದಿತ
ನದೊಳ್ ಒಣಗಿದ ಮದಲೇಖೆ ಯುಳ್ಳಾನೆಯ ಕೆನ್ನೆಯಂ ತುಂಬಿಗಳ್ಬಿಡುವಂತೆ
ಅತಿಥಿಗಳೆನ್ನ ಮನೆಯಂ ಧನಹೀನವೆಂದು ತಿಳಿದು ಬಿಡುವರ್.

ವಿದೂ॥ ಮಿತ್ರನೇ! ಈ ಚಪಲವಾದ ಧನವು ಕಾಡಿನಲ್ಲಿ ಕಚ್ಚುವ ನೊಣಕ್ಕೆ ಭಯಪ
ಟ್ಟು ಹೋಗುವ ಗೊಲ್ಲರ ಹುಡುಗರಂತೆ ಎಲ್ಲಿ ತಿನ್ನಲ್ಪಡುವದಿಲ್ಲವೋ ಅಲ್ಲಿ
ಗೆ ಹೋಗುವದಲ್ಲವೆ?

ಚಾರು:— ಗೆಳೆಯನೇ! ನೀಂಪೇಳ್ದುದುದಿಟವೋ.

ಕಂ॥ ಧನ ನಾಶ ಚಿಂತೆ ನಿಸದಂ
ತನಗಿಲ್ಲ ವಿಧಿ ಪ್ರಕಾರ ಮಿರ್ಕುಂಪೋಕುಂ ॥
ಧನ, ಮಲ್ಲದೆ ಜನಮುಳಿಗುಂ
ಧನ ರಹಿತನ ಕೆಳೆಯ ನೆಂದಿ ದೆನ್ನಂದಹಿಕುಂ॥೯॥

ಮತ್ತಮದಲ್ಲದೆಯುಂ.

ವೃ॥ ಬಡತನದಿಂದೆ ನಾಣಹುದು, ನಾಣ್ಬಡೆ ಪೋಪ್ಪುದು ದೀಪ್ತಿ, ದೀಪ್ತಿಯಂ
ಬಿಡೆಯುವಮಾನಮಪ್ಪು, ದವಮಾನವದಾಗೆ ವಿರಕ್ತಿಯಂಬಡು,
ತೊಡನದರಿಂದಳಲ್ಪು, ನಳಲಿಂಮತಿ ಪೋಪ್ಪುದು, ಬುದ್ಧಿನಾಶದಿಂ
ಕಡೆಗಳಿವಂ, ದರಿದ್ರತೆಯದಿಂತಮವೆಲ್ಲ ವಿಪತ್ತಿಗಾಕರಂ॥೧೦॥

ವಿದೂ॥ ಮಿತ್ರನೇ! ಆ ಕೆಟ್ಟ ಹಣವನ್ನೇ ನೆನಸಿಕೊಂಡು ಚಿಂತಿಸುವೆಯೆ?

ಚಾರು:— ಗೆಳೆಯನೇ, ಮಾನಿಸಗೆ ಬಡತನ ಮೆಂಬುದು.

ವೃ॥ ಪಳಿಗೆಡೆ, ಚಿಂತೆಗಾಸರೆ, ಯಿದೊಂದು ಸಪತ್ನತೆ, ಮಿತ್ರಸಾಧುಗಳ್
ತಳೆವನುಕಂಪೆಗಿಂಬು, ವಧುತೋಪಪತ್ತಿರಸ್ಕೃತಿಗಿಕ್ಕೆ, ನಂಟರೊಳ್
ಕಳಹನಿಮಿತ್ತ ಮಾಗಿಪ್ಪುದು, ಕಾಡಿಗೆ ಪೋಗಿಪ್ಪು, ದಿಂತುಮಾನಸೋ
ಜ್ಜ್ವಳಗುರುಶೋಕವಹ್ನಿಯಿದು ಚುಚ್ಚದೆಯೇ ತಪಿಕುಂದರಿದ್ರನಂ॥೧೧॥

ಆದರಿಂದದಂತಿಕ್ಕೆ. ಗೃಹದೇವತೆಗಳ್ಗಂ ಬಲಿಯನೆಸಗಿದೆಂ. ನೀನುಮೀಗ
ಳ್ಪೋಗಿ ಚತುಷ್ಪಥದೊಳ್ ಮಾತೃದೇವತೆಗಳ್ಗೆ ಬಲಿಯನರ್ಪಿಸು.

ವಿದೂ॥ ನಾನು ಹೋಗುವದಿಲ್ಲವು.

ಚಾರು:— ಏಕೆ?

ವಿದೂ॥ ಹೀಗೆ ಎಷ್ಟು ಪೂಜಿಸಿ ಗೊಂಡರೂ ದೇವತೆಗಳು ಅನುಗ್ರಹಿಸ ಲಿಲ್ಲವು. ಆದ್ದ
ರಿಂದ ದೇವತೆಗಳನ್ನು ಪೂಜಿಸಿದರೇನು ಫಲವು?

ಚಾರು:— ವಯಸ್ಯನೆ! ಅಂತೆನಲಾಗದು. ಗೃಹಸ್ಥಂಗೀ ವಿಧಿಯುಂ ನಿತ್ಯಮಲ್ತೆ?

ಕಂ॥ ಸೇವಿಪ ಶಾಂತಾತ್ಮರಸ್ಸುವು
ನೋವಾಕ್ತಪದಿಂದೆ ಬಲಿಯಿನರ್ಚಿತರಾದಾ॥
ದೇವತೆಗಳ್ ಸಂತೋಷಿಪ
ರಾವಗ ಮಿದರಲ್ಲಿ ಸಂಶಯಂ ನಸು ಮೊಳವೇ?॥ ೧೨॥

ಆದುದರಿಂ ಪೋಗಿ ಮಾತೃದೇವತೆಗಳ್ಗೆ ಬಲಿಯನೊಪ್ಪಿಸೈ.

ವಿದೂ॥ ನಾನುಹೋಗೆನು. ಮತ್ತಾರ್ಯರನ್ನಾದರೂ ಕಳುಹಿಸು. ಕನ್ನಡಿಯಲ್ಲಿ ಎಡವು

ಬಲವಾಗಿಯೂ, ಬಲವು ಎಡವಾಗಿಯೂ, ಕಾಣುವ ನೆರಳಿನಂತೆ, ಬ್ರಾಹ್ಮಣ ದನನಗೆಲ್ಲವೂ ವಿಪರೀತವಾಗಿಯೇ ಪರಿಣಮಿಸುತ್ತೆ. ಮತ್ತು, ಈಸಂಜೆ ಹೊ ನಲ್ಲಿ, ಆರಾಜಮಾರ್ಗದಲ್ಲಿ ಸೂಳೆಯರು, ವಿಟರು, ಚೇಟರು, ರಾಜಪುರುಷರು ಓಡ್ಯಾಡುತ್ತಿರುವರು. ಅದರಿಂದ ಕಪ್ಪೆಗಾಶೆಪಟ್ಟ ಕಾಳಸರ್ಪಕ್ಕೆ ಇಲಿ ಸಿಕ್ಕಿ ತೆ ನಾನವರೆದುರಿಗೆಬಿದ್ದು ಈಗಲೇಸಾಯಬೇಕಾದೀತು. ನೀನಿಲ್ಲಿ ಕೂತು ಕೆ ಡು ಏನುಮಾಡೀಯೇ?

ಚಾರು: — ಆದೊಡೆ! ನಿಲ್! ಅನು ಮನಿತರೊಳ್ ಜಪಮಂ ಮುಗಿಪೆಂ.

[ತೆರೆಯಲ್ಲಿ] ನಿಲ್! ವಸಂತಸೇನೆಯೇ! ನಿಲ್!

[ಬಳಿಕ ವಿಟಶಕಾರಚೇಟರಿಂ ನೆಡೆಯಿಸಿಕೊಳ್ವ ವಸಂತಸೇನೆ ಪುಗುವಳ್.]

ವಿಟಂ: — ವಸಂತಸೇನೆಯೇ! ನಿಲ್! ನಿಲ್!

ಕಂ॥ ಕಡುಬೆಗಡಿಂ ಮೆಲ್ನಡೆಯುಂ
ಬಿಡುತಂ, ನಾಟ್ಯದೆ ಬೆಡಂಗು ವಡೆದಡಿಗಳ ನೀ॥
ನಿಡುತೋಡಿದಪಯ್, ನೋಡುತೆ
ಕಡೆಗಣ್ಣಿಂ, ಬೇಡನಟ್ಟೆ ಚಂಚಲಮೃಗಿವೋಲ್॥೧೩॥

ಶಕಾರನು॥ ನಿಂತುಕೋ! ವಸಂತಸೇನಿಕೆಯೇ! ನಿಂತುಕೋ!

ಕಂ॥ ಎಡವರಿಸುತ, ತಡವರಿಸುತ,
ನಡೆಯುತ, ಓಡುತ, ಪಲಾಯನಂ ಮಾಡುತ್ತೀ॥
ಹುಡುಗಿಯೆಲೆ, ಸಾಯಬೇಡವೆ,
ಸುಡುತಿದೆಯೇ ಮಾಂಸದಂತೆ ನನ್ನಮನಸ್ಸು॥ ೧೪॥

ಆದರಿಂದ ಕೊಂಚ ನಿಲ್ಲು! ಪಸನ್ನಳಾಗು! ※

ಚೇಟ॥ ಆರ್ಯಳೇ! ನಿಲ್ಲು! ನಿಲ್ಲು! ನವಿಲಂತೆ ಪುಚ್ಛವನ್ನು ತೋರಿಸುತ್ತ, ಭಯಪಟ್ಟು ಹೋಗುತ್ತೀಯೇಕೆ? ನಿಲ್ಲು! ಇದೋ ನಮ್ಮೊಡೆಯನುನಿನ್ನಬಳಿಗೆಬರುತ್ತಿದ್ದಾ

※ "ಮದಮೂರ್ಖತಾಭಿಮಾನೀ ದುಷ್ಕುಲತೈಶ್ವರ್ಯ ಸಂಯುಕ್ತಃ।
ಸೋಯಮನೂಢಾ ಭ್ರಾತಾರಾಜ್ಞ್ಯಃ ಶ್ಯಾಲಶ್ಶಕಾರಶ್ಚ॥
ಅಪಾರ್ಥಮಕ್ರಮಂ ವ್ಯರ್ಥಂ ಪುನರುಕ್ತಂ ಹತೋಪಮಂ।
ಲೋಕನ್ಯಾಯವಿರುದ್ಧಂಚ ಶಕಾರವಚನಂವಿದುಃ."

ಎಂದಿರುವುದರಿಂದ ಎಲ್ಲಾ ದೋಷಗಳಿಗೂ ಇವನ ಮಾತುಗಳ ಉದಾಹರಣಗಳು ಸಿಕ್ಕುತ್ತಿವೆ. ಛಂದೋ ನಿಬಂಧನೆಗಳ ದೋಷವೂ, ಅಸಂಬದ್ಧ ಪ್ರಲಾಪವೂ, ಯಥೇಚ್ಛವಾಗಿರುವುದು. ಇದೇ ಅತಿನೀಚ ಪಾತ್ರವು.

ತಂ॥ (ಮನದಲ್ಲಿ) ಇದೇನಿವನ ಸಮಾಧಾನವೂ ಭಯಂಕರವಾಗಿದೆ. ಆಗಲಿ, ಹೀಗೆ ಹೇಳೋಣ. (ಪ್ರಕಾಶವಾಗಿ) ಆರ್ಯನೇ? ಇದರೊಳಗೇ ನಾದರೂ ಅಲಂಕಾರವು ಬೇಕೊ.?

ಟ :— (ಸ್ಮೈರಿಸಿ) ಮಾನಿತೆ ವಸಂತಸೇನೆಯೇ! ಉದ್ಯಾನಲತೆ ಕುಸುಮ ನಾಶವನ್ನೊಂದಲ್ಲಾರದು. ಅದರಿಂದ ಲಂಕಾರವಂತಿರ್ಕೆ.

ವಸಂ॥ ಆದರೆ ಮತ್ತೇನೀಗ?

ಶಕಾರ॥ ದೇವಪುರುಷನಾದ ಮನುಷ್ಯನಾದ ವಾಸುದೇವನಾದ ನನ್ನನ್ನು ನೀನು ವರಿಸಬೇಕು.

ವಸಂ॥ (ಕೋಪದೊಡನೆ) ಶಾಂತವಾಗಲಿ ಪಾಪವುಶಾಂತವಾಗಲಿ! ಆಚೆಗೆ ಹೋಗು. ಕೆಟ್ಟಯೋಚನೆಯನ್ನು ಮಾಡುತ್ತೀಯೆ.

ಶಕಾರ॥ (ಚಪ್ಪಾಳೆ ತಟ್ಟುತ್ತನಕ್ಕು)ಭಾವಭಾವ! "ನೋಡು. ಈ ಸೂಳೆಯುಮಗಳು ನನ್ನನ್ನು ಶ್ರಾಂತನಾಗಿದ್ದೀ ಕ್ಲಾಂತನಾಗಿದ್ದೀ, ಈಚೆಗೆಬಾ ಎಂದು ಪ್ರೀತಿಯಿಂದ ಮಾತನಾಡಿಸುತ್ತಾಳೆ. ನಾನುಯಾವೂರಿಗೂ,ಯಾವಹಳ್ಳಿಗೂ ಹೋದವನಲ್ಲ" (ಎಂದು)ಎಲೆ ಆರ್ಯಳೇ!ಭಾವನತಲೆಯನ್ನು ನನ್ನಕಾಲುಗಳಿಂದ ಪೊದ್ದದ್ದರಿಂದಲೂ ನಿನ್ನಹಿಂದೆಯೇ ಅಟ್ಟಿ ಬಂದದ್ದರಿಂದಲೂ, ಶ್ರಾಂತನೂ, ಕ್ಲಾಂತನೂ ಆದೆನು.

ವಿಟಂ:— (ತನ್ನೊಳು.) ಎಲಾ! ಇವನೇಂಮೂರ್ಖಂ? ಶಾಂತವೆಂ ದೊಡೆ ಶ್ರಾಂತವೆಂದು ತಿಳಿದಪಂ. (ಹೊರಗೆ) ವಸಂತ ಸೇನೆಯೇ! ವೇಶವಾಸಕ್ಕೆ ವಿರುದ್ಧವಾದುದಂ ನುಡಿದಯ್. ನೋಡು.—

ಕಂ ॥ ಬೆಲೆವೆಣ್ಣಳೆತರುಣಗೊರ್
ಳ್ಕಲೆಯೆನೆಸಾಮಾನ್ಯೆಯಾದೆ ಸರಣಿಜಲತೆವೋಲ್
ಬೆಲೆಗನುಪೊಡ ಲಾಂತಿರ್ದ್ದಪೆ
ಲಲನೆಯೆ ಸಮ ಮೊಂದು ರಸಿಕ ನುಮ ನರ ಸಿಕನಂ॥೧೮॥

ಮತ್ತಂ ॥

ವೃ ॥ ಕೊಳದಲ್ಲಾಳ್ದಪ ನಾಬುಧಂದ್ವಿಜವರಂ ವರ್ಣಾಧಮಂ ಮೂರ್ಖನುಂ
ವಿಳಸದ್ವಲ್ಲಿಯ ನಾಂತುಬಾಗಿಪುದು ಕೂತಾರ್ಗ ಕಾಗೆಯುಂ ಪೋಗೆಯುಂ
ತಳರ್ವ ಬೈರ್ತ್ರದೆ ವಿಪ್ರರಾ ದ್ವಣಿಜರುಂ ಮುನ್ನೀರೊಳನ್ಯರ್ಕಳುಂ
ಕೊಳದೋಲ್ ಬಳ್ಳಿಯವೋಲ್, ಪಡುಂಗುತೆರದಿಂ, ತಾಳೆಲ್ಲರಂ ವೇಶ್ಯೆನೀಂ॥

ವಸಂ॥ ಗುಣವಲ್ಲವೇ ಅನುರಾಗಕ್ಕೆಕಾರಣವು.? ಮತ್ತೂ ಬಲಾತ್ಕಾರವಲ್ಲವಷ್ಟೆ?

ಶಕಾರ। ಭಾವಭ್ಭಾವ!! ಈ ಕತ್ತೆಯಮಗಳು, ಕಾಮದೇವಾಲಯದ ತೋಟದ
ಲು ಆದರಿದ್ರ ಚಾರುದತ್ತನನ್ನು ಬಯಸಿದ್ದಾಳೆ. ನನ್ನನ್ನು ವರಿಸಳು, ಅ
ನೆ ಯೆಡಗಡೆಯೇ ಯಿದೆ. ಇವಳು, ನಮ್ಮಿಬ್ಬರ ಕೈಮೀರಿ ಹೋಗದ ಹಾಗೆ
ನು ಮಾಡು.

ವಿಟಂ:—(ತನ್ನೊಳು) ಈಮೂಢ ನಾವುದಂ ಬಿಡಲ್ತಕ್ಕುದೋ ಅದನೇನುಡಿದಪ
ದೇಂ ವಸಂತಸೇನೆ ಆರ್ಯಚಾರುದತ್ತನ ನೆಳಸಿಪ್ಪರ್ಳೊ? ಇದು ಲೇಸಲ್ತೆ
ನ್ನಂ ರನ್ನದೊಡನೆಯೆ ಸಂಗಡಿಸಿರ್ಕುಂ, ಅಂತಾದೊಡೆ ಪೋಗಲಕ್ಕುಂ. ಈ
ರ್ಖನಿಂದೇಂ? (ಪೊರಗೆ.) ಎಲೋ ಕಾಣೇಲಿಯಮಗನೇ! ಆಪರದನಮನೆ ಎ
ಗಡೆಯೋ?

ಶಕಾರ। ಅಹುದು, ಎಡಕ್ಕೇ ಅವನಮನೆ,

ವಸಂ॥ (ತನ್ನೊಳು) ಆಶ್ಚರ್ಯವಿದು, ಎಡಕ್ಕೆ ಮನೆಯೆಂಬುದು ದಿಟವೆ. ಕತ್ತಲೆ
ಪ್ರಿಯಗೃಹವನ್ನು ತೋರಿಸಿದ್ದರಿಂದ, ಅಪರಾಧಿಯಾದ ದುರ್ಜನನಿಂದಲೂ
ಪಕಾರವಾಯಿತಲ್ಲಾ,

ಶಕಾರ॥ ಭಾವ ಭಾವ! ಕತ್ತಲೂ ಬಲವಾಯಿತು, ಮಾಷರಾಶಿಯಲ್ಲಿ ಬಿದ್ದ ಮಸೀಗು
ಗೆಯಂತೆ ವಸಂತಸೇನೆ ಕಾಣಿಸುತ್ತಾಲೇ ಓಡಿಹೋದಳು,

ವಿಟಂ:—ಆಯ್ಯಾ ಕಳ್ತಲೆ ಕಡಿದಾಯಿತ್ತೈ, ಎಂತೆನೆ:—

ಕಂ॥ ನಿರುಕಿಸಲಾಪ್ಪೆರ್ನ್ನದೃಶಂ
ತ್ವರಿತದೆ ತಿಮಿರ ಪ್ರವೇಶ ದಿಂದಸಮರ್ಥಂ
ತೆರದಿರ್ದೊಡ ಮೀಗಳ್ತಾಂ
ನೆರೆ ಮುಚ್ಚಿದ ತೆರದಿನಿರ್ಕ್ಕು ಮೀ ಗಳ್ತಲೆಯಿಂ॥ ೨೦॥

ಮತ್ತಂ॥ ಇರೆ ಮುಚ್ಚಿರ್ದು ಮೈಗಣ್ಪಂ
ಬೊರೆದಪುದೆನೆ ಬಾಷಿದಂಜನಂ ಸೂಸುವವೋಲ್
ಪುರುಷಾಧಮ ಸೇವೆಯ ವೋಲ್
ನೆರೆ ಫಲಿಸದೆ ಪೋದುದೆಲ್ಲ ಜನದೃಷ್ಟಿಯುಮಂ॥ ೨೧॥

ಶಕಾರ॥ ಭಾವ. ! ವಸಂತಸೇನೆಯನ್ನು ಹುಡುಕುತ್ತೇನೆ.

ವಿಟಂ:—ಎಲ್ಕೈ! ಪುಡುಕುವೊಡೆ ಕೊಂಚಕುರುಪ್ಪುಂಟು. ನೋಡಿದೆಯಾ?

ಶಕಾರ॥ ಭಾವ ಭಾವ !! ಅದೇನದೇನು?

ವಿಟಂ:—ತೊಡವುಗಳಿಂಚರಮುಂ, ಪೂಮಾಲೆಯ ಪರಿಮಳಮುಂ;

ಂ॥ ಮಾಲ್ಯಗಂಧವನ್ನು ಕೇಳಿದೆನು. ಮತ್ತು ಭೂಷಣಶಬ್ದವನ್ನು ಕತ್ತಲಿ ತುಂಬಿರುವ ಮೂಗಿನಿಂದ ಚನ್ನಾಗಿ ನೋಡಲಿಲ್ಲ.

:—(ಜನದಪೊರೆಯೊಳ್.) ವಸಂತಸೇನೆಯೇ!

ಕಂ॥ ಭೀರುವೆನೀಂ ಕಾರ್ಮುಗಿಲೊಳ್
ತೋರಿ ಲಯುಂ ಗೊಳ್ವಮಿಂಚಿ ನೋಲ್ಕಾಣಿಸದೇ
ಪಾರಲ್ ಮುಚ್ಚೊರ್ಗಳ್ ನಿನ್ನೀ
ಹಾರದ ಗಂಪ್ಪುಲಿವವಲಯುಮುಂ ಸೂಚಿಸುಗುಂ॥ ೨೨॥

ಕೇಳ್ದುದೋ? ವಸಂತನೇಯೇ!

ವಸಂ॥ (ತನ್ನೊಳು) ಕೇಳಿಸಿತು. ಮತ್ತು ತೆಗದದ್ದಾ ಆಯಿತು. (ನಾಟ್ಯದಿಂ ಕಡಗಗಳನ್ನೂ, ಹಾರವನ್ನೂ, ತೆಗದು, ಕೊಂಚನಡೆದು, ಕೈಯಿಂ ನತಡವಿ) ಆಹಾ! ಗೋಡೆಯನ್ನು ಮುಟ್ಟುವದರಿಂದ ಇದುಬಾಗಿಲು ರಕ್ಕೆಯೆಂದು ತಿಳಿಯಿತು, ಆದರೆಮನೆಯ ಬಾಗಿಲು ಮುಚ್ಚಿರುವುದೆಂದು ತೋರುತ್ತೆ.

ಚಾರು:—ವಯಸ್ಯನೇ! ಜಪಮಂ ಮುಗಿಸಿದೆಂ. ಆದರಿಂದೀಗಳ್ ನೀಂಪೋಗಿ ಮಾತೃದೇವತೆಗಳ್ಗೆ ಬಲಿಯುನಮರ್ಚು.

ವಿದೂ॥ ಅಯ್ಯೋ! ನಾನು ಹೋಗಲಾರೆನು.

ಚಾರು:—ಚಿಃ.! ಕಷ್ಟಂ.

ವೃ॥ ಬಡತನದಿಂದೆ ಬಾಳ್ದಪನ ಮಾತನೆ ಬಂಧುಜನಂಗ ಳಾಲಿಸರ್,
ಕಡು ಗೆಳೆಗೊಂಡ ಮಿತ್ರಜನ ಮುಂವಿಮುಖಂ ಬಡೆನಪ್ಪು, ಪೆರ್ಚುಗುಂ।
ಅಡಿಗಡಿ ಗಾಪದಂಗ, ಳಳಿಗುಂಸುಬಲಂ, ಕಳೆಶೀಲಚಂದ್ರನೊಳ್,
ಕೆಡುಗು, ಮಿದಲ್ಲ ದನ್ಯಕೃತ ಪಾಪಮನಾತನೊ ಳಾದುಗುಂಜನಂ॥ ೨೩

ಅಂ ತು ಮ ಲ್ಲ ದೆ.

ವೃ॥ ಕೆಳೆಯುಂ ಗೈಯನದಾವನುಂ ಬಡವನೊಳ್, ಮೇಣೊಲ್ಮೆಯಿಂಭಾಷಿಸಂ,
ಮಳಿನಾಲ್ಪಾಂಶುಕ ಮಾಂತುನಾಣ್ಚಿ ಕೆಯಿನಾ ದಂದೂರ ದಲ್ಲಿರ್ದೊಡಂ
ಪಳಿವರ್ ಮೇಣ್ ಧನಿ ಸದ್ಮಕೆಯ್ದೆ ಶುಭದೊಳ್ ನೋಡಲ್ಕ ಗೌರವ್ಯನೆಂ
ದುಳಿವತರ್ವವದರಿಂದ ಮೀಬಡತನಂ ಷಷ್ಠಂಮಹಾಪಾತಕಂ॥ ೨೪॥

ಮತ್ತಂ॥ ಕಂ॥ ಬಡತನಮೆ! ನಿನಗೆ ಶೋಕಿಪೆ
ನಡಿಗಡಿಗಂ, ನೆನ್ನೊಳಿದ್ದು ಕೆಳೆತನದಿಂನೀಂ
ಬಿಡದೆಹತ ಭಾಗ್ಯನಪ್ಪೆ
ನ್ನೊಡಲಳಿಯ ಲ್ಪೋಗುವೆತ್ತ ಲೆನಗಿದುದುಃಖಂ॥ ೨೫॥

ವಿದೂ॥ (ಆಶ್ಚರಿಯಿಂ) ಅಯ್ಯಾಮಿತ್ರನೇ! ನಾನು ಹೋಗ ಬೇಕಾದರೆ ಯೊರಡ ಯುಾ ಕೂಡಲೇ ಬರಲಿ.

ಚಾರು:— ಎಲೆ ರದನಿಕೆಯೇ! ಮೈತ್ರೇಯನೊಡನೆ ಹೋಗು.

ಚೇಟಿ॥ ಆರ್ಯ ನಪ್ಪಣೆಯಂತಾಗಲಿ.

ವಿದೂ॥ ಎಲೇ ರದನಿಕೇ! ದೀಪವನ್ನೂ, ಬಲಿಯನ್ನೂಹಿಡಿದುಕೋ, ನಾನು ಬಾಗಿಲ ತೆಗೆಯುವೆನು. (ಹಾಗೆಮಾಡುವನು)

ವಸಂ॥ ನನ್ನನುಗ್ರಹಾರ್ಥ ವಾಗಿಯೇ ಬಾಗಿಲುತೆಗದ ಹಾಗಾಯಿತು. ಅದರಿಂದ ಪ್ರೊಕ್ಕೆ ಹೋಗುವೆನು. (ನೋಡಿ) ಛೀ,ಛೀ.! ಇದೇನುದೀಪವು. ? (ಎಂದುಸೀರೆ ಕೊನೆ ಯಿಂದಾರಿಸಿ ಒಳಗೆ ಹೋದಳು.)

ವಿದೂ॥ ಬಾಗಿಲು ತೆಗೆಯುತಲೂ ಭುಸ್ಸೆಂದು ಗಾಳಿಬೀಸಿ ದೀಪವನ್ನಾರಿಸಿತು. ಎಲೆ ರ ನಿಕೆ! ನೀನೀ ಬಾಗಿಲಿಂದ ಹೊರಕ್ಕೆ ನಡೆಯಿ, ನಾನೂ ಒಳತೊಟ್ಟಿಗೆ ಹೋಗಿದೀಪವನ್ನು ಮುಟ್ಟಿಸಿ ಕೊಂಡು ಬರುವೆನು. (ಎಂದುಹೋದನು)

ಶಕಾರ॥ ಭಾವಭಾವ, ವಸಂತಸೇನೆಯನ್ನು ಹುಡುಕುವೆನು.

ವಿಟಂ:—ಹುಡುಕು! ಹುಡುಕು!

ಶಕಾರ॥ (ಅಂತುಮಾಡಿ) ಭಾವಭಾವ! ಹಿಡಿಕೊಂಡೆ,ಹಿಡಿಕೊಂಡೆ,

ವಿಟಂ:— ಮೂರ್ಖನೇ! ಎನ್ನನಲ್ತೆ. ?

ಶಕಾರ॥ ಆದರೆ, ಭಾವನೇ! ನೀನು ಹೀಗೆಬೇರೆಯಿರು, (ಮತ್ತುಹುಡುಕಿ, ಚೇಟನನ್ನು ಹಿಡಿದು) ಭಾವಭಾವ! ಹಿಡಿದೆ. ಹಿಡಿದೆ.

ಚೇಟಂ॥ ಭಟ್ಟಾರಕಾ! ನಾನು ಚೇಟನು.

ಶಕಾರ॥ ಆದರೆ, ಭಾವನತ್ತಿರಲಿ,ಚೇಟನಿತ್ತಿರಲಿ,ಭಾವನುಚೇಟನು, ಚೇಟನುಭಾವನು, ನೀವಿಬ್ಬರೂ ಬೇರೇಹಾಗಿರಿ. (ಮತ್ತುಹುಡುಕಿ, ರದನಿಕೆಯ ಕೂದಲನ್ನು ಹಿಡಿದು) ಭಾವಭಾವ! ಈಗಹಿಡಿದೆ ಹಿಡಿದೆ ವಸಂತಸೇನೆಯನ್ನು.

"ಕಂ" ಚಾಣಾಕ್ಯಾಂದ್ರೌಪದಿಯನು, ಹಿಡಿವಂತಿವಳನುಸುಮಾಲ್ಯಗಂಧವ ನೋಡಿ, ಮಬ್ಬಿನೊಳೋಡುತ್ತಿದ್ದರು, ಹಿಡಿದೆನು ನಾನೀಗಬಿಡದೆ ಕೂದಲಜಡೆಯಂ"

ವಿಟಂ:— ಈಕೆ ಜವ್ವನದ ಬಲ್ಮೆಯಿ ನಾಕುಲೀನ ಚಾರುದತ್ತನ ನನುಸರಿಸುತಿರೆ, ಈ ಮೂಢಂ ಪೂವುಡಿಯ ಲಾಪ ಮುಡಿಯಂ ಪಿಡಿದೆಳದಂ.

ಶಕಾರ॥ ಈಬಾಲೆಯ ಕೂದಲನ್ನು ಹಿಡಿದೆಳೆದೆನು. ಕೂಗಲಿ, ಅರಚಲಿ, ಅಬ್ಬರಿಸಲಿ, ಶಿ

ವನನ್ನೋ, ಶಂಕರನನ್ನೋ, ...

ವಿಟಂ:— ಎಲೆಕಾಣೇಲೀ ಪುತ್ರನೇ! ಈದನಿಯುಂ ಬೇರೆ ಯಾಗಿರ್ಪುದು.

ಶಕಾರ॥ ಭಾವ ಭಾವ! ಮುಸರುಕನೆಗೆ ಆಸೆಬಿದ್ದ ಬೆಕ್ಕಿನಹಾಗೆ ಯೀ ತೊತ್ತಿನ ಮಗಳಿಗೆ ಸ್ವರವೂ ಭಿನ್ನಿಸಿರಬಹುದು.

ವಿಟಂ:—ಇದೇ ನಿಂತುಸ್ವರಂ ಬೇರೆಯಾಯ್ತು? ಆಹಾ! ಅಚ್ಚರಿಯಂ! ಅಥವಾ, ಇಲ್ಲೀಂ ಚಿತ್ರ ಮಿರ್ಪುದು? ಯೀಕೆ ನಾಟ್ಯದೆಡೆಯಂ ಪುಗುವುದರಿಂ, ಕಲಾಭ್ಯಾಸದಿಂದಂ, ಮೋಸದೊಳ್ ಶಿಕ್ಷಣೆಯಾದುದರಿಂದಮುಂ ಸ್ವರವಿಕಾರಮಂ,ಪಡೆದಿರ್ಕುಂ.

[ವಿದೂಷಕಂ ಪ್ರೇಕ್ಷ್ಯ.]

ವಿದೂ॥ ಈ ಸಂಜೆಗಾಳಿಯಿಂದ ದೀಪವು ವಧ್ಯ ಸ್ಥಾನಕ್ಕೆ ತಂದ ಕುರಿಯ ಮನಸ್ಸಿನಂತೆ 'ಫುರಫುರ' ಎನ್ನುತ್ತಿದೆ. (ಹತ್ತಿರಕ್ಕೆ ಬಂದು ರದನಿಕೆಯನ್ನು ನೋಡಿ)ಎಲೆ ರದನಿಕೆಯೇ!

ಶಕಾರ॥ ಭಾವಭಾವ! ಮನುಷ್ಯನು ಮನುಷ್ಯನು.

ವಿದೂ॥ ಇದು ಸರಿಯಲ್ಲವು, ಇದು ಯುಕ್ತವಲ್ಲವು; ಏಕೆಂದರೆ- ಆರ್ಯ ಚಾರುದತ್ತನು ಈಗ ದರಿದ್ರನಾದ್ದರಿಂದ ಪರಪುರುಷರು ಮನೆಯನ್ನು ಹೊಗುತ್ತಿದ್ದಾರಲ್ಲಾ.

ರದನಿಕೆ॥ ಅಯ್ಯಾ ಮೈತ್ರೇಯನೇ! ನೋಡಿದೆಯಾ? ನನಗಾದವ ಮಾನವನ್ನು.

ವಿದೂ॥ ಅವಮಾನವು, ನಿನಗೋ? ಅಥವಾ ನಮಗೋ?

ರದನಿಕೆ॥ ನಿಮಗೇಸರಿ.

ಬಲಾತ್ಕಾರವೋ?

ತೊಂದರೆ ಪಡಿಸುತ್ತೀಯೆ? ಆದರೆ ಉಜ್ಜಯಿನೀಪಟ್ಟಣವೇ ಆತನ ಗುಣಗಳಿ
ದ ಅಲಂಕರಿಸಲ್ಪಟ್ಟಿರುವದಲ್ಲವೇ?

ಕಂ॥ ಬಡವನ ದೂಷಿಸ ಬಾರದು
ನಡತೆಯಿರಲ್ ಯಮನ ಬಳಿಯೊಳಿಲ್ಲವು ಬಡವಂ॥
ನಡತೆ ಯದಿಲ್ಲದ ಧನಿಯುಂ
ಕಡು ಬಡವನು ತಾನೆಯೆನಿಸಿ ಕೊಳ್ವನು ಜಗದೊಳ್॥ ೨೬॥

ವಿಟಂ:— (ಅಚ್ಚರಿಯಿಂದ) ಮಹಾಬ್ರಾಹ್ಮಣನೇ! ಸೈರಿಸು ಸೈರಿಸು. ಮತ್ತೋರ್ವಳೆಂದು ಭ್ರಮಿಸಿ ಯಿಂತಾದುದು.— ಸೊಕ್ಕಿನಿಂದಲ್ಲಂ.

ಇತ್ತನೋಡು. ಕಂ॥ ಅರಸಿದಪೆನಾವ ಸಕಾಮೆಯ—

ವಿದೂ॥ ಏನಿವಳೋ?

ವಿಟಂ:—ಪಾಪಂ ಶಮಿಸುಗೆ.— ನುರು ಯೌವನದಿಂದೆ ತೊಳಪ ಮತ್ತೋರ್ವಳನೀ
ಇರದವಳು ನೋಡಿ ಪೋದಳ್
ಕೊರಗಿತು ಮಚ್ಚಿತ್ತಲ ಮೀವಿಧಂ ತದ್ಭ್ರಮದಿಂ॥ ೨೭॥

ಆದುದರಿಂ ದೆಂತುಂ ಯಿಾ ಯನುನಯ ಮೆಲ್ಲಮನುಂ ತೆಗೆದು ಕೊಳಲ್ಕಕ್ಕದು. (ಎಂದು ಕತ್ತಿಯಂಬಿಟ್ಟು ಕೈಮುಗಿದು ಕಾಲಿಗೆರಗುವನು.)

ವಿದೂ॥ ಎಲೆ ಸತ್ಪುರುಷನೇ! ಏಳು ಏಳು. ನಾನು ತಿಳಿಯದೇ ನಿನ್ನನ್ನು ದೂಷಿಸಿದೆನು ಈಗ ತಿಳಿದು ವಿಧೇಯನಾಗುವೆನು.

ವಿಟಂ:— ಅಯ್ಯಾ! ನಾನೇ ವಿಧೇಯ ನಾಗಲ ಕು... ...ಗರಿಂ...

ವಿದೂ॥ ...

ವಿಟಂ:—ಆರ್ಯ ಚಾರುದತ್ತನ ಗುಣಾಂಗಳಿಂದೆ.

ಶಕಾರ। ಅವನ ಗುಣಾಂಗಳೇನು? ಮನೆಯೊಳಗೆ ತಿಂಡಿಗೂ ಗತಿಯಿಲ್ಲ ವಲ್ಲ?

ವಿಟಂ:— ಅಂತೆನವೇಡ. ಕ॥ ಅವನೆಮ್ಮನ್ನರ ಕೆಳೆಯಿಂ

ತಪಿಸಿದ ನವನಿ ನವ ಮಾನ ಮೋರ್ವ್ವಗವಿಲ್ಲಂ॥

ನವೆದನವಂ ಬೇಸಗೆಯೊಳ್

ಸವಿ ನೀರ್ಗೊಳದಂತೆ ಜನರ ತೃಷ್ಣೆಯಂಕಳೆದು॥೨೯॥

ಶಕಾರ॥ (ಕೋಪದಿಂ) ಅವನ್ಯಾರು ಆಕತ್ತೆಯ ತೊತ್ತಿನಮಗ? ಶೂರನೊ ವೀರನೊ ರಾಧೆಯಮಗನಾದಾ ಪಾಂಡವನೋ? ಶ್ವೇತಕೇತುವೊ ಇಂದ್ರನ ಮಗನಾದಾ ರಾವಣನೋ? ಓಹೋ ರಾಮಗೆ ಕುಂತಿಗೆ ಮಗನಾ ದಶ್ವತ್ಥಾಮನೋ? ಅಥವಾ ಧರ್ಮನ ಮಗನಾದ ಜಟಾಯುವೊ ನೀನುಹೇಳು.

ವಿಟಂ:—ಮೂರ್ಖನೇ! ಆತನಾರ್ಯಚಾರುದತ್ತನಲ್ತೆ?

ವೃ॥ ಸುರತರು ದುರ್ಗತರ್ಗ್ಗೆ, ಸುಜನರ್ಗ್ಗೆಡೆ, ಕೈಪಿಡಿಶಿಕ್ಷಿತರ್ಗ್ಗೆ, ಸ

ತ್ಕರಿಪನವಂ ತಿರಸ್ಕರಿಪ ನಾರನುಮಂ, ಸರಳಂ, ಸುಶೀಲನುಂ,

ಪುರುಷಗುಣಾಲಯಂ, ವಿನಯಿ, ದಾನಿ, ಸುಸತ್ತ್ವನು, ಮಾತನೋರ್ವನೇ

ಉರುಗುಣಬೃಂದದಿಂಬೆಸೆದುಬಾಳ್ದಪ, ನುಂತೆಯೆಸುಯ್ದಪರ್ಪೆರರ್॥೩೦॥

ಆದರಿಂದಿತ್ತ ಪೋದಪೆವುಬಾರೈ.

ಶಕಾರ॥ವಸಂತಸೇನೆಯನ್ನು ಹಿಡಿದುಕೊಳ್ಳದೇಯೋ?

ವಿಟಂ :—ವಸಂತಸೇನೆ ಪೋದಳ್

ಶಕಾರ॥ ಅದು ಹ್ಯಾಗೆ?

ವಿಟಂ:—ವೃ॥ ಕುರುಡನ ದೃಷ್ಟಿಯಂತೆ, ಬಹುರೋಗಿಯದೇಹದ ಪುಷ್ಟಿಯಂತೆ, ಮೂ

ರ್ಖರಸುಮನೀಷೆಯಂತೆ, ಲಸನಕ್ರಿಯೆಯಂತೆ, ನುರಕ್ತಿಯಂತೆವೋ

ಲರಿಗಳ, ದುಃಖಮಾಂತುಮರೆದಿಪ್ಪನ ಪುತ್ತಮ ವಿದ್ಯೆಯಂತೆ, ಯಾ

ವರ ವಧು ನಿನ್ನಮುಂದೆ ಯಿರಲಾರದೆ ಲೋಪಿಸಿಪೋದಳಿತ್ತಲೋ॥ ೩೧॥

ಶಕಾರ॥ ವಸಂತಸೇನೆ ಯನ್ನು ನಾನು ಹಿಡಿಕೊಳ್ಳದೇ ಬರುವದಿಲ್ಲ.

ವಿಟಂ :—ಪನಿದನುಮಂ ನೀಂಕೇಳ್ದರಿಯೊ?

ವೃ॥ ಪಿಡಿವ್ರು ದಾನೆಯು ಬಂಧದ ಕಂಬದಿಂ।

ಪಿಡಿವುದಶ್ವಮನುಂನೆರೆ ವಾಘೆಯಿಂ॥

ಪಿಡಿವು ದಂಗನೆಯುಂ ಸ್ವನುರಾಗದಿಂ

ನಡೆವು ದೀಗಳದಿಲ್ಲ ದೊಡಜ್ಞನೇ॥೩೨॥

ಶಕಾರ॥ ನೀನು ಹೋಗುವುದಾದರೆ ಹೋಗು, ನಾನುಬರುವದಿಲ್ಲ.

ವಿಟಂ:—ಇಂತುಪೋದಪೆಂ. (ಎಂದುಪೊರಟುಪೋದಂ)

ಶಕಾರ॥ ಭಾವನ ಭಾವವಾಗಿ ಹೋದನಲ್ಲವೇ? ಕಾಗೆಯಕಾಲಿನಂತೆ ತಲೆ ಮಂಡೆಯು ಕೂದಲುಳ್ಳ ಕೆಟ್ಟವಟುವೇ! ಕೂತುಕೋ! ಕೂತುಕೋ!

ವಿದೂ॥ ಯಾವಾಗಲೋ ಕೂತುಕೊಂಡೆವು.

ಶಕಾರ ॥ ಎಲ್ಲಿ?

ವಿದೂ॥ ಯಮುನಹತ್ತಿರ

ಶಕಾರ॥ ಏಳು! ಏಳು!

ವಿದೂ॥ ಏಳೋಣ.

ಶಕಾರ॥ ಯಾವಾಗ?

ವಿದೂ॥ ದೈವವು ಮತ್ತೂ ಅನುಕೂಲವಾದಾಗ.

ಶಕಾರ॥ ಎಲಾ! ಅಳು ಅಳು!

ವಿದೂ॥ ಅಳುತ್ತಾಲೇ ಯಿದ್ದೇವೆ.

ಶಕಾರ॥ ಯಾತಕ್ಕೆ?

ವಿದೂ॥ ಬಡತನದಿಂದ

ಶಕಾರ॥ ಎಲಾ! ನಗುನಗು!

ವಿದೂ॥ ನಗುವೆವು.

ಶಕಾರ॥ ಯಾವಾಗ?

ವಿದೂ॥ ಮತ್ತೂ ಆರ್ಯ ಚಾರುದತ್ತನಿಗೆ ಅಭಿವೃದ್ಧಿ ಯಾದಾಗ.

ಶಕಾರ॥ ಎಲ ಯೆಲಾ! ದುಷ್ಟವಟುವೇ! ಆದರಿದ್ರ ಚಾರು ದತ್ತನಿಗೆ, ನಾನು ಹೇಳಿದೆನೆಂದು ಹೇಳು. “ಈವಸಂತ ಸೇನೆಯೆಂಬ ಸೂಳೆಯು ಮಗಳು ಹೊಸನಾಟಕವನ್ನು ತೋರಿಸುವದಕ್ಕೆ ಬಂದ ಸೂತ್ರಧಾರಿಯು ಹಾಗೆ, ಸುವರ್ಣಹಿರಣ್ಯಾಗಳೊಡವೆಯನ್ನಿಟ್ಟು ಕೊಂಡು, ಕಾವು ದೇವಸ್ಥಾನದ ತೋಟದಿಂದ ಮೊದಲು ಮಾಡಿಕೊಂಡು ನಿನ್ನನ್ನೇ ವಿಶ್ವಾಸಿಸಿ ನಮ್ಮಿಂದ ಬಲಾತ್ಕಾರಪಡಿಸಿ ಕೊಂಡರೂ ಕೂಡ ನಿನ್ನ ಮನೆಯನ್ನೇ ಹೊಕ್ಕಳು. ಆದ್ದರಿಂದನೀನೇ ಅವಳನ್ನು ನನಗೊಪ್ಪಿಸಿದರೆ ಸರಿ. ನಿನಗೆ ಸರ್ಕಾರದಲ್ಲಿ ಶಿಕ್ಷೆಯಿಲ್ಲದ ಹಾಗೆ ಮಾಡುತ್ತೇನೆ. ಮತ್ತು ನಿನ್ನ ಮೇಲೆ ಪ್ರೀತಿಯೂ ಇರುತ್ತೆ, ಹಾಗೆ ಒಪ್ಪಿಸದಿದ್ದರೆ ಸಾಯುವವರೆಗೂ ಶತ್ರುತ್ವವು ತಪ್ಪುವದಿಲ್ಲ. ಹಾಗೇನೋಡುನೋಡು. ತೊಟ್ಟಿಗೆ ಸಗಣಿಯನ್ನು ಬಳಿದ ಕುಂಬಳಕಾಯಿಯು, ಒಣಗಿಸಿದ ಶಾಕದ ಬಾಳಕವು, ತುಪ್ಪದಿಂದ ಬೇಯಿ

ಸಿದ ಮಾಂಸವು, ಮಾಗಿಯಕಾಲದಲ್ಲಿ ರಾತ್ರಿಮಾಡಿದ ಅನ್ನವೂ, ಕಾಲಾತೀತವಾದರೂ ಕೆಟ್ಟು ವಾಸನೆಹಿಡಿಯುವದಿಲ್ಲವಷ್ಟೆ?'' ಹೀಗೆಶುಭವಾಗಿಹೇಳು, ಬೇಗಹೇಳು- ನೀನುಹೇಳುವಾಗನಾನು ನಮ್ಮಉಪ್ಪರಿಗೆಯ ಕೊನೆಯ ಲೋವೆಯಮೇಲೆ ಕೂತುಕೊಂಡು ಕೇಳುತ್ತೇನೆ. ಒಂದುವೇಳೆ ನೀನು ಹಾಗೆ ಹೇಳದೇಹೋದೆಯಾಬಾಗಿಲಹಿಂದೆ ಸಿಕ್ಕಿದಬೇಲದಬುರುಡೆಯಹಾಗೆ ನಿನ್ನತಲೆಯನ್ನುಪೊಡೆಯುವೆನು.

ವಿದೂ॥ ಹೇಳತ್ತೇನೆ.

ಶಕಾರ॥(ಓರೆಯಾಗಿ) ಚೇಟನೇ!.ಭಾವನು ನಿಜವಾಗಿಯೇಹೋದನೋ?

ಚೇಟ॥ ಹಾದು.

ಶಕಾರ॥ ಆದರೆ ನಾವೂಹೋಗೋಣ.

ಚೇಟ॥ ಆದ್ದರಿಂದಲೇ ಯಾಕತ್ತಿಯನ್ನು ಭಟ್ಟಾರಕನು ಹಿಡಿಕೋಬೇಕು.

ಶಕಾರ॥ ನಿನ್ನ ಕೈಯಲ್ಲಿಯೇ ಯಿರಲಿ.

ಚೇಟಂ॥ ಅಲ್ಲ ಅಲ್ಲ! ಒಡೆಯನ ಹತ್ತಿರವೇಯಿರಬೇಕು.

+ ಶಕಾರ॥ (ತಲೆಕೆಳಗಾಗಿ ಹಿಡಿದು.) ಗೋಣಿಯ ನಾರಿನ ಗವಸಣಿಗೆ ಯಲ್ಲಿ ಮಲಗಿರುವ ಈಕತ್ತಿಯನ್ನು ಹೆಗಲಮೇಲಿಟ್ಟು ಕೊಂಡು ನಾಯಿ ಅಟ್ಟಿಸಿಕೊಂಡು ಬಂದ ನರಿಯಂತೆ ಮನೆಗೆಹೋಗುವೆನು. (ಎಂದೀರ್ವರುಂ ಪೋದರ್)

ವಿದೂ॥ ಎಲೆರದನಿಕೆಯೇ! ನಿನಗಾದೀಯವ ಮಾನವನ್ನು ಆರ್ಯ ಚಾರುದತ್ತನಿಗೆ ಹೇಳಬಾರದು, ಬಡತನದಿಂದಬಾಧೆ ಪಡುವನಿಗೆ ಈಪೀಡೆಯು ಇಮ್ಮಡಿ ಯಾದೀತೆಂದು ತೋರುತ್ತೆ.

ರದನಿಕೆ॥ ಅಯ್ಯಾಮೈತ್ರೇಯನೇ! ನಾನು ರದನಿಕೆಯಲ್ಲವೇ? ತಲೆಯನ್ನು ಬಗ್ಗಿಸಿಕೊಂಡೇ ಯಿರುವೆನು.

ವಿದೂ॥ ಇದು ಹೀಗೆ ಮಾಡತಕ್ಕದ್ದು.

ಚಾರು:— (ವಸಂತಸೇನೆಯಂ ಕುರಿತು) ರದನಿಕೆಯೇ! ಸಂಜೆಯ ತಂಗಾಳಿಯಲ್ಲಿ ಶೈತ್ಯಂಗೊಳ್ವ ರೋಹಸೇನನಂ ಒಳಪುಗಿಸಿ ಈಯುತ್ತರೀಯಮಂ ಪೊದಿಸು. (ಎಂದುಉತ್ತರೀಯಮಂ ಕೊಟ್ಟಪಂ)

+ ವಸಂತ॥ (ಮನದೊಳ್) ನನ್ನನ್ನು ಪರಿಜನವೆಂದು ತಿಳಿದನೊ ಹೇಗೋ! (ವಸ್ತ್ರವಂ ತೆಗದು ಮೂಸಿನೋಡಿ, ಮನದಲ್ಲಿ ಬಯಕೆ ಯೊಡನೆ) ಇದೇನಾಶ್ಚರ್ಯವು.? ವಸ್ತ್ರವು ಜಾಜಿಯ ಹೂವಿನ ವಾಸನೆ ಯಾಗಿರುವದರಿಂದ ಇವನ ಯೌವನವು ಉಪೇಕ್ಷಿಸ ತಕ್ಕದ್ದಲ್ಲ ವಾಗಿ ತೋರುತ್ತೆ. (ಎಂದುಓರೆಯಾಗಿ ಹೊದಿಸುವಳು)

ಚಾರು:—ಎಲೆ ರದನಿಕೆಯೇ! ರೋಹಸೇನನಂ ತೆಗೆದು ಕೊಂಡು ಒಳಪುಗು.
ವಸಂತ॥ (ತನ್ನೊಳು) ನಿಮ್ಮ ಮನೆಯೊಳಗೆ ಬರಲು ನಾನು ನಿಭಾಗ್ಯಳಲ್ಲವೇ?
ಚಾರು:— ಎಲೆ ರದನಿಕೆಯೇ! ಪ್ರತ್ಯುತ್ತರವಾದೊಡವಿಲ್ಲವೇಂ?

ಕಷ್ಟಂ. ಕಂ॥ ಎಂದು ನರಂ ಯಮ ಯಾತನೆ
ಯಂದದ ಭಾಗ್ಯಲಯ ದುಃಖ ದಶೆಯಂ ಬಡೆವಂ ॥
ಅಂದವನ ಮಿತ್ರ ಮಾದೊಡ
ವೊಂದುವ ದಹಿತತೆಯು, ನಿನಿಯನುಂ ತಾಂ ಬಿಡುವಂ॥೩೩॥

[ವಿದೂಷಕಂ, ರದನಿಕೆಯುಂ, ಬಳಿಸಂದು.]

ವಿದೂ॥ ಅಯ್ಯಾ! ಇದೋ ಆ ರದನಿಕೆಯು.
ಚಾರು:— ಇವಳಾ ರದನಿಕೆ. ಈಕೆಯಾರ್ಮಗತ್ತೋರ್ವಳ್?

ಕಂ॥ ಅರಿಯೆಂ ತಾನಿವಳಂ ನಿಜ
ಶರೀರ ದುರ್ವಸ್ತ್ರದಿಂದೆ ದೂಷಿತೆಯಾದಳ್॥

ವಸಂತ॥ (ತನ್ನೊಳು) ಭೂಷಿತೆಯೇ ಆದಳು.
ಚಾರು:— ಶರದಂಬುದದಿಂ ಮುಸುಕಿ
ದ್ವಿಗರುಳೊಡೆಯನ ಲೇಖೆಯಂತೆ ತೋರುತ್ತಿಪ್ಪಳ್॥೩೪॥
ವೇಣ್ ಪೆರರ ಪೆಣ್ಣಂ ಪರಿಕಿಸ ಲಸಮಂಜಸಂ.
ವಿದೂ॥ ಅಯ್ಯಾ ಮಿತ್ರನೇ! ಪರರ ಹೆಣ್ಣೆಂಬ ಸಂದೇಹ ವ್ಯರ್ಥ. ಈಕೆಯು ಕಾಮ
ದೇವಾಲಯದ ತೋಟದಿಂದಲೂ ನಿನ್ನನ್ನೇ ಬಯಸಿ ಬಂದಿರುವಳು.
ಚಾರು:—ಎಲಾ! ಈಕೆ ವಸಂತಸೇನೆಯೇ (ತನ್ನೊಳ್)

ಕಂ॥ ಕಡು ಪೆಚ್ಚಿದ ಸಿರಿ ಪೋಗ
ಲ್ಕೊಡನೆನ್ನೊಳ್ ಕಾಮಮಾವಳಿಂದೊಗೆದತ್ತೋ।
ಕಡೆಗದು ಕುನರನ ಮುಳಿಸಂ।
ತಡಂಗಿ ಪೋದಪ್ಪುದು ತನ್ನ ಮೈಯೊಳಗಾಗಳ್॥ ೩೫॥

ವಿದೂ॥ ಅಯ್ಯಾ ಮಿತ್ರನೇ! ಇದೋ ರಾಜಶ್ಯಾಲನು ಹೀಗೆ ಹೇಳುತ್ತಾನೆ.
ಚಾರು:—ಅದೇಂ?

ವಿದೂ॥ "ಈ ವಸಂತಸೇನೆ ಯೆಂಬ ಸೂಳೆಯು ಮಗಳು, ಹೊಸನಾಟಕವನ್ನು ತೋರಿಸುವ ದಕ್ಕೆ ಬಂದ ಸೂತ್ರಧಾರಿಯುಹಾಗೆ ಸುವರ್ಣ ಹಿರಣ್ಯಾಗಳೊಡವೆ ಯನ್ನಿಟ್ಟು ಕೊಂಡು, ಕಾಮದೇವಸ್ಥಾನದ ತೋಟದಿಂದ ಮೊದಲು ಮಾಡಿಕೊಂಡು ನಿನ್ನನ್ನೇ ವಿಶ್ವಾಸಿಸಿ, ನಮ್ಮಿಂದ ಬಲಾತ್ಕಾರ ಪಡಿಸಿಕೊಂಡರೂ ಕೂಡ ನಿನ್ನ ಮನೆಯನೇ ಹೊಕ್ಕಳು"

ವಸಂತ॥ (ತನ್ನೊಳು) "ಬಲಾತ್ಕಾರಪಡಿಸಿ ಕೊಂಡರೂಕೂಡ" ಎಂಬ ಮಾತುದಿಟವು ಚನ್ನಾಗಿದೆ.

ವಿದೂ॥ "ಆದ್ದರಿಂದ ನೀನೇ ಅವಳನ್ನು ನನಗೊಪ್ಪಿಸಿದರೆ ಸರಿ, ನಿನಗೆ ಸತ್ಕಾರದಲ್ಲಿ ಶಿಕ್ಷೆಯಿಲ್ಲದ ಹಾಗೆ ಮಾಡುತ್ತೇನೆ. ಮತ್ತಾ ನಿನ್ನ ಪ್ರೀತಿಯೂ ಇರುತ್ತೆ. ಹಾಗೆ ಒಪ್ಪಿಸದಿದ್ದರೆ ಸಾಯುವ ವರೆಗೂ ಶತ್ರುತ್ವವು ತಪ್ಪುವದಿಲ್ಲ" ಎಂದು

ಚಾರು:— (ನಿಂದೆಯಿಂದ) ಅವಂ ಮೂರ್ಖನಲ್ತೆ? (ತನ್ನೊಳ್.) ಎಲಃ! ಈಕೆಯೋಂ ಉಪಾಸ್ಯ ದೇವತೆಯಂತೆ ಮೆರೆವಳ್. ಆಗಳಾಂ ರೋಹಸೇನನಂ ಒಳಪುಗಿಸೆಂದು ಜರಿದೊಡಂ ಎನ್ನ ಭಾಗ್ಯದಶೆಯಂ ನೋಡಿಯುಂ ಕದಲಲಿಲ್ಲಂ. ಆದರೆ ಪಲ ಮಾತುಗಳಂ ನುಡಿವಳಾದೊಡಂ ಪುರುಷರಿದಿರೊಳುಸಿಕನಿದ್ದವಳ್. (ಪ್ರೊರಗೆ) ಮಾನ್ಯೆಯಪ್ಪ ವಸಂತಸೇನೆಯೇ! ಅರಿಯದಾಂ ದಾಸೀಬುದ್ಧಿಯಿಂ ದೆಸಗಿದಪರಾಧದಿಂ ತಲೆವಾಗಿ ನಿನ್ನಂ ಸಂತವಿಪೆಂ.

ವಸಂತ॥ ಈ ಯನುಚಿತವಾದ ವೇಷವನ್ನು ಆರ್ಯನಾರಂಭಿಸಿದ್ದರಿಂದ ನಾನಪರಾಧಿನಿ ಯಾದೆನು. ಅದರಿಂದ ನಮಸ್ಕರಿಸುವೆನು. ಅನುಗ್ರಹಿಸಬೇಕು.

ವಿದೂ॥ ಅಯ್ಯಾ! ನೀವಿಬ್ಬರೂ ಕಲಮಕೇದಾರಗಳಂತೆ ಒಬ್ಬರಿಗೊಬ್ಬರು ಸುಖವಾಗಿ ತಲೆತಲೆಯಂ ಮುಟ್ಟಿಸಿಕೊಳ್ಳುತ್ತಾ ನಮಸ್ಕರಿಸಿ ಕೊಳ್ಳುತ್ತೀರಿ. ನಾನೂ ನಿಮ್ಮಿಬ್ಬರನ್ನೂ ಪೊಂಟೆಯಮರಿಯ ಮೊಣಕಾಲಂತಿರುವೀ ತಲೆಯಿಂದ ಅನುಗ್ರಹಿಸಿ ಕೊಳ್ಳುವೆನು. (ಎಂದುಏಳುತ್ತಾನೆ.)

ಚಾರು:— ಆಗಲಿ. ಈನಲ್ಮೆಯಂತಿರ್ಕ್ಕೆ.

ವಸಂತ॥ (ತನ್ನೊಳು) ಈಮಾತುಗಳಿಂಪಾಗಿಯೂ, ನಿಪುಣವಾಗಿಯೂ ಇವೆ. ಈಗ ಹೀಗೆ ಬಂದಿರುವನಾನು ಇಲ್ಲಿರಬಾರದು. ಆಗಲಿ ಹೀಗೆಹೇಳುತ್ತೇನೆ. (ಪ್ರಕಾಶವಾಗಿ) ಆರ್ಯನೇ! ನಾನುನಿನಗೆ ಅನುಗ್ರಾಹ್ಯಳಾದರೆ ನನ್ನೀ ಯಲಂಕಾರಗಳನ್ನು ಮನೆಯಲ್ಲಿಟ್ಟು ಕೊಂಡಿರಬೇಕೆಂದುಪ್ರಾರ್ಥಿಸುವೆನು. ಈ ಯಲಂಕಾರಕ್ಕೋಸುಗವೇ ಆಪಾಪಿಗಳು ಅನುಸರಿಸುತ್ತಾರೆ.

ಚಾರು:— ಈ ಮನೆ ಸರಿಯಲ್ತು ಅಲಂಕಾರಮನಿಡಲ್ಕೆ.

ವಸಂತ॥ ಆರ್ಯನೇ! ಅದುಹುಸಿಯು. ಪುರುಷರಲ್ಲಿಡಲ್ಪಡತಕ್ಕದ್ದು. ಮನೆಯಿಂದೇನು?

ಚಾರು:— ಮೈತ್ರೇಯನೇ! ಆಯಲಂಕಾರಮಂ ಕೈಕೊಳ್.

ವಸಂತ॥ ಅನುಗೃಹೀತಳಾದೆನು. (ಅಲಂಕಾರವನ್ನುಕೊಡುವಳು.)

ವಿದೂ॥ (ತೆಗದು) ನಿನಗೆ ಮಂಗಳ ವಾಗಲಿ.

ಚಾರು:— ಛೀ!! ಮೂಢನೆ! ಇದು ನ್ಯಾಸಮಲ್ತೆ?

ವಿದೂ॥ (ಓರೆಯಾಗಿ) ಅದು ಹಾಗಾದರೆ ಅಗ್ನಿಕಳ್ಳರು ತೆಗೆದುಕೊಂಡು ಹೋ...

ಚಾರು:—ಶೀಘ್ರ ಕಾಲದಲ್ಲಿಯೇ+

ವಿದೂ॥ ನಮ್ಮಲ್ಲಿಟ್ಟ ಈ ಯಲಂಕಾರವನ್ನೋ?

ಚಾರು:—+ಪ್ರತ್ಯರ್ಪಣಂಗೆಯ್ವಂ.

ವಸಂತ॥ ಆರ್ಯನೇ! ನಾನು ಮನೆಗೆ ಹೋಗುವದಕ್ಕೆ ಯಾತನೂ ಕೂಡ ಬರಲಿ ಬಯಸುವೆನು

ಚಾರು:—ಮೈತ್ರೇಯನೇ! ಈಕೆಯೊಡನೆ ಪೋಗೈ

ವಿದೂ॥ ನೀನೇಯಾ ಕಲಹಂಸಗಾಮಿನಿ ಯಹಿಂದೆ ಹೋಗುತ್ತ ರಾಜಹಂಸನಂತೆ ಗುತ್ತೀಯೆ- ನಾನಾದರೋ ಬ್ರಾಹ್ಮಣನು ಮತ್ತು ಚೌಕದಲ್ಲಿ ಯೆಲ್ಲಿ... ರೂ ಬಲಿಯಿಟ್ಟ ಅನ್ನವನ್ನು ಹ್ಯಾಗೋಹಾಗೆ ನನ್ನನ್ನು ಹುಚ್ಚುನಾಯಿ... ಕಚ್ಚೀತು ವಿಪನ್ನನಾದೇನು-

ಚಾರು:—ಇಂತಾದೊಡಾನೇ ಯಾವಾನ್ಯೆಯಂ ಅನುಸರಿಪೆಂ. ಅದರಿಂ ರಾಜವಾ... ಯೋಗ್ಯವಾದ ದೀವಿಗೆ ಗಳ್ಬೆಳಗುಗೆ

ವಿದೂ॥ ಎಲಾ ವರ್ಧಮಾನಕನೇ! ದೀವಟಗೆಗಳನ್ನು ಹಚ್ಚು

ಚೇಟಿ॥ (ಜನದಬಳಿ) ಅಯ್ಯಾ! ಎಣ್ಣೆಯಿಲ್ಲದೇ ದೀವಟಗೆಗಳು ಉರಿದಾವೆ?

ವಿದೂ॥ (ಜನದಬಳಿ) ಅಯ್ಯಾ! ನಮ್ಮದೀವಟಗೆಗಳು ಬಡವನನ್ನು ಕೂಡಿಕೊಂಡ ಬ... ಹೆಣ್ಣಿನಂತೆ ನಿಸ್ಸ್ನೇಹಗಳಾದವು

ಚಾರು॥ ಮೈತ್ರೇಯನೇ! ದೀವಿಗೆ ಗಳಾದವು ಇತ್ತನೋಡು;—

ವೃ॥ ತಾರೆಗಳೊಡ್ಡೋಲಗಿಸೆ ದೀವಿಗೆ ಯಂತದು ರಾಜಮಾರ್ಗದೊಳ್
ನಾರಿಯ ಗಂಡದಂತೆ ಪರಿಪಾಂಡುರ ಮುಣ್ಮಿತು ಚಂದ್ರಮಂಡಲಂ ॥
ಆರಿದ ಪಂಕದೊಳ್ಸರಿದ ದುಗ್ಧದಧಾರೆಯ ಮಾಳ್ಕೆ ನಾಡೆ ಯು
ದ್ಗ್ರ ಗಭಸ್ತಿಗಳ್ತಿಮಿರ ಸಂಹತಿಮಧ್ಯದೆ ಬೀಳ್ದು ತೋರ್ಪುವೋ॥ ೩೬

(ಅನುರಾಗದೊಡನೆ) ವಸಂತಸೇನೆಯೇ! ಇದೇ ನಿನ್ನ ಮನೆ ಒಳ ಪುಗಲ್ತಕ್ಕುದ...

ವಸಂತ॥ (ಪ್ರೀತಿಯಿಂ ನೋಡುತ್ತಾ ಹೊರಟು ಹೋದಳು.)

ಚಾರು:—ವಯಸ್ಯನೇ! ಪೋದಳ್ ವಸಂತಸೇನೆ ಆಮುಂ ನೆಲೆಗೆ ಪೋದಪೆವು ಬಾರೈ

ವೃ॥ ಬರಿದಾಯ್ತು ರಾಜವೀಥಿ
ಚರಿಪ ಪಾರಾಲಕ ವರ್ಗಲಂ॥
ಹರಿಸಲ್ತಕ್ಕುದೈ ದೋಸ
ವಿರುಳೇಂ ಬಹು ದೋಷಿಯೋ॥ ೩೭॥

(ಅಡಿಯಿಟ್ಟು) ಯೀ ಸುವರ್ಣದಲಂಕಾರಂಗಳಂ ಪಗಲ್ ವರ್ಧಮಾನಸುಂ, ಇರುಳ್ ನೀನುಂ ಕಾದಿರಲ್ ತಕ್ಕುದು.

ವಿದೂ॥ ನಿನ್ನಪ್ಪಣೆಯುಂ ತಾಗಲಿ. (ಎಂದೀರ್ವರುಂ ಪೊರಮಟ್ಟರ್)

ಇಂತೆಂಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್

ಅಲಂಕಾರನ್ಯಾಸವೆಂಬ

ಮೊದಲನೆಯಅಂಕಂ

ಮುಗಿದುದು

ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ.

ದ್ವಿತೀಯಾಂಕಂ.

[ಚೇಟಿಯುಪುಗುವಳ್]

ಚೇಟಿ॥ ನಮ್ಮತಾಯಿಯು ನನಗೆ ಅಕ್ಕನಬಳಿಗೆ ಹೋಗುವಂತೆ ಅಪ್ಪಣೆಯನ್ನು ಮಾಡಿರುವಳು. (ಅಡಿಯಿಟ್ಟುನೋಡಿ) ಇದೋ ಇಲ್ಲಿ ಅಕ್ಕನು ಮನಸ್ಸಿನಲ್ಲಿ ಯೇನನ್ನೋ ಯೋಚಿಸುವಳಂತೆಕುಳಿತಿದ್ದಾಳೆ. ಅದರಿಂದಹತ್ತಿರಕ್ಕೆ ಹೋಗುತ್ತೇನೆ.

[ಬಳಿಕ ಆಸನದಲ್ಲಿ ಕುಳಿತ ಉತ್ಕಂಠಿತೆಯಾದ ವಸಂತಸೇನೆಯುಂ ಮದನಿಕೆಯುಂ ಪ್ರವೇಶಿಪರ್]

ವಸಂತ॥ ಎಲೆ! ಬಳಿಕ ಬಳಿಕ.

ಮದನಿಕೆ॥ ಅಕ್ಕಾ! ನೀನೇನೂ ಇದುವರೆಗೆಯೋಚಿಸಿರಲಿಲ್ಲವಲ್ಲ? ಏನು, ಬಳಿಕಬಳಿಕ' ಯೆನ್ನುತ್ತೀಯೆ?

ವಸಂತ॥ ನಾನೇನು ಹೇಳಿದೆನು?

ಮದನಿಕೆ॥ 'ಬಳಿಕ ಬಳಿಕ' ಎಂದು

ವಸಂತ॥ (ಹುಬ್ಬುಹಾರಿಸುತ) ಆ! ಹಾಗೆಯೇ.

[ಮೊದಲನೆಯ ಚೇಟಿಯು ಹತ್ತಿರಕ್ಕೆ ಬಂದು]

ಚೇಟಿ॥ ಅಕ್ಕಾ! ನೀನು ಸ್ನಾನವನ್ನುಮಾಡಿ ದೇವರ ಪೂಜೆಯನ್ನು ಮಾಡಬೇಕೆಂದು ತಾಯಿ ಅಪ್ಪಣೆ ಕೊಟ್ಟಿರುವಳು.

ವಸಂತ॥ ಎಲೆ! ಈ ಹೊತ್ತು ನಾನು ಸ್ನಾನವನ್ನು ಮಾಡುವದಿಲ್ಲ. ಆದ್ದರಿಂದಬ್ರಾಹ್ಮಣನೇ ದೇವರಪೂಜೆಯನ್ನು ಮಾಡಲೆಂದು ತಾಯಿಗೆ ಬಿನ್ನಹಮಾಡು.

ಚೇಟಿ॥ ಅಕ್ಕ ನಪ್ಪಣೆಯಂತಾಗಲಿ (ಎಂದು ಹೊರಟು ಹೋದಳು.)

ಮದನಿಕೆ॥ ಅಕ್ಕಾ! ಸ್ನೇಹವೇ ನಿನ್ನನ್ನು ಕೇಳುತ್ತೆ. ದೋಷವಲ್ಲ. ಅದರಿಂದೇ ನಿದು?

ವಸಂತ॥ ಮದನಿಕೆ! ನನ್ನನ್ನು ಈಗ ಎಂಥವಳನ್ನಾಗಿ ನೀನು ತಿಳಿದಿದ್ದೀಯು?

ಮದನಿಕೆ॥ ನಾನೇನೂ ಅರಿಯೆನು. ಆದರೂ ಅಕ್ಕನು ಮನಸ್ಸಿನಲ್ಲಿ ಯೇನನ್ನೋ ಬಯಸಿದ್ದಂತೆ ತೋರುತ್ತೆ.

ವಸಂತ॥ ಚನ್ನಾಗಿ ತಿಳಿದೆ, ಹೆರವರ ಮನಸ್ಸನ್ನು ಕಂಡುಕೊಳ್ಳುವದರಲ್ಲಿ ಪಂಡಿತಳೇ ನೀನು.

ಮದನಿಕೆ॥ ನನಗದಿಷ್ಟವೇ ಸರಿ. ಭಗವಂತನಾದ ಮನ್ಮಥನು ಪ್ರಾಯದವರಿಗೆ ಮಹೋತ್ಸವವನ್ನು ಕೊಡುವನಲ್ಲವೇ? ಅದರಿಂದಕ್ಕನೇ ಹೇಳಬೇಕು. ರಾಜನೋ? ರಾಜವಲ್ಲಭನೋ? ಸೇವಿಸಿಕೊಳ್ಳುವನು?

ವಸಂತ॥ ಎಲೆ ಮದನಿಕೆಯೆ! ರಮಿಸಲೆಳಸುತ್ತೇನಲ್ಲದೆ, ಸೇವಿಸುವದಕ್ಕಲ್ಲ.

ಮದನಿಕೆ॥ ಅಥವಾ ವಿದ್ಯಾ ವಿನಯ ಸಂಪನ್ನನಾದ ಬ್ರಾಹ್ಮಣ ನನ್ನೇ ನಾದರೂ ಕಾಮಿಸಿ ಯಿರುವೆಯೋ?

ವಸಂತ॥ ನನಗೆ ಬ್ರಾಹ್ಮಣಜನವು ಪೂಜಾ ಯೋಗ್ಯವಲ್ಲವೆ?

ಮದನಿಕೆ॥ ಆದರೆ, ಬಹುದೇಶ ಸಂಚಾರದಿಂದ ಸಂಪತ್ಸಂಪನ್ನನಾದ ಪ್ರಾಯದ ವರ್ತಕನನ್ನು ಕಾಮಿಸಿದೋ?

ವಸಂತ॥ ಎಲೆ! ವಣಿಗ್ಜನವು ಸರ್ವದಾ ಊರೂರು ತಿರುಗುವದರಿಂದ ಅತ್ಯಂತಪ್ರಿಯಜನಕ್ಕೆ ವಿಯೋಗ ದುಃಖವನ್ನುಂಟು ಮಾಡುತ್ತಲ್ಲವೆ?

ಮದನಿಕೆ॥ ಅಕ್ಕಾ! ರಾಜನಲ್ಲ, ರಾಜವಲ್ಲಭನಲ್ಲ, ಬ್ರಾಹ್ಮಣನಲ್ಲ, ವರ್ತಕನಲ್ಲ ಆದರೆ ಈಗ ಅಕ್ಕನ ಪೇಕ್ಷಿಸುವದು ಯಾರನ್ನು?

ವಸಂತ॥ ನೀನು ನನ್ನ ಕೂಡಲೆ ಕಾಮ ದೇವಾಯತನೋದ್ಯಾನಕ್ಕೆ ಬಂದಿದ್ದೆಯಲ್ಲವೆ?

ಮದನಿಕೆ॥ ಬಂದಿದ್ದೆನು.

ವಸಂತ॥ ಹಾಗಾದರೂ ನನ್ನನ್ನು ಉಪೇಕ್ಷೆಯಾಗಿದ್ದಂತೆ ಯೇಕೆ ಕೇಳುತ್ತೀಯೆ?

ಮದನಿಕೆ॥ ತಿಳಿಯಿತು. ಅವನೋ ಎನು? ನಿನ್ನನ್ನು ಶರಣಾಗತಳನ್ನಾಗಿ ತಿಳಿದು ಒಪ್ಪಿಕೊಂಡವನಷ್ಟೆ?

ವಸಂತ॥ ಅವನ ಹೆಸರೇನು?

ಮದನಿಕೆ॥ ಅವನು ಅಂಗಡಿ ಬೀದಿಯಲ್ಲಿರುವ ನಲ್ಲವೇ?

ವಸಂತ॥ ಹಂಜೆ! ನಾನು ಹೆಸರು ಏನೆಂದು ಕೇಳಿದೆನು.

ಮದನಿಕೆ॥ ಅವನಲ್ಲವೆ ಆರ್ಯಚಾರುದತ್ತನೆಂದು ಹೆಸರುವಾಸಿ ಯಾದವನು.

ವಸಂತ॥ (ಸಂತೋಷದಿಂದ) ಸರಿ! ಮದನಿಕೆಯೇ ಸರಿ! ಚನ್ನಾಗಿತಿಳಿದೆ.

ಮದನಿಕೆ॥ (ಮನಸ್ಸಿನಲ್ಲಿ) ಹೀಗೆಹೇಳೋಣ. (ಹೊರಗೆ) ಅಕ್ಕಾ! ಅವನು ದರಿದ್ರನೆಂದು ಹೇಳುತ್ತಾರಲ್ಲವೆ?

ವಸಂತ॥ ಆದ್ದರಿಂದಲೇ ಕಾಮಿಸುವೆನು. ಬಡವನಲ್ಲಿ ಮನಸ್ಸಿಟ್ಟ ಬೆಲೆವೆಣ್ಣು ಲೋಕದಲ್ಲಿ ಅಪವಾದಕ್ಕೆ ಗುರಿಯಾಗುವದಿಲ್ಲವಷ್ಟೆ.

ಮದನಿಕೆ॥ ಅಕ್ಕಾ! ಹೂವಿಲ್ಲದ ಸೀಮಾವಿನ ಮರವನ್ನು ಮಧುಕರಿಗಳು ಮರಳಿಯೂ ಸೇವಿಸುವುದೇ?

ವಸಂತ॥ ಅದರಿಂದಲೇ ಅವಕ್ಕೆ ಮಧುಕರಿಗಳೆಂದು ಹೆಸರು.

ಮದನಿಕೆ॥ ಅವನನ್ನೇ ಬಯಸಿದ್ದಾದರೆ ನೀನೀಗಲೇ ಯೇತಕ್ಕೆ ಬೇಗ ಅಲ್ಲಿಗೆ ಹೋಗಿ ಅವನನ್ನು ಹೊಂದಲಿಲ್ಲ?

ವಸಂತ॥ ನಾನು ಹಾಗೆ ಹೋದರೆ ಆತನು ತಕ್ಕ ಪ್ರತ್ಯುಪಕಾರವನ್ನು ಮಾಡುವ ದಕ್ಕಿಲ್ಲವಾಗಿ ದರ್ಶನವನ್ನೇ ಕೊಡದೇಹೋದಾನು?

ಮದನಿಕೆ॥ ಏನ ದಕ್ಕಾಗಿಯೇ ಆಗ ಅಲಂಕಾರವನ್ನು ಆತನಕೈಯಲ್ಲಿಟ್ಟು ಬಂದಿಯೋ?

ವಸಂತ॥ ಮದನಿಕೆಯೇ! ನೀನು ಚೆನ್ನಾಗಿ ಊಹಿಸಿದಿ. (ತೆರೆಯಲ್ಲಿ) ಓಭಟ್ಟಾರಕನೇ! ಜೂಜುಗಾರನು ಹತ್ತುಹಣಕ್ಕೋಸುಗವೇ ಹಿಡಿದರೂ ನಿಲ್ಲದೇ ಓಡಿದನು ಓಡಿದನು, ಹಿಡಿ! ಹಿಡಿ! ನಿಲ್ಲೋ! ನಿಲ್ಲೋ! ಬಹುದೂರಕ್ಕೆ ಕಾಣಿಸಿದಿ.

[ತೆರೆಯನ್ನು ತೆಗೆಯದೆಯೆ ಸಂಭ್ರಾಂತನಾದ ಸಂವಾಹಕನು ಪ್ರವೇಶಿಸುವನು]

ಸಂವಾಹಕಂ॥ ಈ ಜೂಜುಗಾರತನವು ಬಹುಕಷ್ಟವು. ಆಹಾ!! ಅಂಗರಾಜನ ಶಕ್ತಿಯಿಂದ ಘಟೋತ್ಕಚನು ಬದಿಸಿ ಕೊಂಡಂತೆ ಕಟ್ಟುಬಿಚ್ಚಿದ ಕತ್ತೆಯಂಥಾ ಈದ್ಯೂತಶಕ್ತಿಯಿಂದ ಬದಿಸಿ ಕೊಂಡೆನು. ಆಗ ಏನೋ ಬರವಣಿಗೆ ಯಲ್ಲಿದ್ದ ಸಭಿಕನನ್ನು ನೋಡಿಬೇಗನೆ ತಪ್ಪಿಸಿಕೊಂಡು ಬಂದೆನು. ಈಗ ದಾರಿಯಲ್ಲಿ ಯೆದುರು ಬಿದ್ದನಾದ್ದರಿಂದ ಯಾರನ್ನು ಮರೆಹೊಗಲಿ. (ನೋಡಿ) ಇದೊ ಅಲ್ಲಿ ಮಾಥುರನು ದ್ಯೂತಕರನೂ ನನ್ನನ್ನು ಹುಡುಕುತ್ತಿದ್ದಾರೆ. ಅದರಿಂದೀಗ ದೂರದೂರ ಹೆಜ್ಜೆ ಯಿಡುತ್ತಾ ಈ ಹಾಳು ಗುಡಿಯನ್ನು ಹೊಕ್ಕು ದೇವತೆಯಾಗುವೆನು. (ಎಂದು ಪಲುಬಗೆಯಾಗಿ ಕುಣಿದು ಹಾಗನಿಂತನು)

[ಬಳಿಕ ಮಾಥುರನು ದ್ಯೂತಕರನು ಬಂದರು]

ಮಾಥುರಂ॥ ಓಭಟ್ಟಾರಕನೇ! ಜೂಜುಗಾರನು ಹತ್ತುಹಣಕ್ಕೋಸುಗವೇ ಹಿಡಿದರೂ ನಿಲ್ಲದೇ ಓಡಿದನು ಓಡಿದನು. ಹಿಡಿ, ಹಿಡಿ, ನಿಲ್ಲೋ ನಿಲ್ಲೊ! ಬಹು ದೂರಕ್ಕೆ ಕಾಣಿಸಿದಿ.

ದ್ಯೂತಕರಂ॥ ಪಾತಾಳಕ್ಕೆ ಹೋಗು. ಇಂದ್ರನನ್ನೇ ಮರೆಹೊಂದು. ಸಭಿಕನನ್ನು ಬಿಟ್ಟರೆ ಈಶ್ವರನೂ ಕೂಡ ನಿನ್ನನ್ನು ಕಾಪಾಡಲಾರನು.

ಮಾಥು॥ ಎಲೋ ಮೋಸಗಾರನೇ! ಭಯದಿಂದ ನಡುಗುತ್ತಾ, ಎಡವುತ್ತಾ, ಮುಗ್ಗರಿಸುತ್ತ. ಎಲ್ಲಿಗೆ ಓಡಿಹೋಗುತ್ತೀಯೋ. ಕೀರ್ತಿಯನ್ನೂ ಕುಲವನ್ನೂ ಕೂಡ ಕಪ್ಪಗೆ ಮಾಡುತ್ತೀಯಲ್ಲಾ.

ದ್ಯೂತ॥ (ಹೆಜ್ಜೆಯನ್ನು ನೋಡಿ) ಇದೋ ಇಲ್ಲಿ ಹೋದನು. ಇಲ್ಲಿ ಹೆಜ್ಜೆಯ ಗುರುತು ಕಾಣಿಸದು.

ಮಾಥು॥ (ನೋಡಿಯೋಚಿಸಿ) ಎಲಾ, ಹೆಜ್ಜೆಯಗುರುತು ಹೆಚ್ಚು ಕಡಿಮೆಯಾಗಿದೆ, ಇದು ಹಾಳು ಗುಡಿ. (ಊಹಿಸಿ) ಈ ವಂಚಕನಾದ ಜೂಜುಗಾರನು ಗುರುತು ಸಿಕ್ಕದಹಾಗೆ ದೇಗುಲವನ್ನು ಪೊಕ್ಕನು.

ದ್ಯೂತ॥ ಆದದಿಂದ ನಾವೂ ಬೆನ್ನುಹತ್ತೋಣ.

ಮಾಥು॥ ಹಾಗೆ ಆಗಲಿ.

(ಇಬ್ಬರೂ ಗುಡಿಯೊಳಗೆಹೋಗಿನೋಡುತ್ತಾ ಒಬ್ಬರಿಗೊಬ್ಬರು ಸನ್ನೆಮಾಡಿ.)

ದ್ಯೂತ॥ ಇದೇನು ಮರದಗೊಂಬೆಯೋ?

ಮಾಥು॥ ಅಲ್ಲ ಅಲ್ಲ: ಕಲ್ಲು ಗೊಂಬೆ. (ಎಂದು ಅಲ್ಲಾಡಿಸಿ ಸೈಗೆಮಾಡಿ) ಆಗಲಿ. ಎಲಾ! ಇಲ್ಲಿ ಬಾ! ಜೂಜಾಡೋಣ.

(ಎಂದು ಅಲ್ಲಿ ಬಹುವಿಧವಾಗಿ ಪಗಡೆಯಾಡುತ್ತಾರೆ.)

ಸಂವಾಹಕಂ॥ (ಆಟದಬಯಕೆಯಿಂದ ಸಲುಬಗೆಯಾದ ಮನೋವಿಕಾರವನ್ನು ಹೊಂದುತ್ತಾ ಮನದಲ್ಲಿ) ಆರರೇ!

ವೃ॥ ನೆತ್ತವೆಂಬ ಪದವಾದರಿದ್ರುಗೂ
ಚಿತ್ತವನ್ನು ಸೆಳೆಯುತ್ತೆ ಹೇಗೆನಲ್
ವಿತ್ತವನ್ನು ಕಳಕೊಂಡ ರಾಜಗೂ
ಚಿತ್ತಹಾರಿಯಹ ವಾದ್ಯನಾದದೋಲ್॥ ೩೪॥

ಕಂ॥ ಬಲ್ಲೆನು ಜೂಜನ್ನಾಡುವ
ದಿಲ್ಲವದಾ ಮೇರುಶಿಖರ ಪತನಕ್ಕೆಣೆಯೆಂ
ದೊಲ್ಲದೆ ಹೋದರು ಪಗಡೆಯ
ಸೊಲ್ಲದು ಕೋಗಿಲೆಯ ಸರದೊಲಲ್ಲವೆ ಸೊಗಸು॥ ೩೫॥

ದ್ಯೂತ॥ ನನ್ನಾಟ ನನ್ನಾಟ. (ಪಾರೆ)

ಮಾಥು॥ ಅಲ್ಲ ಅಲ್ಲ ನಿನ್ನಾಟವೋ? ನನ್ನಾಟ.

ಸಂವಾಹ॥ (ಮತ್ತೊಂದು ಕಡೆಯಿಂದ ಥಕ್ಕನೆಬಂದು) ಅಲ್ಲ ಅಲ್ಲ; ನನ್ನಆಟವು.

ದ್ಯೂತ॥ ಸಿಕ್ಕಿದನು ಮನುಷ್ಯನು.
ಮಾಧು॥ (ಹಿಡಿದುಕೊಂಡು) ಎಲಾ ಮೋಸಗಾರನೇ! ಸಿಕ್ಕಿದೆ. ಆ ಹತ್ತು ಹಣವನ್ನು ಕೊಡು.
ಸಂವಾ॥ ಇಂದು ಕೊಡುತ್ತೇನೆ.
ಮಾಧು॥ ಈಗಲೇ ಕೊಡು.
ಸಂವಾ॥ ಕೊಡುವೆನು ದಯಮಾಡಯ್ಯಾ-
ಮಾಧು॥ ಎಲಾ! ನೀನೀಗಲೇ ಕೊಡಬೇಕು-

ಸಂವಾ॥ ಕಾಲಿಗೆ ಬಿದ್ದೆನು- (ಕೆಳಗೆ ಬೀಳುತ್ತಾನೆ- ಇಬ್ಬರೂ ಚೆನ್ನಾಗಿ ಹೊಡೆಯುವರು)
ಮಾಧು॥ ನೀನೀಗ ಈ ಜೂಜುಗಾರರ ಗುಂಪಿಗೆ ಸಿಕ್ಕಿದ್ದಿ-
ಸಂವಾ॥ (ವ್ಯಸನದಿಂದೆದ್ದು) ಆಹಾ! ನಾನೇನು ಜೂಜು ಗಾರರ ಗುಂಪಿಗೆ ಸಿಕ್ಕಿದೆನಲ್ಲ- ಹ್ಯಾಗೆ? ಆದರೆ ಕಷ್ಟವೇಸರಿ- ಇದು ದಾಟಕೂಡದಂಥಾ ಜೂಜು ಗಾರರಾದ ನಮ್ಮಗಳ ಕಟ್ಟಳೆ, ಆದರಿಂದ ನಾನು ಎಲ್ಲಿಂದ ಕೊಡಲಿ.
ಮಾಧು॥ ಎಲಾ! ವಾಯಿದೆ ಮಾಡಿಕೋ, ಗಡುವು ಮಾಡಿಕೋ.
ಸಂವಾ॥ ಆದರೆ ಹೀಗೆ ಮಾಡುತ್ತೇನೆ. (ದ್ಯೂತಕರನ ಹತ್ತಿರ ಬಂದು) ಅಯ್ಯಾ ನಿನಗೆ ಅರ್ಧ ಕೊಡುತ್ತೇನೆ- ಅರ್ಧಭಾಗ ಬಿಟ್ಟುಬಿಡು-
ದ್ಯೂತ॥ ಹಾಗೆ ಆಗಲಿ-
ಸಂವಾ॥ (ಸಭಿಕನಾದ ಮಾಧುರನ ಬಳಿಗೆ ಬಂದು) ಅರ್ಧ ಭಾಗಕ್ಕೆ ವಾಯಿದೆಯನ್ನು ಮಾಡಿಕೊಳ್ಳುತ್ತೇನೆ- ಇನ್ನರ್ಧಭಾಗವನ್ನು ಆರ್ಯನಾದ ನೀನು ಬಿಡಬೇಕು-
ಮಾಧುರ॥ ದೋಷವೇನು? ಹಾಗೆಯೇ ಆಗಲಿ-
ಸಂವಾ॥ (ಬಹಿರಂಗವಾಗಿ) ಅಯ್ಯಾ! ನೀನು ಅರ್ಧವನ್ನು ಬಿಟ್ಟೆಯಷ್ಟೆ?
ಮಾಧು॥ ಬಿಟ್ಟಿರುವೆನು-
ಸಂವಾ॥ (ದ್ಯೂತಕರನನ್ನು ಕುರಿತು-) ನೀನೂ ಅರ್ಧವನ್ನು ಬಿಟ್ಟೆಯಲ್ಲವೆ?
ದ್ಯೂತ॥ ಬಿಟ್ಟಿರುವೆನು-
ಸಂವಾ॥ ಆದರೆ ಈಗ ಹೋಗುವೆನು-
ಮಾಧುರ॥ ಆ ಹತ್ತು ಹಣವನ್ನು ಕೊಡದೇ ಎಲ್ಲಿ ಹೋಗುವಿ?
ಸಂವಾಹಕ॥ ಅಯ್ಯಾ ಭಟ್ಟಾರಕರೇ! ನೋಡಿ ನೋಡಿ- ಈಗಲೇ ಯೀತನು ಅರ್ಧಕ್ಕೆ ವಾಯಿದೆ ಮಾಡಿದ, ಇನ್ನರ್ಧವನ್ನು ಬಿಟ್ಟು ಬಿಟ್ಟ- ಆದರೂ ಅಶಕ್ತನಾದ ನನ್ನನ್ನು ಈಗಲೇ ಕೇಳುತ್ತಾನೆ-
ಮಾಧು॥ (ಹಿಡಿದು) ಎಲೋ ಧೂರ್ತನೇ! ನಾನು ಮಾಧುರನು ಜಾಣನು, ಈಗ ನಿನ್ನಿಂದ ಮೋಸ ಹೋಗಲಾರೆನು- ಆದ್ದರಿಂದ ಯೀಗಲೇ ಆ ಹಣವನ್ನೂ ಕೊಟ್ಟುಬಿಡು-

ಮೃಚ್ಛಕಟಿಕಪ್ರಕರಣದಲ್ಲಿ,

ಸಂವಾ। ಎಲ್ಲಿಂದ ಕೊಡಲಿ-

ಮಾಧು॥ ತಂದೆ ಯನ್ನು ಮಾರಿಕೊಡು-

ಸಂವಾ॥ ನನಗೆ ತಂದೆಯೆಲ್ಲಿ ರುವನು?

ಮಾಧು॥ ತಾಯಿಯನ್ನು ಮಾರಿಕೊಡು-

ಸಂವಾ॥ ನನಗೆ ತಾಯಿ ಯೆಲ್ಲಿ ರುವಳು?

ಮಾಧು॥ ತನ್ನನ್ನೇ ಮಾರಿಕೊಡು-

ಸಂವಾ॥ ಅಯ್ಯಾ ಅನುಗ್ರಹವನ್ನು ಮಾಡು ನನ್ನನ್ನು ಪೇಟೆಗೆಕರದುಕೊಂಡುಹೋಗ.

ಮಾಧು॥ ನಡೆ ಆದರೆ-

ಸಂವಾ॥ ಹಾಗೆ ಆಗಲಿ (ನಡೆಯುತ್ತ) ಅಯ್ಯಾ! ಈ ಸಭಿಕನ ದೆಸೆಯಿಂದ ಹತ್ತು ಹಣಕ್ಕೆ ನನ್ನನ್ನು ಕೊಂಡು ಕೊಳ್ಳಿರಿ-(ಆಕಾಶದಲ್ಲಿ ನೋಡಿ) ಏನು ಮಾಡುತ್ತಿಯೆ ಎಂದು ಕೇಳುತ್ತೀರೋ? ನಿಮ್ಮ ಮನೆಯಲ್ಲಿ ಪರಿಚಾರಕ ನಾಗಿ ಕೆಲಸವನ್ನು ಮಾಡುತ್ತೇನೆ- ಆ! ಇದೇನು ಪ್ರತ್ಯುತ್ತರವನ್ನು ಕೊಡದೇಹೋದ-ಆಗಲಿ- ಮತ್ತೊಬ್ಬ ನನ್ನು ಕೇಳುತ್ತೇನೆ- ಅಯ್ಯಾ ಯೀ ಸಭಿಕನ ದೆಸೆಯಿಂದ ಹತ್ತು ಹಣಕ್ಕಾಗಿ ನನ್ನನ್ನು ಕೊಂಡು ಕೊಳ್ಳಿರಿ- (ಕೇಳಿ) ಯೇನಿವನೂ ಕಡ ನನ್ನನ್ನು ತಿರಸ್ಕಾರಮಾಡಿ ಹೋದ- ಅಯ್ಯೋ ಆರ್ಯಚಾರು ದತ್ತನಿಗೆ ಬಡತನ ಬರುತಲೂ, ನಾನು ಹೀಗೆ ನಿರ್ಭಾಗ್ಯ ನಾಗಿ ಬದುಕಿರ ಬೇಕಾಯ್ತು.

ಮಾಧು॥ ಎಲ್ಲಿ ಕೊಡೋ.

ಸಂವಾ॥ ಎಲ್ಲಿಂದ ಕೊಡಲಿ (ಎಂದು ಬೀಳುತ್ತಾನೆ; ಮಾಧುರನೂ ಸೆಳೆಯುತ್ತಾನೆ

ಸಂವಾ॥ ಆರ್ಯರೇ! ಕಾಪಾಡಬೇಕು- ಕಾಪಾಡಬೇಕು-

[ಬಳಿಕ ದರ್ದುರಕಂ ಪ್ರುಗುವಂ-]

ಧರ್ದು:—ಅಯ್ಯಾ! ದ್ಯೂತ ವೆಂಬುದು ಪುರುಷಂಗೆ ಸಿಂಹಾಸನ ವೊಂದಿಲ್ಲದ ರಾಜ್ಯವೆ ಅಲ್ತೆ?-

ವೃ॥ ಗಣಿಸಪಾರಿ ನುಮಂ ಪರಿ ಭೂತಿಯಂ
ಪಣಮ ನೀವುದು ಕೊಳ್ವುದು ರಾಯನೋಲ್॥
ಗಣಿಪ ದಾಯಮ ನಾವಗಮುಂ ವಲಂ
ಧನಿಕ ರಿಂದಮೆ ಸೇವಿಸಿ ಕೊಳ್ವುದೈ॥೪೦॥

ಮತ್ತಂ॥ವೃ॥ದ್ಯೂತದಿಂದಮೆ ಧನಂ ಮನೆ ಪೆಂಡಿರುಂ,
ದ್ಯೂತದಿಂದಮೆ ಸುಹೃಜ್ಜನ ಮಾದುದುಂ।
ದ್ಯೂತದಿಂದಮೆ ಸುಖಂ ಬಹುದಾನಮುಂ
ದ್ಯೂತದಿಂದೆ ತವೆ ಪೋದುದ ದೆಲ್ಲಮುಂ॥೪೧॥

ಮತ್ತಂ॥ ಕಂ॥ ತಿಗಮುರುಳಿ ಪೋಪುದೆಲ್ಲಂ
ದುಗ ಮುರುಳಲ್ ತನ್ನದೇಹ ಮೊಣಗಿತುಮತ್ತಂ
ಸುಗಿದಂ ನರ್ದಿತ ಮುರುಳಲ್
ಮಿಗೆ ಕಟ ಮುರು ಳಲ್ಕೆಬೀಳ್ದು ಮಾನೋಡಿದಪೆಂ॥ ೪೨॥

(ಮುಂದೆನೋಡಿ) ಇದೊ ಇತ್ತಲೆಮ್ಮಪೂರ್ವ ಸಭಿಕನಾದ ಮಾಥುರಂ ಬಂದಪಂ. ಆಕ್ಕೆ. ಈಗಳೋಡಲಾಗದು. ಅದರಿಂ ಮುಸುಕಿಟ್ಟಪೆಂ.
(ಪಲುಬಗೆಯಾಗಿಕುಣಿದುನಿಂದು. ಪೊದಿಕೆಯುಂನೋಡಿ.)

ವೃ॥ ಈಯುತ್ತರೀಯಂ ಗುಣಹೀನ ಮಾಯ್ತು ಮೇ
ಣೀಯುತ್ತ ರೀಯಂ ಶತರಂಧ್ರ ಶೋಭಿತಂ॥
ಈಯುತ್ತ ರೀಯಂ ಪೊದೆಯಲ್ಕ ಶಕ್ಯಮಾ
ಯ್ತಾ ಯುತ್ತರೀಯಂ ಮುಡಿಸಿಟ್ಟೊಡುತ್ತಮಂ॥ ೪೩॥

ಮತ್ತಮಾಂ ತಪಸ್ವಿ ಯಾದಪೆಂ. ಎಂತೆನೆ:—

ಅನುಷ್ಟುಪ್॥ ಒಂದು ಕಾಲಂ ಬಾಂಗೆತೋರು
ತ್ತೊಂದರಿಂ ನಿಂದು ಭೂಮಿಯೊಳ್
ಇಂದುನೇ ಸಕರ್ಾಂಬವರಂ
ಚಂದದಿಂ ಮೇಲೆ ನಿಟ್ಟಪೆಂ॥ ೪೪॥

ಮಾಥುರ॥ ಕೊಡಿಸು. ಕೊಡಿಸು.
ಸಂವಾ॥ ಎಲ್ಲಿಂದ ಕೊಡಿಸುವೆನು. (ಮಾಥುರನೆಳೆಯುತ್ತಾನೆ.)
ಧರ್ದುರಕಂ:—ಎಲೆ ಇದೇಂ ಮುಂದೆ. (ಬಾನೊಳ್) "ಈಜೂದುಗಾರನಾದ ಸಂವಾಹಕಂ ಸಭಿಕನಾದ ಮಾಥುರ ನಿಂದೆನೋಯಿಸಿ ಕೊಂಡಪಂ, ಆರುಂಬಿಡಿಸರುಮಿಲ್ಲಂ." ಎಂದು ಪೇಳ್ದಪೆಯೋ? ಇದೋ ದರ್ದುರಂಬಿಡಿಸಿದಪಂ. (ಬಳಿಸಂದು) ಎಡೆಬಿಡುಗೆ ಯೆಡೆಬಿಡುಗೆ. (ನೋಡಿ) ಇದೆಂತುಮಾಥುರಂ ಧೂರ್ತನಾದಪಂ.? ಇದೋ ಸಂವಾಹಕನುಂ ರಿಸಿಯೊ?

ವೃ॥ ಆವನದಿಂತು ಸಂಜೆವರೆಗಂ ತಲೆವಾಗಿರ ನೂರ್ಧ್ವಲಂಬದಿಂ
ದಾವನ ಪೃಷ್ಠದಲ್ಲಿ ತವೆ ಲೋಷ್ಟದ ಪೆಟ್ಟಿನ ಗಾಯಮಿಲ್ಲಮಾ
ಯ್ತಾವನಜಂಘೆಗಳ್ ಬಗಿಯದಿಕ್ಕರ್ವೊನಾಯಿಗಳಿಂದನಿಚ್ಛಮುಂ
ಭಾವಿಸೆ ಕೋಮಲಾಂಗಮೆಸೆ ವಾತಗೆಜೂದಿನ ಸಂಗಮೇತಕೋ॥

ಅದಂತಿರ್ಕೆ. ಮಾಥುರನ ನನಿತರೋಳ್ಸಂತೈಸಿದಪೆಂ (ಬಳಿಸಂದು) ಮಾಥುರನೇ! ಮಣಿದಪೆಂ.

ಮಾಥುರಂ॥ ಬದಲಾಗಿಮಣಿಯುತ್ತೇನೆ.

ದರ್ದುರ:—ಇನ್ನೇಂ?

ಮಾಥು॥ ಇವನು ಹತ್ತು ಹಣವನ್ನು ಕೊಡಬೇಕಾಗಿದೆ.

ದರ್ದುರ:—ಅದೇ ನೊಂದು ವಿಷಯವೇ?

ಮಾಥು॥ (ದರ್ದುರಕನಕಂಕಳಲ್ಲಿ ಅಡಗಿದ್ದ ಬಟ್ಟೆಯನ್ನು ಸೆಳೆದು) ಅಯ್ಯಾ! ನೋಡಿ ನೋಡಿ. ಈ ಹರುಕುಬಟ್ಟೆ ಯನ್ನು ಸುತ್ತಿಕೊಳ್ಳುವ ಯಿಾದೊಡ್ಡ ಮನುಷ್ಯನು ಹತ್ತು ಹಣವನ್ನು ಅದೇನು ವಿಷಯವೆಂದು ಹೇಳುತ್ತಾನೆ.

ದರ್ದುರ:—ಎಲೆ ಮೂರ್ಖನೇ! ನಾನಾಪತ್ತು ಪಣಮಂ (ಪಣ) ಕಟ ಮನೊಡರ್ಚುವುದರಿಂದಂ ತಂದಪೆಂ. ಅದೊಡೇಂ, ಅವಂಗೆ ಪಣವಿರ್ಕುರ್ವೋ ಆತನೇ ನಾವಗ್ಗ ಪೊಡೆಯಲ್ಲಿ ತೋರಿದಪನೋ?

ಅನು॥ಆದಶ ಸ್ವರ್ಣಮಾತ್ರಕ್ಕೇ।ಐದಿಂದ್ರಿಯುಡಮಾನಿಸಂ॥
ಆದಂ ನಿಸ್ಸಿಂ ದಿಂದುಹತ।ನೋಂದುರ್ವರ್ಣನೆ ಸತ್ತಪಯ್॥೪೬॥

ಮಾಥು॥ ಅಯ್ಯಾ ಭಟ್ಟನೇ! ನಿನಗೆ ಹತ್ತು ಹಣವೂ ವಿಷಯವಲ್ಲ- ನನಗೆ ಇದು ವಿಭವವೆಂಸರಿ-

ದರ್ದುರ:—ಅದೊಡಿತ್ತ ಕೇಳ್- ಮತ್ತಂನೀಂ ಪತ್ತುಪಣವು ನೀತಂಗೆ ಕುಡು- ಈತನುಂಜೂದಾಡಿ ತೀರ್ಚಿದಪಂ-

ಮಾಥು॥ ಅದರಿಂದೇನಾಯ್ತು?

ದರ್ದುರ:—ಎಂದು ಗೆಲ್ವಪ ನಂದು ಕೊಟ್ಟಪಂ-

ಮಾಥು॥ ಗೆಲ್ಲದಿದ್ದರೆ- ಯಿಲ್ಲವೊ?

ದರ್ದುರ:— ಇಲ್ಲಂ- ಪೇಳ್ವುದೇಂ?

ಮಾಥು॥ ನಿನ್ನೊಡನೆ ಮಾತನಾಡುವದು ಸರಿಯಲ್ಲ- ಯಿಾರೀತಿ ಯಾಗಿ ಕೈಯಲಾಗದ ನೀನು ಏನು ಕೊಟ್ಟೀಯೆ? ನಾನಾದರೋ ಮೋಸಗಾರನಾದ ಮಾಥುರನು ಮೋಸದಾಟವನ್ನು ತೋರಿಸುವೆನು- ನನಗೆಯಾರಿಂದಲೂ ಭಯವಿಲ್ಲವು-ಎಲೋ ವಂಚಕನೇ! ನೀನೀಗ ದುಶ್ಶೀಲ ನಾಗಿದ್ದೀಯೆ-

ದರ್ದುರ:—ಎಲಾ! ದುಶ್ಶೀಲನಾಂ?

ಮಾಥು॥ ನೀನು ದುಶ್ಶೀಲ ನಲ್ಲವೆ?

ದರ್ದುರ:—ನಿಮ್ಮಯ್ಯ ದುಶ್ಶೀಲಂ (ಸಂವಾಹಕಂಗೆ ಹೋಗಲು ಸನ್ನೆಯಂ ಮಾಡುವನು)

ಮಾಥು॥ ಸೂಳೆಯ ಮಗನೇ ನೀನು ಹೀಗೆಯೇ ಜೂಜನ್ನಾಡಿದೆಯೋ?

ದರ್ದುರ:—ನಾನಿಂತು ಜೂದನಾಡಿದೆಂ-

ಮಾಥು॥ ಎಲೋ ಸಂವಾಹಕನೇ! ಕೊಡು ಆಹತ್ತು ಹಣವನ್ನು-

ಸಂವಾ॥ ಇಂದು ಕೊಡುವೆನು. ಕೊಟ್ಟೇನು- (ಮಾಥುರನೆಳೆಯುತ್ತಾನೆ)

ದರ್ದು:— ಎಲೆ ಮೂರ್ಖನೇ! ಮರೆಯೊಳೆಳೆಯುಲಕ್ಕುಂ, ಎನ್ನಿದಿರೊಳೆಳೆಯ ಲಾಗದು.

(ಮಾಥುರನು ಸಂವಾಹಕನ ನೆಳೆದುಮೂಗಿನ ಮೇಲೆ ಗುದ್ದುತ್ತಾನೆ- ಸಂವಾಹಕನು ರಕ್ತವಂ ಸೋರಿಸುತ ಮೂರ್ಛೆಯಿಂದ ಕೆಳಗೆ ಬೀಳುತ್ತಾನೆ. ದರ್ದುರಕನುಬಿಡಿಸುತ್ತಾನೆ- ಮಾಥುರ-ದರ್ದುರಕನನ್ನು ಹೊಡೆಯುತ್ತಾನೆ, ಮರಳಿದ ರ್ದುರಕನುಮಾಥುರನನ್ನು ಹೊಡೆಯುತ್ತಾನೆ-)

ಮಾಥು॥ ಎಲ ಯೆಲಾ! ಕೆಟ್ಟಸೂಳೆಯಮಗನೇ! ತಕ್ಕ ಫಲವನ್ನುಪಡೆಯುವಿ-

ದರ್ದು:—ಎಲೆ ಮೂರ್ಖನೇ! ಎನ್ನಂ ನೀಂ ದಾರಿಯೊಳ ಯಿಕ್ಕಿದೈ- ಅದಕೆ ನಾಳೆ ನೀಂ ರಾಯ ನೋಲಗದಲ್ಲಿ ಸಿಲ್ಕಿ ಇಕ್ಕಿಸಿಗೊಳುತೆ ಕಾಣಿಸಿ ಕೊಳ್ವೈ-

ಮಾಥು॥ ಇದೋ ಕಾಣಿಸಿಕೊಳ್ಳುವೆನು-

ದರ್ದುರ:— ಎಂತು ಕಾಣಿಸಿ ಕೊಳ್ಳದೇ ಪೋಗುವೆ?

ಮಾಥು॥ (ಕಣ್ದೆರದು-) ಇದೋ ಹೀಗೆ ಕಾಣಿಸಿಕೊಂಡೇನು—

(ದರ್ದುರಕನು ಮಾಥುರನ ಕಣ್ಣುಗಳಿಗೆ ಮಣ್ಣು ಹೊಯ್ದು ಸಂವಾಹಕನನ್ನು ಸನ್ನೆಯಿಂದಾಚೆಗೆ ಕಳುಹಿಸುತ್ತಾನೆ, ಮಾಥುರನು ಕಣ್ಣೊರಸಿಕೊಳ್ಳುತ್ತಾ ಕೆಳಗೆ ಬೀಳುತ್ತಾನೆ. ಸಂವಾಹಕನುಹೊರಟುಹೋಗುತ್ತಾನೆ.)

ದರ್ದು:— (ತನ್ನೊಳು) ಆಂ ಪ್ರಧಾನ ಸಭಿಕನಪ್ಪ ಮಾಥುರನಂ ಮಾರ್ಮಲೆದೆಂ ಅದರಿಂದಿಲ್ಲಿರಲನುಚಿತಂ, ಮತ್ತಂ- ಎನ್ನಗೆಳೆಯ ನಾದ ಶರ್ವಿಲಕಂ "ಆರ್ಯಕನೆಂಬಂ ಗೊಲ್ಲನಮಗಂ ಸಿದ್ಧಾನುಗ್ರಹದಿಂದ ರಸನಾದಪ"ನೆಂದು ಪೇಳ್ದಿರ್ದಂ" ಈಗಳೆಮ್ಮನ್ನರೆಲ್ಲ ರಾತನಂ ಬಳಿಸಂದಪರ್, ಆನು ಮಾತನ ಬಳಿಗೆ ಪೋದಪೆಂ (ಎಂದುಪೊರಮಟ್ಟಂ)

ಸಂವಾಹಕಂ॥ (ಭಯದಿಂದಡಿಯಿಟ್ಟುನೋಡಿ-)ಇದ್ಯಾರದೋ ಮನೆ,? ಬಾಗಿಲು ತೆರದಿರುವದು, ಅದರಿಂದ ಒಳಯಿಂಕೆಗೆ ಹೋಗುವೆನು- (ಪ್ರವೇಶವುಂ ತೋರಿ, ಪೊಕ್ಕು, ವಸಂತಸೇನೆಯುಂ ಕಂಡು) ಆರ್ಯಳೇ! ಶರಣಾಗತನಾದೆನು-

ವಸಂತ॥ ಶರಣಾಗತನಿಗೆ ಅಭಯವು- ಚೇಟಿಯೇ! ಬಾಗಿಲಂ ಮುಚ್ಚು-

ಚೇಟಿ॥ ಹಾಗೆಮಾಡುತ್ತಾಳೆ-

ವಸಂ॥ ನಿನಗೆ ಭಯ ವೆಲ್ಲಿಯದು-?

ಸಂವಾ॥ ಆರ್ಯಳೇ! ಧನಿಕನದೆಸೆಯಿಂದ-

ವಸಂ॥ ಚೇಟಿಯೇ !ಈಗ ಬಾಗಿಲ ರೆಕ್ಕೆಯನ್ನು ತೆಗೆಯದಂತೆ ಚೆನ್ನಾಗಿಬಿಗಿಸು-

ಸಂವಾ। (ತನ್ನೊಳು-) ಧನಿಕನಭಯವು ನನಗೂ ಯಿಂಕೆಗೂ ಸಮಾನ ವಾದಂತಿದೆ. ಹೀಗೆಹೇಳುತ್ತಾರಲ್ಲವೆ?

ಕಂ॥ ಯಾವನು ತನ್ನಯ ಬಲವನು
ಭಾವಿಸಿ ಸರಿಯಾದಭಾರ ವನುಹೊರುವನೊ ತಾ॥
ಕೋವಿದ ನವ ನೆಡವನು . ಮ
ತ್ತಾವಿಪಿನದ ಲೆಲ್ಲಿ ಹೋದರೂ ಕೇಡಿಲ್ಲಾ । ೪೭॥
ಅದು ಯಿಲ್ಲದ್ದರಿಂದಲೇ ಹೀಗೆ ಧಡ್ಡನಾದೆನು-

ಮಾಥುರಂ॥ (ಕಣ್ಣೊರಸಿಕೊಂಡು ದ್ಯೂತಕರನಂ ಕುರಿತು) ಎಲಾ ಕೊಡುಕೊಡು

ದ್ಯೂತ॥ ಭಟ್ಟನೇ! ನಾವುಯಾವಾಗದರ್ದುರಕನ ಸಂಗಡಜಗಳವಾಡಿದೆವೋಆಗಲೇ; ಅ ವನು ನುಸುಳಿಕೊಂಡು ಹೋದನು.

ಮಾಥು॥ ಆದರೆ ಆವನಿಗೆ ಮುಷ್ಟಿಪ್ರಹಾರದಿಂದ ಮೂಗುವೊಡೆದು ನೆತ್ತರು ಸುರಿಯು ತ್ತಿತ್ತು. ಅದರಿಂದಬಾ! ಆರಕ್ತದಧಾರೆಯ ದಾರಿಯನ್ನೇ ಅನುಸರಿಸೋಣ.

(ಅ ನು ಸ ರಿ ಸಿ.)

ದ್ಯೂತ॥ ಭಟ್ಟನೇ! ಇದೋ ಅವನುವಸಂತಸೇನೆಯ ಮನೆಯನ್ನು ಹೊಕ್ಕಿರುವನು.

ಮಾಥು॥ ಆದರೆ ಹಣವಾಯಿತು-

ದ್ಯೂತ॥ ಆಸ್ಥಾನಕ್ಕೆ ಹೋಗಿ ಹೇಳೋಣ-

ಮಾಥು॥ ಈಮೋಸಗಾರನು ಇಲ್ಲಿಂದ ಹೊರಟು ಇನ್ನೆಲ್ಲಿಗಾದರೂ ಹೋದಾನು-ಅದ ರಿಂದ ನಿರ್ಬಂಧದಿಂದಲೇ ಹಿಡಿಯಬೇಕು

ವಸಂತ॥ (ಮದನಿಕೆಗೆ ಸನ್ನೆಯನ್ನುಮಾಡುತ್ತಾಳೆ)

ಮದನಿಕೆ॥ ಅಯ್ಯಾ! ನೀನ್ಯಾರು? ಎಲ್ಲಿಂದಬಂದೆ? ಏಕೆಬಂದೆ? ನಿನಗೇನು ಜೀವನವು? ಭಯವೇಕೆ?

ಸಂವಾಹಕಂ॥ ಆರ್ಯೆ! ಹೇಳುತ್ತೇನೆಕೇಳು-ನಾನುಹುಟ್ಟಿದ್ದು ಪಾಟಲೀಪುರದಲ್ಲಿ-ನಾ ನೊಬ್ಬ ಗೃಹಸ್ಥನಮಗನು ವೈಕೈಯೊತ್ತುವುದು ಮುಂತಾದಸೇವಾವೃತ್ತಿಯಿಂ ದ ಜೀವಿಸುತ್ತಿದ್ದೆನು.

ವಸಂತ॥ ಒಳ್ಳೆಯವಿದ್ಯೆಯನ್ನೇ ಕಲಿತಿರುವನಲ್ಲವೆ?

ಸಂವಾ॥ ಆರ್ಯಳೇ! ಆವಿದ್ಯೆಯುಬಂದಿರಬೇಕೆಂದುಕಲಿತೆನು.ಅದೇಯಿಗ ಜೀವನಕ್ಕಾ ಯಿತು-

ಚೇಟಿ॥ ಬಹಳಆಯಾಸದಿಂದ ಮಾತನಾಡುತ್ತಾನೆ- ಆಮೇಲೆಯೇನು?

ಸಂವಾ॥ ಆಮೇಲೆಯೊಂದುದಿನ ದಾರಿಗರಮಾತನ್ನು ಕೇಳಿದೇಶವನ್ನುನೋಡುವಕುತೂ ಹಲದಿಂದ ಇಲ್ಲಿಗೆಬಂದೆನು- ಯಿಉಜ್ಜಯಿನಿಗೆಬಂದಮೇಲೆ ಒಬ್ಬದೊಡ್ಡಮನು ಷ್ಯನನ್ನು ಸೇವಿಸಿದೆನು ಅವನಾದರೋ ಹಿತವಾದಮಾತನ್ನೇ ನುಡಿಯುವನು,ಸಾ ಮ್ಯನು ಉಪಕಾರಿಯು ಅಪಕಾರವನ್ನು ಮರೆತುಬಿಡುವನು, ಹೆರವರಿಗೆ ಕೊಟ್ಟ

ದ್ದನ್ನು ಸ್ಮರಿಸನು, ಬಹಳಮಾತಿನಿಂದೇನು? ಸಮರ್ಥನಾದ್ದರಿಂದ ತನ್ನನ್ನು ತಾನು ಪರಕೀಯನನ್ನಾಗಿಯೇ ತಿಳಿದು ಶರಣಾಗತ ವತ್ಸಲನಾಗಿರುವನು.

ಚೇಟಿ॥ ಅವನ್ಯಾರು? ಈಕೆಯ ಗುಣಗಳನ್ನೇ ಕದ್ದುಕೊಂಡುಹೋಗಿಉಜ್ಜಯಿನಿ ಯೆಲ್ಲವನ್ನೂ ಅಲಂಕರಿಸುತ್ತಿದ್ದಾನೆ?

ವಸಂ॥ ಎಲೆ ಚೇಟಿಯೇ! ನಾನುಯೋಚಿಸಿ ದಂತೆಯೇ ಚೆನ್ನಾಗಿ ತಿಳಿದಿದ್ದೀಯೆ.

ಚೇಟಿ॥ ಆರ್ಯನೇ! ಆಮೇಲೆ ಆಮೇಲೆ;

ಸಂವಾ॥ ಆರ್ಯಳೇ! ಆತನು ಬಹುದಯಾಳುವಾಗಿದಾನಮಾಡುವದರಿಂದ-

ವಸಂತ॥ ಏನು ಬಡವನಾದನೋ?

ಸಂವಾ॥ ನಾನು ಹೇಳದೇನೇ ಯಾಕೆಗೆ ಹ್ಯಾಗೆ ತಿಳಿಯಿತು?

ವಸಂ॥ ಇಲ್ಲಿ ಯೇನು ತಿಳಿಯಬೇಕಾಗಿದೆ? ಗುಣಗಳೂ, ವಿಭವಗಳೂ ಒಂದು ಕಡೆಯಿರುವದು ದುರ್ಲಭವಲ್ಲವೆ? ಕೆರೆಯನೀರನ್ನು ಕುಡಿಯದೇ, ಆಚೆಗೆ ಬಿಡದೇ, ನಿಲ್ಲಿಸಿಟ್ಟರೆ ತುಂಬಿಯೇಯಿರುತ್ತೆ.

ಚೇಟಿ॥ ಅಯ್ಯಾ! ಆತನಹೆಸರೇನು?

ಸಂವಾ॥ ಆರ್ಯಳೇ! ಭೂಮಿಯಚಂದ್ರನಾದ ಅವನಹೆಸರನ್ನು ಯಾರು ಕಾಣರು? ಆತನೇ ಅಂಗಡಿ ಬೀದಿಯಲ್ಲಿ ವಾಸಮಾಡುವ ಆರ್ಯ ಚಾರುದತ್ತನೆಂಬುವನು.

ವಸಂ॥ (ಸಂತೋಷದಿಂದಾಸನದಿಂದೆದ್ದು) ಆರ್ಯನಿ ಗೀ ಮನೆಯು ಸ್ವೀಯ ವಾಗಿರುವದು. ಚೇಟಿಯೇ! ಯೀತನಿಗೆ ಆಸನವನ್ನು ಕೊಡು, ಬೀಸಣಿಗೆಯನ್ನು ತೆಗದುಕೊ. ಆರ್ಯನಿಗೆ ಆಯಾಸವಾಗಿದೆ.

ಚೇಟಿ॥ (ಹಾಗೆಯೇಮಾಡುವಳು.)

ಸಂವಾ॥ ಮನಸ್ಸಿನಲ್ಲಿ, ಇದೇನು ಆರ್ಯಚಾರು ದತ್ತನ ಹೆಸರು ಹೇಳಿದಕೂಡಲೆ ನನಗಿಷ್ಟು ಮರ್ಯಾದೆ ಯಾಯಿತು. ಆಹ! ಆರ್ಯಚಾರುದತ್ತನೇ! ಆಹ ಭೂಮಿಯಲ್ಲಿ ನೀನೊಬ್ಬನೇ ಬದುಕಿರುವನು. ಇತರರೆಲ್ಲರೂ ಶ್ವಾಸವನ್ನು ಮಾತ್ರ ಬಿಡುವರು. (ಎಂದು ಕಾಲಿಗೆಬಿದ್ದು) ಆಗಲಿ,ಆರ್ಯಳೆ! ಆಗಲಿ,ನೀನೂಆಸನದಲ್ಲಿ ಕೂತುಕೊಳ್ಳಬೇಕು.

ವಸಂ॥ (ಆಸನದಲ್ಲಿ ಕುಳಿತುಕೊಂಡು) ಆರ್ಯನೇ! ಆಧನಿಕನೆತ್ತ.

ಸಂವಾ॥ ಸಜ್ಜನರು ಸತ್ಕಾರವೇ ಧನವಾಗಿವುಳ್ಳವರು. ಯೀ ಚರಾಚರಧನವೂ ಯಾರಿಗೆತಾನೇ ಯಿರುವದಿಲ್ಲ? ಯಾವನು ಪೂಜಿಸಿ ಕೊಳ್ಳುವದಕ್ಕೆ ತಿಳಿದವನೋ ಅವನು ಪೂಜಾವಿಶೇಷವನ್ನೂ ತಿಳಿದವನೇಸರಿ.

ವಸಂ॥ ಆಮೇಲೆ ಆಮೇಲೆ?

ಸಂವಾಹ॥ ಆಮೇಲೆ ಆ ಯಾರ್ಯನ ಬಳಿಯಲ್ಲಿಯೇ ಸಂಬಳವನ್ನು ತೆಗದುಕೊಂಡು ಪರಿಚಾರಕ ನಾಗಿದ್ದೆನು. ಬಳಿಕ ಆತನಿಗೆ ಚಾರಿತ್ರ್ಯವೊಂದೇ ವುಳಿಯಲು ನಾನೂ ಜೂಜಾಡು ವದರಿಂದ ಬದುಕುತ್ತಿದ್ದೆನು. ಅದರಲ್ಲಿಯೂ ನನ್ನ ದೌರ್ಭಾಗ್ಯದಿಂದ ಹತ್ತು ಹಣವನ್ನು ಕಳಕೊಂಡೆನು.

ಮಾಥುರಂ॥ ತಪ್ಪಿಹೋದೆನು, ಮೋಸಹೋದೆನು.

ಸಂವಾ॥ ಇದೊ ಯಿಾಸಭಿಕ ದ್ಯೂತಕರರಿಬ್ಬರೂ ನನ್ನನ್ನು ಹಿಂಬಾಲಿಸುತ್ತಿದ್ದಾರೆ. ಆರ್ಯಳು ಈಗ ಯಿದನ್ನು ಕೇಳಿ ಮನಸ್ಸಿಗೆ ತರತಕ್ಕದ್ದು.

ವಸಂ॥ ಮದನಿಕೇ! ಮರದಮೇಲೆ ಪಕ್ಷಿಗಳು ಹೊಸಜನ ಸಂಚಾರದಿಂದ ಚಂಚಲವಾಗಿ ಅತ್ತಲಿತ್ತಲು ಹಾರಿ ಯಾಡುತ್ತವೆ - ಅದರಿಂದ ಹೋಗಿ, ನೀನೇ ಯಿಾ ಸಭಿಕ ದ್ಯೂತಕರರಿಗೆ, ಆ ಯಾರ್ಯನೇ ಕೊಟ್ಟನೆಂದುಹೇಳಿ, ಈ ಕಡಗವನ್ನು ತೆಗದುಕೊಂಡುಹೋಗಿ ಕೊಡು. (ಎಂದು ಕೈಯಿಂದ ಕಡಗವನ್ನು ತೆಗದು ಚೇಟಿಗೆ ಕೊಡುತ್ತಾಳೆ.)

ಚೇಟಿ ॥ (ತೆಗದುಕೊಂಡು) ಆರ್ಯಳಪ್ಪಣೆಯಂತಾಗಲಿ (ಎಂದುಹೊರಟು ಹೋದಳು.)

ಮಾಥುರಂ॥ ತಪ್ಪಿಹೋದೆನು. ಮೋಸಹೋದೆನು.

ಚೇಟಿ॥ ಇದ್ಯಾರೋ ಇಬ್ಬರು ಬಾಗಿಲಬಳಿ ನಿಂತು ನೋಡುತ್ತ, ನಿಟ್ಟುಸಿರು ಬಿಡುತ್ತ, ಮಾತನಾಡುತ್ತ, ವ್ಯಸನ ಪಡುತ್ತಿರುವರು - ಇವರೇ ಆಸಭಿಕದ್ಯೂತಕರರಾಗಿರ ಬಹುದು. (ಎಂದು ಹತ್ತಿರಬಂದು) ಅಯ್ಯಾ? ನಮಸ್ಕಾರವನ್ನು ಮಾಡುವೆನು.

ಮಾಥು॥ ನಿನಗೆಸುಖವಾಗಲಿ.

ಚೇಟಿ॥ ಅಯ್ಯಾ! ನಿಮ್ಮಿಬ್ಬರಲ್ಲಿ ಸಭಿಕನು ಯಾರು?

ಮಾಥು॥

ಕಂ॥ ಬಡನಡುವಿಂದಲ್ ಮೆರೆಯುವ
ಮದನಿಯೆ ನೀನ್ಯಾರ! ಸುರತ ದಷ್ಟಾಧರದಿಂ॥
ನುಡಿಯುವೆ ಮನಕಿಂಪಾದೀ
ನುಡಿಗಳನೀಗಳು ಕಟಾಕ್ಷದಿಂನೋಡುತ್ತಾ ॥೪೮॥

ನನಗೆ ಸಂಪತ್ತಿಲ್ಲ ಮತ್ತೊಂದುಕಡೆಗೆ ಹೋಗು

ಚೇಟಿ॥ ಯಾವಾಗನೀನು ಇಂಥಾ ಯೋಚನೆಗಳನ್ನು ಮಾಡುವನಾದೆಯೊ? ಆಗ ದ್ಯೂತಕರ ನಾಗಲಾರಿ. ನಿನಗೆ ಯಾರೇನಾದರೂ ಕೊಡ ತಕ್ಕದ್ದು ಉಂಟೋ?

ಮಾಥು॥ ಉಂಟು, ಹತ್ತು ಹಣವೇಬಾಕಿ; ಆದರೆಅವನಿಗೇನು?

ಚೇಟಿ॥ ಅದಕ್ಕೋ ಸುಗವೇ ಆರ್ಯಳ್ಳೀಕಡಗವನ್ನು ಕೊಡುತ್ತಾಳೆ- ಅಲ್ಲ ಅಲ್ಲ - ಆತನೇ ಕೊಡುತ್ತಾನೆ.

ಮಾಥುರ॥ (ಸಂತೋಷದಿಂದ ತೆಗೆದುಕೊಂಡು) ಎಲೋ! ‘ಆ ಗಂಡವು ಕಳೆಯಿತು, ಬಾ, ಮತ್ತೂ ಜೂಜಾಡೋಣ ಎಂದ,ನೆಂದು ಆಕುಲಪುತ್ರನಿಗೆ ಹೇಳು (ಎಂದು ಹೊರಟುಹೋದರು)

ಚೇಟಿ॥ (ವಸಂತಸೇನೆಯ ಬಳಿಗೆ ಬಂದು) ಅಮ್ಮಾ! ಆ ಸಭಿಕದ್ಯೂತಕರರಿಬ್ಬರೂ ಸಂತೋಷಪಟ್ಟು ಹೋದರು.

ವಸಂ॥ ಆದರೆ ಇನ್ನು ಆರ್ಯನೂ ಸೆಂಟರನ್ನು ಸಮಾಧಾನಪಡಿಸಲಿಕ್ಕೆ ಹೋಗಬಹುದು.

ಸಂವಾ॥ ಈಗಲೇ ನನ್ನನ್ನು ಸೇವಕನನ್ನಾಗಿ ನೀನು ಒಪ್ಪಿಕೊಳ್ಳಬೇಕು.

ವಸಂ॥ ಆರ್ಯನೇ! ನೀನುಯಾರಿಗಾಗಿ ಆವಿದ್ಯೆಯನ್ನು ಕಲಿತುಕೊಂಡೆಯೋ? ಆತನು ಇದು ವರೆಗೇ ನೇ ಸೇವಿಸಿಕೊಂಡೂ ಇರುವನು, ಮುಂದೆಯೂ ಸೇವಿಸಿಕೊಳ್ಳ ತಕ್ಕವನೂ ಆಹುದು.

ಸಂವಾ॥ (ಮನಸ್ಸಿನಲ್ಲಿ) ಈಕೆಯಿಂದ ಚೆನ್ನಾಗಿ ನಿರಾಕರಿಸಿಕೊಂಡೆನು. ಇನ್ನು ಹ್ಯಾಗೆ ಪ್ರತ್ಯುಪಕಾರವನ್ನು ಮಾಡಲಿ. ? (ಪ್ರಕಾಶವಾಗಿ) ಆರ್ಯಳೇ! ನಾನೀಜೂಜು ಗಾರರ ಅವಮಾನದಿಂದ ಬೌದ್ಧಸನ್ಯಾಸಿ ಯಾಗುವೆನು. ಆದ್ದರಿಂದನೀನು “ಜೂಜು ಗಾರನಾದ ಸಂವಾಹಕನು ಬೌದ್ಧಸನ್ಯಾಸಿ ಯಾದ” ನೆಂದು ಸ್ಮರಿಸುತ್ತಿರಬೇಕು.

ವಸಂ॥ ಅಯ್ಯಾ.! ಸಾಹಸವನ್ನು ಮಾಡಬೇಡ.

ಸಂವಾ॥ ಆರ್ಯಳೇ! ನಿಶ್ಚಯವನ್ನು ಮಾಡಿರುವೆನು. (ನಡೆದು)

ಕಂ॥ ಎಲ್ಲಾ ಜನಗಳ ಯೆದುರ
ಲ್ಲಲ್ಲವೆ ಯವಮಾನವಾಯ್ತು ನನಗೀಜೂಜಿಂ ॥
ವಿಲ್ಲೀಗದರಿಂನಾನೇ
ಮೆಲ್ಲಗೆ ಯತಿಯಾಗಿ ರಾಜಮಾರ್ಗದ ಲಿರುವೆಂ॥೪೯॥

(ತೆರೆಯಲ್ಲಿ ಕಲಕಲ ಮಾಗುವುದು)

ಸಂವಾ॥ (ಕೇಳಿ) ಎಲಾ! ಇದೇನು? (ಆಕಾಶದಲ್ಲಿ) ‘ವಸಂತಸೇನೆಯ ಕುಂಟವೋಟಕವೆಂಬೀ ಆನೆಯು ವಿಹರಿಸುತ್ತಿದೆ’ ಎಂದು ಹೇಳುವಿರೋ? ಅಹಾ! ಆದರೆಹೋಗಿ ಆಮದ್ದಾನೆಯನ್ನು ನೋಡುವೆನು. ಅಥವಾ ಇದರಿಂದೇನು ಫಲವು? ನಿಶ್ಚಯಿಸಿದಂತೆಯೇ ಮಾಡುವೆನು. (ಎಂದುಹೋದನು.)

[ಬಳಿಕ ಕರ್ಣಪೂರಕನೆಂಬ ಮಾವುತನು ವಿಕಾರವೇಷವುಳ್ಳವನಾಗಿ ತೆರೆಯನ್ನು ಹಾರಿಸಿ ಕೊಂಡು ಬರುವನು]

ಕರ್ಣ॥ ಆರ್ಯಳೆಲ್ಲಿ ಯೆಲ್ಲಿ ?

ಚೇಟಿ॥ ಎಲೋ ದುರ್ಮನುಷ್ಯನೇ? ನಿನಗೇನು ಭಯಬಂತು? ಎದುರಾಗಿ ಇರುವ ಆರ್ಯಳನ್ನು ಕಾಣೆಯಲ್ಲಾ?

ಕರ್ಣ॥ (ನೋಡಿ) ಆರ್ಯಳೇ! ನಮಸ್ಕಾರಮಾಡುವೆನು

ವಸಂತ॥ ಕರ್ಣಪೂರಕನೇ! ನಗುವಿನ ಮುಖನಾಗಿ ಕಾಣುತ್ತೀ. ಇದೇನು?

ಕರ್ಣ॥ (ಆಶ್ಚರ್ಯದಿಂದ) ಆರ್ಯಳೇ. ಮೋಸಹೋದಿ ಯಾತಕೊತ್ತು, ಕರ್ಣಪೂರಕನ ಪರಾಕ್ರಮವನ್ನು ನೋಡದೆ ಹೋದೆಯಲ್ಲಾ?

ವಸಂ॥ ಕರ್ಣಪೂರಕನೇ! ಏನು? ಏನು?

ಕರ್ಣ॥ ಆರ್ಯಳೇ! ಕೇಳು. ಕುಂಟಮೋಟಕವೆಂಬ ನಮ್ಮಾನೆಯು ಮದವೇರಿ ಕಟ್ಟಿದ ಕಂಬವನ್ನು ಕಿತ್ತು ಕೊಂಡು ಬಂದು ಒಬ್ಬ ಪ್ರಧಾನಿಯನ್ನು ಕೊಂದು ಜನಕ್ಷೋಭೆ ಯನ್ನುಮಾಡುತ್ತಾ ರಾಜವೀಧಿಗೆ ಬಂತು. ಆಗಜನವೆಲ್ಲಾ "ಬೇಗನೆ ಮಕ್ಕಳನ್ನು ಒಳಕ್ಕೆ ಕರದು ಕೊಳ್ಳಿರಿ, ಮರವನ್ನೋ ಮಾಳಿಗೆ ಯನ್ನೋ ಹತ್ತಿರಿ. ಎತ್ತನೋಡುತ್ತೀರಿ, ಕೆಟ್ಟಾನೆಯು ಬರುತ್ತಿದೆ" ಎಂದು ಮೊರೆಯಿಟ್ಟರು. ಬಳಿಕಾ ಯಾನೆಯು ಸೊಂಡಿಲು, ಹಲ್ಲು, ಕಾಲುಗಳಿಂದ ತಾವರೆಯಕೊಳವನ್ನು ಕದಡಿದಂತೆ ಉಜ್ಜಯಿನಿಯನ್ನೇ ಧ್ವಂಸಮಾಡುತ್ತಾ ಒಬ್ಬಯತಿಯನ್ನು ಹಿಡಿಯಿತು. ಆಗಮುರಳಿಯುಜನವು, ದಂಡಕಮಂಡಲುಗಳನ್ನು ಕಳಕೊಂಡು ದಂತಗಳೊಳಗೆ ಸಿಕ್ಕಿದ ಸನ್ಯಾಸಿಯನ್ನು ಕಂಡು ಯತಿಯುಸಾಯುತ್ತಾನಲ್ಲಾ ಎಂದು ಮೊರೆಯಿಟ್ಟಿತು.

ವಸಂ॥ (ತ್ವರೆಯೊಡನೆ) ಆಹ! ಪ್ರಮಾದವಾಯಿತು ಪ್ರಮಾದವಾಯಿತು.

ಕರ್ಣ॥ ವ್ಯಾಕುಲವುಸಾಕು. ಕೇಳಬೇಕು. ಆಮೇಲೆ ಬಿಚ್ಚಿದಸಂಕೋಲೆಯನ್ನು ಎಳಕೊಂಡು, ದಂತದಮೇಲೆ ಯತಿಯನ್ನು ಹೆತ್ತು ಕೊಂಡು ಓಡುತ್ತಿರುವ ಆನೆ ಯನ್ನು ನೋಡಿ ಕರ್ಣಪೂರಕನಾದನಾನು ಅಲ್ಲ, ಅಲ್ಲ, ಆರ್ಯಳಅನ್ನ ಮಹಿಮೆಯಿಂದಬೆಳೆದ ದಾಸನಾದನಾನು ಜೂಜುಗಾರನು ಸನ್ಯಾಸಿ ಯಾದನೆಂದ ಕೂಗುತ್ತಾ ಬೇಗನೆ ಅಂಗಡಿಯಿಂದ ಕಬ್ಬಿಣದಕೋಲನ್ನು ತೆಗದು ಕೊಂಡು ಬಂದು, ಆ ಕೆಟ್ಟಾನೆಯನ್ನು ಹತ್ತಿರಕ್ಕೆ ಕರೆದೆನು.

ವಸಂ॥ ಆಮೇಲೆ? ಆಮೇಲೆ?

ಕರ್ಣ॥ ಕೋಪದಿಂದ ವಿಂಧ್ಯಗಿರಿಯು ಹಾಗಿರುವ ಆಮದ್ದಾನೆಯನ್ನು ಹೊಡೆದುಕೆಡವಿ, ದಂತಕ್ಕೆ ಸಿಕ್ಕಿದ್ದ ಯತಿಯನ್ನು ಮೆಲ್ಲಗೆ ಬಿಡಿಸಿದೆನು.

ವಸಂ॥ ಚೆನ್ನಾಗಿ ಮಾಡಿದಿ. ಆಮೇಲೆ?

ಕರ್ಣ॥ ಮಝುಭಾಪು! ಕರ್ಣಪೂರ! ಮಝುಭಾಪು! ಎಂದು ಹೊಗಳುತ್ತಾ, ಉಜಯಿ

ನಿಯೆಲ್ಲವೂ ವಿಷಮಭಾರವನ್ನು ಹೊತ್ತು ನಾವೆಯಂತೆ ಒಂದುಕಡೆಗೇಬಗ್ಗಿಯಿತ್ತು. ಆಮೇಲೆ ಆರ್ಯಳೇ! ಯಾವನೋವೊಬ್ಬನು ಒಡವೆಗ ಳಿಡುವಸ್ಥಳವನ್ನು ಮುಟ್ಟಿನೋಡಿಕೊಂಡು, ಮೇಲೆನೋಡಿ, ನಿಟ್ಟುಸುರುಬಿಟ್ಟು ಈ ಬಟ್ಟೆಯನ್ನು ನನ್ನಮೇಲೆ ಯೆಸೆದನು.

ವಸಂ॥ ಕರ್ಣಪೂರಕನೇ! ನೋಡು. ಆಬಟ್ಟೆಗೆ ಜಾಜಿಯಹೂವ್ವಿನ ವಾಸನೆ ಯಿದೆಯೋ ಯಿಲ್ಲವೋ?

ಕರ್ಣ॥ ಆರ್ಯಳೇ! ಮದಗಂಧದಿಂದ ಆವಾಸನೆಯು ನನಗೆಚೆನ್ನಾಗಿ ತಿಳಿಯುವದಿಲ್ಲವು.

ವಸಂ॥ ಆದರಮೇಲೆ ಹೆಸರಿಗೆಯೇನೋ ಅದರನ್ನಾದರೂ ನೋಡಿಹೇಳು.

ಕರ್ಣ॥ ಈಹೆಸರನ್ನು ಆರ್ಯಳೇವೋದಬೇಕು. (ಎಂದುಬಟ್ಟೆಯನ್ನು ಹತ್ತಿರಿಡುವನು.)

ವಸಂ॥ "ಆರ್ಯ ಚಾರುದತ್ತನದು' (ಎಂದು ಓದಿ ಬಯಕೆ ಯಿಂದ ತೆಗದುಹೊವ್ವು ಕೊಳ್ಳುತ್ತಾಳೆ.)

ಚೇಟಿ॥ ಕರ್ಣಪೂರಕನೇ! ಆರ್ಯಳಿಗೀ ಬಟ್ಟೆಯುಅಲಂಕಾರವಾಗಿದೆಯೋ?

ಕರ್ಣ॥ ಆ! ಅಲಂಕಾರವಾಗಿದೆ.

ವಸಂ॥ ಕರ್ಣಪೂರಕನೇ! ಇದು ನಿನಗೆ ಸಂಭಾವನೆಯು. (ಎಂದು ಒಂದಾ ಭರಣವನ್ನು ಕೊಡುತ್ತಾಳೆ.)

ಕರ್ಣ॥ (ತಲೆಯಲ್ಲಿಟ್ಟುಕೊಂಡು ನಮಸ್ಕಾರಮಾಡಿ) ಈಗಚೆನ್ನಾಗಿಅಲಂಕಾರ ವಾಗಿದೆ.

ವಸಂ॥ ಕರ್ಣಪೂರಕನೇ! ಈಗಆರ್ಯಚಾರುದತ್ತನು ಎಲ್ಲಿರುವನು?

ಕರ್ಣ। ಇದೇದಾರಿಯಿಂದಲೇ ಮನೆಗೆಹೋದನು.

ವಸಂ॥ ಮದನಿಕೆಯೇ! ಉಪ್ಪರಿಗೆಯನ್ನು ಹತ್ತಿ ಆರ್ಯ ಚಾರುದತ್ತನನ್ನು ನೋಡೋಣ ಬಾ.

(ಎಂದೆಲ ರೂ ಹೊರಟು ಹೋದರು.)

ಇಂತೆಂಬಲ್ಲಿಗೆ ವೃಚ್ಛಕಟಿಕ ಪ್ರಕರಣದೊಳ್

ದ್ಯೂತಕರಸಂವಾಹಕ ಮೆಂಬ

ಎರಡನೆಯ ಅಂಕಂ.

ಮುಗಿದುದು.

ಮೃಚ್ಛಕಟಿಕಪ್ರಕರಣಂ.

ತೃತೀಯಾಂಕಂ.

[ಬಳಿಕ ಚೇಟನು ಬರುವನು.]

ಚೇಟನು॥ ವೃ॥ ಬಡವನಾದರು ಭೃತ್ಯದಯಾಳುವಾ।
ದೊಡೆಯನೇ ಸುಜನಂ ದಿಟವಲ್ಲವೇ॥
ಬಿಡದೆ ಸೇವಿಸಲುಂಧನ ಮತ್ತನಂ।
ಕಡೆಗವಂ ಪಿಸುಣಾಗುವ ನಾಖಿಲಂ॥ ೪೬॥

ವೃತ್ತ॥ ಬಿಡಿಸಲಾಗದು ವೈರಿನಾಶೆಯು ಗೂಳಿಯುಂ।
ಬಿಡಿಸಲಾಗದು ಪಾರದಾರಿಕ ಮರ್ತ್ಯನಂ॥
ಬಿಡಿಸಲಾಗದು ಜೂಜಿನಾಶೆಯು ಭೂಪನಂ।
ಬಿಡಿಸಲಾಗದು ತಾಂ ಸ್ವಭಾವಜ ದೋಷವಂ॥ ೪೭॥

ಸಂಗೀತವನ್ನು ಕೇಳುವದಕ್ಕೆ ಹೋದ ಆರ್ಯಚಾರುದತ್ತನು ಅರ್ಧರಾತ್ರಿಯಾದರೂ ಇನ್ನೂ ಬರಲಿಲ್ಲವಾದ್ದರಿಂದ ಅವನಿಗಾಗಿ ಈ ಹೊರಗಣ ಕೈಸಾಲೆಗೆ ಹೋಗಿ ಮಲಗಿಕೊಳ್ಳುತ್ತೇನೆ. (ಎಂದು ಹಾಗೆ ಮಾಡುವನು.)

[ಬಳಿಕ ಚಾರುದತ್ತನೂ, ವಿದೂಷಕನೂ, ಬರುವರು]

ಚಾರು:— ಅಚ್ಚರಿ! ಅಚ್ಚರಿ! ಒಳ್ಳಿತು ಒಳ್ಳಿತು. ಆ ರೇಭಿಲನ ಗಾನಂ. ವೀಣೆಯಾದೊಡೆ ಕಡಲೊಳ್ಪುಟ್ಟದ ರನ್ನಮಲ್ತೆ. ಎಂತೆನೆ:—

ವೃ॥ ಅದು ಹೃದಯಾನುವರ್ತಿನಿಯೆನಿಪ್ಪವಯಸ್ಯೆಯೆನಾಡೆಯುತ್ಸುಕ
ರ್ಗ್ಗದು ಸುವಿನೋದರೂಪವಿನಿಯುಂ ಬರಲಂದು ವಿಳಂಬಮಾದೊಡಂ
ಅದು ಮನದುಬ್ಬೆಗಂ ಕಳೆಯಲಾಪ್ರಜನಂ ವಿರಹಾತುರರ್ಗ್ಗವೇಣ್
ಅದು ರಸಿಕರ್ಗ್ಗರಾಗಪರಿವೃದ್ಧಿಕರಂತವೆಹರ್ಷರೂಪಮೇ॥ ೪೮॥

ವಿದೂ॥ ಅಯ್ಯಾ? ಮನೆಗೆ ಹೋಗೋಣ ಬಾರೈ.

ಚಾರು:— ಆಹ! ಒಳ್ಳಿತಿನಿದಾಗಿಯೇ ಭಾವನಾದ ರೇಭಿಲಂ ಪಾಡಿದಂ.

ವಿದೂ॥ ನನಗೆ ಸಂಸ್ಕೃತವನ್ನು ಹಾಡುವ ಹೆಂಗುಸಿನಿಂದಲೂ, ಕಾಕಲೀ ಶಬ್ದವನ್ನು ಮಾಡುವ ಗಂಡುಸಿನಿಂದಲೂ; ಇವರಿಬ್ಬರಿಂದಲೇ ನಗುವುಂಟಾಗುತ್ತದೆ. ಆ

ಹೆಂಗುಸು ಸಂಸ್ಕೃತವನ್ನು ಹೇಳುತ್ತಾ ಮೂಗಿಗೆ ಹಗ್ಗ ಹಾಕಿಸಿಕೊಳ್ಳುವ ಹಸುವಿನಂತೆ ಹೆಚ್ಚಾಗಿ ಸೂ ಸೂ ಶಬ್ದವನ್ನು ಮಾಡುತ್ತಿರುವಳು. ಆ ಗಂಡುಸು ಸೂಕ್ಷ್ಮ ಸ್ವರವನ್ನು ಮಾಡುತ್ತಾ; ಒಣಗಿದ ಹೂವಿನ ಸರವನ್ನು ಹಾಕಿಕೊಂಡು, ಬಹಳ ಹೊತ್ತು ಜಪವನ್ನು ಮಾಡುತ್ತಿರುವ ಮುದಿ ಪುರೋಹಿತನಂತೆ ನನಗೇನೂ ರುಚಿಸಲಿಲ್ಲವು.

ಚಾರು:—ಮಿತ್ರನೇ! ಇಂದು ಭಾವರೇಭಿಲಂ ಒಳ್ಳಿತೆನಿಸಿ ಪಾಡಿದನಲ್ತೆ. ನೀಂ ಸಂತಸಿಸಲಿಲ್ಲವೋ? ಅದೆಂತೆಂದೊಡೆ:—

ಕಂ॥ ಲಲಿತಮುಂ ಮಿನಿದುಂ ರಂಗುಂ
ಸಲೆಸಮಮುಂ ಭಾವ ಪೂರ್ಣಮುಂ ಸ್ಫುಟರಮ್ಯಂ॥
ಪಲು ಮಾತಿಂದೇ ನವನೊಳ್
ಲಲನೆಯು ಅಂತರ್ನಿಗೂಢೆ ಯಾದಂತರಿಪೆಂ॥ ೪೯॥
ಅಂತುಮಲ್ಲದೆಯುಂ

ವೃ॥ ವಿರಮಂ ಗೊಂಡೊಡನುಸುಗಾನಸಮಯಂ,ಮತ್ತಂ ಸ್ವರಶ್ರೇಣಿಯಿಂ
ಚರಮುಂ ಮೆಲ್ಲಡಿಯುಂ ಸುಮಾರ್ಛನೆಯು ಮಾರಾಗದ್ವಿರುಚ್ಚಾರಣಂ॥
ನೆರೆ ವರ್ಣಕ್ರಮಮುಂ ಬೆಡಂಗು ವಡೆದಾ ವೀಣಾದಿ ತಂತ್ರೀಸ್ವನಂ
ಮೆರೆ ಯಲ್ಕಾ ತನಗೀತಮಂ ನಿಪದ ಮೀಗಳ್ಕೇಳ್ವವೋಲ್ಪೋದಪೆಂ॥ ೫೦॥

ವಿದೂ॥ ಅಯ್ಯಾ ಪ್ರಿಯಮಿತ್ರನೇ! ಅಂಗಡಿಬೀದಿಯುಬಳಿಯಲ್ಲಿ ನಾಯಿಗಳುಕೂಡ ಸುಖವಾಗಿನಿದ್ದೆ ಹೋಗುತ್ತಿವೆ. ಅದರಿಂದ ಮನೆಗೆ ಹೋಗೋಣಬಾ. (ಮುಂದೆ ನೋಡಿ) ಅಯ್ಯಾ! ನೋಡು ನೋಡು. ಭಗವಂತನಾದೀ ಚಂದ್ರನುಕೂಡ, ಕತ್ತಲೆಗೆ ಅವಕಾಶವನ್ನು ಕೊಡುತ್ತಾ ಆಕಾಶದುಪ್ಪರಿಗೆ ಯಿಂದಿಳಿದು ಹೋಗುತ್ತಿರುವನು.

ಚಾರು:—ಒಳ್ಳಿತು ಸಿದ್ಧಪಯ್.

ಕ॥ ತಮುಕವಕಾಶ ಮನಿತ್ತು
ಸ್ತ್ರಮಿಸಿದಪೀ ಚಂದ್ರನೀಗಳುನ್ನತ ಶೃಂಗಂ
ಅಮುಮ ಜಲಮಗ್ನ ವನಗಜ
ದ ಮಿಕ್ಕ ತೀಕ್ಷ್ಣರದ ನಾಗ್ರಯುಗದಂತಿರ್ಕ್ಕುಂ॥ ೫೧॥

ವಿದೂ॥ ಅಯ್ಯಾ! ಇದೇ ನಮ್ಮಮನೆಯು. ವರ್ಧಮಾನಕ! ವರ್ಧಮಾನಕಾ! ಬಾಗಿಲನ್ನು ತೆರೆಯೋ.

ಚೇಟ॥ ಆರ್ಯ ಮೈತ್ರೇಯನ ಸ್ವರವು ಕೇಳಿಸುತ್ತೆ. ಆದರೆ ಆರ್ಯಚಾರುದತ್ತನು ಬಂ

ಬಿರಬೇಕು ಬಾಗಿಲನ್ನು ತೆರೆಯುವೆನು. ಬುದ್ಧೀ! ಪಾದಕ್ಕೆ ಬಿದ್ದೆನು. ಮೈತ್ರೇಯನೇ! ನಿನಗೂ ಕಾಲಿಗೆನಿದ್ದೆನು. ನೀವಿಬ್ಬರೂ ಈಪೊದ್ದ ಆಸನದಮೇಲೆ ಕೂತುಕೊಳ್ಳಬಹುದು. (ಇಬ್ಬರೂನಾಟ್ಯದಿಂ ಕುಳಿತು ಕೊಳ್ಳುವರು)

ವಿದೂಷ॥ ವರ್ಧಮಾನಕನೇ! ಕಾಲತ್ತೊಳೆಯುವದಕ್ಕೆ ರದನಿಕೆಯನ್ನು ಕರೆ.

ಚಾರು:— (ದಯೆಯಿಂದ) ನಿದ್ರಿಪರನೆಲ್ಲರು ಗೊಳಿಸಲಾಗದು.

ಚೇಟಿ॥ ಮೈತ್ರೇಯನೇ! ನಾನು ನೀರುತರುತ್ತೇನೆ. ನೀನುಕಾಲ ತೊಳಿ.

ವಿದೂ॥ (ಕೋಪದಿಂದ) ಅಯ್ಯಾಮಿತ್ರನೇ! ಈ ತೊತ್ತಿನ ಮಗ ನೀರನ್ನು ಹಿಡಿದಿರುತ್ತಾನಂತೆ, ಬ್ರಾಹ್ಮಣನಾದನಾನು ಕಾಲುತೊಳೆಯ ಬೇಕಂತೆ.

ಚಾರು:— ಗೆಳೆಯನೇ! ನೀಂಸೀರ್ಪಿಡಿ, ವರ್ಧಮಾನಕಂ ಕಾಲ್ಗಳಂ ಪ್ರಕ್ಷಾಳಿಸುಗೆ.

ಚೇಟಂ॥ ಮೈತ್ರೇಯನೇ ನೀರುಬಿಡು- (ವಿದೂಷಕನು ನೀರುಹುಯ್ಯಲು ಚೇಟನುಚಾರುದತ್ತನ ಕಾಲತ್ತೊಳದು ಓರೆಯಾಗುವನು-)

ಚಾರು:—ಬ್ರಾಹ್ಮಣಂಗೆ ಕಾಲ್ಗೆ ನೀರನೆರೆ-

ವಿದೂ॥ ನನಗೆ ಕಾಲಿಗೆನೀರ್‍ಯಾತಕ್ಕೆ? ನೆಲದಮೇಲೆಯೇನಾನು ಹೊಡಸಿಕೊಂಡಕತ್ತೆಯು ಹಾಗೆ ಬಿದ್ದು, ಮತ್ತಾ ಹೊರಳ್ಯಾಡಬೇಕು.

ಚೇಟ॥ ಆರ್ಯಮೈತ್ರೇಯನೇ! ನೀನುಬ್ರಾಹಣನಲ್ಲವೆ?

ವಿದೂ॥ ಅನೇಕಸರ್ಪಗಳನಡುವೆ ಡುಂಡುಭವು ಹ್ಯಾಗೋ ಹಾಗೆ ಅನೇಕ ಬ್ರಾಹ್ಮಣರ ನಡುವೆ ನಾನೂ ಒಬ್ಬ ಬ್ರಾಹ್ಮಣನು-

ಚೇಟ॥ ಆದರೂ ಕಾಲತ್ತೊಳೆಯುವೆನು- (ಹಾಗೆಮಾಡಿ) ಅಯ್ಯಾ! ಮೈತ್ರೇಯನೇ! ಈಯೊಡವೆಗಳ ಗಂಟನ್ನು ಹಗಲೆಲ್ಲ ನಾನಿಟ್ಟು ಕೊಂಡಿದ್ದೆನು- ಇನ್ನು ರಾತ್ರಿಯೆಲ್ಲವೂ ನೀನೇ ಭದ್ರಪಡಿಸಿಕೊಂಡಿರಬೇಕು- ಆದರಿಂದ ತೆಗದುಕೋ (ಎಂದು ಕೊಟ್ಟು ಹೋದನು-)

ವಿದೂ॥ (ತೆಗದುಕೊಂಡು) ಇನ್ನೂ ಇದು ಹಾಗೆಯೇ ಯಿದೆಯೆ? ಈ ಉಜ್ಜಯಿನಿಯಲ್ಲಿ ಯೇನು ಒಬ್ಬ ಕಳ್ಳನಾದರೂ ಇಲ್ಲವೋ? ಯಾವತೊತ್ತಿನ ಮಗನೂ ಈನಿದ್ದೆಯೆಂಬಕಳ್ಳನನ್ನು ಹೊತ್ತುಕೊಂಡು ಹೋಗಲಾರನು- ಅಯ್ಯಾ ಮಿತ್ರನೇ! ಈಗಂಟನ್ನು ಒಳಗಿನ ತೊಟ್ಟಿಗೆ ಸೇರಿಸುತ್ತೇನೆ

ಚಾರು:—ಈ ತೊಡವುಗಳ್ ಸಾಮಾನ್ಯನಾರೀಮಣಿ ಸಂಬಂಧಿಯಾದುದರಿಂ ದೊಳಗಣ ಸಾಲೆಯೊಳಿಡದೆ ಆಕೆಗೆ ಈವವರೆಗಂ ನೀನೆ ತಾಳ್ದಿರಲ್ತಕ್ಕುದು. (ಎಂದುನಿದ್ದೆಯು ನಭಿನಯಿಸುತೆ ವಿರಮಂಗೊಂಡೊಡ ಮಾ ನುಗಾನಸಮಯ' ಮೆಂಬ ಪದ್ಯಮಂ ಪೇಳ್ದಪಂ-)

ವಿದೂಷ॥ ಏನು ನಿದ್ದೆ ಬಂತೊ?

ಚಾರು:—ಮತ್ತೆಂ॥ ಕಂ॥ ನೊಸಲಿಂ ದಿಳಿತಂ ದೊಡಲಂ।
ಮುಸುಕೆಂವು ದೆನೆಕಣ್ಣನೊತ್ತುವೀಸಿದ್ದಿಯೆಮಾ॥
ನಿಸರೊಡಲ ಬಲ್ಮೆಯುಂ ಕುಂ
ದಿಸಿ ವ್ಯಗರೆ ಯುತ್ತೆ ಚಪಲ ಜರೆವೋ ಲ್ಬೈಳಿಗುಂ॥ ೪೬॥

ವಿದೂ॥ ಆದರಿಂದ ನಿದ್ರೆಹೋಗೋಣ- (ನಿದ್ದೆಯನಭಿನಯಿಸುವರ್-)

[ಬಳಿಕ ಶರ್ವಿಲಕ ನೆಂಬ ಚೋರಂ ಬಂದಪಂ-]

ಶರ್ವಿಲಕಂ:— ಕಂ॥ ನೆರೆ ಕಲ್ತರಿವಿಂ ಬಲದಿಂ
ಶರೀರ ಕನುಪಾದ, ಸೊಗದೆಪ್ಪುಗಿಸುವ, ಬಿಲಮಂ॥
ಕೊರೆದು, ನೆಲಂ ಕೆಲ ನೊರಸಲ್
ಹೆರೆಯುಚ್ಚಿರ್ದ ಭುಜಗದಂತೆ ಪೊಕ್ಕಪೆ ನದರೊಳ್॥ ೪೭॥

(ಆಗಸಮಂ ನೋಡಿ ಸಂತಸದಿಂ) ಎಲೆ! ಇದೊ ಭಗವಂತನಪ್ಪ ನೈದಿಲ್ಗೆಳೆಯುಂ ಅಸ್ತಮಿಸಿದಪಂ. ಎಂತೆನೆ-

ಕಂ॥ ಅರಸಾಳ್ಗಳ್ಕಿದಪೆನ್ನಂ
ಪೆರವನೆ ಯೊಳ್ಕಳ್ವ ಕಜ ದೊಳ್ ಡಂಗೆಲಿಯುಂ॥
ಇರುಳಿದು ಜನನಿಯ ತೆರದಿಂ
ಪೊರೆವುದು ಘನತಮದಿನೆಲ್ಲ ಭಾವಂಮುಸುಕಲ್ ॥೪೮॥

ಪೊತ್ತೋಂಟದ ಬಳಿಯೊಳ್ ಸಂದಿಯುಂ ಕೊರೆದು ನಡುವನೆಗೆ ಬಂದೆಂ ಪೌತ್ತವೀಗಳ್ ಚೌಸಾಲೆಗಂ ಗಂಡಿಯು ನಿಕ್ಕಿದಪೆಂ- ಅಯ್ಯಾ!

ವೃ॥ ಪರಿಭವಚೌರ್ಯ ವಂಚನೆಗಳಪ್ಪುವು ನಂಬಿದರೊಳ್ತ ಯಾನರೊಳ್,
ಕೆರವುದು ನೀಚ ವೆಂದುಸಿರ್ಗೆ ಸಾಧುಗಳಾಣಮುದಲ್ತು ಶೌರ್ಯವುಂ,
ಪರೆದಪ ಕೀರ್ತಿಯುಂ ತನಗೆ ಲೇಸಲೆ ದ್ವೈನ್ಯದಸೇವೆ ಯತ್ತಣಿಂ,
ಸೆರಣೆ ಯಿಡಕ್ಕೆದಲ್ತೆ ನೆರೆ ದ್ರೌಣಿನಿ ಮಿಚ್ಚಿರ್ದ ಸುಪ್ತಹಿಂಸೆಯುಂ॥ ೪೯॥

ಆದರಿಂ ದಿತ್ತ ಲಾವೆಡೆಯೊಳ್ ಗಂಡಿಯುಂ ಗೈದಪೆಂ?

ವೃ॥ ಆವೆಡೆನೀರಗೊಂಡು ಸಡಿಲಾಗಿಹುದೆಲ್ಲಿ ನಿನಾದವಾಗದೋ
ಯಾವೆಡೆ ಗೋಡೆ ಯೊಳ್ಕೊರೆದ ಕನ್ನದಗಂಡಿ ಪರರ್ಗೆ ಕಾಣದೋ
ಆವೆಡೆ ಜೀರ್ಣ ಲೋಷ್ಟಗಳ ಸೂಷರದಿಂ ಕರುಮಾಡವಿಕ್ಕರ್ವೋ
ಯಾವೆಡೆನೋಡರೋರವಣಿಯರ್ತನಗಲ್ಲಹುದರ್ಥಸಿದ್ಧಿದಲ್॥ ೫೦

(ಗೋಡೆಯಂ ಮುಟ್ಟಿ) ಇದುನಿಚ್ಚಮುಂ ಬಿಸಿಲಿಂ ಬೆಂದು, ನೀರಿಂ ನೆನೆದು, ನಿಸ್ಸಾರವಾಗಿ, ನೆಲಸೂಷರವಾಗಿ, ನಾಡೆ ಮೂಷಿಕ ಸ್ತೋಮದಿಂದಾ

ಪಿತಮಾಗಿರ್ಪುದು. ಇಲ್ಲಿಯರ್ಥಂ ಸಿದ್ಧಮೇ. ಕುಮಾರ ಸ್ವಾಮಿಗೆ ಕುವ ರರಾದ ಚೋರರ್ಗೆ ಇದುಮೊದಲನೆಯ ಸಿದ್ಧಿಲಕ್ಷಣಂ. ಇಲ್ಲಿಯಾಗಳ್ ತಪ್ಪ ಸಂಧಿಯ ನೆಸಗಿದಪೆಂ-? ಆದೊಡಂ ಭಗವಂತನಪ್ಪ ಬಾಹುಲೇಯ ಸಂಧ್ಯುಪಾಯಮಂ ನಾಲ್ಕು ವಿಧಮಾಗಿ ತೋರಿಸಿರ್ಪಂ. ಎಂತೆನೆ:— "ಪ ಟ್ಟಿ ಟಕೆಗಳ್ಗೆ ಆಕರ್ಷಣಂ, ಸುಡದಿಟಕೆಗಳ್ಗೆ ಛೇದನಂ, ಮಣ್ಣೆಂಟೆಗಳ್ಗೆ ಸೇ ಚನಂ, ಮರದಹಲಗೆಗಳ್ಗೆ ಪಾಟನಮುಂ," ಎಂದು- ಅದರಿಂದೀ ಪಕ್ವೇಷ್ಟ ಕಂಗಳಂ ಸೆಳೆಯಲ್ವೇಳ್ಕುಂ. ಅದರೊಳಂ. "ಪದ್ಮ ವ್ಯಾಕೋಚಂ, ಭಾಸ್ಕ ರಂ, ಬಾಲಚಂದ್ರಂ, ವಾಪೀ, ವಿಸ್ತೀರ್ಣಂ, ಸ್ವಸ್ತಿಕಂ, ಪೂರ್ಣಕುಂಭಂ" ಎಂದು ಏಳ್ಪಗೆಯಾದ ಸಂಧಿಗಳುಮು ನಾಂಬಲ್ಲೆಂ, ಅದರಿಂದಿಲ್ಲಿ ನಾಳೆನೋ ಡಿ ಪೌರರಚ್ಚರಿ ಗೊಳ್ವಂತೆ ಪಕ್ವೇಷ್ಟಕ ದೊಳ್ ಪೂರ್ಣಕುಂಭಮೆಂಬ ಸಂ ಧಿಯೇ ಶೋಭಿಕುಂ. ಅದನೊಡರ್ಚಿದಪೆಂ.

ಕಂ॥ ಇರುಳೊಳ ಗಾನೊಡೆದಿರ್ದ
ಷರದೂಷಿತ ಭಿತ್ತಿಯಲ್ಲಿ ಸವೆದುದ್ಯಮಮಂ
ನಿರುಕಿಸಿ ಪೇಳ್ವರ್ ಪಗಲೊಳ್
ನೆರೆ ಹೊರೆ ಯವರೆನ್ನಕಾರ್ಯ ಗುಣ ದೋಷಗಳಂ॥ ೬೧॥

ಯೋಗಾಚಾರ್ಯನಾದ ಆವ ಕುಮಾರಸ್ವಾಮಿಗೆ ನಾಂ ಪ್ರಥಮಶಿಷ್ಯನೋ ಅಂತಪ್ಪ ವರದನಾದ ಕಾರ್ತಿಕೇಯಂ ಗೆರಗಿದಪೆಂ, ಮತ್ತಂ ಕನಕಶಕ್ತಿ ಗಂ, ಬ್ರಹ್ಮಣ್ಯಂಗಂ, ಭಾಸ್ಕರನಂದಿಗಂ, ದೇವದೇವ ವ್ರತಂಗಂ, ಮಣಿದ ಪೆಂ. ಪರಿತುಷ್ಟನಾದಾ ಸ್ಕಂದಸ್ವಾಮಿಯಿಂ ದೆನಗೀ ಯೋಗವಿದ್ಯೆ ಮುನ್ನ ಮೆ ಯುಪದಿಷ್ಟ ಮಾಗಿರ್ಕುಂ.

ಅದರಿಂ. ಕಂ॥ ಇನ್ನೀ ಯುಪಾಯಮಂ ತಳೆ
ದೆನ್ನಂ ಪುರ ಪಾಲರಾರು ಮೀಕ್ಷಿಸಲಾರರ್॥
ಸನ್ನುತ ಶಸ್ತ್ರಂ ತನುವೊಳ್
ನನ್ನಿ ಯುರುಳ್ದಿ ಮಡು ರುಜೆಯನಾಗಿಸದಲ್ತೇ॥ ೬೨॥

(ಅಂತೆಸಗಿದಪೆಂ) ಚಿಃ! ಕಷ್ಟಂ. ಅಳತೆಯ ನೂಲಂ ಮರೆದುಬಂದೆಂ. (ಯೋ ಚಿಸಿ) ಆಃ! ಇದೋ ಯಜ್ಞೋಪವೀತಮೇ ಅಳತೆಯೆಳೆ ಯಾದಪುದು. ಬ್ರಾಹ್ಮ ಣಂಗೀ ಜನ್ನವಾರಂ ಸಮಯದೊಳ್ ಮಹೋಪಕಾರಮನೊಡರ್ಚುಗುಂ. ಅದ ರೊಳಂ ಎಮ್ಮನ್ನರ್ಗೆ ವಿಶೇಷಮಾಗಿ ಯುಪಯೋಗಿಕುಂ-

ಎಂತೆನೆ:—ಕಂ॥ ಇದರಿಂ ತೊಡವಂ ತೆಗೆದಪ,
ರಿದರಿಂದಂ ಕುಡ್ಯದಲ್ಲಿ ಸಂದಿಯು ನಳೆವರ್,
ಇದು ಕದ ದಗುಳಿಯು ನೆಳೆಯು
ಲ್ಕಿದೆ ಚೇಳೋ ಪಾವೊ ಕಚ್ಚೆರ್ ಕಟ್ಟಲ್ಕಕ್ಕುಂ ॥ ೬೩॥

ಅಳಿದು ಕಜ್ಜಮುಂ ಮಾಡಲ್ತೊಡಗಿದಪೆಂ. (ಅಂತೆಸಗಿನೋಡಿ) ಇನ್ನುಮೀ ಗಂಡಿಗೆ ಯೊಂದಿಟಕೆ ಯುಳಿದಿರ್ಕುಂ. ಅಹಹ!! ! ಪಾವ್ ಕಚ್ಚಿದುದು. (ಯಜ್ಞೋಪವೀತದಿಂ ಬೆರಲಂ ಕಟ್ಟಿ ನಂಜಿನ ವೇಗಮನಭಿನಯಿಸಿ) ಇದ ಕೌಷಧಮಂ ಮಾಡಿ ಸ್ವಸ್ಥನಾದಪೆಂ. (ಅಂತೆಸಗಿಮತ್ತಂ ತೋಡಿನೋಡಿ.) ಎಲೆ ದೀಪಂ ಬೆಳಗಿದಪ್ಪುದು. ಅದೆಂತೆನೆ:—

ಕಂ॥ ಪೊಂಬಣ್ಣದ ದೀವಿಗೆ ಯುರಿ
ಕುಂಭಿನಿಯೊಳ್ ಸಂಧಿಯಿಂದೆ ಪೊರಬಂದು ತಮಂ
ತುಂಬಿರೆ ಯುದರೊಳ್ ಮೆರೆಗುಂ
ಚೆಂಬೊನ್ನದ ರೇಖೆಯಂತೆ ನಿಕಷೋಪಲದೊಳ್॥೬೪॥

(ಮತ್ತಂ ಕಜ್ಜಮನೊಡರ್ಚಿ.) ಮುಗಿದು ದೀಸಂಧಿಯುಂ, ಪೊಕ್ಕಪೆಂ, ಮೇಣಾನಿತರೊಳ್ ಪುಗದೆಯೇ ಪುರುಷರಿರ್ಪರೇನೋ ನಿಟ್ಟಿಪೆಂ (ಅಂತೆಸಗಿ) ಎಲಾ ಇದೇನಾರುಮಿಲ್ಲಂ? 'ನಮಃ ಕಾರ್ತಿಕೇಯಾಯ' (ಎಂದು ಪೊಕ್ಕು ನೋಡಿ) ಎಲೆ ಯಿರ್ವರ್ ರೊರಗಿರ್ದಪರ್. ಅಕ್ಕೆ, ಆತ್ಮರಕ್ಷಣಾರ್ಕ್ಕೋಸುಗ ಮೀಬಾಗಿಲಂ ತೆರೆದಪೆಂ. ಇದೇಂ ಕದಂ ಕೂಗುವುದು - ಮನೆ ಯೆಲ್ಲಂ ಪಳೆಯದಾಗಿರ್ಕುಂ; ಇರ್ಕೆ ಆನಿತರೊಳ್ ನೀರಂ ತಡಕಿದಪೆಂ - ನೀರೆತ್ತಲಿರ್ಕ್ಕುಂ? (ಇತ್ತಲತ್ತಲ್ನೋಡಿ ನೀರಂ ತಂದು ಬಿಡುತೆ, ಭಯದಿಂ) ನೆಲದೊಳ್ಬೀಳ್ದು ಡುಲಿದಪ್ಪುದು- ಅದರಿಂದನಿತ ರೊಳಿಂತಕ್ಕೆ- (ಪಿಂದೆ ನೋಡು ತೊಯ್ಯನೆ ಕದಮಂತೆರೆದು-) ಈಗಳಿವರಂ ಪರಿಕಿಪೆಂ-ದಿಟಮಾಗಿನಿದ್ದೆಗೈದಪರೋ? ಅಥವಾ ಎಚ್ಚರಿಂ ಲಕ್ಷ್ಯ ಮಾಂತಿರ್ಪರೋ? ತಿಳಿಯಲ್ವೇಳ್ಕುಂ,(ಅಂಜುತೆ ಪರೀಕ್ಷಿಸಿ) ಎಲಾ! ಇವರೀರ್ವರುಂ ನಿಶ್ಚಯಮಾಗಿಯೆನಿದ್ರಿಪರೆಂತೆನೆ.-

ವೃ॥ಆರಯೆನಿದ್ದೆಗೈದಪರಿವರ್ನಿಡುಸುಯ್ಯದು ಮೊಯ್ಯನಾದಪರ್ದಾ
ತಾರಕೆಗಳ್ಮಲಂ ಚಲಿಸದಿರ್ಪುವು ಕಣ್ಣೆವೆಮುಚ್ಚೆ ಮಧ್ಯದೊಳ್॥
ಮೀರಿತು ಸಜ್ಜೆಯಂ ತನು ಪೊರಳ್ದು ಸಡಿಲ್ದಿರೆ ಯಂಗಸಂಧಿಗಳ್,
ಸೈರಿಪ್ಪುದೆಂತೊ ದೀಪಮಿದಿ ರಲ್ಲಿರೆ ಕೃತ್ರಿಮನಿದ್ರೆಯಾಗಿರಲ್॥

(ಎಲ್ಲೆಡೆಯುಂ ನೋಡಿ) ಎಲೆ! 'ಇದೇನಿತ್ತಮೃದ್ದಳೆ, ಇದೋ ದರ್ದುರಂ, ಇದೋ ಕೊಳಲು ಮಿರ್ಕ್ಕುಂ, ಇದೋ ಅತ್ತಲಾವುಜಂ, ಬಂಚರಮುಂ,

ಕಾಣಬರ್ದು, ಇವೆಲ್ಲಂ ಪುಸ್ತಕಂಗಳ್; ಇದೇಂ ನಾಟ್ಯಾಚಾರ್ಯನ ಮನೆಯೋ? ಮೇಣಾನೇಯಾಕಾರ ಕಾಣಿವಟ್ಟು ಬಂದೆನೋ? ಆದೊಡಿವನೇಂ ದಿಟವಾಗಿ ದರಿದ್ರನಕ್ಕುಮೋ? ಅಥವಾ ರಾಜಭಯದಿಂದೆಯೋ ತಸ್ಕರತ್ರಾಸದಿಂದೆಯೋ ಪೊಡವಿಯೊಳ್ ಪಣವಂ ಬೈಚಿಟ್ಟಿರಲುಕ್ಕುಂ- ಆದೊಡೆ ನಗಂ ಶರ್ವಿಲಕಂಗೆ ಭೂಮಿಷ್ಠದ್ರವ್ಯಂ ತಾನಾಗಲಾರ್ಪುದು- ಇದೊ ಬೀಜವಂ ಚಿಂಮಿದಪೆಂ. (ಅಂತೆಸಗಿ-) ಚಿಮ್ಮಿದಬಿತ್ತು ಮತ್ತೆಲ್ಲಿಯುಂ ಬಿತ್ತರವಾಗಲಿಲ್ಲಂ. ಆದುದರಿಂ ದೀತಂ ಪರಮಾರ್ಥದರಿದ್ರನೇ ಅಕ್ಕುಂ, ಇನ್ನುಪೋದಪೆಂ.

ವಿದೂ॥ (ಕನವರಿಸುವನು.) ಅಯ್ಯಾಮಿತ್ರನೇ! ಕನ್ನ ಗಂಡಿಯಂತೆಯೂ, ಕಳ್ಳನಂತೆಯೂ, ಕಾಣಿಸುತ್ತೆ- ಅದ್ದರಿಂದೀಯೊಡವೆಗಳಗಂಟನ್ನು ನೀನೇ ತೆಗದುಕೋ.

ಶರ್ವಿಲಕಂ:—ಒಳಪೊಕ್ಕೆನ್ನಂ ಕಂಡು ತಾಂ ದರಿದ್ರನೆಂದು ಇವನೇಂ ಪರಿಹಾಸಂಗೈದಪನಲ್ತೆ? ಅದರಿಂದಿವನಂ ಕೊಂದಪೆನೊ? ಅಲ್ಲದೆ ನಿದ್ರಾವಶದಿಂ ಕನವರಿಪನೊ? (ನೋಡಿ) ಎಲಾ! ಇದೋ ಜೀರ್ಣವಾದಸ್ನಾನದಂಗವಸ್ತ್ರದೊಳ್ ಕಟ್ಟಿರ್ದ ಚಿನ್ನದೊಡವೆ ನಿಸದವಾಗಿ ದೀಪಪ್ರಭೆಯಿಂ ಮಿರುಗಿದಪ್ಪುದು- ತೆಗದು ಕೊಂಡಪೆಂ- ಅಥವಾ ಇದು ಸರಿಯಲ್ತು. ಎಮ್ಮನ್ನನಾದ ಕುಲಪುತ್ರನಂ ನೋಯಿಸಲಾಗದು. ಅದರಿಂ ಪೋದಪೆಂ-

ವಿದೂ॥ ಅಯ್ಯಾಮಿತ್ರನೇ! ಈ ಸುವರ್ಣಭಾಂಡವನ್ನು ನೀನು ತೆಗದುಕೊಳ್ಳದೇ ಹೋದರೆ, ಗೋಬ್ರಾಹ್ಮಣರ ಮನೋರಥಭಂಗವನ್ನು ಮಾಡಿದಪಾಪವು ಬಂದೀತು.

ಶರ್ವಿ:— ಗೋಮನೋರಥಂ, ವಿಪ್ರಮನೋರಥಮುಂ ಮೀರಲಾಗದು- (ಅದರಿಂ ತೆಗೆದುಕೊಂಡಪೆಂ) ಆದೊಡೆ, ದೀಪಂ ಬೆಳಗುಗೊಂಡಪ್ಪುದು- ಅದನಾರಿಸಲಗ್ನೇಯವಾದ ಕೀಟಮೆನ್ನೆಡೆಯೊಳಿರ್ಕ್ಕುಂ, ಅದರಿಂದೀಪವಂ ನಂದಿಸಲಿದು ಪೊಳ್ತು- (ಪುಳುವಂಬಿಟ್ಟು) ಇದೋ ಈ ಭದ್ರಪೀಠವೆಂಬ ಪುಳು ದೀವಿಗೆಯ ಮೇಲೆ ಪಲುಬಗೆಯಾಗಿ ಮಂಡಲಂಗೊಂಡು ಸುಳಿವುತ್ತೆ ಎರಳ್ಪಕ್ಕಗಳೆಲರಿಂ ದೀಪಮನಾರಿಸಿದತ್ತು- ಆಹ! ಕಗ್ಗತ್ತಲೆ ಮುಸುಕಿದುದು, ಇದೇನಚ್ಚರಿಯಂ.? ಎನ್ನಿಂದೆಮ್ಮ ಬ್ರಾಹ್ಮಣಕುಲವೆಲ್ಲಮುಂ ಕತ್ತಲೆ ಯನಾವರಿಸಿದುದಲ್ತೆ- ನಾನಾದೊಡೆ ಚತುರ್ವೇದವೇತ್ತಾರನಾದ, ಪ್ರತಿಗ್ರಹಪರಾಙ್ಮುಖನಾದ ಓರ್ವ ವಿಪ್ರಂಗೆ ಮಗನಾಗಿಯುಂ ಶರ್ವಿಲಕನೆಂಬ ಪೆಸರಿಂ ಲಬ್ಧವರ್ಣನಾಗಿಯುಂ, ವೇಶ್ಯೆಯಾದ ಮದನಿಕೆ ಗೋಸುಗಮೀ ಈ ಕೆಡುಕಜ್ಜಮನನುಷ್ಠಿಸಿದಪೆಂ- ಈಗಳೀ ಬ್ರಾಹ್ಮಣನಿಷ್ಟಸಿದ್ಧಿಯಂ ಗೈದಪೆಂ- (ಎಂದು ತೆಗೆಯಲೊಡರ್ಚಿದಪಂ)

ವಿದೂ॥ ಅಯ್ಯಾಮಿತ್ರನೇ! ನಿನ್ನ ಕೈಯು ತಣ್ಣಗಿರುವದು-

ಶರ್ವಿ:— ಛೀ! ಪ್ರಮಾದಂ, ನೀರಂ ಸೋಂಕಿದುದರಿಂದೆನ್ನ ಕೈ ಶೀತಳಮಾದುದು, ಅದರಿಂ ಕಂಕುಳೊಳಿಟ್ಟು ಬೆಚ್ಚನೆಗೈದಪೆಂ (ಅಭಿನಯದಿಂ ಕೈಯನುಷ್ಣಮಂಗೈದು ತೆಗೆದು ಕೊಂಡಪಂ.

ವಿದೂ॥ ತೆಗದುಕೊಂಡೆಯೊ?

ಶರ್ವಿ:— ಈ ಬ್ರಾಹ್ಮಣಾನುಗ್ರಹಂ ಮೀರಲಾಗದು- ಅದರಿಂ ತೆಗೆದೆಂ-

ವಿದೂ॥ ಈಗ ಪದಾರ್ಥವನ್ನು ಸರಿಯಾದ ಬೆಲೆಗೆ ಮಾರಿದ ವರ್ತಕನಹಾಗೆ ನಿಶ್ಚಿಂತೆಯಾಗಿ ನಿದ್ದೆ ಹೋಗುವೆನು-

ಶರ್ವಿ:— ಎಲೆ ಮಹಾಬ್ರಾಹ್ಮಣನೇ! ನೂರ್ವರ್ಷ ಮೊರಗಿರ್ಪೈ- ಕಷ್ಟಂ! ಮದನಿಕೆಯೆಂಬ ಗಣಿಕೆಗೋಸುಗಂ ಬ್ರಾಹ್ಮಣ ಕುಲಮೀ ಅಂಧಂತಮದೊಳ್ ಕೆಡೆದುದು- ಮೇಣಾನೇಬೀಳ್ದೆಂ-

ಕಂ॥ ಕಡುಗಲಿತನ ಮಣವಿಲ್ಲದ
ಬಡತನಮದು ಛೀ! ನರರ್ಗ್ಗೆ ಪಲುಕೆಡುಕಲ್ತೇ
ನಡೆ ನೋಡೆ ಪಾಪಮೆಂದರಿ
ದೊಡಮೀ ಕಜ್ಜಮನೊಡರ್ಚ್ಚಿ ಮೇಣ್ಪಳಿದಪೆನಾಂ॥ ೬೬॥

ಅದರಿಂದೀಗಳ್ ಮದನಿಕೆಯುಂ ಕೊಂಡು ಕೊಳಲ್ ವಸಂತಸೇನೆಯ ಮನೆಗೆ ಪೋದಪೆಂ- (ಅಡಿಯಿಟ್ಟು ನೋಡಿ) ಎಲೆ ಅಡಿಯುಲಿವಪ್ಪಂತೆ ತೋರ್ಕ್ಕುಂ- ರಾಜಪುರುಷರಲ್ತು- ಆದೊಡಂ, ಸ್ತಂಭಿಸಿನಿಂದಪೆಂ - ಅಥವಾ ಶರ್ವಿಲಕನಾದೆನ್ನಂ ರಕ್ಷೆಗಳೇಂ ಗೈದಪರ್? ಆನಾದೊಡೆ:—

ವೃ॥ ನಡೆವುದರಲ್ಲಿ ಬೆಕ್ಕು, ಮಿಗೆ ಓಟದೆ ಪುಲ್ಲೆ, ಕದುರ್ಂಕಿ ಕುತ್ತಿನೊಳ್
ಗಿಡಗ, ಮಸುಪ್ತಸುಪ್ತಜನನಿರ್ಣಯದೊಳ್ ಶ್ವನಿ, ವಾಣಿಮಾತಿನೊಳ್,
ಕುಡುನಡೆಯಲ್ಲಿ ಪಾವುಡಲವೇಷದೆ ಮಾಯೆ, ಜ್ಯೋತಿ ರಾತ್ರಿಯೊಳ್,
ಡುಡುಭಮೆ ದುರ್ಗದಲ್ಲಿ, ನೆಲದಲ್ಲಿ ಹಯಂ, ಜಲದೊಳ್ಪ ಹಿತ್ರಮೇ॥ ೬೭॥

ಮತ್ತಂ॥ ಕಂ॥ ಚಲನದೆಪ್ಪಣೆ, ಸ್ಥಿರತೆಯೊಳ್
ಶಿಲೋಚ್ಚಯಂ, ಲಕ್ಷ್ಯದೃಷ್ಟಿಯೊಳ್ ಗರುಡಂ, ಮೇಣ್॥
ಬಲದೊಳ್ಸಿಂಗಂ, ನೋಟದೆ
ಮೊಲಂ, ಗ್ರಹಣದೆ ವೃಕ, ಮಿಪ್ಪೆ ದೆಂತಂ ತಿರ್ಪೆಂ॥ ೬೮॥

[ರದನಿಕೆಯೆಂಬ ಚೇಟಿಯು ಬರುವಳು]

ರದನಿಕೆ॥ ಓಹೋ! ಹೋ! ವರ್ಧಮಾನಕನು ಹೊರಗೆ ಮಲಗಿದ್ದನು, ಅವನನ್ನು ಕಾಣೆನು- ಆಗಲಿ, ಮೈತ್ರೇಯನನ್ನು ಕರೆಯುವೆನು- (ಎಂದು ತಿರುಗುವಳು)

ಮೃಚ್ಛಕಟಿಕಪ್ರಕರಣದಲ್ಲಿ,

ಶರ್ವಿ:—(ರದನಿಕೆಯಂ ಕೊಲ್ಲಲೆಳಸುವಂ, ಬಳಿಕತೋರಿಸಿ) ಇದೇಂ ಪೆಣ್? ಕೊಲ್ಲಲೇತಕೆ? ಪೋದಪೆಂ-(ಎಂದುಪೊರಮಟ್ಟಂ)

ರದನಿಕೆ॥ (ಭಯದಿಂ ಬಂದು-)ಓಹೋಹೋ! ! ನಮ್ಮಮನೆಗೆ ಕನ್ನವನ್ನಿಕ್ಕಿ ಕಳ್ಳನು ಓಡಿಹೋಗುತ್ತಾನೆ. ಆಗಲಿ- ಮೈತ್ರೇಯನನ್ನು ಎಬ್ಬಿಸುವೆನು. (ವಿದೂಷಕನ ಬಳಿಗೆಬಂದು) ಆರ್ಯ ಮೈತ್ರೇಯನೇ! ಏಳು ಏಳು ನಮ್ಮಮನೆಗೆ ಕನ್ನವನ್ನಿಕ್ಕಿ ಇದೋ ಕಳ್ಳನು ಓಡಿ ಹೋಗುತ್ತಿದ್ದಾನೆ.

ವಿದೂ॥ (ಎದ್ದು) ಆ! ಏನೇ ತೊತ್ತಿನಮಗಳೆ? ಕಳ್ಳನ್ನಿಕ್ಕಿ ಕನ್ನವೂ ಓಡಿಹೋಯಿತೆ?

ರದನಿ॥ ಹತಾಶನೇ? ಹಾಸ್ಯವು ಸಾಕು. ನೀನೇನೂನೋಡಲಿಲ್ಲವೆ?

ವಿದೂ॥ ಆ! ಯೇನು ಹೇಳಿದಿ! ಎರಡನೆಯ ಬಾಗಿಲು ತೆರದಂತೆಕಾಣಿಸುವದೆಂದೊ? ಅಯ್ಯಾ ಮಿತ್ರನಾದ ಚಾರುದತ್ತನೇ! ಏಳು ಏಳು, ನಮ್ಮಮನೆಗೆ ಕನ್ನವಿಕ್ಕಿ ಚೋರನು ಓಡಿಹೋದನು.

ಚಾರು:—ಎಲೆ, ಸಾಲ್ಗುಮೀಪರಿಹಾಸಂ.

ವಿದೂ॥ ಇದು ಹಾಸ್ಯವಲ್ಲವು- ನೀನೇನೋಡು-

ಚಾರು:—ಆವೆಡೆಯೊಳ್?

ವಿದೂ॥ಅಯ್ಯಾ! ಇದೋನೋಡು-

ಚಾರು:—(ಕಂಡು)ಆಹ! ಈಸಂಧಿಯುಂನೋಡಲ್ತಕ್ಕುದು-

ಕಂ॥ಉರುಳಿ ಸುತಿ ಟಿಕೆಯುಮೇಲಿಂ
ಶಿರದೆಡೆಯೊಳ್ಕವೆದು ನಡುವೆ ಬಿತ್ತರಮೆನಿಸು
ತ್ತಿರೆ ಬಿರಿದಿರ್ದ್ದಪ್ಪುದನುಚಿತ
ನರ ಪ್ರವೇಶ ಭಯದಿಂದಿನ ಲ್ಗೃಹಕುಡ್ಯಂ॥ ೧೯ ॥

ಅದೆಂತೀಕಜ್ಜಗೊಳಂ ಕೌಶಲ್ಯಂ?

ವಿದೂ॥ ಅಯ್ಯಾಮಿತ್ರನೇ! ಈಕನ್ನವನ್ನು ಇಬ್ಬರೇ ಮಾಡಿರಬಹುದು. ಮತ್ತು- ಹೊಸಬನೋ, ಕೆಲಸವನ್ನು ಕಲಿತು ಕೊಳ್ಳುವನೋ, ಆಗಿರಬೇಕು- ಇಲ್ಲದಿದ್ದರೆ ಈ ಉಜ್ಜಯಿನೀ ಪಟ್ಟಣದಲ್ಲಿ ನಮ್ಮ ಮನೆಯ ಸಂಪತ್ತನ್ನು ಯಾರು ತಾನೇ ಕಾಣರು?.

ಚಾರು:— ವೃ॥ ಕಳವಂ ಕಲ್ತಪನಿಂ ವಿದೇಶಭವನಿಂದಾಗಿರ್ಕುಮೀಸಂಧಿ ತಾಂ
ತಿಳಿಯಂ ಮದ್ಗೃಹಮಂ ವಿಹೀನಧನಮಂ, ವಿಸ್ರಂಭದಿಂ ಸುಪ್ತರಂ
ತಳೆದಂ ಮುನ್ನ ಪಿರಿದಾಶೆಯಂ ನಿರುಕಿಸುತ್ತಸ್ಮನ್ಮಹಾಶಾಲೆಯಂ
ಬಳಲ್ದಂ ಕನ್ನಮನಿಕ್ಕಿಯೇ ಬಳಿಕವಂ ನೈರಾಶ್ಯದಿಂ ಪೋದನೈ ॥ ೨೦॥

ಆದುದರಿಂದಾ ತಪಸ್ವಿ ತಾಂ ತನ್ನಗೆಳೆಯುಗ್ಗೇನನುಸಿರ್ದಪನೊ? ಸಾರ್ಥವಾಹ ಪುತ್ರನಮನೆಗೆಪೊದೊಡೆ ವಿ.ನಿಸಂ ಪಣಮೆನಗೆ ದೊರೆಯಲಿಲ್ಲವೆಂದು ಪೇಳ್ದಪನಕ್ಕುಂ.

ವಿದೂ॥ ಅಯ್ಯಾ! ಆ ಕೆಟ್ಟಕಳ್ಳನನ್ನು ಕುರಿತೇತಕ್ಕೆ ಅನುತಾಪಪಡುತ್ತೀಯೆ? ಅವನಾ ಇಮ ದೊಡ್ಡಮನೆಯು, ರತ್ನಭಾಂಡವೋ? ಸುವರ್ಣಭಾಂಡವೋ, ಗೊರತೀತಂದೇ ಯೋಚಿಸಿಬಂದು ಏನೂ ಇಲ್ಲದೇ ಹೊರಟು ಹೋದನಾದೀತು (ನೆನಸಿಕೊಂಡು ವ್ಯಸನದಿಂದ ಮನಸ್ಸಿನಲ್ಲಿ) ಆವೊಡವೆಯು ಗಂಟಿಲ್ಲಿ? (ಮರಳಿ ಜ್ಞಾಪಿಸಿಕೊಂಡು, ಬಹಿರಂಗವಾಗಿ) ಅಯ್ಯಾ ಮಿತ್ರನೇ! ನೀನು ಯಾವಾಗಲೂ ನನ್ನನ್ನು "ಮೂರ್ಖನು ಮೈತ್ರೇಯನು, ಧಡ್ಡನು ಮೈತ್ರೇಯನು" ಎಂದು ಹೇಳುತ್ತಿದ್ದಿ. ಈಗನೋಡು ಆ ಸುವರ್ಣಭಾಂಡವನ್ನು ನಿನ್ನ ಕೈಗೆಕೊಟ್ಟದ್ದರಿಂದಲ್ಲವೇ ನಾನೂ ಬುದ್ಧಿವಂತನಾದೆನು. ಇಲ್ಲದಿದ್ದರೆ ಈ ಕಳ್ಳತೊತ್ತಿನ ಮಗನು ಕದ್ದುಕೊಂಡೇ ಹೋಗುವನು.

ಚಾರು:—ಸಾಲ್ಗುಂ, ಸಾಲ್ಗುಂ, ಪರಿಹಾಸಂ.

ವಿದೂ॥ ಅಯ್ಯಾ! ನಾನೇನಂಥಾ ಮುಗ್ಧನೇ? ಹಾಸ್ಯಕ್ಕಾದರೂ ನನಗೇನು ಹೊತ್ತೂ ಗೊತ್ತೂ ತಿಳಿಯದೆ?

ಚಾರು:—ಆದೊಡಾವಾಗಳಿತ್ತೆಯ?

ವಿದೂ॥ ಅಯ್ಯಾ! 'ನಿನ್ನಕೈತಣ್ಣಗಿದೆ' ಯೆಂದು ಹೇಳಿದೆನೇ? ಆಗಲೇ ಕೊಟ್ಟೆನು.

ಚಾರು:—ಎತ್ತಾನುಮಿಂತು ಮಾಗಿರ್ಕುಂ (ಎಲ್ಲೆಡೆಯನು ನೋಡಿ ಸಂತಸದಿಂದಂ) ವಯಸ್ಯನೇ! ಸಂತಸದಿಂ ನಿನಗೆ ನಲ್ಮೆಯಂ ಪೇಳ್ದಪೆಂ.

ವಿದೂ॥ ಹೋಗಲಿಲ್ಲವಷ್ಟೆ?

ಚಾರು:—ಪೋದುದು,

ವಿದೂ॥ ಆದರೆ ಇನ್ನು ನಲ್ಮೆಯೇನು?

ಚಾರು:—ಅವಂ ಕೃತಾರ್ಥನಾದನಲ್ತೆ?

ವಿದೂ॥ ಅಯ್ಯಾ! ಅದು ಹೆರವರಿಟ್ಟು ಹೋದದ್ದಲ್ಲವೆ?

ಚಾರು:—ನ್ಯಾಸಮೇಂ!' (ಮೋಹಮನೊಂದುವಂ)

ವಿದೂ॥ ಸಮಾಧಾನವಾಗು! ! ನ್ಯಾಸವು ಕಳ್ಳನನ್ನು ಹೊಂದಿತು, ಮೋಹವು ನಿನ್ನನ್ನು ಹೊಂದಿತು.

ಚಾರು:—(ತೆಪ್ಪತ್ತುಕೊಂಡು) ಅಯ್ಯಾ! ಗೆಳೆಯನೇ!

ಕಂ॥ ಖಿನ್ನಿಯುನಿದ ನಾರ್ನಂಬುವ
ರೆನ್ನಂ ಜನಮೆಲ್ಲ ತೂಲರೇಣುವೊಲರಿವಲ್'

ಪನ್ನತಿಕೆ ಯಿಲ್ಲದಾಕಿಂ
ಚನ್ನ್ಯವೆ ಜಗದಲ್ಲಿ ಸಂಡೆಗಕ್ಕೆಡೆಯಲ್ತೇ॥೭೧॥

ಅಯ್ಯೋ! ಕಷ್ಟಂಕಷ್ಟಂ.

ಕಂ॥ ನೀಯತಿಗೆ ಮಹೀಯ ಧನದೊಳ್
ಬಯಕೆಯ ದೂದತ್ತು ಮತ್ತೆ ಮಿಂತಾದೊಡವೇಂ
ದಯೆಯಿಲ್ಲ ಪಾವಿಧಿಯ ನೆ
ನ್ನಯ ಚರಿತ ಮಿದೀಗಳೆಂತು ದೂಷಿತಮಕ್ಕುಂ॥೭೨॥

ವಿದೂ॥ ಅಯ್ಯೋ! ನಾನೇ ಅಪಲಾಪಮಾಡುತ್ತೇನೆ. ಯಾರುಕೊಟ್ಟರು? ಯಾರುತೆದುಕೊಂಡರು? ಸಾಕ್ಷಿಯಾರು? ಎಂದು

ಚಾರು:—ಆಂ ಪುಸಿಯ ಲಾರೆಂ

ಕ॥ ಎರೆದಾ ದೊಡ ಮಾಂ ಪಡೆವೆಂ
ಮರಳ್ದು ಮಲಂಕಾರ ಕದಕೆ ಪಡಿಯಾಗಿಸುವೆಂ
ಕರ ಮನೃತಮ ಸಾನುಸಿರೆಂ
ಚರಿತ್ರ ನಾಶಕ್ಕೆ ಕಾರಣಂ ತಾನದು ದಲ್॥೭೩॥

ರದನಿಕೆ॥ ನಾನಷ್ಟರಲ್ಲಿಯೇ ಹೋಗಿ ಅಮ್ಮನವರಿಗೆ ಹೇಳುತ್ತೇನೆ
(ಎಂದುಹೊರಟು ಹೊದಳು.)

[ಬಳಿಕ ಚೇಟಿಯಿಂದೊಡಗೂಡಿ ಚಾರುದತ್ತವಧುವು ಪುಗುವಳ್]

ವಧು॥ (ತ್ವರೆಯಿಂದ) ಎಲೇ! ದಿಟವಾಗಿ ಆರ್ಯ ಪುತ್ರನೂ, ಆರ್ಯಮೈತ್ರೇಯನೂ ಕೂಡ, ಗಾಯವಿಲ್ಲದವರಾಗಿರುವರಷ್ಟೆ?

ಚೇಟಿ॥ ದಿಟವಾಗಿ ಗಾಯವೇನೂ ಇಲ್ಲವು. ಆದರೆ ಆಸೂಳೆಯ ಅಲಂಕಾರವೆಲ್ಲವು ಹೋಯಿತು.

ವಧು॥ (ಮೂರ್ಛೆ ಹೋಗುವಳು.)

ಚೇಟಿ॥ ಸಮಾಧಾನಪಡು ಅಮ್ಮಾ! ಸಮಾಧಾನಪಡು

ವಧು॥ (ಉಸುರಾರಿಸಿಕೊಂಡು.) ಎಲೇ! ಏನು ಹೇಳಿದಿ? ಆರ್ಯಪುತ್ರನಿಗೆ ಗಾಯವಾಗಲಿಲ್ಲವೆಂದೋ? ಆದರೆ ಒಳ್ಳೆಯದಾಯ್ತು. ಈಗ ಆತನಮೈಗೆ ಗಾಯವಾದರೂ ನಡತೆಗೆ ಮಾತ್ರಲೋಪ ಬರಬಾರದು. ಈಗಲಾದರೋ ಯಾವುಜ್ಜಯಿನಿಯಲ್ಲಿ ಯೆಲ್ಲರೂ 'ಆರ್ಯಪುತ್ರನು ಬಡವನಾದ್ದರಿಂದ ಇಂಥಾ ಕೆಟ್ಟಕೆಲಸವನ್ನು ಮಾಡಿದನು, ಎಂದು ಯೋಚಿಸುತ್ತಾರಾದೀತು. (ಮೇಲೆ ನೋಡಿನಿಟ್ಟುಸಿರುಬಿಟ್ಟು) ಅಯ್ಯೋ! ಭಗವಂತನಾದ ಕೃತಾಂತನೇ! ತಾವರೆಯೆಲೆಯ ಮೇಲೆ ಬಿದ್ದ ನೀರಿನ ಹನಿಯಂತೆ ಚಪಲವಾದ ಈಬಡವರ ಭಾಗ್ಯದಿಂದಲಾಟವಾಡು

ತ್ರೇಯಲ್ಲವೆ? ಇದೋ ಇದೊಂದು ರತ್ನಾವಳಿಯು ನಮ್ಮ ತಾಯಿಯ ಮನೆಯಲ್ಲಿ ಕೊಟ್ಟದ್ದು ಹಾಗೆಯೇ ಇದೆ. ಆರ್ಯಪುತ್ರನು ಬಹುತ್ಯಾಗಿ ಯಾದ್ದರಿಂದ, ಈ ರತ್ನಾವಳಿಯನ್ನಾದರೂ ತೆಗದುಕೊಳ್ಳ ತ್ತಾನೋ ಯಿಲ್ಲವೊ? ಎಲೆ! ಆರ್ಯಮೈತ್ರೇಯನನ್ನು ಕರೆಯಿ;

ಚೇಟಿಯು॥ ಅಮ್ಮನ ಅಪ್ಪಣೆಯಂತೆ ಆಗಲಿ (ಎಂದು ವಿದೂಷಕನ ಬಳಿಗೆ ಬಂದು) ಆರ್ಯಮೈತ್ರೇಯನೇ! ಧೂತಾದೇವಿ ನಿನ್ನನ್ನು ಕರೆಯುತ್ತಾಳೆ.

ವಿದೂ॥ ಎಲ್ಲಿ? ಆಕೆಯು.

ಚೇಟಿಯು॥ ಇದೋ ಅಲ್ಲಿದ್ದಾಳೆ. ಬಾ.

ವಿದೂ॥ (ಬಂದು.) ನಿನಗೆ ಶುಭವಾಗಲಿ-

ವಧು॥ ನಮಸ್ಕಾರ ಮಾಡುತ್ತೇನೆ. ಆರ್ಯನೇ! ಈಕಡೆ ತಿರುಗಿ ಯೆದುರಿಗೆ ಬಾ.

ವಿದೂ॥ ಇದೋ ಬಂದೆನು.

ವಧು॥ ಅಯ್ಯಾ! ಇದರನ್ನು ತೆಗದುಕೋ.

ವಿದೂ॥ ಇದೇನು?

ವಧು॥ ಅಯ್ಯಾ! ನಾನು ರತ್ನಷಷ್ಠೀವ್ರತವನ್ನು ಮಾಡಿ ಯಿದ್ದೆನು. ಅದಕ್ಕಾಗಿ ಯೋಗ್ಯತಾನುಸಾರವಾಗಿ ಬ್ರಾಹ್ಮಣಗೆ ರತ್ನವನ್ನು ಕೊಡಬೇಕಾಗಿತ್ತು. ಆದ್ದರಿಂದ ಈ ರತ್ನಾವಳಿಯನ್ನು ತೆಗದುಕೋಬೇಕು.

ವಿದೂ॥ (ತೆಗದುಕೊಂಡು.) ಮಂಗಳವಾಗಲಿ. ಹೋಗಿ ಪ್ರಿಯ ಮಿತ್ರನಿಗೆ ಹೇಳುತ್ತೇನೆ.

ವಧು॥ ಅಯ್ಯಾ ಮೈತ್ರೇಯನೇ! ನನಗೆ ನಾಚಿಕೆ ಯಾಗುವಂತೆ ನೀನು ಮಾಡಬಾರದಷ್ಟೆ. (ಎಂದು ಹೊರಟು ಹೋದಳು)

ವಿದೂ॥ (ಆಶ್ಚರ್ಯದಿಂದ.) ಆಹ! ಇದೇನಾಕೆಯ ಧಾರಾಳವು?

ಚಾರು:— ಎಲಾ! ಮೈತ್ರೇಯನೇ ನಿನ್ನುಂ ಬರಲಿಲ್ಲಂ? ಚಪಲತ್ವದಿಂದೆತ್ತಾನುಂ ಕಿಡುಗಜ್ಜಮಂ ಮಾಡುಗುಂ, ಮೈತ್ರೇಯ! ಮೈತ್ರೇಯ!

ವಿದೂ॥ (ಬಳಿಗೆ ಬಂದು) ಇದೋ ಇಲ್ಲಿರುವೆನು. ಇದರನ್ನು ತೆಗದುಕೋ. (ಎಂದು ರತ್ನಾವಳಿಯನ್ನು ತೋರುವನು.)

ಚಾರು:—ಇದೇಂ?

ವಿದೂ॥ ಅಯ್ಯಾ! ಇದು ನಿನಗೆ ಅನುರೂಪಳಾದ ಹೆಂಡತಿ ಯಿದ್ದದ್ದಕ್ಕೆ ಫಲವು.

ಚಾರು:— ಏಂ ಬಾಹ್ಮಣಿ ಯೆನ್ನಂ ದಯೆಗೆಯ್ದಪಳೊ? ಕಷ್ಟಂ. ಈಗಳೆಂ ದರಿದ್ರನಾದಪೆಂ. ಎಂತೆನೆ—ಕಂ॥ ಕರಗಲ್ ತನ್ನಯ ಪುಣ್ಯಾದಿ

ಸುರುಧನಮಾ ಬಳಿಕೆ ಬಾಳ್ದೊಡಬಲಾ ಧನದಿಂ
ಪುರುಷನೆಮಡದಿ ಯೆ ನಿಕ್ಕಂ
ಕರಮರ್ಥದಿನೆಂತೊ ಅಂತುಮಡದಿಯೆಪುರುಷಂ॥೭೪॥

ನೀನಾಂ ದರಿದ್ರನಲ್ಲಂ. ಎನಗಾದೊಡೆ:—

ಕಂ॥ ಸಿರಿಗನುಸಾರಿಣಿ ಯಾದಳ್
ವರವಧು, ನೀಂಗಳೆಯನಾದೆ ಸುಖದುಃಖಗಳೊಳ್,
ತೊರೆದಿಲ್ಲಂ ಸತ್ಯಮುಮಂ
ದರಿದ್ರರಲ್ಲದುವೆ ನಾಡೆ ದುರ್ಲಭಮಲ್ತೇ॥೨೫॥

ಮೈತ್ರೇಯನೇ! ನೀನೀ ರತ್ನಾವಳಿಯಂ ತೆಗದು ಕೊಂಡು, ವಸಂತಸೇನೆಯ ಬಳಿಗೆ ಪೋಗಿ, ತಾಂಪೇಳ್ದಂತೆ "ಜೂದಾಟದೊಳಾ ಯಲಂಕಾರಂಗಳ್ ಮುಗ್ಗಿತೆಂದು ತಿಳಿದೊಲವಿಂ ಪಣವಿಟ್ಟು ಪೋದುದು. ಅದಕೆ ಪಡಿಯಾಗಿ ರತ್ನಾವಳಿಯಂ ನೀಂತೆಗದು ಕೊಳ್ಳಲ್ವೇಳ್ಕುದು" ಎಂದುಸಿರ್ವೈ.

ವಿದೂ॥ ತಿನ್ನದ, ಉಣ್ಣದ, ಕೊಂಚಬೆಲೆಯಾದ, ಕಳ್ಳರುತೆಗದುಕೊಂಡು ಹೋದ, ಒಡವೆಗೋಸುಗವಾಗಿ; ಚತುಸ್ಸಮುದ್ರಸಾರಭೂತವಾದ ಈರತ್ನಾವಳಿಯನ್ನು ಕೊಡಬಹುದೇ?

ಚಾರು:— ಅಂತೆನಲಾಗದು. ಕಂ॥ ನಂಬುಗೆಯ ನಾವುದನೊ ಆ
ಲಂಬಿಸಿ ಯೆಮ್ಮಲ್ಲಿ ಯಾಕೆ ಯಿಟ್ಟಳ್ತೊಡವಂ
ನಾಂಬಡೆ ತಾವಿದ ನಾಪೆ
ರ್ನಂಬುಗೆಗೋಸುಗಮೆ ಬೆಲೆಯನೀಯಲ್ವೇಳ್ಕುಂ॥೨೬॥

ಆದುದರಿಂ ದಾಪ್ತಮಿತ್ರನೇ! ನೀನಾಕೆಗಿದ ನೊಪ್ಪಿಸದೇ ಯಿಲ್ಲಿಗೆ ಬರಲಾಗದೆಂದು ಮೈಮುಟ್ಟಿ ಯಾಣೆಯ ನಿಟ್ಟಿರುವೆನು. ಎಲೆವರ್ಧಮಾನಕನೇ ನೀನುಂ. ಕಂ॥ ಇರದೀ ಯಿಟ್ಟಿಕೆಗಳಿನೇ
ತ್ವರೆಯಿಂ ಬಂಧಿಸುಗೆ ಸಂಧಿಯಂ ಬಂಧುರಮಂ
ಪರಿವಾದ ಮೆಂಬ ಪೆರ್ಕೇಡು
ಕಿರಲದರಿಂ ಸಂಧಿರಕ್ಷೆಯಂ ಬಿಡಲಾರೆಂ॥೨೭॥

ಮೈತ್ರೇಯನೇ! ನೀನುಂ ಲೋಭವಿಲ್ಲದೆ ಉದಾರವಾಗಿ ನುಡಿಯಲ್ವೇಳ್ಕುದು.

ವಿದೂ॥ ಅಯ್ಯಾ! ದರಿದ್ರನಾದರೆ ಧಾರಾಳವನ್ನು ಯೋಚಿಸುವನೋ?

ಚಾರು:—ಸಖಾಯನೇ ತಾಂದರಿದ್ರನಲ್ಲಂ. ಏಕೆನಲೆನಗೆ ("ಸಿರಿಗನುಸಾರಿಣಿ, ಎಂಬ ಪದ್ಯಮಂ ಪೇಳ್ದಪಂ.) ಇನ್ನುನೀಂಪೋಗಲ್ವೇಳ್ಕುದು, ಆನುಂಮಡಿಯಾಗಿ ಸಂಧ್ಯೋಪಾಸ್ತಿಯಂಗೈದಪೆಂ. [ಇಂತೆಲ್ಲರ್ ಪೊರಮಟ್ಟರ್]

ಇಂತೆಂಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್
ಸಂಧಿ ಚ್ಛೇದ ಮೆಂಬ ಮೂರನೆಯ ಅಂಕಂ
ಮುಗಿದುದು.

ಮೃಚ್ಛಕಟಿಕ ಪ್ರಕರಣಂ.

ಚತುರ್ಥಾಂಕಂ.

[ಬಳಿಕಚೇಟಿಯು ಪ್ರವೇಶಿಸುವಳು.]

ಚೇಟಿಯು॥ ನಮ್ಮಮ್ಮನು "ಅಕ್ಕನ ಬಳಿಗೆ ಹೋಗೆಂದು ಅಪ್ಪಣೆಯನ್ನು ಮಾಡಿರುವಳು. ಇದೋಯಿಲ್ಲಿ ಅಕ್ಕನು ಮದನಿಕೆಯಿಂದ ಕೂಡಿಚಿತ್ತಾರದ ಹಲಗೆಯನ್ನುನೋಡುತ್ತಾ. ಏನನ್ನೋ ಯೋಚಿಸುತ್ತಾ ನಿಂತಿದ್ದಾಳೆ. ಅದರಿಂದಬಳಿಗೆ ಹೋಗುವೆನು. (ಎಂದುನಡೆಯುವಳು.)

[ಬಳಿಕ ವಸಂತಸೇನೆಯು, ಮದನಿಕೆಯೂ, ಮೇಲೆ ಹೇಳಿದಂತೆ ಪ್ರವೇಶಿಸುವರು]

ವಸಂತ॥ ಎಲೆಮದನಿಕೆಯೇ! ಈಚಿತ್ತಾರವು ಆರ್ಯಚಾರುದತ್ತನಿಗೆ ಸಮವಾಗಿರುವದೋ?

ಮದನಿ॥ ಸರಿಯಾಗಿಯೇ ಇದೆ.

ವಸಂತ॥ ಅದರನ್ನು ನೀನು ಹೇಗೆತಿಳಿದಿ?

ಮದ॥ ನಿನ್ನ ನೋಟವು ಬಹುಪ್ರೀತಿಯಿಂದ ಚಿತ್ರಪಟದಲ್ಲಿ ದೆಯಾದಕಾರಣದಿಂದ

ವಸಂತ॥ ಎಲೆಮದನಿಕೆ! ಇದೇನು ನೀನು ಸೂಳೆಯರಿಗೆತಕ್ಕ ಚಾತುರ್ಯ ದಿಂದಲೂ ದಾಕ್ಷಿಣ್ಯದಿಂದಲೂ ಹೀಗೆಹೇಳುತ್ತೀಯೋ?

ಮದ॥ ಅಕ್ಕಾ! ಸೂಳೆಯರು ಆದಮಾತ್ರಕ್ಕೇನೇ ಸುಳ್ಳು ಹೇಳುವ ರಾಗಬೇಕೋ?

ವಸಂತ॥ ಎಲೇ! ನಾನಾವಿಧಪುರುಷಸಂಬಂಧ ದಿಂದ ವಾರನಾರೀಜನವು ಚಾತುರ್ಯವುಳ್ಳವರು ಆಗುತ್ತಾರೆ.

ಮದ॥ ಆದರೆ; ನಿನ್ನದೃಷ್ಟಿಯು ಮನಸ್ಸೂ ಕೂಡ ಈಚಿತ್ರಪಟದಲ್ಲಿ ಏತಕೆ ವಿಹರಿಸುತ್ತಿರುವುದೊ; ಅದಕ್ಕೆ ಕಾರಣವನ್ನು ಕೇಳುತ್ತೀಯೋ?

ವಸಂತ॥ ಎಲೆ ಮದನಿಕೆ! ಗೆಳತಿಯರು ನನ್ನನ್ನು ಹಾಸ್ಯಮಾಡದಹಾಗೆ ಯಿರಬೇಕೆಂದು ಬಯಸುವೆನು.

ಮದ॥ ಅಕ್ಕಾ! ಹಾಗಲ್ಲ. ಗೆಳತಿಯರೆಲ್ಲರೂ ನಿನ್ನ ಮನಸ್ಸನ್ನು ಅನುವರ್ತಿಸುವರೇ ಅಲ್ಲವೇ?

ಚೇಟಿಯು॥ (ಬಳಿಗೆ ಬಂದು) ಅಕ್ಕಾ! ತಾಯಿಯು ಅಪ್ಪಣೆಯನ್ನು ಮಾಡಿರುವಳು "ಸವಾರಿಯಬಂಡಿಯುಸಿದ್ಧವಾಗಿ ಬಂದುಬಾಗಿಲಮುಂದೆ ನಿಂತಿರುವುದು. ಅದರಿಂದ ಹೋಗಬೇಕು" ಎಂದು.

ವಸಂ॥ ಎಲೇ! ಆರ್ಯ ಚಾರುದತ್ತನೇನಾದರೂ ನನ್ನನ್ನು ಕರತರಲು ಕಳುಹಿಸಿರುವನೋ?

ಚೇಟಿ॥ ಅಕ್ಕಾ! ಆಬಂಡಿಯಲ್ಲಿ ಯೆಂಭತ್ತುರತಿ ಭಂಗಾರದ ಒಡವೆಗಳು ಕೂಡ. ಇವೆ.

ವಸಂ॥ ಆದರೆ ಅವನ್ಯಾರು?

ಚೇಟಿ॥ ಅವನು ಅರಸಿನಭಾವನಾದ ಸಂಸ್ಥಾನಕನಂತೆ.

ವಸಂ॥ (ಕೋಪದಿಂದ) ಆಚೆಗೆ ಹೋಗು, ಮತ್ತೂ ಏನಾದರೂ ಹೀಗೆ ಹೇಳೀಯೆ!

ಚೇಟಿ॥ ಅಕ್ಕನು ಪ್ರಸನ್ನಳಾಗಬೇಕು; ಪ್ರಸನ್ನಳಾಗಬೇಕು; ನಾನು ಹೇಳಿಕಳುಹಿಸಿದವರು ತನ್ನೇ ಹೇಳಿದೆನಲ್ಲವೆ.!

ವಸಂ॥ ನಾನೂ ಹೇಳಿಕಳುಹಿಸಿದವರಮೇಲೆಯೇ ಕೋಪಿಸಿಕೊಂಡೆನು.

ಚೇಟಿ॥ ಆದರೆನಾನು ಅಮ್ಮಗೆ ಯೇನುಹೇಳಲಿ!

ವಸಂ॥ ಹೀಗೆಹೇಳು. "ನನ್ನನ್ನು ಬದುಕಿರಬೇಕೆಂದು ಬಯಸಿದ್ದರೆ ಇನ್ನುಮೇಲೆಇಂಥಾ ಮಾತುಗಳನ್ನು ಅಪ್ಪಣೆಕೊಡಬೇಡ" ಎಂದು.

ಚೇಟಿ॥ ನಿನ್ನಯಿಷ್ಟದಂತಾಗಲಿ. (ಎಂದು ಹೊರಟು ಹೋದಳು)

[ಬಳಿಕ ಶರ್ವಿಲಕಂ ಪೊಗುವಂ.]

ಶರ್ವಿಲಕಂ:— ಕಂ॥ ಇರುಳ್ಗಿತ್ತ ಮಪವಾದಮ
ನರ ಸಾಳ್ಗಳ ನಂತು ನಿದ್ದೆಯನುಮಂಗೆಲ್ದು॥
ತ್ತಿರು ಳಳಿಯಲ್ ತಾನಾದೆಂ
ಪೆರೆಯುಂ ತರುಣೋದಯಾಪ ಸಾರಿತಪಾದಂ॥ ೭೮॥

ಮತ್ತಂ॥ ಸರಸರ ನೈತರೆ, ನಿಟ್ಟಸೆ,
ಘೋರೆ ಸಾದೀರ, ಲಾವನಾದೊಡಂ ತೊಳಲ್ವೆನ್ನಂ
ಅರೆ ಮನ ಮದನೇ ಬಗೆಗುಂ,
ಪುರುಷಂ ತಾಂ ತನ್ನ ತಪ್ಪಿ ನಳ್ಕುವನಲ್ತೇ॥ ೭೯॥

ಆನಾದೊಡೆ ಮದನಿಕೆಯ ನಿಮಿತ್ತಂ ಮಿಂತು ಸಾಸಮ ನೆಸಗಿದೆನೆಂತೆನೆ:—

ವೃ॥ ಒಂದೆಡೆಯಲ್ಲಿ ಬಿಟ್ಟ, ನವಲೋಕಿಸಿ ಪೆಣ್ಗಳ ಗೇಹಮಂ, ಮಗು
ಳ್ದೊಂದೆಡೆ ಯಲ್ಲಿ ನೀಕ್ಷಿಸಿದೆನಾಂ ಪರಿವಾರಮನಾಂತು ಸರ್ವನೊ
ಳ್ಮಂದಿರಮಂ, ಕೆಲಕ್ಕರಸ ನಾಳ್ಗಳಿರುಳ್ಬರೆವಾಸು ವೃಕ್ಷದೊಲ್
ನಿಂದೆನದಿಂತುಗ್ಯವ ಪಲುಕಜ್ಜಗಳಿಂ ಪಗಲಾಯ್ತು ರಾತ್ರಿಯುಂ॥ ೮೦॥
(ಎಂದು ಅಡಿಯಿಟ್ಟಪಂ.)

ವಸಂತ॥ ಮದನಿಕೆಯೇ! ಈಚಿತ್ರದಹಲಗೆಯನ್ನು ನನ್ನಮಲಗುವ ಮನೆಯಲ್ಲಿಟ್ಟು ಬೀಸಣಿಗೆಯನ್ನು ತೆಗದು ಕೊಂಡು ಬೇಗ ಬಾ.

ಮದ॥ ಅಕ್ಕನ ಅಪ್ಪಣೆ ಯಂತೆ ಆಗಲಿ!(ಎಂದು ಹಲಗೆಯನ್ನು ತೆಗದುಕೆಂಡು ಹೊರಟುಹೋದಳು.)

ಶರ್ವಿಲಕಂ:—ಇದೋ ವಸಂತಸೇನೆಯನೆಲೆಯಂ ಪೊಕ್ಕಪೆಂ. (ಪೊಕ್ಕು) ಮದನಿಕೆಯುಂ ತಾನೆತ್ತಲ್ ನೋಡಲ್ಪಕ್ಕದು.?

[ಬಳಿಕ ಬೀಸಣಿಗೆಯನ್ನು ಕೈಯಲ್ಲಿ ಹಿಡಿದ ಮದನಿಕೆಯು ಬರುತ್ತಾಳೆ]

ಶರ್ವಿಲಕಂ:— (ನೋಡಿ) ಎಲಾ! ಈಕೆಯೇ ಮದನಿಕೆ.

ವೃ॥ ಮದನನಂ ಜಯಿಪಳ್ ಸುಗುಣಂಗಳಿಂ
ಮದನ ಪತ್ನಿಯನುಂ ತವೆಮೂರ್ತಿಯಿಂ॥
ಮದನಪಾವಕ ತಪ್ತ ಮದಂಗಕಂ
ಪುದಿದ ಚಂದನದೊಲ್ ಚಳಿಯಾಗಿಪಳ್॥೮೧॥ ಮದನಿಕೆಯೇ?

ಮದನಿಕೆ॥ (ನೋಡಿ.) ಶರ್ವಿಲಕನೊ! ಇದೇನಾಶ್ಚರ್ಯವು. ಶರ್ವಿಲಕಾ! ಬಂದೆಯಾ! ಎಲ್ಲಿಯಿದ್ದಿ?

ಶರ್ವಿ:—ಪೇಳ್ದಪೆಂ (ಎಂದು ಅನುರಾಗದೊಡನೆ ಪರಸ್ಪರವಾಗಿನೋಡಿದಪರ್)

ವಸಂತ॥ ಇದೇನು ಮದನಿಕೆಯು ಸಾವಕಾಶ ಮಾಡುತ್ತಾಳೆ, ಎಲ್ಲಿ ಹೋದಳಾದೀತು! (ಎಂದು ಕಿಟಕಿ ಯಿಂದನೋಡಿ.) ಓಹೋ!!ಇವಳುಯಾರೋ ಒಬ್ಬನ ಸಂಗಡ ಯೋಚಿಸುತ್ತಾ ನಿಂತಿದ್ದಾಳೆ. ಮತ್ತು ಬಹು ಪ್ರೀತಿಯಿಂದ ಕದಲದಿರುವನೋಟದಿಂದ ಅವನನ್ನು ನುಂಗುವಳಂತೆ ನೋಡುತ್ತಿರುವಳು. ಅದರಿಂದ 'ಇವನು ಇವಳನ್ನು ಇಲ್ಲಿಂದಬಿಡಿಸಿಕೊಂಡು ತೆಗದುಕೊಂಡು ಹೋಗಲುಬಂದಿರಬಹುದೆಂದು ತೋರುತ್ತೆ ಆಗಲಿ, ವಿಹರಿಸಲಿ ವಿಹರಿಸಲಿ. ಯಾರಿಗೂಪ್ರೀತಿಯನ್ನು ಮುರಿಯಬಾರದು. ಆದ್ದರಿಂದ ಅವಳನ್ನೀಗ ಕರೆಯಲಾರೆನು.

ಮದ॥ ಶರ್ವಿಲಕನೇ! ಹೇಳು.

ಶರ್ವಿ:—(ಭಯದಿಂ ದೆಸೆಗಳಂ ನೋಡಿದಪಂ)

ಮದನಿ॥ ಶರ್ವಿಲಕನೇ! ಇದೇನು? ಭಯಪಟ್ಟಹಾಗೆಕಾಣುತ್ತೆ.

ಶರ್ವಿ:—ನಿನಗೆ ನಸು ರಹಸ್ಯಮನುಸಿರ್ದಪೆಂ. ಅದರಿಂದಿದೇನೇ ಕಾಂತದ ತಾಣವಾಗಿರ್ಪವೆ?

ಮದನಿಕೆ॥ ಅಹುದು.

ವಸಂತ॥ ಅದೇನಂಥಾರಹಸ್ಯವು? ಆದ್ದರಿಂದನಾನೂ ಕೇಳುವೆನು.

ಶರ್ವಿ:—ಮದನಿಕೆಯೇ! ವಸಂತಸೇನೆ ನಿನ್ನಂ ಮಾರಿ ಬಿಡುವಳೊ?

ವಸಂತ॥ ಇದೇನು ನನ್ನ ಕಡೆಯ ಮಾತಾಗಿದೆ. ಆದ್ದರಿಂದ ಈಕಿಟಕಿಯ ದಸೆಯಿಂದ ಮರೆಯಾಗಿದ್ದು ಕೇಳುವೆನು-

ಮದನಿ॥ ಶರ್ವಿಲಕನೇ! ನಮ್ಮಕ್ಕ ಹೇಳುವದೇನಂದರೆ! 'ನನಗೆ ಸ್ವಾತಂತ್ರ್ಯ ವಿದ್ದರೆ ಹಣವನ್ನು ತೆಗದುಕೊಳ್ಳದೇನೇ ಈಪರಿಜನವೆಲ್ಲವನ್ನಾ ಚ ಕರಿಯಿಂದಬಿಡಿಸೇನು, ಎಂದು.—ಶರ್ವಿಲಕನೇ!ನಿನಗೆ ವಸಂತಸೇನೆಯ ಕಡೆಯಿಂದ ನನ್ನನ್ನು ಬಿಡಿಸುವಷ್ಟು ಸಂಪತ್ತು ಎಲ್ಲಿಯದು?

ಶರ್ವಿಲ:—ವೃ॥ ನಿನ್ನೊಳ್ಸ್ನೇಹಂ ಗೊಂಡನಾನುಂ

ಬನ್ನಮಂತ್ರಾಳ್ದು ದೈನ್ಯದಿಂ

ನಿನ್ನಿನಾರಾತ್ರಿಯೊಳ್ ಭೀರು!

ನಿನ್ನಿಂ ಸಾಹಸ ಮಾಡಿದೆಂ॥೮೨॥

ಚಸಂ॥ ಇವನಾಕಾರವಾದರೆ ಸೌಮ್ಯವಾಗಿದೆ; ಸಾಹಸದ ಕೆಲಸದಿಂದ ಮತ್ತು ಭಯವನ್ನುಂಟು ಮಾಡುತ್ತಿದೆ.

ಮದ॥ ಶರ್ವಿಲಕನೇ! ಅತಿನೀಚವಾದ ಹೆಣ್ಣಿನ ವಿಷಯಕ್ಕಾಗಿ ಎರಡೂ ಸಂಶಯದಲ್ಲಿ ಬಿತ್ತು.

ಶರ್ವಿಲಕಂ:— ಏಂ? ಏಂ?

ಮದ॥ ಒಡಲೂ, ನಡತೆಯೂ;

ಶರ್ವಿ:—ಮುಗ್ಧೆಯೇ! ಸಾಹಸದಲ್ಲಿ ಸಿರಿಯಿರ್ಕುಂ.

ಮದ॥ ಶರ್ವಿಲಕನೇ! ಕೊರತೆಯಿಲ್ಲದ ನಡತೆಯುಳ್ಳವನಾದಿ. ಆದರೆ ನನಗೋಸುಗವಾಗಿ ಸಾಹಸವನ್ನು ಮಾಡಿದನೀನು ಯಾರಿಗೇನೂ ಉಪದ್ರವವನ್ನು ಮಾಡಲಿಲ್ಲವಷ್ಟೆ?

ಶರ್ವಿ:—ವೃ॥ ಹರಿಸೆಂತಾಂ ತೊಡವಾಂತು ಬಂದಬಲೆಯಂ ಪೂತಿದ್ದ ಸದ್ವಲ್ಲಿಯಂ

ತಿರೆ,ಮೇಣ್ ಬ್ರಾಹ್ಮಣವಸ್ತುವಂ ಕನಕಮುಂ ಯಾಗಕ್ಕೆ ತಂದಿಟ್ಟುದಂ

ಹರಿಸೆಂ ದಾದಿಯ ತೆಕ್ಕೆಯಾಂತ ಮಗುವಂ ದ್ರವ್ಯಾರ್ಥಿ ಯಾಗಲ್ಲಿಯುಂ

ನಿರತಂ ಚೌರ್ಯದೊಳಂ ವಿವೇಕಮೆನಗಿಂತಿರ್ಕುಂ ಸುಸಾಂಡಿತ್ಯದಿಂ॥೮೩॥

ಆದುದರಿಂದೀ ಯಲಂಕಾರವಂ ವಸಂತಸೇನೆಗಿತ್ತು ವಿಜ್ಞಾಪಿಸುಗೆ

ಅನುಷ್ಟುಪ್॥ "ಇದು ನಿನ್ನ ಶರೀರಕ್ಕಳೆದು ಮಾಡಿದ ವೋಲಿರಲ್

ಇದಪ್ರಕಾಶ್ಯಂ ತಾಂ ತಾಳ್ಗೆ, ಮುದದಿಂ ದೆನ್ನ ಕೂರ್ಮೆಯಿಂ॥೮೪॥" ಎಂದು.

ಮದ॥ ಶರ್ವಿಲಕನೇ! ಅಲಂಕಾರ, ಅಪ್ರಕಾಶ್ಯ, ಇವೆರಡು ಮಾತೂ ಚೆನ್ನಾಗಿಲ್ಲ. ಆದ್ದರಿಂದ ತೆಗೆದುಕೊಂಡು ಬಾ! ಆ ಯಲಂಕಾರವನ್ನು ನೋಡೋಣ.

ಶರ್ವಿ:—ಇದುವೆ ಅಲಂಕಾರಂ. (ಎಂದು ಭಯದಿಂ ಸಮರ್ಪಿಸುವಂ)

ಮದ॥ (ಚೆನ್ನಾಗಿನೋಡಿ) ಈ ಅಲಂಕಾರವನ್ನು ನಾನು ನೋಡಿದಂತಿದೆ. ಇದು ನಿನಗೆಲ್ಲಿಯದೋ? ಹೇಳು.

ಶರ್ವಿ:—ಮದನಿಕೆಯೇ! ನಿನಗದರಿಂದೇಂ? ತೆಗೆಯಲಕ್ಕುಂ.

ಮದ॥ (ರೋಷದಿಂದ) ನನ್ನಲ್ಲಿ ನಿನಗೆ ನಂಬಿಕೆಯಿಲ್ಲದ ಮೇಲೆ ನನ್ನನ್ನು ಏತಕ್ಕೆ ವ್ಯರ್ಥವಾಗಿಕೊಂಡು ಕೊಳ್ಳುತ್ತೀಯೆ?

ಶರ್ವಿ:—ಎಲೆ! ಮುಂಬಗಲೊಳ್ ಶ್ರೇಷ್ಠಿವೀಥಿಯಲ್ಲಿ ಬರುತಾಂ ಚಾರುದತ್ತನೆಂಬ ಸಾರ್ಥವಾಹನದೆಂದು ಕೇಳ್ದೆಂ.

(ವಸಂತಸೇನೆ ಮದನಿಕೆಯೂ, ಮೂರ್ಛೆಯ ನಭಿನಯಿಸುವರ್)

ಶರ್ವಿ:—ಮದನಿಕೆ! ತೆಪ್ಪತ್ತುಕೊಳ್! ತೆಪ್ಪತ್ತುಕೊಳ್! ಸುಸಿಗಳ್

ಕ॥ ಕಡು ದುಗುಡದಿ ನೊಂದ ಲೆಲ್ಲಂ
ಪಡಿಲಿರೆ ಸಡಗರದಿನುಬ್ಬೆ ಗಂಗೊಳಿ ಕಂಗಳ್
ನಡುಗಿದಪೆ ಯುದಾಸ್ಯತೆಯಂ
ಪಡೆಯಿಸಿ ಕೊಂಡೊಡ ಮದೆನ್ನ ಕರುಣಿಸಲಿಲ್ಲೇಂ?॥ ೮೫॥

ಮದ॥ (ಸಮಾಧಾನಂಗೊಂಡು) ಎಲೆ ಸಾಹಸಿಕನೇ! ನನಗೋಸುಗವಿಂಥಾ ಅಕಾರ್ಯವನ್ನು ಮಾಡುವಾಗ ನೀನು ಆ ಮನೆಯಲ್ಲಿ ಯಾರನ್ನಾ ಕೊಲ್ಲಲಿಲ್ಲವೆ? ಅಥವಾ ಗಾಯವನ್ನಾದರೂ ಮಾಡಲಿಲ್ಲವೆ?

ಶರ್ವಿ:—ಮದನಿಕೆ! ಶರ್ವಿಲಕಂ ಭೀತನಂ ನಿದ್ರೆಗೈವನಂ ಇಕ್ಕಂ, ಅದುದರಿಂದಾಂ ಆರನುಮಂ ಕೊಲ್ಲಲಿಲ್ಲಂ, ಮೇಣ್ ಗಾಯಂಗೊಳಿಸಲುಮಿಲ್ಲಂ.

ಮದನಿಕೆ॥ ದಿಟವೋ?

ಶರ್ವಿಲಕಂ:—ದಿಟಂ.

ವಸಂ॥ (ಚೇತರಿಸಿಕೊಂಡು.) ಆಶ್ಚರ್ಯವು. ಬದುಕಿದೆನು.

ಮದ॥ ಪ್ರಿಯವು.

ಶರ್ವಿ:—(ಈರ್ಷ್ಯೆಯಿಂದೆ.) ಮದನಿಕೆ! ಏಂ ಪ್ರಿಯಂ?

ಕಂ॥ ಕರವೊ ಳ್ಪಂಚದೊ ಳೊಗೆದೊಡ
ಮೊರಲ್ದು ನಿನ್ನಲ್ಲಕಾರ್ಯ ಮಿದನೆಸಗಿದಪೆಂ
ಸ್ಮರಹತ ನಾನುಂ ಮಾನವ
ಪೊರೆದೆಂ ನೀನೆನ್ನ ಸೆಳೆದು ಮೊಂದಿದೆ ಪೆರನಂ॥ ೮೬॥

(ಆಕೂತದೊಡನೆ) ಕಂ॥ ಕುಳಪುತ್ರ ರೆಂಬ ಪೆಮ್ಮರ
ಗಳಿಲ್ಲಿ ಸರ್ವಸ್ವ ಫಲಿಗ ಳೆನಿಸಿಯುಮೇಗಂ
ತಳೆ ದಿಕ್ಕುರ್ಗಂ ನಿಷ್ಫಲತೆಯ
ನಿಳೆಯೊಳ ಗಣಿಕಾಖ್ಯ ಪಕ್ಷಿ ಭಕ್ಷಿತಮೆನಿಸಲ್ ॥ ೮೭॥

ಮತ್ತಂ॥ ಆವೆಡೆಯೊಳ್ಕಾನಿಸರಾ
ಯೌವನಮುಂ ಧನಮುಮೆಲ್ಲ ಮಾಹುತಿಯಕ್ಕುಂ
ತೀವಿರೆ ಪ್ರಣಯೇಂಧ್ಮಂ ಸ್ಮರ
ಪಾವಕ ಮೆಸೆ ದಪುದುನಾಡೆ ಸುರತಜ್ವಾಲಂ॥ ೮೮॥

ವಸಂತ॥ (ಮುಗುಳ್ನಗೆಯಿಂ.) ಆಹ! ಈತನಿಗೆ ಈ ವ್ಯಸನವು ತಕ್ಕದ್ದಲ್ಲವು.

ಮೃಚ್ಛಕಟಿಕಪ್ರಕರಣದಲ್ಲಿ

ಶರ್ವಿ:—ಸರ್ವಪ್ರಕಾರದಿಂದ. ಕಂ॥ ಸಿರಿಗಳೊಳಂ ಪೆಣ್ಗಳೊಳಂ
ನರ ರಾರ್ನಂಬುವರೊ ಅವರೆ ಜಾಣರ್ ರಿಳೆಯೊಳ್
ಸಿರಿಗಳ್ ಮೇಣ್ ಪೆಣ್ಗಳುಮನು
ಕರಿಪ ವ್ಯಾಳಿಗಳ ಗತಿಯು ನೆಂದಾಸರಿಪೆಂ॥ ೮೯॥

ಮತ್ತಂ॥ ವೃ॥ ರಕ್ತಿಯುಂ ತಳೆಯಲಾಗದು ಪೆಣ್ಗಳೊಳ್
ರಕ್ತನಂ ಪಳಿದಪ ತರ್ಗವೆ ನಾರಿಯರ್
ರಕ್ತೆಯಾದವಳ ನೊಂದುಗೆ ಕಾಮುಕಂ
ರಕ್ತಿಯಿಲ್ಲದವಳಂ ಬಿಡಲಕ್ಕುವೆಟ್ಟಿ॥ ೯೦॥

ಒಳ್ಳಿತಿಂತು. ಪೇಳ್ದಿಕ್ಕರ್ಮಲ್ತೆ?

"ಕ॥ ಒಲಿಪ ರಿವನರ್ಥರನಂ ತಾಂ
ನಲಿಯು ಮೆರ್ಗಣ್ಣಾಗುವ ರಳ್ವ ರೀಧನಕದರಿಂ
ಕುಲ ಶೀಲಾನ್ವಿತ ನರನಿಂ
ಬೆಲೆ ವೆಣ್ಗಳ್ಮಸಣ ಪೂಗಳೊಲ್ಸಂತ್ಯಾಜ್ಯರ್॥ ೯೧॥

ಮತ್ತಂ॥ ಕಡಲಲೆ ಯೊಲ್ಚಲ ಭಾವೆಯು
ರಡಸಿದ ಸಂಧ್ಯಾಭ್ರಲೇಖೆ ವೋಲಪ್ರಗಿಣಿಯರ್
ಪಡೆದುಂ ಪಣಮುಂ ಪೆಣ್ಗಳ್
ಬಿಡು ವರ್ಧನ ರಹಿತಜನವ ಹಿಳಿ ದಲತಿಕೆವೊಲ್॥ ೯೨।"

ಪೆಣ್ಗಳತಿ ಚಪಲೆಯರೆ ನಿಸದಂ:

ಕಂ॥ ಓರ್ವನ ಮನದಲ್ಲಿರಿಸು
ತೊರ್ವನ ನೊಲ್ಮೆಯಿನಪಾಂಗದಿಂಕರೆಯುತ್ತಂ
ಓರ್ವನೊಳೆ ಮನದೆ ರಮಿಸುವ
ರೋರ್ವನನೇ ಮೂರ್ತಿಯಿಂದೆ ಕಾಮಿಸುತಿರ್ಪರ್॥ ೯೩॥

ಮತ್ತಮಿಂತಾರೊ ಭಾಷಿಸಿರ್ಪರಲ್ತೆ

ಕಂ॥ ಬೆಟ್ಟದಕೋಡೊಳ್ತಾವರೆ
ಪುಟ್ಟದು, ಕತ್ತೆಯುದು ಪೊರದು ಕುದುರೆಯಧುರಮಂ
ಪುಟ್ಟದು ಬಿತ್ತಿದ ಯವಮುಂ
ನೆಟ್ಟನೆ ಶುಚಿಯಾಗರಂತು ವೇಶ್ಯಾಂಗನೆಯರ್॥ ೯೪॥

ಆ! ದುರಾತ್ಮನಾದ ಚಾರುದತ್ತ, ಹತಕನೇ! ಇಂತಾದೆಯಾ? (ಎಂದು ಕೆಲವಡಿ ಗಳಿಡುವನು.)

ಮದ॥ (ಕೈಹಿಡಿದು) ಅಸಂಬದ್ಧಭಾಷಿಯೇ! ವ್ಯರ್ಥವಾಗಿ ಈವಿಷಯಕ್ಕೆ ಅಸಂಭಾವ್ಯನಾದವನಲ್ಲಿ ಕೋಪವನ್ನು ಮಾಡುತ್ತೀಯೆ?

ಶರ್ವಿ:—ಅಸಂಭಾವ್ಯನದೆಂತು?

ಮದ॥ ಈಯಲಂಕಾರವೇ ಈಕೆಯದು.

ಶರ್ವಿ:—ಬಳಿಕವೇಂ?

ಮದ॥ ಅದರನ್ನೀಕೆಯೇ ಅವನಕೈಗೆಕೊಟ್ಟು ಬಂದಿದ್ದಳು.

ಶರ್ವಿ:—ಏತರ್ಕೆ?

ಮದ॥ (ಕಿವಿಯಲ್ಲಿ) ಹೀಗೆ ಇದು.

ಶರ್ವಿ:—(ಅಚ್ಚರಿಯಿಂದೆ) ಅಯ್ಯೋ! ಕಷ್ಟಂ.!

ಕಂ॥ ನೆಳಲಂ ಪಡೆಯಲ್ ಗ್ರೀಷ್ಮದೆ
ಬಳಲ್ದು ಬಿಸಿಲಿಂದ ಮಾವ ಶಾಖೆಯನಾಂತೆಂ
ತಿಳಿಯದೆ ಯಾ ನಾಶಾಖೆಯ
ದಳ ಮೆಲ್ಲವ ತರಿದು ಕಳೆದು ಬರಿದಾಗಿಸಿದೆಂ॥ ೯೫॥

ವಸಂತ॥ ಇದೇ ನೀತನೂ ವ್ಯಸನಪಡುವನು. ಆದ್ದರಿಂದ ಇವನುತಿಳಿಯದೇ ಹೀಗೆ ಮಾಡಿರಬೇಕು.

ಶರ್ವಿ:— ಮದನಿಕೆ! ಈಗಳೇನೆಸಗಲ್ತಕ್ಕುದು?

ಮದ॥ ಈವಿಷಯದಲ್ಲಿ ನೀನೇ ಪಂಡಿತನಲ್ಲವೆ?

ಶರ್ವಿ:—ಅಂತಲ್ತು-ನೋಡು. ಕಂ॥ ವರ ವರ್ಣನಿಯ ರಿವರ್ತವೆ
ತರೆಯೊ ಳ್ಸ್ವಕೃತಿಯಿನೆ ಪಂಡಿತೆಯರಲ್ಲ ಮೆಪೇಳ್
ಪುರುಷ ಗ್ಗಾರ್ದೊಡೆ ಶಾಸ್ತ್ರವಿ
ಸರದುವ ದೇಶದಿನೆ ಅಪ್ಪು ಪಾಪಾಂಡಿತ್ಯಂ॥೯೬॥

ಮದ॥ ನನ್ನಮಾತನ್ನು ಕೇಳುವನಾದರೆ ಮರಳಿ ಆ ಮಹಾನುಭಾವನಿಗೇನೇ ಒಪ್ಪಿಸು.

ಶರ್ವಿ :—ಮದನಿಕೆ! ಆತನೆನ್ನಂ ಅರಸನೆಡೆಯೊಳ್ ಭಾಷಿಸದಿರ್ಪನೇಂ?

ಮದ॥ ಚಂದ್ರನಿಂದ ಬಿಸಿಲುಂಟಾಗಲಾರದು.

ವಸಂ॥ ಒಳ್ಳೆಯದು; ಮದನಿಕೆಯೇ! ಒಳ್ಳೆಯದು;

ಶರ್ವಿ:—ಮದನಿಕೆ! ವೃ॥ ಎನಗಿಲ್ಲಂಭಯಮುಂವಿಷಾದಮುಮಣಂಪೇಸಾರ್ಪದೀಕಜ್ಜದ
ಲ್ಲೆನಿತಾಸಾಧುಗುಣಂಗಳಂತನಗೆನೀನೇತರ್ಕೆಪೇಳ್ದಪ್ಪೆಯೋ॥
ಅನಿತೀಕೃತ್ಸಿತಕಾರ್ಯದಿಂತನಗಮೀನಾಣಾಯ್ತುತಾನಲ್ಲದೇ
ಮನುಜೇಶಂಪುರದಲ್ಲದೇಂಕಿತವರಾದೆಮ್ಮನ್ನರಂಗೈದಪಂ?॥೯೭॥

ಆದೊಡವಿದು ನೀತಿವಿರುದ್ಧಮಕ್ಕುಂ. ಅದರಿಂದೆ ಬೇರೊಂ ದುಪಾಯಮಂ ಯೋಚಿಸುಗೆ.

ಮದ॥ ಇದೇ ಉತ್ತಮತ್ತೊಂದುಪಾಯವು.

ವಸಂತ॥ ಅದಾವುದೋ ಉತ್ತಮತ್ತೊಂದುಪಾಯವು! ಕೇಳೋಣ.

ಮದ॥ ನೀನು ಆಚಾರುದತ್ತನ ಸಂಬಂಧಿಯಾಗಿಯೇ ಹೋಗಿ ಈಯಲಂಕಾರವನ್ನು ಈ ಕೆಗೆ ಒಪ್ಪಿಸು.

ಶರ್ವಿ:—ಅಂತಾದೊಡೇ ನಕ್ಕುಂ?

ಮದ॥ ನೀನು ಕಳ್ಳನಾಗುವದಿಲ್ಲ. ಅವನು ಸಾಲಗಾರ ನಾಗಲಾರನು. ಈಕೆಗೆ ತನ್ನ ಒಡವೆಯೂ ಬಂದಹಾಗಾಯ್ತು.

ಶರ್ವಿ:—ಇದು ಕಡು ಸಾಸವಲ್ತೆ.

ಮದ॥ ಎಲೈ! ತೆಗದುಕೊಂಡುಬಾ! ಇಲ್ಲದಿದ್ದರೆ ಸಾಹಸವೇನು,

ವಸಂ॥ಒಳ್ಳೆಯದು; ಮದನಿಕೇ ಒಳ್ಳೆಯದು; ಸ್ವತಂತ್ರಳಾಗಬೇಕೆಂದುಯೋಚಿಸಿದ್ದೆ ತಿರುಗ

ಶರ್ವಿ:—ಕಂ॥ ಪೇರರಿವಂ ತಾಳ್ದಿದೆನಾಂ (ದು)

ನಾರಿಯೆ! ನಿನ್ನನನು ಸರಿಸಿ ದುದರಿಂದೀಗಳ್

ತಾರೇಶ ನಿಲ್ಲ ದಿರುಳೊಳ್

ದಾರಿಯು ತೋರಿಪ ನರಂ ಸುದುರ್ಲಭನಲ್ತೇ॥೯೪॥

ಮದ॥ ಆದ್ದರಿಂದ ನೀನು ಈ ಕಾಮದೇವಾಲಯದಲ್ಲಿ ಒಂದು ಮುಹೂರ್ತವಿರು. ಅಷ್ಟರೊಳಗಾಗಿ ನಾನು ಹೋಗಿ ನೀನುಬಂದ ಹದನನ್ನುನಮ್ಮಕ್ಕಗೆ ತಿಳಿಸುವೆನು

ಶರ್ವಿ:—ಅಂತಕ್ಕೆ.

ಮದ॥ (ಬಂದು) ಅಕ್ಕಾ! ಇದೋ ಚಾರುದತ್ತನಕಡೆಯಿಂದ ಒಬ್ಬ ಬ್ರಾಹ್ಮಣನು ಬಂದಿದ್ದಾನೆ.

ವಸಂ॥ ಎಲೆ ಮದನಿಕೇ! ಆತನಕಡೆ ಯವನೆಂದು ನೀನು ಹೇಗೆತಿಳಿದೆ?

ಮದ॥ ಅಕ್ಕಾ! ನಮ್ಮ ಕಡೆಯವರನ್ನು ನಾನುಕಾಣೆನೇಯೇನು?

ವಸಂ॥ (ಮನದಲ್ಲಿ; ತಲೆಯಾಡಿಸುತ ನಕ್ಕು) ಸರಿಯೆ (ಪ್ರಕಾಶವಾಗಿ.) ಆದರೆ ಒಳಗೆ ಬರಲಿ.

ಮದ॥ ಅಕ್ಕನ ಅಪ್ಪಣೆಯಂತಾಗಲಿ. (ಹೊರಗೆಬಂದು.) ಶರ್ವಿಲಕನೇ! ಒಳಗೆ ಬರಬಹುದು;

ಶರ್ವಿ:—(ಒಳಗೆಬಂದು; ಆಶ್ಚರ್ಯದೊಡನೆ.) ಆರ್ಯೆ! ನಿನಗೆ ಮಂಗಳ ಮಕ್ಕೆ.

ವಸಂ॥ ಆರ್ಯನೇ! ನಮಸ್ಕಾರವನ್ನು ಮಾಡುತ್ತೇನೆ ಕೂತು ಕೊಳ್ಳಬೇಕು,

ಶರ್ವಿ:—ಸಾರ್ಥವಾಹಂ ಬೆಸಗೊಂಡಪ, "ಗೃಹಂ ಜೀರ್ಣವಾಗಿರ್ಪುದರಿಂ ಸಲಸು

ಲಳವಲ್ಲದೀ ಯೊಡವೆಯ ಭಾಂಡಮಂ ತೆಗೆದುಕೊಳಲ್ವೇಳ್ಕು" ಎಂದು(ಮದನಿಕೆ ಯಕೈಗೆ ಕೊಟ್ಟು ಹೊರಡುತ್ತಾನೆ)

ವಸಂ॥ ಆರ್ಯನೇ! ನನ್ನ ವಿಜ್ಞಾಪನೆಯನ್ನು ಮರಳಿಯಾತನಿಗೆ ತಿಳಿಸಬೇಕು,

ಶರ್ವಿ:—(ತನ್ನೊಳ್) ಅಲ್ಲಿಗಾವಂ ಪೋದಪಂ? (ಪ್ರಕಾಶವಾಗಿ) ಪೇಳಲಾದಪುದಿವಾತೇಂ?

ವಸಂ॥ ಆರ್ಯನು ಈ ಮದನಿಕೆಯನ್ನು ಪರಿಗ್ರಹಿಸಬೇಕು!

ಶರ್ವಿ:—ಮಾನ್ಯೆ! ಅದೆಂತೊ ನಾನರಿಯೆಂಗಡ,

ವಸಂ॥ ನಾನು ಬಲ್ಲೆನು-

ಶರ್ವಿ:—ಎಂತು?

ವಸಂ॥ ಯಾವನು ಈ ಅಲಂಕಾರವನ್ನು ತಂದುಕೊಡುವನೋ ಅವನಿಗೆ ಈ ಮದನಿಕೆಯಂ ಕೊಡಬೇಕೆಂದು ಆರ್ಯಚಾರುದತ್ತನು ನನಗೆ ಹೇಳಿರುವನು, ಆದ್ದರಿಂದ ಆತನೇ ಇವಳನ್ನು ನಿನಗೆ ಕೊಡುತ್ತಾನೆಂದು ತಿಳಿ.

ಶರ್ವಿ:—(ತನ್ನೊಳ್) ಎಲಾ! ಈಕೆಯೆನ್ನಂ ತಿಳಿದಿರಲಕ್ಕುಂ (ಹೊರಗೆ.) ಒಳ್ಳಿತು, ಆರ್ಯಚಾರುದತ್ತನೇ! ಒಳ್ಳಿತು,

ಕಂ॥ ಗುಣ ಗಣ ದಲ್ಲಿಯೆ ತಾಂ ಬಿ
ನ್ನಣಿಗಂ ನರನಾವಗಂ ಪ್ರಯತ್ನಿಸ ವೇಳ್ಕುಂ
ಗುಣಹೀನಂ ಪ್ರಭುವಾದೊಡ
ಮೆಣೆಯಲ್ಲಂ ಗುಣವನಾಂತ ಕಡುಬಡವಂಗಂ॥೯॥

ಮತ್ತಂ॥ ಗುಣಮಂ ಪಡೆಯಲ್ವೇಳ್ಕುಂ
ಗುಣಂಗಳಿಂ ಪಾಗದಿರ್ಪನದು ಪೆರತೊಳವೇ॥
ಗುಣಗಣದಿ ನೇರಿದಂ ಶಶಿ
ಯಣಮಾರುಂ ಪಡೆಯದಿರ್ಪ ಹರಮಸ್ತಕಮಂ॥೧೦॥

ವಸಂ॥ ಬಂಡಿಗಾರನ್ಯಾರೋ ಅಲ್ಲಿ?

[ಬಂಡಿಯಿಂದ ಕೂಡಿ ಚೇಟನು ಬರುವನು]

ಚೇಟನು॥ ಅಮ್ಮಾ! ಬಂಡಿ ಸಿದ್ಧವಾಗಿರುವದು.

ವಸಂ॥ ಎಲೆ ಮದನಿಕೆ! ಇದೋ ನನ್ನನ್ನು ಚೆನ್ನಾಗಿ ನೋಡು ನಿನ್ನನ್ನು ಈತಗೆ ಕೊಟ್ಟುಬಿಟ್ಟೆನು. ಆದ್ದರಿಂದ ಬಂಡಿಯನ್ನು ಹತ್ತು ನಡೆ. ನನ್ನನ್ನು ಸ್ಮರಿಸುತ್ತಿರು,

ಮದ॥ (ಅಳುತ). ನನ್ನನ್ನು ಬಿಟ್ಟೇ ಬಿಟ್ಟೆಯಾ? (ಎಂದು ಕಾಲಿಗೆ ಬೀಳುತ್ತಾಳೆ.)

ವಸಂ॥ ಎಲೆ! ನೀನೆ ಯೀಗ ನನಗೆ ವಂದನೀಯಳಾಗಿರುವಿ. ಅದರಿಂದ ಏಳು ಹೋಗು. ಬಂಡಿಯನ್ನು ಹತ್ತು. ನನ್ನನ್ನು ನೆನಸಿಕೊಳ್ಳುತ್ತಿರು.

ಶರ್ವಿ:—ಮಾನ್ಯೆ! ನಿನಗೆ ಮಂಗಳಮಕ್ಕೆ. ಎಲೆಮದನಿಕೆ! ಈಕೆಯಾವಗಂನಿನಗೆ ಪಂಜ ನೀಯೆಯೆ, ಅದರಿಂದೊಳ್ಳಿತು ನಿಟ್ಟಿಸು- ಏಕೆನೆ-ನಿಮ್ಮಜನದಲ್ಲಿ ದುರ್ಲಭ ಮಾದ ವಧೂಶಬ್ದಂ ನಿನಗೀಕೆಯಿಂ ಪ್ರಾಪ್ತಮಾದುದಲ್ತೆ- (ಎಂದು ಮದನಿಕೆಯೊಡನೆ ಶಕಟಮನೇರಿಪೋಗಲೊತ್ತಡಗಿದಂ-)

[ತೆರೆಯಲ್ಲಿ]:—ಎಲೆ ಅದಾರತ್ತಲ್?

ರಾಷ್ಟ್ರಿಯು ನಾಜ್ಞಾಪಿಸಿದಪಂ- "ಇದೊ 'ಗೊಲ್ಲರಮಗನಾದ ಆರ್ಯಕಂ ಮುಂದೆ ರಾಜನಪ್ಪಂ' ಎಂದು ಸಿದ್ಧ ಜನ ಮುಸಿರೆ ಅವರಂ ನಂಬಿ ಭಯಂ ಗೊಂಡ ಪಾಲಕರಾಯಂ ಆಗಳೇಗೊಲ್ಲರಪಳ್ಳಿಯಿಂದಾರ್ಯಕನಂ ತಂದು ಘೋರಮಾದ ಸೆರೆಮನೆ ಯೊಳಿರಿಸಿದಂ- ಅದರಿಂದೆಲ್ಲರುಂ ಜಾಗರೂಕರಾಗಿ ಯೆ ತಮ್ಮ ತಮ್ಮ ತಾಣದೊಳಿರ್ಕೆ'' ಎಂದು-

ಶರ್ವಿ:—(ಕೇಳ್ದು-) ಎಂತು ಪಾಲಕರಾಯನಿಂ ದೆಮ್ಮಪ್ರಿಯ ಮಿತ್ರನಾ ದ್ದಾರ್ಯಕಂ ಬದ್ಧನಾದಂ-?ಆನುಂಕಳತ್ರವಂತನೆನಿಸಿದೆಂ-ಅಕ್ಕಟಾ?ಕಷ್ಟಂ- ಮೇಣೇಂಗೈವೆಂ?

ಕಂ॥ ಇಳೆಯೊಳ್ಮನುಷ್ಯ ಕೋಟಿಯೊ
ಳೆಳೆಯಲಿವೆರಡಲ್ತೆ ಪ್ರೀತಿ ಪಾತ್ರಂಮಿತ್ರಂ
ಲಲನೆಯು, ಮದರೊಳ ಗೀಗಳ್
ಗೆಳೆಯಂ ನೂರ್ಮಡಿ ಪೆಣ್ಗಳಿಂಕಡು ಪಿರಿಯಂ॥೧೦೧॥

ಆದರಿಂ ದಿಳಿದಪೆಂ (ಎಂದು ಬಂಡಿಯಿಂ ದಿಳಿವಂ)

ಮದ॥ (ಕಣ್ಣೀರಿಡುತ, ಕೈಕಟ್ಟಿಕೊಂಡು)-ಹಾಗಲ್ಲಂ, ಮುಂಚೆನನ್ನನ್ನು ಹಿರಿಯರ ಹತ್ತಿರ ಬಿಡಬೇಕು- (ಎಂದು ಬೇಡುವಳು)

ಶರ್ವಿ:— ಒಳ್ಳಿತು ಇನಿಯಳೆ! ಒಳ್ಳಿತು! ಎಮ್ಮಮನ ಕನುವಾದನುಡಿಯಂ ನುಡಿದಯ್ (ಚೇಟನಂ ಕುರಿತು) ಎಲಾ! ನೀನೇಂ ಸಾರ್ಥವಾಹನಾದ ರೇಭಿಲನ ಮನೆಯಂ ಬಲ್ಲೆಯಾ?

ಚೇಟನು॥ ಬಲ್ಲೆನು.

ಶರ್ವಿ:—ಆದೊಡೀಕೆಯ ನಲ್ಲಿಗೈದಿಸು-

ಚೇಟನು॥ ಆರ್ಯನ ಅಪ್ಪಣೆಯಮೇರೆಗೆ.

ಮದ॥ ಮುಂಚೆ ಹೇಳಿದಂತೆ ಆರ್ಯಪುತ್ರನು ಜಾಗರೂಕ ನಾಗಿರಬೇಕಲ್ಲವೆ- (ಎಂದು ಹೊರಟಳು-)

ಶರ್ವಿ:—ಆನೀಗಳ್ ಕಂ॥ ದಾಯಾದರ ನರಸಾಳ್ಗಳ
ನಾಯಾ ವಿಟರಂ ನೃಪಾಪಮತಿಕುಪಿತರನುಂ

ಪಾಯಿಸಿ ಗೆಳೆಯನ ನುಡಿಯನ
ರಾಯನ ಯೌಗಂಧರಾಯಣಾ ಪೋಲ್ಬಿಡಿಪೆಂ॥೧೦೩॥

ವೃತ್ತಂ॥ಕಂ॥ ನೇಹದಸಖನಂ ನಿರ್ನೇರ
ವಾಹಿತ ಶಂಕೆಯಿ ನಸಾಧು ರಿಪುಗಳ್ಪಿಡಿಯಲ್
ಸಾಹಸದಿ ನಾಂತು ಬಿಡಿಪೆಂ
ರಾಹು ಮುಖ ದೊಳಿರ್ಪ ಚಂದ್ರ ಬಿಂಬದ ತೆರದಿಂ॥೧೦೪॥

(ಎಂದು ಪೊರಮಟ್ಟಂ.) [ಚೇಟಿಯು ಬಂದು.]

ಚೇಟಿ॥ ಅಕ್ಕಾ! ನೀನು ಪುಣ್ಯದಿಂದ ಬೆಳೆಯುತ್ತೀಯೆ. ಆರ್ಯಚಾರುದತ್ತನಕಡೆಯಿಂದ ಬ್ರಾಹ್ಮಣನು ಬಂದನು.

ವಸಂತ॥ ಆಹ! ಈದಿವಸವೇ ಸು ದಿವಸವು-ಆದ್ದರಿಂದಲೇ ಆತನನ್ನು ವಿಶ್ವಾಸದಿಂದಬಂಧುಲರ ಜೊತೆಯಲ್ಲಿಯೇ ಒಳಕ್ಕೆ ಕರೆದುಕೊಂಡುಬಾ

ಚೇಟಿ॥ ಅಕ್ಕ ನಪ್ಪಣೆ ಯಂತೆ ಆಗಲಿ. (ಎಂದು ಹೋದಳು)

[ವಿದೂಷಕನು ಬಂಧುಲರಿಂದ ಕೂಡಿ ಒಳಪುಗುವನು.]

ವಿದೂ॥ ಆಹ ಅಯ್ಯಾ! ಬಹು ಕಷ್ಟಪಟ್ಟು ತಪಸ್ಸುಮಾಡಿ ರಾಕ್ಷಸರಾಯನಾದ ರಾವಣನು ಪುಷ್ಪಕ ವಿಮಾನವನ್ನು ಹತ್ತಿ ಹೋದನು. ನಾನಾದರೋ ಬ್ರಾಹ್ಮಣನಾಗಿ ತಪಸ್ಸುಮಾಡದೇನೇ ನಾರೀಜನದಿಂದ ಸೇರಿ ಹೋಗುತ್ತೇನೆ.

ಚೇಟಿ॥ ಆರ್ಯನು ನೋಡಬೇಕು- ಇದೇನಮ್ಮಮನೆಯಬಾಗಿಲು.

ವಿದೂ॥ (ನೋಡಿ ಆಶ್ಚರ್ಯದಿಂದ.) ಆಹ! ಕೆಳಗೆ ನೀರುಚಿಮುಕಿಸಿ ಸಾರಿಸಿಪರಿಣುಳ್ಳವಾದ ನೆಲವುನಾನಾವಿಧ ಪುಷ್ಪಗಳಿಂದ ಚಿತ್ರಾರಗೊಳಿಸಲ್ಪಟ್ಟದೆ. ಬಾಗಿಲ್ವಾಡವು ಗಗನವನ್ನು ನೋಡುವದಕ್ಕೆ ತಲೆಯ ನ್ನೆತ್ತಿ ಕೊಂಡಿರು ವಂತಿದೆ. ಅದಕ್ಕಲಂಕಾರ ಗೊಳಿಸಿದ ಮಲ್ಲಿಗೆಯ ದುಂಡು ದಂಡೆಯು ಓಲಾಡುತ್ತಿರುವ ಐರಾವತದ ಸೊಂಡಿಲೆಂಬಭ್ರಮೆಗೊಳಿಸುತ್ತಿದೆ. ಅಲ್ಲಲ್ಲಿ ಕುಸುಂಬದಬಣ್ಣದ ಧ್ವಜಪಟಗಳು ಗಾಳಿಗೆ ಕದಲುತ್ತ; ನನ್ನನ್ನುಇತ್ತಬಾ! ಇತ್ತಬಾರೆಂದು ಹೇಳುವಂತೆ ತೋರುತ್ತಿವೆ. ಎರಡುಕಡೆಯಲ್ಲಿಯೂ, ಹಚ್ಚಗಿರುವಮಾವಿನಚಿಗುರು ಗಳಂ ಕಟ್ಟಿದ ತೋರಣದ ಕಂಭಗಳಮೇಲಣ ಜಗುಲಿಗಳಲ್ಲಿ. ದಿವ್ಯ ಸ್ಫಟಿಕಮಂಗಳ ಕಲಶಗಳು ಶೋಭಿಸುತ್ತಿರುವವು. ವಜ್ರ ಖಚಿತವಾದ ಕದಗಳು ಮಹಾಸುರನ ವಕ್ಷಸ್ಥಳದಂತೆ ದುರ್ಭೇದ್ಯಗಳಾಗಿರುವವು. ಬಡವರ ಮನಸ್ಸಿಗಾಯಾಸವನ್ನುಮಾಡುವ ಈಗೃಹದ್ವಾರದ ಸಂಪತ್ತನ್ನೇನೆಂದು ಹೇಳಲಿ. ದಿಟವಾಗಿ ಇದು ವಿರಕ್ತರ ದೃಷ್ಟಿಯನ್ನು ಕೂಡ ಸೆಳೆಯುತ್ತಿದೆ.

ಮೃಚ್ಛಕಟಿಕಪ್ರಕರಣದಲ್ಲಿ,

ಚೇಟಿ॥ ಬರಬೇಕು, ಬರಬೇಕು. ಇದು ಮೊದಲನೆಯ ತೊಟ್ಟಿಯು. ಆರ್ಯನುಪ್ರ ಸಬೇಕು.

ವಿದೂ॥ (ಹೊಕ್ಕು ನೋಡಿ.) ಆಹ! ಈ ಮೊದಲನೆಯ ಕಟ್ಟಿನಲ್ಲಿ ಪಾಲ್ಗಾರೆಯಿಂದಾ ಈ ಉಪ್ಪರಿಗೆಗಳ ಸಾಲು, ಚಂದ್ರ, ಶಂಖ, ಮೃಣಾಳಗಳಂತೆ ಶುಭ್ರವಾಗಿ ನಾನಾವಿಧರತ್ನಗಳಿಂ ಕೆತ್ತಿದ ಚಿನ್ನದಸೋಪಾನಗಳಿಂದ ಬೆಳಗುತ್ತ; ಮುತ್ತಿನ ಸರಗಳಿಂದಲಂಕೃತಗಳಾದ ಸ್ಫಟಿಕದ ಕಿಟಕಿಗಳೆಂಬ ಚಂದ್ರಮುಖಗಳಿಂದ ಉಜ್ಜಯಿನಿಯನ್ನೇ ನೋಡುತ್ತಿರುವಂತಿದೆ. ಇಲ್ಲಿ ದ್ವಾರಪಾಲಕನು ಶ್ರೋತ್ರಿಯನಂತೆ ಸುಖವಾಗಿ ಕೂತುಕೊಂಡೇ ನಿದ್ರೆಹೋಗುತ್ತಿರುವನು. ಇಲ್ಲಿ ಇಟ್ಟಿರುವ ಮೊಸರನ್ನದ ಬಲಿಯನ್ನು ಕಾಗಿಗಳು ಸುಣ್ಣದಬಣ್ಣದ ಭ್ರಾಂತಿಯಿಂದ ತಿನ್ನದೇ ಯಿರುವವು. ಎಲೆ ಚೇಟಿ! ಮುಂದೆತೋರಿಸು.

ಚೇಟೀ॥ ಬರಬೇಕು ಬರಬೇಕು ಆರ್ಯನು. ಇದು ಎರಡನೆಯ ತೊಟ್ಟಿಯು.

ವಿದೂ॥ (ಹೊಕ್ಕು ನೋಡಿ.) ಆಹ! ಈಯೆರಡನೆಯ ಕಟ್ಟಿನಲ್ಲಿ ಯಾದರೋ- ಕಟ್ಟಿಹಾಕಿಸಿಕೊಂಡಿರುವ ಬಂಡಿಯ ಎತ್ತುಗಳು ಕೊಂಬುಗಳಿಗೆ ಯೆಣ್ಣೆಯನ್ನು ಬಳಿಯಿಸಿಕೊಂಡು, ಬಿಳಿಯ ಹುಲ್ಲು, ತೌಡು, ಮೊದಲಾದ್ದನ್ನು ತಿಂದು ಬಲಿತಿರುವವು. ಇದೋಯಿಲ್ಲಿ ಕುಲೀನನಾದ ಕೋಣವೊಂದು ಅವಮಾನ ಗೊಂಡವನ ಹಾಗೆ ನಿಟ್ಟುಸುರು ಬಿಡುತ್ತಿದೆ. ಇಲ್ಲಿ ಕುರಿಯು, ಯುದ್ಧ ದೊರೆಯದ ಜಟ್ಟಿಗನಹಾಗೆ ಕತ್ತನ್ನುಜಿಜ್ಜಿಕೊಳ್ಳುತ್ತಿದೆ. ಇಲ್ಲಿ ಕೆಲವು ಕುದುರೆಗಳಿಗೆ ಕೂದಲನ್ನು ಸರಿಮಾಡುತ್ತಿದಾರೆ. ಇದೋ ಇಲ್ಲಿ ಕುದುರೆಯ ಲಾಯದಲ್ಲಿ ಕಳ್ಳನನ್ನು ಬಿಗಿದಂತೆ ಕೋತಿಯನ್ನು ಕಟ್ಟಿರುವರು. (ಮತ್ತೊಂದುಕಡೆಗೆನೋಡಿ.) ಇದೋಯಿಲ್ಲಿ ಮಾವುತರು ಜಿಡ್ಡುಗೊಳಿಸಿದ ಅನ್ನದಮುದ್ದೆಯನ್ನು ಆನೆಗೆ ತಿನ್ನಿಸುತ್ತಿರುವರು. ಮುಂದೆ ನಡೆಯಿ.

ಚೇಟಿ॥ ಬರಬೇಕು ಬರಬೇಕು. ಇದುಮೂರನೆಯ ತೊಟ್ಟಿಯು. ಆರ್ಯನುಒಳಕ್ಕೆ ಪ್ರವೇಶಿಸಬಹುದು-

ವಿದೂ॥ (ಹೊಕ್ಕುನೋಡಿ) ಆಹಾ! ಈಮೂರನೆಯ ಕಟ್ಟಿನಲ್ಲಿ ದೊಡ್ಡಮನುಷ್ಯರು ಕೂತುಕೊಳ್ಳುವದಕ್ಕಾಗಿ ಒಳ್ಳೆಯದಾದ ಆಸನಗಳನ್ನು ಸಿದ್ಧಪಡಿಸಿದೆ. ವ್ಯಾಸಪೀಠದಲ್ಲಿ ಅರ್ಧಓದಿದ ಪುಸ್ತಕಗಳನ್ನು ತೆರದೇಯಿಟ್ಟಿರುವರು. ಹಾಗೆಯೆ ಯಿತ್ತ ಕಡೆಯಲ್ಲಿ ಪಗಡೆಯ ಗುಳಿಗೆಗಳೂ, ರತ್ನಪಾಚಿಕೆಗಳೂ, ಚಿತ್ರದಹಾಸಂಗಿಯೂ ಇರುವವು. ಇದೋಇಲ್ಲಿ ಮುದಿಸೂಳೆಯರೂ ವೃದ್ಧವಿಟರೂ ಮನ್ಮಥಸಂಧಿವಿಗ್ರಹಗಳಲ್ಲಿ ಜಾಣರಾಗಿ ನಾನಾವಿಧದ ಬಣ್ಣಗಳಿಂದಿರುವ ಭಾವಚಿತ್ರ ಪಟಗಳನ್ನುಕೈಯಲ್ಲಿ ಹಿಡಿದುಕೊಂಡು ಅಲ್ಲಿಗಿಲ್ಲಿಗೆ ಸುಳಿದಾಡುತ್ತಿರುವರು- ಸರಿ. ಮುಂದಕ್ಕೆನಡೆಯಿ.

ಚೇಟಿ॥ ಆರ್ಯನು ಬರಬೇಕು. ಇದು ನಾಲ್ಕನೆಯ ತೊಟ್ಟಿಯು, ಒಳಗೆ ಬರಬೇಕು.

ವಿದೂ॥ (ಹೊಕ್ಕು ನೋಡಿ) ಆಶ್ಚರ್ಯವು! ಪ್ರಾಯದ ಹೆಂಗಸರು ಕೈಯಿಂದ ಪೆಟ್ಟುತಿಂದ ಮದ್ದಳೆಯು ಮೇಘದಂತೆ ಗಂಭೀರಧ್ವನಿಯನ್ನು ಮಾಡುತ್ತಿದೆ. ಆಕಾಶದಿಂದ ಕ್ಷೀಣಪುಣ್ಯಗಳಾದ ನಕ್ಷತ್ರಗಳಹಾಗೆ ಕಂಚಿನ ತಾಳಗಳು ಬೀಳುತ್ತಾ ಬೆಳಗುತ್ತಿವೆ. ಕೊಳಲು, ಭ್ರಮರಗಳ ಝೇಂಕಾರದಹಾಗೆ ಯಿಂಪಾಗಿ ಧ್ವನಿಮಾಡುತ್ತಿರುವದು. ವೀಣೆಯು ಪ್ರಣಯಕಲಹದಿಂದ ಕೋಪಮಾಡಿಕೊಂಡ ಪ್ರಮದೆಯಹಾಗೆ ತೊಡೆಯಮೇಲೆ ಕೂತುಕೊಂಡು ಬೆರಳುಗಳಿಂದ ತಿದ್ದಿಸಿಕೊಳ್ಳುತ್ತ ಸೂಕ್ಷ್ಮಸ್ವರದಿಂದ ಮಾತನಾಡುತ್ತಿರುವದು. ಸೂಳೆಯ ಹುಡುಗಿಯರಿಲ್ಲಿ ಮಧುಪಾನಮತ್ತ ಮಧುಕರಿಗಳಹಾಗೆ ಮಧುರವಾಗಿ ಹಾಡುತ್ತಾ ಶೃಂಗಾರ ವೈಖರಿಗಳಿಂದ ನಾಟ್ಯಪಾಠವನ್ನು ಮಾಡುತ್ತಿದ್ದಾರೆ, ಇದೋಯಿಲ್ಲಿ ನೀರಿನ ಹೂಜಿಗಳು ಕಿಟಕಿಗಳಲ್ಲಿದ್ದು ಗಾಳಿಯನ್ನು ಸೇವಿಸುತ್ತಿವೆ. ಮುಂದೆ ನೋಡೋಣ ನಡೆ.

ಚೇಟಿ॥ ಬರಬೇಕು. ಇದು ಅಯಿದನೆಯ ತೊಟ್ಟಿಯು ಒಳಕ್ಕೆ ಬರಬೇಕು.

ವಿದೂ॥ (ಒಳಕ್ಕೆ ಬಂದು ನೋಡುತ್ತಾ) ಓಹೋ! ಈ ಐದನೆಯ ತೊಟ್ಟಿಯಲ್ಲಿ ಯೇನು ಈ ಯೆಣ್ಣೆಯ ವಾಸನೆಯು, ಇಂಗಿನ ವಾಸನೆಯೂ ಬಡವರಿಗೆ ಲೋಭವನ್ನುಂಟುಮಾಡುತ್ತಿದೆ? ಯೀ ಅಡಿಗೆಯಮನೆಯು ನಾನಾವಿಧವಾದ ಪರಿಮಳದ ಹೊಗೆ ಬರುವ ದ್ವಾರಮುಖದಿಂದ ನಿತ್ಯವೂ ಸುಡಿಸಿಕೊಳ್ಳುತ್ತ ನಿಟ್ಟುಸಿರು ಬಿಡುತ್ತಿರುವಂತಿರುವುದು. ಆಗುತ್ತಿರುವ ಭಕ್ಷ್ಯಭೋಜ್ಯಗಳ ವಾಸನೆಯು ಬಹಳವಾಗಿ ನನಗೆ ತಿಂಡಿಯ ಬಯಕೆಯನ್ನು ಮಾಡುತ್ತಿದೆ. ಇದೋಯಿಲ್ಲಿ ಮತ್ತೊಬ್ಬ ಸೊಗಸಾದ ಹುಡುಗನು ಹಳೆಯ ಬಟ್ಟೆಯನ್ನು ಕಸುಕುವಹಾಗೆ ಮಾಂಸವಿಶೇಷವನ್ನು ಕಸುಕುತ್ತಿರುವನು. ಇಲ್ಲಿ ಅಡಿಗೆಯವನು, ನಾನಾವಿಧವಾದ ಅಡಿಗೆಯನ್ನು ಮಾಡುತ್ತಿರುವನು ಮತ್ತಾ ಇಲ್ಲಿ ಲಡ್ಡುಗಳನ್ನುಂಡೆ ಮಾಡುತ್ತಿರುವರು, ಕಡುಬುಗಳನ್ನು ಕಟ್ಟುತ್ತಿರುವರು (ಮನಸ್ಸಿನಲ್ಲಿ) ಯೀಗಲಿಲ್ಲೇನಾದರೂ ನನ್ನನ್ನು ಯಥೇಚ್ಛವಾಗಿ ಭಕ್ಷಿಸೆಂದು ಕಾಲಿಗೆ ನೀರು ಕೊಡುವರೋ? (ಮತ್ತೊಂದು ಕಡೆಗೆ ನೋಡಿ) ಆಹಾ! ಇಲ್ಲಿ ಗಂಧರ್ವರ ಹಾಗೆ ವಿವಿಧಾಲಂಕಾರದಿಂದ ಬೆಳಗುತ್ತಿರುವ ಸೂಳೆಯರಿಂದಲೂ, ಬಂಧುಲರಿಂದಲೂ, ಕೂಡಿದ ಯೀ ಮನೆಯು ದಿಟವಾಗಿ ಸ್ವರ್ಗದಹಾಗೆಯೇ ತೋರಿತ್ತಿರುವುದು.। ಅಯ್ಯಾ! ಬಂಧುಲರೆನಿಸಿಕೊಳ್ಳುವ ನೀವು ಯಾರು?

ಬಂಧುಲರ್:— ಅಮಾದೊಡೆ:—

ವೃ॥ ಪರಭವನದೊಳನ್ನಂ ತಿಂದು ಪುಷ್ಟಾಂಗರೆಂದುಂ
ಪರಧನನಿರತರ್ಮೇಣ್ ನಿರ್ಗುಣರ್ ಸ್ವಸ್ಥಚಿತ್ತರ್
ಪರನರ ಪರನಾರೀ ಸಂಭವರ್ ಬಂಧುಲಾಖ್ಯರ್
ಕರಿಕಲಭದ ಪಾಂಗಿಂ ಕ್ರೀಡಿಸುತ್ತಿರ್ಪೆವೀಗಳ್॥೧೦॥

ಮೃಚ್ಛಕಟಿಕಪ್ರಕರಣದಲ್ಲಿ,

ವಿದೂ॥ ಸರಿ- ಚೇಟಿಯೇ! ಮುಂದೆತೋರಿಸು-

ಚೇಟಿ॥ ಬರಬೇಕು ಬರಬೇಕು, ಇದು ಆರನೆಯ ತೊಟ್ಟಿಯು ಆರ್ಯನುಒಳಗೆಬರಬೇಕು

ವಿದೂ॥ (ಬಂದುನೋಡಿ) ಯೀಯಾರನೆಯ ತೊಟ್ಟಿಯಲ್ಲಿಯೂ ನೀಲರತ್ನ ನಿಬದ್ಧಗಳಾದ
ಚಿನ್ನದ ರನ್ನದ ತೋರಣಗಳು, ಇಂದ್ರಾಯುಧದ ಹಾಗೆ ತೋರುತ್ತಿರುವವು
ಶಿಲ್ಪಿಗಳಲ್ಲಿ ಒಬ್ಬರಿಗೊಬ್ಬರು ಮುತ್ತು ಹವಳ ಪಚ್ಚೆಮುಂತಾದ ರತ್ನಗಳನ್ನು
ಜೋರಿಸುತ್ತಿರುವರು- ಕೆಲವರಿಲ್ಲಿ ಮಾಣಿಕ್ಯಗಳನ್ನು ಹೊನ್ನಿನಿಂದಬಿಗಿಸುವರು. ಕೆ
ವರು ಮುತ್ತುಗಳ ಪೋಣಿಸುತ್ತಿರುವರು. ಕೆಲವರು ಶಂಖಗಳನ್ನುಜಜ್ಜುತ್ತಿರುವ
ರು, ಕೆಲವರು ಹವಳಗಳನ್ನು ಸಾಣೆಯಿಡುತ್ತಿರುವರು: ಕೆಲವರಿಲ್ಲಿ ಹಸಿಯಕು
ಕುಮವನ್ನು ಒಣಗಿಸುವರು, ಮತ್ತೆ ಕೆಲವರು ಕಸ್ತೂರಿ ಯನ್ನು ಸಂಸ್ಕರಿಸುವ
ರು, ಗಂಧವನ್ನು ತೆಯ್ಯುವರು, ಸಕರ್ಪೂರ ತಾಂಬೂಲಗಳನ್ನು ಸೂಳೆಯರಿಗೂ
ವಿಟರಿಗೂ ತೆಗದುಕೊಂಡು ಹೋಗಕೊಡುತ್ತಿರುವರು. ಮತ್ತೂ ಇಲ್ಲಿ ಒಬ್ಬರ
ನ್ನೊಬ್ಬರು ಕಟಾಕ್ಷಿಸೋಣವು, ಪರಿಹಾಸಮಾಡೋಣವು, ಸೀತ್ಕಾರಧ್ವನಿಯೊ
ಡನೆ ಮದ್ಯಪಾನಮಾಡೋಣವು ಬಹುಸೊಗಸಾಗಿರುವದು - ಇದೋಯಿಲ್ಲಿ ಚೇ
ಟರು ಚೇಟಿಯರು, ಇನ್ನೂ ಇತರ ಮನುಷ್ಯರೂ ಕೂಡ ತಂತಮ್ಮ ಮನೆ,ಮ
ಕ್ಕಳು , ಹೆಂಡಿರು, ಹಣಗಳನ್ನು ತೃಣಪ್ರಾಯವಾಗಿ ನೋಡುತ್ತಿರುವರು: ಸರಿ-
ಚೇಟಿಯೇ! ಮುಂದೆ ತೋರಿಸು.

ಚೇಟಿ॥ ಬರಬೇಕು, ಇದು ಏಳನೆಯತೊಟ್ಟಿಯು, ಒಳಕ್ಕೆ ಬರಬೇಕು-

ವಿದೂ॥ (ಹೊಕ್ಕುನೋಡುತ್ತಾ) ಆಹಾ ಯೀಯೇಳನೆಯತೊಟ್ಟಿನಲ್ಲಿಯೂ ಪಾರಿವಾಳ
ದ ಹಕ್ಕಿಗಳದಂಪತಿಯು, ಲೋವೆಗಳಲ್ಲಿ ಸುಖವಾಗಿ ಕೂತುಕೊಂಡುಒಂದರ
ನ್ನೊಂದು ಅಪ್ಪಿಕೊಳ್ಳುತ್ತಾ ಮುದ್ದಾಡುತ್ತಿರುವುವು. ಪಂಜರದಗಿಳಿಯು, ಬ್ರಾ
ಹ್ಮಣನಹಾಗೆ ಹೊಟ್ಟೆತುಂಬ ಮೊಸರನ್ನವನ್ನುಂಡು ಸೂಕ್ತವನ್ನು ಪಠಿಸುತ್ತಿದೆ.
ಕೋಗಿಲೆಯು, ಅನೇಕಫಲಗಳ ರಸವನ್ನುಂಡು ಸೊಗಸಾದ ಕಂಠದಿಂದ ಕೂಗು
ತ್ತಿದೆ. ಆನೆಗಳದಂತದ ಗೂಟಗಳಿಗೆ ಪಂಜರಗಳಪಂತಿಗಳು ನೇತಾಡುತ್ತಿರುವ
ವು ಲಾವುಕಗಳು ಜಗಳವಾಡುತ್ತಿವೆ. ಕಪಿಂಜಲಗಳು ಮಾತನಾಡಿಸಿಕೊಳ್ಳುತ್ತಿ
ವೆ. ನವಿಲುಗಳು ರೆಕ್ಕೆಗಳನ್ನು ಮೇಲಕ್ಕೆತ್ತಿ ತೆರೆಯುತ್ತಾ ಬಿಸಿಲಿನಿಂದಬೆಂದ ಉ
ಪ್ಪರಿಗೆಯನ್ನುನಾನಾರತ್ನಚಿತ್ರಿತವಾದ ತನ್ನಗರಿಗಳಿಂದ ಬೀಸುತ್ತ ಕುಣಿಯುತ್ತಿ
ರುವವು (ಮತ್ತೊಂದುಕಡೆಗೆನೋಡಿ) ಇದೋಯಿಲ್ಲಿ ಅರಸಂಚೆಗಳಜತೆಯು, ಉಂ
ಡೆಯಾಗಿಮಾಡಿದ ಬೆಳದಿಂಗಳಹಾಗೆತೋರುತ್ತ, ಹೆಂಗುಸರಿಗೆ ಹೆಜ್ಜೆಯಿಡುವ
ದನ್ನೂ ಕಲಿಸುವಂತೆ ಅವರಹಿಂದೆಯೇ ತಿರುಗುತ್ತಿರುವವು - ಮನೆಯಸಾರಸಪ
ಕ್ಷಿಗಳು ವಿಚಾರಿಸಿ ಕೊಳ್ಳುವಮುದುಕರಂತೆ ಓಡಾಡುತ್ತಿವೆ- ಆಹಾ! ಬಹುಪಕ್ಷಿ

ಗಳು ಈ ಸೂಳೆಯರನ್ನು ವ್ಯಾಪಿಸಿ ಕೊಂಡಿರುವದರಿಂದ ಈ ಮನೆಯು ದಿಟವಾಗಿ ನಂದನವನವೋ ಎಂಬುವ ಹಾಗೆಯೇ ಕಾಣುತ್ತಿರುವದು॥ ಚೇಟಿಯೇ! ಮುಂದೆ ತೋರಿಸು.

ಚೇಟಿ॥ ಬರಬೇಕು ಆರ್ಯನು. ಇದು ಎಂಟನೆಯ ತೊಟ್ಟಿಯು. ಒಳಗೆಬರಬೇಕು.

ವಿದೂ॥ (ಹೊಕ್ಕುನೋಡಿ.) ಎಲೆ! ಪಟ್ಟೆಯ ಮಡಿಯನ್ನುಟ್ಟು ಕೊಂಡು ಹೆಚ್ಚು ಒಡವೆಗಳನ್ನೂ ಇಟ್ಟುಕೊಂಡು ಕೈಕಾಲು ಸೋತವರಂತೆ ಎಡವರಿಸುತ, ತಡವರಿಸುತ್ತ ಹೀಗೆ ತಿರುಗುತ್ತಿರುವ ನಿವನುಯಾರು?

ಚೇಟಿ॥ ಅಯ್ಯಾ! ಇವನೇ ನಮ್ಮಕ್ಕನ ಅಣ್ಣನು.

ವಿದೂ॥ ಎಷ್ಟು ತಪಸ್ಸುಮಾಡಿ ವಸಂತಸೇನೆಗೆ ಅಣ್ಣನಾದನೋ? ಅಥವಾ ಹಾಗಲ್ಲವು. ಇವನು ಕೆಂಪಗೆ, ನುಣ್ಣಗೆ, ಗಂಧವನ್ನು ಹಚ್ಚಿಕೊಂಡು ಎಷ್ಟು ಸೊಗಸುಮಾಡಿ ಕೊಂಡರೂ ಸುಡುಗಾಡಿನಲ್ಲಿ ಹುಟ್ಟಿದ ಸಂಪಿಗೆಯ ಹಾಗೆ ಜನಕ್ಕೆ ಬೇಡದವನಲ್ಲವೆ; (ಮತ್ತೊಂದುಕಡೆಗೆನೋಡಿ.) ಎಲೆಚೇಟೀ! ಇವಳುಯಾರು? ಹುವ್ವಿನ ಸೀರೆಯನ್ನುಟ್ಟು ಕೊಂಡು, ಕಾಲಿಗೆಣ್ಣೆಯನ್ನು ಬೊಳಿಸಿಕೊಂಡು ಎಕ್ಕಡವನ್ನು ಮೆಟ್ಟಿ ಎತ್ತರವಾದ ಆಸನದಲ್ಲಿ ಕೂತು ಕೊಂಡಿರುವಳು?

ಚೇಟಿ॥ ಅಯ್ಯಾ! ಇವಳೇ ನಮ್ಮಕ್ಕನಿಗೆ ತಾಯಿಯಲ್ಲವೆ?

ವಿದೂ॥ ಆಶ್ಚರ್ಯವು. ಇದೇ ನಿವಳಹೊಟ್ಟೆಯು? ಡಾಕಿನಿಯೆ ಇವಳು! ಆದರೆ ಇವಳನ್ನು ಮುಂಚೆಯೇ ಮಹಾದೇವ ಪ್ರತಿಮೆಯಂತೆ ಮನೆಯೊಳಗಿಟ್ಟು ಆಮೇಲೆಬಾಗಿಲಿಟ್ಟರಾದೀತು?

ಚೇಟಿ॥ ಹತಾಶನೇ! ನಮ್ಮತಾಯಿಯನ್ನು ಹೀಗೆ ಹಾಸ್ಯಮಾಡಬೇಡ. ಇವಳಿಗೀಗ ಚಾತುರ್ಥಿಕ ಜ್ವರಬರುತ್ತಿದೆ ಯಲ್ಲವೆ?

ವಿದೂ॥ (ಪರಿಹಾಸದಿಂದ) ಭಗವಂತನಾದ ಚಾತುರ್ಥಿಕ ಜ್ವರವೇ! ಇಂಥಾ ಉಪಚಾರದಿಂದ ಬ್ರಾಹ್ಮಣನಾದನನ್ನನ್ನೂ ನೋಡಬಾರದೇ?

ಚೇಟಿ॥ ಹತಾಶನೇ! ಸಾಯುತ್ತೀಯೆ.

ವಿದೂ॥ (ಪರಿಹಾಸದಿಂದ.) ತೊತ್ತಿನಮಗಳೇ! ಹೀಗೆ ದೊಡ್ಡದಾಗಿ ಹೊಟ್ಟೆ ಯಿಂದಬೆಳೆಯುತಾ ಸಾಯುವದೂ ಮೇಲಲ್ಲವೆ?

ಕಂ॥ ಕುಡಿದು ಸುರಾಸವ ಸೀಧುವ
ನೊಡನಿಂಥಾ ಮದದವಸ್ಥೆಯನುಪಡೆದೀಗಳ್
ಮಡಿದಿರೆ ಯಿಲ್ಲೀ ತಾಯಿಯು
ಪಡೆವುವು ಸಂತೋಷವನ್ನು ಸಾವಿರನರಿಗಳ್॥ ೧೦॥

ಎಲೆ ಚೇಟಿಯೇ! ನಿಮಗೇನಾದರೂ ವ್ಯಾಪಾರದ ಹಡಗುಗಳುಂಟೋ?

ಚೇಟಿ॥ ಆರ್ಯನೇ! ಇಲ್ಲ, ಇಲ್ಲ.

ವಿದೂ॥ ಅಥವಾ ನಿಮ್ಮನ್ನ ಕೇಳ ತಕ್ಕದ್ದೇನಿಲ್ಲ? ನಿಮ್ಮ ಜನಕ್ಕಾದರೋ- ಪ್ರೇಮಜ ನಿರ್ಮಲವಾದನೀರುಳ್ಳ ಮದನಸಮುದ್ರದಲ್ಲಿ ಸ್ತನನಿತಂಬಜಘನಗಳೇ ಮನೋ- ಹರವಾದ ಹಡಗುಗಳಾಗಿವೆ. ಹೀಗೆಯೇ ವಸಂತಸೇನೆಯ ಬಹುಸಂಪತ್ತಿನ ಸ್ಥಿ- ಯನ್ನು ನೋಡಿದರೆ ಒಂದುಕಡೆಯೇ ನಿಂತು ಮೂರು ಲೋಕವನ್ನೂ ನೋಡಿದ ಹಾಗಾಯಿತು. ಇದರನ್ನು ಹೊಗಳುವದಕ್ಕೆ ನನಗೆಬಾಯಿಸಾಲದು. ಇದೇನು ಸೂ- ಳೆಯಮನೆಯೋ! ಕುಬೇರನಮನೆಯೋನೋ? ಎಂಬಂತಿದೆ. ನಿಮ್ಮಕ್ಕನೆಲ್ಲಿ?

ಚೇಟಿ॥ ಆರ್ಯನೇ! ನಮ್ಮಕ್ಕನು ಇದೋತೋಟದಲ್ಲಿದ್ದಾಳೆ. ಒಳಗೆ ಬರಬೇಕು.

ವಿದೂ॥ (ಪ್ರವೇಶಮಾಡಿನೋಡಿ) ಆಶ್ಚರ್ಯವು. ತೋಟದಸಂಪತ್ತು ಎಷ್ಟುಸೊಗಸಾ- ಗಿದೆ. ಎಲ್ಲಮರಗಳಲ್ಲಿಯೂ ಬಳ್ಳಿಗಳಲ್ಲಿಯೂ, ನಿರ್ಮಲವಾಗಿ ಅರಳಿದ ಸು- ಗಂಧ ಪುಷ್ಪಗಳು ಪ್ರಕಾಶಿಸುತ್ತಿರುವವು. ಮರಗಳ ಬುಡದಲ್ಲಿ ಯುವತಿಜನಗಳ ವಿಹಾರಾರ್ಥವಾಗಿ ಪಟ್ಟೆ ದುಯ್ಯಾಲೆಗಳಿವೆ, ಮಲ್ಲಿಗೆ, ಮಾಲತಿ, ಗುಲಗಂಜಿ, ಗೋರಂಟಿ ಮುಂತಾದ ಹುವ್ವುಗಳು ಕೆಳಗುದುರಿರುವದನ್ನು ನೋಡಿದರೆ ದಿಟ- ವಾಗಿ ಆ ನಂದನವನವನ್ನು ಹೀಯಾಳಿಸುವಂತಿದೆ. (ಮತ್ತೊಂದು ಕಡೆಗೆನೋಡಿ) 'ಇದೋಯಿಲ್ಲಿ ಉದಯಿಸುತ್ತಿರುವ ಸೂರ್ಯನಿಗೆ ಸಮಾನವಾದ ಕಾಂತಿಯು- ಳ್ಳತಾವರೆ, ಕೆಂದಾವರೆ, ಗಳಿಂದ ಕೊಳವು ಸಂಧ್ಯಾರಾಗವನ್ನುಂಟುಮಾಡುತ್ತಿ- ದೆ. ಮತ್ತೂ ಇಲ್ಲಿ

ಕಂ॥ ಅಸುಗೆಯ ಮರವಿದು ತೋಟದೆ
ಪೊಸಚಿಗುರುಂ ಹುವ್ವುತುಂಬಿ ಕಾಳಗದಲ್ಲೀ॥
ಪೊಸರ ಕುತದ ಕೆಸರನ್ನಲೀ
ಪಸಿದ ಸುಭಟನಂತೆ ಬೆಳಗುತಿರುವುದುಮುಂದೇ॥೧೦೬॥

ಇರಲಿ. ಆದರೆ ನಿಮ್ಮಕ್ಕನೆಲ್ಲಿ?

ಚೇಟಿ॥ ಆರ್ಯನೇ? ನೋಟವನ್ನು ತಗ್ಗಿಸು. ನೋಡು ಅಕ್ಕನನ್ನು.

ವಿದೂ॥ (ನೋಡಿಬಳಿಗೆಬಂದು.) ನಿನಗೆಮಂಗಳವಾಗಲಿ.

ವಸಂ:—ಎಲೆಲೆ! ಮೈತ್ರೇಯಂ (ಎಳ್ದು) ಬರಲಕ್ಕುಂ. ಇದೋಆಸನಂ ಇತ್ತಲ್ ಕುಳ್ಳಿ- ರಲಕ್ಕುಂ*

---

*"ಕಾರ್ಯತಶ್ಶೋತ್ತಮಾದೀನಾಂ ಕಾರ್ಯೋಭಾಷಾವಿಪರ್ಯಯಃ। ಯೋಷಿತ್ಸಖೀ ಬಾಲವೇಶ್ಯಾ ಕಿತವಾಪ್ಸರಸಾಂ ತಥಾ॥ ವೈದಗ್ಧ್ಯಾರ್ಥಂ ಪ್ರದಾತವ್ಯಂ ಸಂಸ್ಕೃತಂ ಚಾಂತರಾಂತರಾ॥" ಎಂದಿರ್ಪುದರಿಂದ ಪಳೆಗನ್ನಡಮುಂ ಪೇಳಲಕ್ಕುಂ

ವಿದೂ॥ ನೀನು ಕೂತುಕೊಳ್ಳಬೇಕು. (ಇಬ್ಬರೂ ಕೂತುಕೊಳ್ಳುವರು.)

ವಸಂತ:— ಸಾರ್ಥವಾಹ ತನಯಂಗೆ ಕುಶಲಮೇ?

ವಿದೂ॥ ಕುಶಲವು.

ವಸಂತ:— ಆರ್ಯ ಮೈತ್ರೇಯನೇ ಈಗಳುಂ.

ಕಂ॥ ನಂಬುಗೆ ಬೇರ್, ದಾಕ್ಷಿಣ್ಯಂ
ಬಂಬಲ್, ದಯೆ ಪೂ, ಗುಣಂ ಫಲಂ, ತದ್ವಿನಯಂ।
ಕೊಂಬೆಗಳಾಗಿರೆ ಸೊಗದಿಂ
ತುಂಬುಗುಮೇ ಸಾಧುತರುವ ಮಿತ್ರಖಗಂಗಳ್?॥ ೧೦೭॥

ವಿದೂ॥ (ತನ್ನಲ್ಲಿ ತಾನು) ಈ ಕೆಟ್ಟ ಸೂಳೆಯುಮಗಳು ಚೆನ್ನಾಗಿ ಹೇಳಿದ ಳಲ್ಲಾ? (ಪ್ರಕಾಶವಾಗಿ) ಅಹುದು.

ವಸಂ:— ಅಯ್ಯಾ! ಬಂದ ಹದನೇಂ?

ವಿದೂ॥ ಕೇಳಬೇಕು. ಪೂಜ್ಯನಾದ ಚಾರುದತ್ತನ ತಲೆಯಮೇಲೆ ಕೈಯಿರಿಸಿಕೊಂಡು ಆರ್ಯಳಿಗೆ ವಿಜ್ಞಾಪನೆಯನ್ನು ಮಾಡಿಕೊಳ್ಳುತ್ತಾನೆ.

ವಸಂತ:— (ಕೈಮುಗಿದು) ಏಂ ಬೆಸಸಿದಪಂ?

ವಿದೂ॥ "ಜೂಜಿನಲ್ಲಿ ಆ ಸುವರ್ಣ ಭಾಂಡವು ವಿಶ್ವಾಸದಿಂದ ತನ್ನದೆಂದು ತಿಳಿದುಕೊಳ್ಳದು ಕೊಳ್ಳೋಣವಾಯಿತು. ಅದರನ್ನು ತೆಗದುಕೊಂಡು ಹೋದ ರಾಜವಾರ್ತಾವಹನಾದ ಸಭಿಕನು ಎಲ್ಲಿಗೆ ಹೋದನೋ ಕಾಣೆನು."

ಚೇಟಿ॥ ಅಕ್ಕಾ! ಪುಣ್ಯದಿಂದ ಬೆಳೆಯುತ್ತೀಯೆ. ಆರ್ಯನೂ ಜೂಜುಗಾರನಾದನು.

ವಸಂ॥ (ತನ್ನೊಳು.) ಇದೇನು ಕಳ್ಳನು ತೆಗದುಕೊಂಡು ಹೋಗಿದ್ದರೂ ಕೂಡ ಔದಾರ್ಯದಿಂದ ಜೂಜಿನಲ್ಲಿ ಹೋಯಿತೆಂದು ಹೇಳುತ್ತಾನಲ್ಲಾ? ಅದರಿಂದಲೇ ವರಿಸಬೇಕಾಗಿದೆ.

ವಿದೂ॥ ಆದ್ದರಿಂದ ಅದಕ್ಕೋಸುಗವೇ ತಾವು ಈ ರತ್ನಾವಳಿಯನ್ನು ತೆಗದು ಕೊಳ್ಳಬೇಕು" ಎಂದು.

ವಸಂ॥ (ತನ್ನೊಳು.) ಏನಾ ಯಲಂಕಾರವನ್ನು ತೋರಿಸಲೋ? (ಯೋಚಿಸಿ) ಅಥವಾ ಈಗಬೇಡವು.

ವಿದೂ॥ ಆದರೆ ಯೇನೀ ರತ್ನಾವಳಿಯನ್ನು ತೆಗದುಕೊಳ್ಳುವದಿಲ್ಲವೋ?

ವಸಂ॥ (ನಕ್ಕು ಗೆಳತಿಯ ಮುಖವಂ ನೋಡುತ್ತ) ಮೈತ್ರೇಯನೇ! ರತ್ನಾವಳಿಯನ್ನು ಹೇಗೆ ತೆಗದುಕೊಳ್ಳದೇ ಯಿರುವೆನು. (ಎಂದು ತೆಗದುಕೊಂಡು ಪಕ್ಕದಲ್ಲಿಟ್ಟುಕೊಂಡು; ತನ್ನೊಳು) ಇದೇನು ಮಾವಿನ ಮರದಲ್ಲಿ ಹೂವಿಲ್ಲದಿದ್ದರೂ ಮಕರಂದ ಬಿಂದುಗಳು ಬೀಳುತ್ತಿವೆ. (ಪ್ರಕಾಶವಾಗಿ) ಆರ್ಯ ಮೈತ್ರೇಯನೇ! ದ್ಯೂತಕರ

ನಾದಾ ಚಾರುದತ್ತಾರ್ಯನಿಗೆ "ನಾನೂ ಪ್ರದೋಷಕಾಲದಲ್ಲಿ ಬಂದ
ಡುವೆನು" ಎಂದು ವಿಜ್ಞಾಪನೆಯನ್ನು ಮಾಡಬೇಕು.

ವಿದೂ॥ (ತನ್ನೊಳು.) ಏನಲ್ಲಿಗೆ ಹೋಗಿ ಮತ್ತಷ್ಟು ತೆಗದುಕೊಳ್ಳುವದಕ್ಕೋ? (ಪ್ರ
ಕಾಶವಾಗಿ) ಪೂಜ್ಯಳೇ! ಹೇಳುವೆನು. (ಮನಸ್ಸಿನಲ್ಲಿ) ಈ ಸೂಳೆಯರ ಸಂಹಸ
ಬಿಡಬೇಕೆಂದು-

(ಎಂದು ಹೊರಟುಹೋದನು)

ವಸಂ॥ ಚೇಟಿಯೇ! ಈಯಲಂಕಾರವನ್ನು ತೆಗದಿರಿಸು -ಚಾರುದತ್ತನೊಡನೆ ವಿನೋದಿ
ಹೋಗೋಣ-

ಚೇಟಿ॥ ಅಮ್ಮಾ! ನೋಡು ನೋಡು; ಕಾಲನಲ್ಲದ ಕಾಲದಲ್ಲಿ ಜಡಿಹಿಡಿದಿದೆ.

ವಸಂ:—ಕಂ॥ ಮುಗಿಲೊಡ್ಡು ಕವಿಗೆ, ಮಳೆಸೂ
ಸುಗೆ, ಸಂತತಮುಕ್ಕೆ ಮುಬ್ಬರ್, ಮಿರುಳಾದೊಡಮಾಂ।
ಬಗೆಯುಸಿದೊಂದಂ ದಯಿತಾ
ಭಿಗಮನ ದಾತ್ಸುಕ್ಯ ಮಾಂತ ಚಿತ್ತ್ರದಿನೀಗಳ್॥ ೧೦೮॥

ಚೇಟಿಯೇ! ಹಾರವನ್ನು ತೆಗದುಕೊಂಡು ಬೇಗನೆ ಬಾ.

(ಎಂದೆಲ್ಲರ್ ಪೊರಮಟ್ಟರ್)

ಇಂತೆಂ ಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್

ಮದನಿಕಾಶರ್ವಿಲಕವೆಂಬ

ನಾಲ್ಕನೆಯ ಅಂಕಂ

ಮುಗಿದುದು-

ಮೃಚ್ಛಕಟಿಕ ಪ್ರಕರಣಂ.

ಪಂಚಮಾಂಕಂ.

[ಬಳಿಕ ಆಸನದಲ್ಲಿ ಕುಳಿತ ಚಾರುದತ್ತನುತ್ಕಂಠೆಯೊಡನೆ ಪುಗುವಂ]

ಚಾರು:—(ಮೇಲೆನೋಡಿ) ಅಕಾಲದೊಳ್ ದುರ್ದಿನಂ ನೆಗಳ್ದುದು. ಅದೆಂತೆನೆ:—

ವೃ॥ ಆಲಯ ನೀಲಕಂಠತತಿ ಪೀಲಿಗಳಂ ನೆಗಪುತ್ತೆ ನಿಟ್ಟೆಸಲ್।
ಮೇಲೆ, ಮರಾಳರಾಜಿ ಗಮನೇಚ್ಛೆಯಿನೇಳ್ದಿರೆ ಮಾನಸೋತ್ಸುಕಂ।
ಕಾಲಿಕೆ ಮಲ್ಲದಿರ್ಪ ಗುರುದುರ್ದಿನಮಿಂತಿದು ಗಾಳಿವಟ್ಟೆಯುಂ।
ಲೀಲೆಯನಾಂತರಾಗಿಗಳ ಚಿತ್ತಮನುಂ, ಸಮಮಾಗಿ ಮುತ್ತುಗುಂ॥ ೧೦೯॥

ವೃತ್ತಂ॥ ಮುಗಿಲಿದು; ತೋಯಸಿಕ್ತ ಮಹಿಷೋದರ ದಂತಳಿ ಶ್ಯಾಮದಂತಿಕಂ।
ಪೊರ್ಗೆದಿರೆ, ಪೀತವಸ್ತ್ರ ಮೆನಿಸುತ್ತಿರೆ ಮಿಂಚಿನ ರಶ್ಮಿಮಂಡಲಂ।
ಬಗೆಯೆ ಬಲಾಕ ಪಙ್ಕ್ತಿ ಕರ ದೊಳ್ಪಿಡಿದಿರ್ದ ಸುಶಂಖದಂತಿರಲ್।
ಗಗನಮನಾಕ್ರಮಂ ಗೊಳೆ ಮಗುಳ್ದ ಪರಾಚ್ಯುತನಂತೆ ತೋರುಗುಂ॥

ವೃತ್ತಂ॥ ವಾರಿದ ತುಂಡದಿಂದೆ ಜವದಿಂದೆಜಗುಳ್ದ ವಿಘಾತಮಾದಪೀ।
ಧಾರೆಗಳೀಗಳಿಲ್ಲಿ ಕರಗಿಟ್ಟು ಬಳಿಚ್ಚಿದ ರಾಜತದ್ರವ।
ಕ್ಕೋರಗೆಯಾಗಿ, ಮಿಂಚೆನಿಪ ದೀವಿಗೆಯಿಂ ಕ್ಷಣದೃಷ್ಟಮಾಗಿಮೇಣ್।
ತೋರುಗು ಮಂಬರಾಂಶುಕ ನಿಕೃತ್ತದಶಾಸದೃಶಂಗಳೆತ್ತಲುಂ॥೧೧೧॥

ಅಂತು ಮಲ್ಲಜೆಯುಂ.

ವೃ॥ ಏಲರಿಂ ಬೇರ್ಬೇರೆಯಾಗುತ್ತೊತ್ತಣಿ ಬೆರಸುತಂ, ಸ್ಥೂಲಮುಂ ಸೂಕ್ಷ್ಮಮಾದಾ
ಜಲದಂಗಳ್, ಪಾರ್ವಹಂಸಂಗಳ ಗಡಣದವೋಲ್ ಚಕ್ರವಾಕಂಗಳೆಂಬೋಲ್
ಚಲದುದ್ಯನ್ಮತ್ಸ್ಯ ನಕ್ರಂಗಳವೊಲಿ, ಭದವೋಲ್ ಸೌಧಮೆಂಬಂತೆ, ತೋರಲ್
ಸಲೆಯಾಯಾರೂಪಿನಿಂದಂ ನಭಮಿದುಮೆರೆಗುಂ ವಿಸ್ತೃತಾಲೇಖ್ಯಮೆಂಬೋಲ್॥

ವೃತ್ತಂ॥ ಮೆರೆಗುಂ ಮೇಘಾಂಧಕಾರಾವೃತಮಿದು ಧೃತರಾಷ್ಟ್ರಾಧಿಕಾರೋಪಮಾನಂ
ಹರುಸಂಬಟ್ಟಾದುರ್ ಕೂಗಲ್ಕತಿಮದಬಲದಿಂ ಕೇಕಿ ದುರ್ಯೋಧನಂಬೋಲ್
ಪರಪುಟ್ಟಂ ಮೌನಮಂತಾಳ್ದುದು ಪಗಡೆಯೊಳೇಸೋಲ್ತ ಧರ್ಮಾತ್ಮಜಂಬೋಲ್
ಪೊರಮಟ್ಟೈತ್ತಂಚೆಗಳ್ ಪಾಂಡುತನಯರವೊಲಜ್ಞಾತವಾಸಕ್ಕದೀಗಳ್॥ ೧೧೩॥

(ಯೋಚಿಸಿ) ಚಿರಕಾಲವಾಯ್ತಲ್ಲ? ವಸಂತಸೇನೆಯ್ದುಳಿಗೆ ಪೋದಾ ಮೈತ್ರೇಯಂಗೆ. ಏನಿನ್ನುಂ ಬರಲಿಲ್ಲಂ-?

[ಬಳಿಕ ವಿದೂಷಕಂ ಪ್ರವೇಶಿಪಂ]

ವಿದೂ॥ ಆಹಾ! ಸೂಳೆಯ ಲೋಭವೂ ಪಿಸುಣತನವೂ ಏನೆಂದು ಹೇಳಲಿ. ಚೆನ್ನಾಗಿ ಮಾತನ್ನು ಕೂಡ ಆಡಲಿಲ್ಲವಲ್ಲಾ. ಅನಾದರದಿಂದಲೇ ರತ್ನಾವಳಿಯನ್ನು ಸುಮ್ಮನೆ ತೆಗದುಕೊಂಡು ಬಿಟ್ಟಳಲ್ಲಾ. ಅವಳಿಗೆಷ್ಟು ಸಂಪತ್ತು ಇದ್ದಾಗ್ಯೂ ಕೂಡ "ಅಯ್ಯಾ ಮೈತ್ರೇಯನೇ! ಇಲ್ಲಿ ವಿಶ್ರಮಿಸಿಕೊ, ಹಾಲು ಕುಡಿ, ಹಣ್ಣು ತಿನ್ನು, ಕೊಂಚ ಆಯಾಸವನ್ನು ತೀರಿಸಿಕೊಂಡು ಹೋಗು" ಎಂದು ಉಪಚಾರವನ್ನಾದರೂ ಹೇಳದೇ ಹೋದಳಲ್ಲಾ, ಆಗಲಿ ಮುಂದೆ ಆ ತೊತ್ತಿನ ಮಗಳ ಮುಖವನ್ನೇ ನಾನು ನೋಡುವದಿಲ್ಲ- (ನಿರ್ವೇದದೊಡನೆ-) "ಬೇರಿಲ್ಲದ ತಾವರೆಯೂ, ಮೋಸವಿಲ್ಲದ ವೈಶ್ಯನೂ, ಕಳವಿಲ್ಲದ ಅಕ್ಕಸಾಲಿಗನೂ, ಜಗಳವಿಲ್ಲದ ಊರೂ, ಆಶೆಯಿಲ್ಲದ ಸೂ

ಳೆಯುಷಾ, ದೊರೆಯುವದು ದುರ್ಲಭವೆಂದು" ಹೇಳುತ್ತಾರಲ್ಲವೆ? ಆ ದ್ದರಿ ಪ್ರಿಯಮಿತ್ರನ ಹತ್ತಿರಕ್ಕೆಹೋಗಿ ಈ ಸೂಳೆಯ ಸಂಬಂಧವನ್ನು ಬಿಡಿಸು ತ್ತೇನೆ- (ಅಡಿಯಿಟ್ಟುನೋಡಿ) ಎಲಾ! ಇದೋ ಪ್ರಿಯ ಸ್ನೇಹಿತನು ತೋಟ ದಲ್ಲಿ ಕೂತುಕೊಂಡಿರುವನು. ಅದರಿಂದ ಹತ್ತಿರಕ್ಕೆಹೋಗುವೆನು- (ಬಳಿಗೆಹೋ ಗಿ) ನಿನಗೆಮಂಗಳವು- ನೀನುವರ್ಧಿಷ್ಣುವಾಗಯ್ಯ.

ಚಾರು:— (ನೋಡಿ-) ಇದೋ ಎನ್ನಗೆಳೆಯಂಬಂದಂ. ಮಿತ್ರನೇ! ಸುಖವಾಗಿಬಂದೆಯಾ ಕುಳ್ಳಿರ್

ವಿದೂ॥ ಕೂತು ಕೊಂಡೆನು.

ಚಾರು:—ಮಿತ್ರನೇ !ಪೇಳಾಕಜ್ಜಮಂ.

ವಿದೂ॥ ಆಕಾರ್ಯವೇ ನಷ್ಟವಾಯಿತಲ್ಲವೆ.

ಚಾರು:—ಏನಾಕೆ ರತ್ನಾವಳಿಯಂ ತೆಗದುಕೊಳಲಿಲ್ಲವೊ?

ವಿದೂ॥ ನಮಗಂಥಾಪುಣ್ಯಾ ವೆಲ್ಲಿಯದು? ನವಕಮಲ ಕೋಮಲವಾದಂಜಲಿಯನ್ನು ತಲೆಯಲ್ಲಿಟ್ಟು ಕೊಂಡು ತೆಗದುಕೊಂಡಳು-

ಚಾರು:—ಆದೊಡೇಂ ನಷ್ಟವಾಯ್ತೆಂದುಪೇಳ್ವುಯ?

ವಿದೂ॥ ಅಯ್ಯಾ! ಹೇಗೆ ನಷ್ಟವಲ್ಲವು! ತಿನ್ನದ ಕುಡಿಯದ, ಉಣ್ಣದಲುಡದ, ಕಳ್ಳರು ತೆಗದುಕೊಂಡು ಹೋದ, ಅಲ್ಪಮೂಲ್ಯವಾದ ಆಭೊಡವೆಗಾಗಿ ಚತುಸ್ಸಮುದ್ರ ಸಾರಭೂತವಾದ ಈರತ್ನಾವಳಿಯು ಹೋಯಿತಲ್ಲಾ.

ಚಾರು:—ಮಿತ್ರನೇ! ಅಂತೆನಲಾಗದು.

ಕಂ॥ ನಂಬುಗೆಯ ನಾವುದನೊ ಆ
ಲಂಬಿಸಿ ಯೆಮ್ಮಲ್ಲಿ ಯಾಕೆ ಯಿಟ್ಟಳೊ ಡವಂ।
ನಾಂಬಡೆ ತಾವಿದ ನಾಸೆ
ನ್ನಂಬುಗೆ ಗೋಸುಗಮೆ ಬೆಲೆಯ ನೀಯಲ್ವೇಳ್ಕುಂ॥ ೧೧೪॥

ವಿದೂ॥ ಅಯ್ಯಾಮಿತ್ರನೇ! ನನಗೆ ಇದೊಂದು ಎರಡನೆಯ ವ್ಯಸನ ಕಾರಣವು. ಏನೆಂದರೆ- ಅವಳು ಗೆಳತಿಯರಿಗೂ ಸನ್ನೆಯನ್ನುಮಾಡಿ ತಾನೂಬಟ್ಟೆಯಿಂದಮು ಖವನ್ನು ಮೋರೆಯಾಗಿ ಮಾಡಿಕೊಂಡು ನನ್ನನ್ನು ಪರಿಹಾಸವನ್ನು ಮಾಡಿದಳು. ಆದ್ದರಿಂದ ಬ್ರಾಹ್ಮಣನಾದ ನಾನೀಗ ನಿನ್ನಕಾಲಮೇಲೆ ತಲೆಯಿಟ್ಟು ಬೇಡಿಕೊ ಳ್ಳುತ್ತೇನೆ. ಬಹುಪಾಪನಿಮಿತ್ತವಾದೀ ಸೂಳೆಯ ಸಂಬಂಧದಿಂದ ನೀನು ಓರೆ ಯಾಗಬೇಕು- ವೇಶ್ಯಾಜನವಾದರೋ ಪಾದರಕ್ಷೆಯೊಳಗೆ ಹೊಕ್ಕ ನುರುಜುಕ ಲ್ಲಿನಹಾಗೆ ಅಡಿಗಡಿಗೂ ನೋಯಿಸುತ್ತಾ ನಿರಾಯಾಸದಿಂದ ನಿರಾಕರಿಸಲಶಕ್ಯ

ವ. ಮತ್ತು ಮಿತ್ರನೇ! ಸೂಳೆ, ಆನೆ, ಗಣಕನು, ತಿರುಪಗಾರನು, ಹೊಸ
ಗಾರನು, ಕತ್ತೆ, ಇವುಗಳಿದ್ದಲ್ಲಿ ಗೋಪಿಗಳು ಬೇರೆ ಯಿರುವದಿಲ್ಲವು
ಚಾರು:—ಮಿತ್ರನೇ! ಸಾಲ್ಗುಮೀಗಳ್ತಿಗಳ್ದುದು. ಅಯವಸ್ಥೆಯಿಂದಮೋ ಓರೆಯಾಗಿದ್ದೆ
ನೆಂ. ನೋಡು:—

ಕಂ॥ ತುರಗಂ ಬೇಗನೆ ಪೋಗ
ಲ್ಪೊರಮಡೆ ಬಲವಿಲ್ಲಮಾಗಲಂತಡಿಯಿಡದೈ।
ನರನಿಚ್ಛೆ ಪರಿದು ಪೆಲ್ಲೆಡೆ
ಮಾರಲ್ದಲ್ಲಿಂ ಖಿನ್ನಮಾಗಿ ಮನಮನೆ ಪುಗುಗುಂ॥೧೧೫॥

ಮತ್ತಂಗೆಳೆಯನೇ! ಕಂ॥ ಧನಮಾರ್ಗವರ್ಗ ಕಾಮಿನಿ
ಜನಮಿದು ಧನವಶ್ಯಮಕ್ಕು ಮವನಿಯೊಳಲ್ತೇ॥
(ತನ್ನೊಳ್)ಅಲ್ತು- ಜನಮಿದು ಗುಣವಶ್ಯಮಕ್ಕು ಮವನಿಯೊಳಲ್ತೇ॥
(ಪ್ರಕಾಶವಾಗಿ) ಧನದಿಂದಾಂ ವಿರಹಿತನಾ
ದೆನದರಿನಾಕಾಂತೆಯುಂ ನಿಸದಮುಳಿದಿಪ್ಪೆರ್ಗಂ ॥ ೧೧೬॥

ವಿದೂ॥ (ಕೆಳಗೆನೋಡಿಮನದಲ್ಲಿ-) ಈತನೀಗಮೇಲೆನೋಡಿ ನಿಟ್ಟುಸಿರುಬಿಡುತ್ತಿರುವನು. ನಾನಿವನನ್ನು ಇದರಿಂದಬಿಡಿಸಿದಷ್ಟೂ ಇವನಿಗೆ ಉತ್ಕಂಠೆಯು ಬಹಳಹೆಚ್ಚುತ್ತವಂತೆ ತೋರುತ್ತೆ- ಅದ್ದರಿಂದಲೇ ಕಾಮವುದುರ್ನಿವಾರವೆಂದು ಹೇಳುತ್ತಾರಲ್ಲದೀತು. (ಬಹಿರಂಗವಾಗಿ) ಅಯ್ಯಾ ಮಿತ್ರನೇ! ಈಹೊತ್ತುಸಾಯಂಕಾಲಕ್ಕೆ ತಾನು ನಿನ್ನಬಳಿಗೆ ಬರಬೇಕೆಂದು ಹೇಳಿದಳು. ಅದರಿಂದ ಆಕೆ ಆರತ್ನಾವಳಿಯಿಂದ ತೃಪ್ತಿಪಡದೆ ಬೇರೆಯೇನನ್ನೋ ಬೇಡುವದಕ್ಕೆ ಬರಬಹುದೆಂದೂಹಿಸುವೆನು

ಚಾರು:—ವಯಸ್ಯನೇ! ಬರ್ಕ್ಕೆ ತಣಿದುಪೋಪಳ್.

[ಚೇಟನುಪ್ರವೇಶಿಸುವನು]

ಚೇಟ॥ ಓಮಾನವರೇ! ತಿಳಿದುಕೊಳ್ಳಿರಿ!

ಕಂ॥ ಎಂತೆಂತು ಮಳೆಯು ಸುರಿವುದೊ
ಅಂತಂತಾ ಚೆರ್ಮ್ಯತೊಗಲು ತೋಯುತ್ತಿಹುದೈ।
ಎತೆಂತು ಗಾಳಿ ಚಳಿಯುಹು
ದಂತಂತಾ ನನ್ನಹೃದಯ ನಡುಗುತ್ತಿಹುದೈ॥ ೧೧೭॥

(ನಕ್ಕು) ವೃ॥ ವೇಣುವನೇಳುರಂಧ್ರಗಳೊಳುಂಧ್ವನಿಯಾಗುವಹಾಗೆಯೂದುವೆಂ.
ವೀಣೆಯ ನೇಳುತಂತಿಗಳ ಮೀಟುತಬಾರಿಸುವೆಂಸುನಾದಕಿಂ
ತೂಣೆಯ ತಾರದೇಪದವ ಹಾಡುವೆನಾಖರದಂತೆ, ಮತ್ತು ನಾಂ
ಜಾಣನು, ನನ್ನಹಾಡಿಕೆಗೆತುಂಬುರುನಾರದರೇಂಸಮಾನರೇ?೧೧೮॥

ಮೃಚ್ಛಕಟಿಕಪ್ರಕರಣದಲ್ಲಿ,

ಆರ್ಯಳಾದ ವಸಂತಸೇನೆಯು "ಎಲಾ ಕುಂಭೀಲಕನೇ! ನೀನುಹೋಗಿ ಆ
ರ್ಯಚಾರುದತ್ತನಿಗೆ ನನ್ನ ಬರುವಿಕೆಯನ್ನು ತಿಳಿಸೆಂ"ದು ಅಪ್ಪಣೆ ಯ
ಮಾಡಿರುವಳು. ಆದರಿಂದಾತನಮನೆಗೆ ಹೋಗುತ್ತೇನೆ. (ಅಡಿಯಿಟ್ಟು ಪ್ರವೇ
ಶಿಸಿನೋಡಿ) ಇದೋ ಚಾರುದತ್ತನು ತೋಟದಲ್ಲಿಯೇ [illegible]ಯಿದ್ದಾನೆ.
ಗೋ ಆ ದುಷ್ಟವಟುವಾದಮೈತ್ರೇಯನುಕೂಡ ಇರುವನು. ಹತ್ತಿರಕ್ಕೆ ಹೋ
ಗುವೆನು. ಓಹೋ! ತೋಟದಬಾಗಿಲುಮುಚ್ಚಿದೆ. ಆಗಲಿ ಆ ಕೆಟ್ಟಮುಂಡೇ
ಕ್ಕೆ ಸೈಗೆಮಾಡುತ್ತೇನೆ. (ಎಂದುಮಣ್ಣುಹೆಂಟೆಯನ್ನು ಎಸೆಯುತ್ತಾನೆ)

ವಿದೂ॥ ಇದುಯಾರು! ಈಗಪಾಳಿಯುವೊಳಗಿರುವ ನನ್ನನ್ನು ಹೆಂಟೆಯಿಂದೆ ಸೆಯುವರು!

ಚಾರು:—ಗೃಹೋದ್ಯಾನದ ಕರುಮಾಡದ ಜಗುಲಿಯೊಳ್ವಿಹರಿಸುತಿರ್ಪಪಾರಿವಂಗಳ್
ಕೆಡಪಿರಲಕ್ಕುಂ.

ವಿದೂ॥ ಎಲೆ ತೊತ್ತಿನಮಗನದೇ ಪಾರಾವತವೇ! ಇರು ಇರು! ಮಾವಿನಮರದಿಂದ ಹ
ಣ್ಣನ್ನು ಕೆಡವದಹಾಗೆ ಈ ಕೋಲಿನಿಂದಿಕ್ಕಿ ಉಪ್ಪರಿಗೆಯಿಂದಕೆಳಕ್ಕೆ ಬೀಳಿಸುತ್ತೇ
ನೆ. (ಎಂದುಕೋಲನ್ನೆತ್ತಿ ಓಡುವನು)

ಚಾರು:—(ಯಜ್ಞೋಪವೀತವನ್ನು ಸೆಳದು) ವಯಸ್ಯನೇ! ಇದಾಂದೇಂ? ಕುಳ್ಳಿರ್ಕೆ-ತಪ
ಸ್ವಿ ಯಾದಾಪಾರಿವಂ ಇನಿಯಳಿಂ ಕೂಡಿರ್ಪುದು. ಅಂತಿರ್ಕೆ.

ಚೇಟನು॥ ಹ್ಯಾಗ? ಪಾರಿವಾಳವನ್ನು ನೋಡುತ್ತಾನೆ, ನನ್ನನ್ನು ಕಾಣನಲ್ಲಾ! ಆಗಲಿ ಮ
ತ್ತೊಂದುಹೆಂಟೆಯಿಂದ ಮತ್ತೂ ಹೊಡೆಯುವೆನು. (ಎಂದುಹಾಗೆಮಾಡುತ್ತಾನೆ)

ವಿದೂ॥ (ದಿಕ್ಕುಗಳಂನೋಡಿ) ಕುಂಭೀಲಕನೋಯೇನು? ಆದರೆಹತ್ತಿರಕ್ಕೆ ಹೋಗುವೆ
ನು. (ಹೋಗಿಬಾಗಿಲಂತೆರದು.) ಎಲಾ! ಕುಂಭೀಲಕನೇ! ಒಳಗೆಬಾ! ಕ್ಷೇಮವೇ?

ಚೇಟ॥ (ಪ್ರವೇಶಿಸಿ.) ಆರ್ಯನೇ! ನಮಸ್ಕಾರಮಾಡುತ್ತೇನೆ.

ವಿದೂ॥ ಎಲಾ! ನೀನೀ ಕತ್ತಲೆಯಾಗಿರುವ ಜಡಿಮಳೆಯಲ್ಲಿ ಯೆಲ್ಲಿಂದಬಂದಿ?

ಚೇಟ॥ ಎಲಾ! ಅವಳು ಅವಳು

ವಿದೂ॥ ಯಾರು? ಅವಳು ಯಾರು?

ಚೇಟ॥ ಅವಳೇ ಅವಳು

ವಿದೂ॥ ಏನೋ ತೊತ್ತಿನಮಗನೇ! ಬರಗಾಲದಲ್ಲಿ ತಿಗಳಮುದುಕಿಯಹಾಗೆ ಅವಳವಳೆಂ
ದು ಮೇಲುಸುರು ಬಿಡುತ್ತೀಯೆ?

ಚೇಟ॥ ಈಗನೀನಾಕೂಡ ಪಿಂಡವನ್ನು ಮುಟ್ಟದ ಕಾಗೆಯಹಾಗೆ ಯಾರುಯಾರುಎಂ
ದು ಅರಚುತ್ತೀಯೆ.

ವಿದೂ॥ ಆದರೆ ಹೇಳು.

ಚೇಟ॥ (ಮನಸ್ಸಿನಲ್ಲಿ) ಆಗಲಿ ಹೀಗೆ ಹೇಳುತ್ತೇನೆ. (ಹೊರಗೆ.) ಎಲಾ! ನಿನಗೊಂದು ಪ್ರಶ್ನೆ ಹಾಕುತ್ತೇನೆ.

ವಿದೂ॥ ನಾನೂ ನಿನ್ನ ತಲೆಯಮೇಲೆ ಕಾಲುಹಾಕುತ್ತೇನೆ.

ಚೇಟ॥ ಎಲಾ! ಎಲ್ಲಿ-ತಿಳಿದುಕೋ ನೋಡೋಣ. ಮಾವಿನ ಮರವನ್ನು ಚಿಗುರಿಸುವ ಕಾಲವು ಯಾವದು?

ವಿದೂ॥ ಎಲೆ ತೊತ್ತಿನಮಗನೇ! ಗ್ರೀಷ್ಮವು.

ಚೇಟ॥ (ನಕ್ಕು) ಎಲಾ! ಅಲ್ಲ ಅಲ್ಲ.

ವಿದೂ॥ (ಮನಸ್ಸಿನಲ್ಲಿ) ಇನ್ನೇನುಹೇಳಲಿ. (ಯೋಚಿಸಿ) ಆಗಲಿ- ಹೋಗಿ ಚಾರುದತ್ತನನ್ನು ಕೇಳುತ್ತೇನೆ (ಹೊರಗೆ) ಎಲಾ! ಕೊಂಚಹೊತ್ತಿರು (ಚಾರುದತ್ತನ ಬಳಿಗೆಬಂದು) ಅಯ್ಯಾಮಿತ್ರನೇಮಾವಿನಮರವನ್ನುಚಿಗುರಿಸುವಕಾಲವು ಯಾವದು?

ಚಾರು:—ಮೂರ್ಖನೇ! ವಸಂತಂ.

ವಿದೂ॥ (ಚೇಟನಹತ್ತಿರಕ್ಕೆಬಂದು) ಮೂರ್ಖನೇ! ವಸಂತವು.

ಚೇಟ॥ ಸರಿ, ಎರಡನೆಯ ಪ್ರಶ್ನೆಯನ್ನು ಹಾಕುತ್ತೇನೆ- ತುಂಬಿದ ಊರಗಳನ್ನು ಕಾಪಾಡುವದು ಯಾವದು?

ವಿದೂ॥ ಎಲಾ! ದಂಡು.

ಚೇಟ॥ (ನಗುತ) ಅಲ್ಲ ಅಲ್ಲ.

ವಿದೂ॥ ಆದರೆ ಸಂದೇಹದಲ್ಲಿ ಬಿದ್ದೆನಲ್ಲ (ಯೋಚಿಸಿ) ಆಗಲಿ ಮತ್ತಾ ಚಾರುದತ್ತನನ್ನು ಕೇಳುತ್ತೇನೆ. (ಹೋಗಿಹಾಗೆಯೇಕೇಳುವನು)

ಚಾರು:—ವಯಸ್ಯನೇ! ಸೇನೆ.

ವಿದೂ॥ (ಚೇಟನಬಳಿಗೆಬಂದು.) ಎಲಾ! ತೊತ್ತಿನಮಗನೇ! ಸೇನೆಯು.

ಚೇಟ॥ ಎಲಾ! ಎರಡರನ್ನೂ ಒಂದಾಗಿ ಸೇರಿಸಿ ಬೇಗ ಹೇಳು.

ವಿದೂ ಸೇನೆಯು ವಸಂತವು.

ಚೇಟ॥ ತಿರುಗಿಸಿ ಹೇಳು

ವಿದೂ॥ (ಮೈಯನ್ನುತಿರುಗಿಸಿ) ಸೇನೆಯುವಸಂತವು.

ಚೇಟ॥ ಎಲೆ ಮೂರ್ಖವಟುವೇ! ಪದಗಳನ್ನು ತಿರುಗಿಸಿಹೇಳು.

ವಿದೂ॥ (ಪಾದಗಳನ್ನುತಿರುಗಿಸಿ) ಸೇನೆಯುವಸಂತವು.

ಚೇಟ॥ ಎಲೋ ಮೂರ್ಖನೇ! ಅಕ್ಷರಪದಗಳನ್ನುತಿರುಗಿಸಿಹೇಳು.

ವಿದೂ॥ (ಯೋಚಿಸಿ) ವಸಂತಸೇನೆ.

ಚೇಟ॥ ಅವಳೇಅವಳು, ಬಂದಳು.

ವಿದೂ॥ ಆದರೆ ಹೋಗಿ ಚಾರುದತ್ತನಿಗೆ ತಿಳಿಸುತ್ತೇನೆ (ಹೋಗಿ) ಓ! ಚಾರುದತ್ತಾ! ನಿಮ್ಮಸಾಹುಕಾರನುಬಂದನು.

ಚಾರು:—ಧನಿಕನೆಮ್ಮ ಕುಲದೊಳೆತ್ತ?
ವಿದೂ॥ ಕುಲದಲ್ಲಿ ಇಲ್ಲವಾದರೆಬಾಗಿಲಲ್ಲಿದ್ದಾನೆ.
ಚಾರು:—ಅದಾರ್?

ವಿದೂ॥ ಅದೋ ವಸಂತಸೇನೆಬಂದಳು.
ಚಾರು:—ವಯಸ್ಯನೇ! ಎನ್ನನೇಂವಂಚಿಸಿದಪಯ್?
ವಿದೂ॥ನನ್ನ ಮಾತಿನಲ್ಲಿ ನಿನಗೆ ನಂಬಿಕೆ ಯಿಲ್ಲವಾದರೆ, ಈಕುಂಭೀಲಕನನ್ನು ಕೇ...
ಎಲೋ ತೊತ್ತಿನಮಗನೇ! ಹತ್ತಿರಕ್ಕೆ ಬಾ.
ಚೇಟ॥ (ಬಳಿಗೆಬಂದು) ಬುದ್ಧೀ!ಪಾದಕ್ಕೆಬಿದ್ದೆನು.
ಚಾರು:—ಭದ್ರನೇ! ಒಳ್ಳಿತೆಂಬುದೈ? ಸತ್ಯವಾಗಿ ವಸಂತಸೇನೆಬಂದಳೋ?
ಚೇಟ:—ಬುದ್ಧೀ! ದಿಟವಾಗಿ ವಸಂತಸೇನೆಬರುತ್ತಿದ್ದಾಳೆ.
ಚಾರು:—(ಸಂತಸದಿಂ) ಭದ್ರನೇ! ಆವಗಂ ಪ್ರಿಯವಚನಂ ಪುಸಿಯಾಗಲಿಲ್ಲಂ; ಅದ
ದುದರಿಂದೀ ಬಹುಮಾನಮಂಕೊಳ್- (ಎಂದುಉತ್ತರೀಯಮಂ ಕೊಡುವಂ)
ಚೇಟ:—(ತೆಗೆದುಕೊಂಡು ಸಂತೋಷದಿಂದ ನಮಸ್ಕಾರಮಾಡಿ) ಅಷ್ಟರೊಳಗಮ್ಮನವ
ರಿಗೆ ತಿಳಿಸುವೆನು. (ಎಂದುಹೊರಟುಹೋದನು)
ವಿದೂ॥ ಅಯ್ಯಾ! ಇಂಥಾಜಡಿಮಳೆಯಲ್ಲಿ ಯೇಕೆಬರುತ್ತಾಳೋ ತಿಳಿಯುವದೇ?
ಚಾರು:—ವಯಸ್ಯನೇ! ನಾಡೆ ಯಾನರಿಯೆಂ.
ವಿದೂ॥ ನನಗೆ ತಿಳಿಯುವದು. ಕೊಂಚಬೆಲೆಯುಳ್ಳದ್ದು ರತ್ನಾವಳಿ, ಹೆಚ್ಚು ಬೆಲೆಯುಳ್ಳದ್ದು
ತನ್ನವೊಡವೆ, ಅದರಿಂದ ಸಾಲದೇ ಬೇರೆಯೇನೋ ಕೇಳುವದಕ್ಕೆ ಬಂದಳು

ಚಾರು:—ಒಳ್ಳಿತುಬಕ್ಕೆ ತಣಿದು ಪೋಪಳ್

[ಬಳಿಕ ಸೊಗಸಾದ ಮದವಣಿಗಿತಿ ವೇಷದಿಂದ ಉತ್ಕಂಠೆ ಯೊಡನೆ ವಸಂತ
ಸೇನೆಯು, ಕೊಡೆಹಿಡಿದಚೇಟಿಯು; ವಿಟನೂ, ಪ್ರವೇಶಿಸುವರು]

ವಿಟಂ:—ವಸಂತಸೇನೆಯ ನುದ್ದೇಶಿಸಿ-

ವೃ॥ ತಾವರೆ ಯಿಲ್ಲದಾ ಲಕುಮಿಯೋ ಇವ, ಳೀಕುಲ ನಾರಿಯರ್ಗೆಶೋ
ಕಾವಹಮತ್ತ ಮೀಕೆ, ಮದನಂಗನುವಾದಮಹಾಸ್ತ್ರಮೋಇವಳ್,
ಕಾವವೆನಿಪ್ಪ ನಲ್ಮರಕೆ ಪೂವಿವ, ಳೋಪರನೊಂದಿ ರಂಗದಾ
ಠಾವಿಗೆ ಯಂದದಿಂ ನಡೆಯುತಂ, ರತಿಕಾಲದೆನಾಣ್ಚಿ ನಚ್ಚಿ ಪಳ್॥೧೧೯॥

ವಸಂತಸೇನೆಯೇ! ನೋಡು ನೋಡು.—

ವೃ॥ ವಿರಹಮನಾಂತ ಪೆಣ್ಗಳ ಮನಕ್ಕೆಣೆಯಾಗಿ ಕಲಂಕಿದೀಮುಗಿಲ್
ಧರಣಿಭೃದೂರ್ಧ್ವಶೃಂಗತತಿಯಲ್ಲಿ ನಿಗುಂಬಿಯಳುಕ್ಕೆ ಗೊಂಡುಮೇಣ್

ನೆರೆವೊಳಗಲ್; ಮಯೂರ ಮದನಾಲಿಸಿ ಪೀಲಿಯನೆತ್ತಿ ಭೋಂಕನೇ
ಳ್ದಿರೆ; ಮೆರೆಗುಂ ಮಣಿವ್ಯಜನದಿಂ ಗಗನಾಂಗನೆ ಬೀಸಿಕೊಳ್ವವೋಲ್ ॥ ೧೨ ॥

ಮತ್ತಂ ॥ ವೃ ॥ ಜಲಧಾರಾಹತ ಭೇಕಸಂಹತಿ ಕೆಸರ್ಪೂಸಿರ್ದ ವಕ್ತ್ರಂಗಳಿಂ
ಜಲಮಂ ಪೀರ್ಗ್ಗುರ್ಗ, ವೊರಲ್ದು ಸೋಗೆಯುಲಿಗುಂ, ನೀಪಂ ಪ್ರದೀಪಂಗಳಂ
ತೊಲೆಗುಂ, ಮಸ್ಕರಿಯಂ ಖಲರ್ಪಳಿವವೋಲ್ ರಾತ್ರೀಶನಂ ಮೋಡಮುಂ
ಡಲೆಗುಂ, ಮಿಂಚಿದುವೊಂದುತಾಣದಿರವಾ ಕೀಳ್ಪಂಚದಾಪಾಣ್ಬೆಯೋಲ್ ॥

ವಸಂತ:— ಭಾವನೇ! ಚೆನ್ನಾಗಿ ನುಡಿದೈ; ಈತಾಮುಸಿಯಾದೊಡೆ—

ಕಂ ॥ ಅನಿಶ ಪಯೋಧರೆ ಯಾಗಿರ
ಲಿನಿಯನಿ ನಾನೊಡನೆ ವಿಹರಿಸಲ್ತಗಹ ದೇಂ?
ಮುನಿದ ಸವತಿಯಂತೆನ್ನಂ
ಸ್ತನಿತದಿ ನಡಿಗಡಿಗೆ ಜಡಿದು ಸಾರಿಯು ತಡೆಗುಂ ॥ ೧೨ ॥

ವಿಟಂ:— ಆದೊಡಾ ರಜನಿಯನಂತುಪಳಿಗೆ.

ವಸಂತ:— ಭಾವನೇ! ಮುಗುದೆ ಪೆಣ್ಗಳ ಮೂಢಸ್ವಭಾವದಿಂದಾದೀನಿಂದೆ ಯಿಂದೇಂ?
ಭಾವಂನೋಡುಗೆ-

ಕಂ ॥ ವೊಳಗುಗೆ ಮುಗಿಲ್ಗಳ್ ಪಡುಗೆ
ಮಳೆಯಂ, ನಿಡು ಸಿಡಿಲನಾದೊಡಂ ಪೊಯ್ಗೆವಲಂ
ತಿಳಿಯರ್ ಮೇಣ್ ಶೀತೋಷ್ಣಂ
ಗಳನುಮ ನೆಣಿಸರ್ಗಮಂತು ಕಾಂತಾರ್ಥಿನಿಯರ್ ॥ ೧೩ ॥

ವಿಟಂ:— ವಸಂತಸೇನೆಯೇ! ಇದುಪೆರತೊಂದು- ನೋಡುನೋಡು:—

ವೃ ॥ ಉರುಧಾರಾ ಶರಜಾಲ ಮಾಂತುಪವಮಾ ನೋಪಾತ್ತ ಸದ್ವೇಗದಿಂ
ಪರಿದು ವ್ಯಕ್ತ ತಟದ್ರುಚಿಧ್ವಜಗಣಾಂ ಮೇಣ್ ಮೇಘ ನಿರ್ಘೋಷವಾ
ದ್ಯರವಂತಾ ನೆನಿಸಿರ್ದ್ದ ವಾರಿದನೃಪಂ, ನಿಸ್ತೇಜನಾ ದಿಂದುವಂ
ಬರಿಯಿಂದಂಬರರಾಷ್ಟ್ರದೊಳ್ವರಕರ ಸ್ತೋಮಂಗಳಂ ಕೊಂಡಪಂ ॥

ವಸಂತ:— ಅದಂತೆಯೇಸರಿ. ಆದೊಡೆಮತ್ತಮಿದಾರ್? ॥ ೧೪ ॥

ವೃ ॥ ದೇವೇಂದ್ರಾಯುಧ ವಿದ್ಯುದಾದಿ ಶಬಲಂ, ದಂತೀಂದ್ರಕಾಳಂ, ಜಲಂ
ದೀವಿಘ್ನಂಬುದ ಮಾಲೆಗರ್ಜಿಸೆ; ವಿಯುಕ್ತರ್ಗ್ಗೆದರ್ಮುನ್ನಾಯುತ್ತ ಶ
ಲ್ಯಾವಿದ್ಧಂಬೊಲ, ವರ್ಗ್ಗೆ ವಧ್ಯಪಟಹಂ ಕ್ರೂರಂ ಹತಾಶಂ ಬಕಂ
ಪ್ರಾವೃಟ್ಪ್ರವೃಡೆ ನಿಕ್ಕಮೆಂತರರೆತಾಂ ಮೇಣಾಗಾಯದುಪ್ಪಿಕ್ಕವೋಲ್ ॥

ವಿಟಂ:— ವಸಂತಸೇನೆಯೇ! ಇಂತಿದು ಮೇಣೊಂದಂ ನೋಡು. ॥ ೧೫ ॥

ಮೃಚ್ಛಕಟಿಕಪ್ರಕರಣದಲ್ಲಿ:

ಕಂ॥ ಸುತ್ತಿದ ಬೆಳ್ತಲೆಗಟ್ಟಿನೆ
ಮುತ್ತಿದಬಕ ದೊದ್ದು, ಚಲಿಪವಿದ್ಯುನ್ನಿಕರಂ
ಎತ್ತಿದಚಾಮರ ಮೆನೆ; ಬಾನ್
ಮತ್ತೇಭದ ಸಾಮ್ಯಮಂ ತಳೆದಪ್ಪೊಲಿರ್ಕುಂ॥೧೨೬॥

ವಸಂ—ಭಾವ! ನೋಡುನೋಡು:—

ವೃ॥ ಮುಸುಕಿತುನೇಸರಂ ನಭದೊಳಾರ್ದ್ರತಮಾಲದಳಾಸಿ ತಾಂಬುದಂ,
ಕುಸಿದುವು ಪುತ್ತುಗಳ್ ಶರವಿಶೀರ್ಣಗಜಂಗಳಮಾಳ್ಕೆ ಧಾರೆಯಿಂ,
ದೆಸೆವುದುಮೇಣ್ ಕ್ಷಣಪ್ರಭೆಸಮುನ್ನತಹರ್ಮ್ಯದ ಭರ್ಮ ರೇಖೆವೋಲ್
ಮಸಗಿದ ಮೋಡವೊಯ್ದುದುನಪುಂಸಕಪತ್ನಿಯ ಸಂತೆಜೋನ್ನಮಂ॥೧೨೭॥

ವಿಟಂ:— ವಸಂತಸೇನೆ! ನೋಡುನೋಡು:—

ಕಂ॥ ಓರೊಂದಾ ಕ್ರಮಿಸುತೆ ಚಪ
ಲಾರಜ್ಜು ನಿಬದ್ಧ ಪಾರ್ಶ್ವಗಳ್ ಕರಿಗಳವೋಲ್
ಧಾರಾಖ್ಯರಜತಗುಣದಿಂ
ವಾರಿದಗಳ್ ವಜ್ರಿಬೆಸಸೆ ವಸುಧೆಯನೆಳೆವೋಲ್॥೧೨೮॥

ಮತ್ತಂ ನೋಡು:—

ವೃ॥ ಪಿರಿದೆಲರಿಂದೆತೀವಿಯುಲಿಯುತ್ತೆ, ಲುಲಾಯುದಮಾಳ್ಕೆ ನೀಲಮಾ
ದು, ರೆ ಚರಿಪಬ್ಧಿಯಂತೆಸೆವ, ಚಂಚಲೆಯಿಂ ಚಲಮಾದ, ಮೇಘದಿಂ
ದಿರದೆಜಗುಳ್ದ ಬಜ್ಜರದಬಾಣದಪಾಂಗಿನಧಾರೆಯೊತ್ತಿನಿಂ
ಹರಿತನವಾಂಕುರಂಬಡೆದನಾರಿದಭೂವಿದುನಾಡೆಸೀಳ್ದವೋಲ್॥ ೧೨೯॥

ವಸಂತ:—ಭಾವನೇ! ಇದೋ ಮತ್ತೊಂದಂ ನೋಡು-

ವೃ॥ ಕರಮಾದಾರ್ದ್ರಶಿಖಂಡಿಗಳ್ ಘನವ ಬಾಬಾರೆಂದು ಕೂಗುತ್ತಿರಲ್
ಭರದಿಂ ಪಾರಿ ಬಲಾಕೆಗಳ್ ನಲವಿನಿಂದುತ್ಕಂಠೆಯಿಂದಪ್ಪೆಮೇಣ್,
ತೊರೆದಬ್ಜಂಗಳನುಬ್ಬೆಗಂಬಡುತೆ ಮೇಗಣ್ಗಂಚೆಗಳ್ ನಿಟ್ಟೆಸಲ್
ಪರೆಗುಂ ಮೇಘಮಿದಿಲ್ಲಿ ಕಜ್ಜಲಮನಾಶಾನಾರಿಗೆಚ್ಚಿರ್ದವೋಲ್॥ ೧೩೦॥

ವಿಟಂ:—ಇದಿಂತೆಯೆ- ನೋಡು- ಎಂತೆನೆ:—

ವೃ॥ ಮಿಸುಕದೆಮುಚ್ಚಿರಲ್ ಕಮಲದೃಷ್ಟಿ, ತಟಿತ್ ಕ್ಷಣದೃಷ್ಟನಷ್ಟಮಾ
ಗ್ಯಸಕಲವಸ್ತು, ರಾತ್ರಿ ಪಗಲೆಂಬುದುಪೋಗೆ, ವಿಶಾಲಮೇಘದಿಂ
ಮುಸುಕಿರೆದಿಙ್ಮುಖಂ, ಜಲದಧಾರೆಯ ಗೇಹದಮಧ್ಯಭಾಗದ
ಲ್ಲುಸಿಕನೆನಿದ್ದೆಗೈವುದುಜಗತ್ತೆನೆ, ತೋರುಗು ಮೀಗಳೆತ್ತಲುಂ॥ ೧೩೧॥

ವಸಂತ:—ಭಾವನೇ! ಇದಿಂತಿರ್ಕುಮೆಂದರಿವೆನಾಂ. ನೋಡುನೋಡ :—

ವೃ॥ ಉಡುಗಳ್ ದುರ್ಜನರಲ್ಲಿ ಮಾಡಿದುಪಕಾರಂಬೊಲ್ವಲಂಪೋದುವು
ಕಡೆಗಳ ಶೋಭಿಸವಿಂತುಕಾಂತರನಗಲ್ದಾ ಕಾಮಿನೀರಾಜಿವೋಲ್
ಕಿಡಿಯಂಬೀರುವಶಕ್ರಶಸ್ತ್ರಶಿಖಿಯಿಂದಭ್ರಾಖ್ಯ ರೂಪ್ಯಂಕರಂ
ಸುಡುತಂಬೆಂದುಕರಂಗಿಪೋಲ್ತಿಸಿಳೆಗಿಂತಬ್ರಾಪ್ತದಿಂಬೀಳ್ವವೋಲ್॥೧೨

ಮತ್ತಂನೋಡ:. ಕಂ॥ ಏರುಗುಮಿಳಿಗುಂ, ವಿಷಮಂ
ಬೀರುಗು, ಮುಬ್ಬರಿಕು, ಮಸಗು ಗುಂತಮಂ,ನಾ
ನಾರೂಪಮುಕ್ಕುಮುಬ್ಬಮಿ
ದಾರಯೆ ಮುಂಜಿರಿಯ ನಾಂತಕುತ್ಸಿತನರನೋಲ್॥೧೩॥

ವಿಟಂ:— ಇದಿಂತು ತಿಳಿಗೆ—

ವೃ॥ ಗಗನಂಮಿಂಚುಗಳಿಂಜ್ವಲಿಕ್ಕುಮನೆ, ಪೋಣ್ ಕಾಳೋರಗಂ ಪೋಲ್ವಪೆ
ರ್ಮ್ಮುಗಿಲಿಂಧೂಪಮನಿಕ್ಕುವೋಲ್, ಭಿದುರದಿಂದಾರ್ದಬ್ಬರಂಗೈವವೋಲ್
ಮಿಗೆಧಾರಾಶರವರ್ಷಿಶಕ್ರಧನುವಿಂ ಸಂಗ್ರಾಮಮಂಗೈವವೋಲ್
ನೆಗಳ್ದಾವಾತದೆಘೂರ್ಣಿಪಂತೆ, ನಗುವಂತಿರ್ಕ್ಕುಂ ಬಲಾಕೌಘದಿಂ೧೪

ವಸಂತ:—ಕಂ॥ ನೀರದನೇ! ನಾಣಿಲಿನೀ
ನಾರಯೆ ಕಾದಲ್ಮೆಯಿಂದೆ ಕಾಂತನನೆಲೆಗಾಂ
ಸಾರೆ ಮೊಳಗಿಂದ ಮುಳ್ಕಿಸಿ
ಧಾರಾ ಹಸ್ತಂಗಳಿಂದೆ ಸೋಂಕುವೆಯೆನ್ನಂ॥೧೫॥

ಅಯ್ಯೋ! ಮೇಘವಾಹನನೇ!

ಕಂ॥ನಿನಗಾಂ ರತಿ ಸಂಗತೆಯಾ
ದೆನೊಮರ್ಚ? ಮೇಣೆಂತು ಕೂಗಿದಪೆನೀಂ ಸಿಂಹ
ಧ್ವನಿಯಿಂಬಹು ವೃಷ್ಟಿಗಳಿಂ
ದಿನೆಯನ ಕೂರ್ತನ್ನದಾರಿ ತಡೆಯ ಲಯುಕ್ತಂ॥೧೬॥

ಮತ್ತಂ॥ ಕಂ॥ಎಂತಂ ದಹಲ್ಯೆ ಗಾಗಿಸ
ಮಂತುಪ್ರುಸಿದೆಗೌತಮೋಸ್ಮಿ, ಎಂದೆಮಹೇಂದ್ರಾ!
ಅಂತೆನ್ನ ದುಃಖಮುಮಂ
ಚಿಂತಿಸಿ ನೀನಿಂದು, ನಿನ್ನ ಸಾಹಮನೆಳಕೊಳ್॥೧೭॥

ಅಂತುಮಲ್ಲದೆ॥ ಕಂ॥ನಡೆಮೊಳಗಿಸು ಮಳೆಯಾಗಿಸು
ನಿಡು ಸಿಡಿಲ್ಗಳನೆನಿತು ಮಾದೊಡಂಬಿಡುಶಕ್ರಾ!
ಬಿಡದಿನಿಯನಬಳಿಗೈದಲ್
ತೊಡಗಿದ,ನೀರೆಯ್ಯರತಡೆಯ,ಲಸದಳಮಲ್ತೇ॥ ೧೮॥

ಮೃಚ್ಛಕಟಿಕಪ್ರಕರಣದಲ್ಲಿ,

ಕಂ॥ ಸಲಿಲಧರಂ ಗರ್ಜಿಸಿದೊಡೆ
ಸಲೆಗರ್ಜಿಸು ಗೆಂತುಮವರೆ ನಿಷ್ಠುರಪುರುಷರ್
ಎಲೆ ಸೌದಾಮಿನಿ! ನೀನುಂ
ಲಲನೆಯರಳಲಂ ಸಮಂತುತಿಳಿದಿಲ್ಲಮೊಪಂ॥೧೩೯॥

ವಿಟಂ:—ಎಲೆ ವಸಂತಸೇನೆ! ಸಾಲ್ಗುಂ ಸಾಲ್ಗು ಮೀತಿರಸ್ಕಾರಂ. ಈ ನಿನಗೆವಲಮುಪಕಾರಿಣಿಯೇ ಸೌದಾಮಿನಿಯುಂ,

ಕಂ॥ ಇದುಚೌದಂತದ ಜಾಂಬೂ
ನದರಜ್ಜು, ವಿದಚಲಶೃಂಗ ನಿಹಿತಸಿತಪತ್ರಾ
ಕೆದಿವಿಜಪನ ನೆಲೆದೀವಿಗೆ
ಯಿದು ಮಿನಿಯುನ ಮನೆಯು ನಿನಗೆತೋರಿಪ್ಪುದಲ್ತೇ॥ ೧೪೦॥

ವಸಂತ:—ಭಾವನೇ! ಈಮನೆಯೋ ಅದು ಅಪ್ಪುದು.

ವಿಟಂ:—ಎಲ್ಲಾ ಕಲೆಗಳನು ಮನರಿದ ನಿನಗಿಲ್ಲಿ ಪೆರಪೇಳ್ವುದಿನಿಸುಮಿಲ್ಲಂ. ಆದೊಡಂ ನೇಹಂ ಮಾತನಾಡಿಸುಗುಂ. ನೀನಿಲ್ಲಿ ಪೊಕ್ಕು ಪಿರಿದುಂ ಮುಳಿಸ ನೆಸಗಲಾಗದು.

ಕಂ॥ ಮುನಿದೊಡೆರತಿಯಿಲ್ಲಂ ಮೇಣ್
ಮುನಿಸಿಲ್ಲದೊಡಂತು ಕಾಮ ಮೆತ್ತಣಿನೊಗೆಗುಂ
ಮುನಿನೀಂ ಮತ್ತಂ ಮುಳಿಯಿಸು
ಮನದನ್ನನ ನೊಸೆದು ಬಳಿಕ ಮಂತೊಸೆಯಿಸುನೀಂ॥೧೪೧॥

ಇದಿಂತಕ್ಕೆ. ಅಯ್ಯಾ! ಅಯ್ಯಾ! ಆರ್ಯಚಾರುದತ್ತಂಗೆ ನೀವಿಂತುತಿಳಿಸುಗೆ;

"ಕಂ॥ ಮಳೆಯೊಳ್ಮಿಂದುಂ ಮಿಂಚಿಂ
ಮೊಳಗಿಂದಂ ಸುಗಿದು, ಮೊಲಿದುನಿನ್ನಂನೋಡ
ಲ್ಕೆಳಸಿಯೆ ನಿನ್ನೆಡೆ ಗೈದುತೆ
ತೊಳೆದಪಳಿದೊ ನಿಂದು ಕಾಲಕಡಗದಕೆಸರಂ"॥ ೧೪೨॥

ಚಾರು:—(ಕೇಳ್ದು) ವಯಸ್ಯನೇ! ಅದೇನೊ ತಿಳಿದುಬಾರೈ.

ವಿದೂ॥ ನಿನ್ನಪ್ಪಣೆಯಂತೆ ಆಗಲಿ (ವಸಂತಸ್ಸೇನೆಯು ಬಳಿಗೆಬಂದು - ಪ್ರೀತಿಯಿಂದ) ನಿನಗೆಶುಭವಾಗಲಿ.

ವಸಂ॥ ಆರ್ಯನೇ! ನಮಸ್ಕರಿಸುವೆನು. ದಯಮಾಡಬೇಕು. ಭಾವನೇ! ಈಛತ್ರ ಧಾರಣೆಯು ನಿನಗೇಯಿರಲಿ

ವಿಟಂ:—(ತನ್ನೊಳ್) ಈ ಯುಪಾಯದಿಂ ದೆನ್ನ ನೊಳ್ಳಿತಾಗಿ ಕಳಿಪಿದಳ್ (ಪೊರಗೆ.) ಅಂತಕ್ಕೆ. ಎಲೆ ವಸಂತಸೇನೆ!

ಕಂ॥ ರತಿಕೇಳಿಗೆ ನೆಲೆ, ದಂಭಾ
ನೃತಮಾಯಾ ವಿದ್ಯೆಗಳ್ಗೆ ಜನ್ಮಸ್ಥಾನಂ
ಶಠ ವೇಶ್ಯಾಪಣ ವಿದಕಾ
ಸ್ಥಿತಪಣ್ಯಕೆ ಹರೆಯುಸೊಗದಬೆಲೆಸಿದ್ಧಿಸುಗೆ॥ ೧೪೩॥

(ಎಂದುಪೊರಮಟ್ಟಂ)

ವಸಂತ॥ ಅಯ್ಯಾ ಮೈತ್ರೇಯನೇ! ನಿಮ್ಮ ಜೂಜುಗಾರನೆಲ್ಲಿ?

ವಿದೂ॥ (ಮನಸ್ಸಿನಲ್ಲಿ) ಆಶ್ಚರ್ಯವು! ಪ್ರಿಯ ವಯಸ್ಯನು ಜೂಜುಗಾರನೆಂದು ಹೇಳಿಸಿಕೊಂಡದ್ದರಿಂದ ಅಲಂಕೃತನಾಗಿರುವನು (ಹೊರಗೆ) ಎಲಾ! ಇದೊ ಈಯೊಣತೋಟದಲ್ಲಿದ್ದಾನೆ.

ವಸಂತ॥ ಅಯ್ಯಾ! ನಿಮ್ಮವೊಣ ತೋಟವನ್ನು ಯಾವುದೆಂದು ಹೇಳುತ್ತಾರೆ?

ವಿದೂ॥ ಎಲಾ! ಎಲ್ಲಿ ಉಂಬುವುದು ತಿಂಬುವುದು ಇಲ್ಲವೊ? ಅದೇ

ವಸಂತ॥ (ನಗುವಳು.)

ವಿದೂ॥ ಅದರಿಂದ ಒಳಗೆ ಬರಬೇಕು

ವಸಂತ॥ (ಜನದ ಬಳಿಯಲ್ಲಿ) ಅಲ್ಲಿ ಒಳಕ್ಕೆ ಹೋಗಿ ನಾ ನೇನು ಹೇಳಲಿ?

ಚೇಟಿ॥ ದ್ಯೂತಕರನೇ! ನಿನಗೀ ಪ್ರದೋಷಕಾಲವು ಸುಖವಾಗಿರುವುದೇ? ಎಂದು

ವಸಂತ॥ ಆದರೆ ಇದರನ್ನು ದಾಟುವೆನೋ

ಚೇಟಿ॥ ಅವಸರವೇ ದಾಟಿಸುತ್ತೆ.

ವಿದೂ॥ ಒಳಗೆ ಬರಬಹುದು

ವಸಂತ॥ (ಹೊಕ್ಕು ಹತ್ತಿರಕ್ಕೆ ಬಂದು ಹೂವುಗಳಿಂದೆಸೆಯುತ್ತಾ) ಎಲೆ ದ್ಯೂತಕರನೇ! ನಿನಗೆ ಪ್ರದೋಷವು ಸುಖವಾಗಿರುವುದೇ?

ಚಾರು:— (ನೋಡಿ) ಇದೋ ವಸಂತಸೇನೆ ಬಂದಳ್. (ಸಂತಸದಿಂದೇಳ್ದು) ಎಲೆ ಯಿನೆಯಳೆ!

ಕಂ॥ ಎನಗೆಳ್ಗರಿಂದೆ ಸಂಜೆಯು
ಜೆನಗಾಗಳ್ಸುಯ್ಯು ದರಿನೆ ಕಳೆದುದು ನಿಶೆಯುಂ
ವನಜಾಕ್ಷಿಯೆ ನಿನ್ನೊಂದಿರ
ಲೆನಗೀಗಳ್ಸಂಜೆ ದುಃಖನಾಶಕಮಕ್ಕುಂ॥ ೧೪೪॥

ಆದರಿಂ ನಿನಗೆ ಸ್ವಾಗತಮಕ್ಕೆ - ಇದಾಸನಂ- ಇತ್ತು ಕುಳ್ಳಿರ್

ವಿದೂ॥ ಇದು ಆಸನವು- ಇಲ್ಲಿ ಕೂತುಕೊಳ್ಳಬೇಕು.

(ವಸಂತಸೇನೆ ನಾಟ್ಯದಿಂ ಕುಳ್ಳಿರ್ದಳ್, ಎಲ್ಲರುಂ ಕುಳಿತು ಕೊಳ್ವರ್)

ಚಾರು:— ವಯಸ್ಯನೇ! ನೋಡು ನೋಡು:—

ಕಂ॥ ಸರಿನೀರ್ ವನಿಗಳ್ ಸೂಸು

ಮೃಚ್ಛಕಟಿಕಪ್ರಕರಣದಲ್ಲಿ,

ನೆರೆ ಯಭಿಷಿಕ್ತಂ ಸ್ತನವೊಂ
ದರಸಕುವರನಂತೆ ಯೌವರಾಜ್ಯದೊಳಿಕ್ಕುಗುಂ॥ ೧೪೫॥

ಆದುದರಿಂ ಮಿತ್ರನೇ! ವಸಂತಸೇನೆಯುವಸನಂಗಳ್ ತ್ರೋಯ್ವಿಸ್ಪರ್ಶವು ಬೀರಧೌತಾಂಬರಂಗಳಂ ತರಿಸಿಯಿಾಯಲ್ವೇಳ್ಕುಂ.

ವಿದೂ॥ ನಿನ್ನಪ್ಪಣೆ ಯಂತಾಗಲಿ.

ಚೇಟಿ॥ ಅಯ್ಯಾ! ಮೈತ್ರೇಯನೇ! ನೀನು ಹಾಗಿರು- ನಾನೇ ಶುಶ್ರೂಷೆಯನ್ನು ಮಾಡುವೆನು. (ಹಾಗೆಮಾಡುತ್ತಾಳೆ.)

ವಿದೂ॥ (ಓರೆಯಾಗಿ) ಅಯ್ಯಾಮಿತ್ರನೇ! ಆಕೆಯನ್ನು ಏನಾದರೂ ಕೇಳುವೆನು.

ಚಾರು:—ಅಂತುಗೆಯ್ಗ.

ವಿದೂ॥ (ಪ್ರಕಾಶವಾಗಿ.) ಬೆಳ್ದಿಂಗಳುಕೂಡ ಇಲ್ಲದ ಇಂಥಾ ಜಡಿಮಳೆಯ ಕತ್ತಲೆಯಲ್ಲಿ ಅದೇನುಕಾರಣ ಬರೋಣವಾಯಿತು?

ಚೇಟಿ॥ ಅಕ್ಕಾ! ಈಬ್ರಾಹ್ಮಣನು ಋಜುಬುದ್ಧಿಯಾದವನೇ.

ವಸಂತ॥ ಎಲೆ! ನಿಪುಣನೆಂದು ಹೇಳಬೇಕಲ್ಲವೆ.

ಚೇಟಿ॥ ಅಯ್ಯಾ! ಈಕೆ ಆರತ್ನಾವಳಿಗೆ ಬೆಲೆಯೇನೋ ಕೇಳುವದಕ್ಕೆ ಬಂದಿದ್ದಾಳಂತೆ.

ವಿದೂ॥ (ಜನದಕಡೆ.) ಅಯ್ಯಾ ನಾನು ಹೇಳಿದೆನಲ್ಲವೆ? ರತ್ನಾವಳಿಯ ಬೆಲೆ ಕೊಂಚವಾದದ್ದು - ಚಿನ್ನದವೊಡವೆಯಬೆಲೆಹೆಚ್ಚು-ಆದ್ದರಿಂದ ಸಾಲದೇಮತ್ತೇನನ್ನೋ ಬೇಡುವದಕ್ಕೆ ಬಂದಿರುವಳು

ಚೇಟಿ॥ ಅದೂ ಆರ್ಯಳಿಗೆಸ್ವೀಯವಾದದ್ದೆಂದು ಜೂಜಿನಲ್ಲಿ ಹೋಯಿತು. ಅದರನ್ನು ತೆಗದುಕೊಂಡ ಸಭಿಕನು ಎಲ್ಲಿಹೋದನೋತಿಳಿಯಲಿಲ್ಲವು.

ವಿದೂ॥ ಎಲೇ! ಯೋಚಿಸಿದ್ದನ್ನೇ ಯೋಚಿಸುತ್ತೀಯೆ?

ಚೇಟಿ॥ ಅಲ್ಲ. ಅವನನ್ನು ಹುಡುಕುವಷ್ಟರೊಳಗಾಗಿ ಈಸುವರ್ಣಭಾಂಡವನ್ನು ತೆಗದಿಟ್ಟುಕೊಂಡಿರು. (ಎಂದುತೋರಿಸುತ್ತಾಳೆ)

ವಿದೂ॥ (ವಿಚಾರಿಸುತ್ತಾನೆ.)

ಚೇಟಿ॥ ಹೆಚ್ಚಾಗಿಯೋಚಿಸುವಂತಿದೆ. ಆದರೇನು ಇದನ್ನುನೀನು ಮುಂಚೆ ನೋಡಿದ್ದಯೋ?

ವಿದೂ॥ ಎಲೇ ಚಮತ್ಕಾರವಾದ ಮಾಟವಾದ್ದರಿಂದ ನೋಟವನ್ನು ಮುಚ್ಚುತ್ತಿದೆ.

ಚೇಟಿ॥ ಸರಿ- ಮೋಸಹೋದಿ. ನಿನ್ನದೇ ಈಸುವರ್ಣಭಾಂಡವು.

ವಿದೂ॥ (ಸಂತೋಷದಿಂದ) ಅಯ್ಯಾಮಿತ್ರನೇ! ನಮ್ಮಮನೆಯಲ್ಲಿ ಕಳ್ಳರುತೆಗದುಕೊಂಡುಹೋದ

ಚಾರು:—ಮಿತ್ರನೇ! ಎಮ್ಮಲ್ಲಿಟ್ಟಲಂಕಾರಕ್ಕೆ ಮುಯ್ಯಾಗಿಸಲ್ಕೆ ಆವನೆವಮಂ ನೆನೆದೆಸಗಿದೆಪೋ? ಅದೀಗಳ್ಳಿಸದಮಾಗಿಯೆಮ್ಮಿಂವಂಚನೆಯಾಗಿದ್ದಂತೆತೋರುಗುಂ.

ವಿದೂ॥ ಅಯ್ಯಾ ಮಿತ್ರನೇ! ನಾನು ನಿಶ್ಚಯವಾಗಿ ಪ್ರಮಾಣಬೇಕಾದರೂ ಮಾಡುವೆನು.

ಚಾರು:—ಪ್ರಿಯಮೆಮಗೆ ಪ್ರಿಯಮಪ್ಪ.

ವಿದೂ॥ (ಜನದಬಳಿ) ಅಯ್ಯಾ! ಇದು ಎಲ್ಲಿಂದ ಬಂತೋ ಕೇಳುತ್ತೇನೆ.

ಚಾರು:—ದೋಷಮೇಂ?

ವಿದೂ॥ (ಚೇಟಿಯ ಕಿವಿಯಲ್ಲಿ) ಹೀಗೆ ಹೀಗೆ.

ಚೇಟಿ॥ (ವಿದೂಷಕನ ಕಿವಿಯಲ್ಲಿ) ಹೀಗೆ ಹೀಗೆ-

ಚಾರು:—ಏಂ ಪೇಳ್ದಪಯ? ಅದಕಾವೇಂ ಬಾಹ್ಯರೋ?

ವಿದೂ॥ (ಚಾರುದತ್ತನ ಕಿವಿಯಲ್ಲಿ) ಹೀಗೆ ಹೀಗೆ-

ಚಾರು:—ಭದ್ರೇ! ನಿಸದಮುದುವೆ ಸುವರ್ಣಭಾಂಡವೊ? ಇದು-

ಚೇಟಿ॥ ಆರ್ಯನೇ! ಅಹುದು.

ಚಾರು:—ಭದ್ರೇ! ಆವಗಂ ಪ್ರಿಯಮೆನಗೆ ಪೇಳ್ದುದು ವ್ಯರ್ಥಮಾಗಲಿಲ್ಲಂ- ಆದುದರಿಂದೆ ಸಂತಸದಿಂದೀಯುಂಗುಳೀಯಕಮಂ ತೆಗೆದುಕೊಳ್(ಎಂದು ಉಂಗುರವಿಲ್ಲದ ಕೈಯಂ ನೋಡಿ ಕೊಂಡು ನಾಣ್ಚಿಕೆಯನಭಿನಯಿಪಂ)

ವಸಂತ॥ (ಮನಸ್ಸಿನಲ್ಲಿ) ಅದರಿಂದಲೇ ಕಾಮಿಸ ಬೇಕಾಗಿದೆ.

ಚಾರು:— (ಜನದಬಳಿ) ಅಯ್ಯಾ! ಕಷ್ಟಂ.

ಕಂ॥ ಮುನಿ ಸೊಸಗೆಗಳಾವಗೆ ಮೇ
ದಿನಿಯೊಳ್ ಪ್ರತಿಕೃತಿಗೆಯೋಗ್ಯಮಾಗದೆಪೋಕುಂ
ಧನ ಮೊಂದಿಲ್ಲದೆ ಯಿರಲಾ
ಜನಕ್ಕೆ ಮೊದಲಿಂದೆ ಬಾಳ್ತೆ ಯಿರ್ದುಂ ಫಲಮೇಂ?॥೧೪೬॥

ಮತ್ತಂ॥ ಕಂ॥ ಜಳಮಿಲ್ಲದ ಕೊಳಮುಂ, ಗರಿ
ಗಳಿಲ್ಲ ದಿಪ್ಪಾ ವಿಹಂಗ, ಮೊಣಗಿದ ಮರಮುಂ
ತಿಳಿಯಲ್ ಪಲ್ಕಳೆದೆ ಲರುಣಿ
ಯಿಳೆಯೊಳ್ಪುರುಳಿಲ್ಲ ದಾತನುಂ, ಸರಿಯಲ್ತೇ॥೧೪೭॥

[ವಿದೂ॥ ಅಯ್ಯಾ ಮಿತ್ರನೇ! ಆ ಕೆಟ್ಟ ಹಣವನ್ನು ನೆನಸಿಕೊಂಡೇತಕ್ಕೆ ಚಿಂತಿಸುತ್ತೀಯೆ?

ಚಾರು:—ಅಂತಲ್ಲಂ. ನೋಡು:—ಕಂ॥ ಹೃದಯದೊಳೇಳ್ದೇಳ್ದಡಗುಗು
ಮೊದವಿದ ಬಡತನದನರರ ಸುಮನೋರಥಗಳ್
ಪುದಿದಿರ್ದ್ದ ಹರಯದೊಳ್ಮೇ
ಚಿದಕುಲ ವಿಧವೆಯ ರಸುಸ್ತನಂಗಳ ತೆರದಿಂ॥೧೪೮॥]

ಮೃಚ್ಛಕಟಿಕಪ್ರಕರಣದಲ್ಲಿ,

ಅಂತುಮಲ್ಲದೆ॥ ಕಂ॥ ಬರಿವನೆಗಣೆಯೋ ಬಡವರ್;
ಪರಿಚಿತ ಜನಸಂಗಮುಮನೆ ಬಿಡುತಂಮನದೊಳ್
ಕೊರತೆಯುನಾಳ್ವ ಜನಕಾ
ಪರಿತೋಷದ ಸಮಯಮಿಂತುವಿಫಲಮೊಳಕ್ಕುಂ ॥ ೧೪೯॥

ವಿದೂ॥ ಅಯ್ಯಾ! ಸಾಕುಸಾಕು; ಅತಿಸಂತಾಪವೇತಕ್ಕೆ? (ಪ್ರಕಾಶವಾಗಿನಗುತ) ಎಲೇ! ನನ್ನ ಆ ಸ್ನಾನಶಾಠಿಯನ್ನು ನನಗೆಕೊಟ್ಟುಬಿಡು.

ವಸಂ॥ ಅಯ್ಯಾ! ಆರ್ಯಚಾರುದತ್ತನೇ! ಇಂಥಾರತ್ನಾವಳಿಯಿಂದ ನಮ್ಮಂಥವರನ್ನುಪರೀಕ್ಷಿಸುವದು ಸರಿಯಲ್ಲವಲ್ಲ.

ಚಾರು:—(ಆಶ್ಚರ್ಯಯು ನಗೆಯಿಂದ.) ವಸಂತಸೇನೆ! ನೋಡುನೋಡು.

ಕಂ॥ ನನ್ನಿಯನಿದ ನಾರ್ನಂಬುವ
ರೆನ್ನಂಜನ ಮೆಲ್ಲತಾಲ ಕಣದಂತರಿವರ್
ಪನ್ನತಿಕೆ ಯಿಲ್ಲದಾಕಿಂ
ಚನ್ನ್ಯಮಿದಿಳೆಯಲ್ಲಿ ಸಂದೆಗಕ್ಕೆಡೆಯಲ್ತೇ॥೧೫೦॥

ವಿದೂ॥ ಎಲೆ ಚೇಟಿಯೇ! ನೀನಿಲ್ಲಿಯೇ ಮಲಗಬೇಕೋಯೇನು?

ಚೇಟಿ। ನಕ್ಕು.) ಅಯ್ಯಾ ಮೈತ್ರೇಯನೇ! ಬಹಳವಾಗಿ ನೀನುಏನೂ ತಿಳಿಯದವನ ಹಾಗೆಯೇ ಕಾಣಿಸಿಕೊಳ್ಳುತ್ತೀಯೆ.

ವಿದೂ॥ ಅಯ್ಯಾಮಿತ್ರನೇ! ಈಮೇಘವು ಸುಖವಾಗಿ ಕೂತಿರುವರನ್ನು ಜೋರಾದಮಳೆ ಹನಿಗಳಿಂದ ಆಚೆಗೆಹೊರಡಿಸುವಂತೆಕಾಣುತ್ತೆ.

ಚಾರು:—ಒಳ್ಳಿತುಪೇಳ್ದಯ್. ಕಂ॥ ಕೆಸರಂ ಬಿಸ ಸೂಚಿಗಳೋಲ್
ಪೊಸಮುಗಿಲಂ ಭೇದಿಸಿಳಿದಪೀಬಿರುಪನಿಗಳ್
ಸಸಿ ಮಸುಳಲ್ ದುಃಖಿಸುವಾ
ಗಸವೆಣ್ಬೆಡುತಿಪ್ಪ ಕಂಬನಿಗಳೋಲ್ ಬೀಳ್ಗುಂ॥ ೧೫೧॥

ಮತ್ತಂ॥ ಕಂ॥ ಕರಿದಹಮುಗಿಲ್ಗಳ್; ಫಲ್ಗುನ
ಶರದೋಲ್ಬರ ಮಾರ್ಯಮನದೊ ಲಮಲಮುಮಾದಾ
ಶರ ಧಾರೆಗಳಂ ಕರೆಗುಂ
ಸುರಪನ ಮುತ್ತುಗಳರಾಶಿಯುಂ ಬೀರುವವೋಲ್॥೧೫೨॥

ಇನೆಯಳೆ! ನೋಡು ನೋಡು. ಇದೆಂತುಮೆರೆದಪ್ಪುದು?

ವೃ॥ ಘನನ ಸಮಾಗಮಕ್ಕೆಳಸಿ ಕೂರ್ತನುರಾಗಿಣಿ ಯಾಗಿವಿದ್ಯುದಂ
ಗನೆ ತವೆತಾನೆ ಬಂದೊಡನೆ, ಶೀತಸುಗಂಧದ ಸಂಜೆಗಾಳಿಯಿಂ

ಘನಮನಯದಿಂದೆ ಬೀಸಿಕೊಳುತಿರ್ಪ, ತಮಾಲದ ಸಾರದೆಣ್ಣೆಯಿಂ
ದೆಸೆಮುಗಿಲಿಂದೆಕಪ್ಪೇರಿದ ಪಂಬರಕಾಂತನನಪ್ಪುವಂತೆವೋಲ್ ॥ ೧೫೩ ॥

ವಸಂತ॥ (ಶೃಂಗಾರಭಾವಮಂ ಅಭಿನಯಿಸುತ ಚಾರುದತ್ತನನಪ್ಪುವಳ್)

ಚಾರು:—(ಸ್ಪರ್ಶಮಂನಟಿಸುತ ಪ್ರತ್ಯಾಲಿಂಗನಮಂ ಗೈದಪಂ)

ಕಂ॥ ಎಲೆ ಮುಗಿಲ್! ನೀಂಮೊಳ ಗಗುಂ
ದಲೆಯಿಂ ದೀ ನಿನ್ನನುಗ್ರಹದಿನೆನ್ನಂಗಂ
ನಲವಿಂ ಪೊಂಪುಳಿ ಯೊಂದುತೆ
ಸಲೆ ಕಡಬದ ಮರದ್ವೊಪ್ಪುಭಾವಮನಾಳ್ಗುಂ ॥ ೧೫೪ ॥

ವಿದೂ॥ ತೊತ್ತಿನ ಮಗನಾದ ದುರ್ದಿನವೇ! ಈಗನೀನು ವಸಂತಸೇನೆ ಯನ್ನು ಭಯಪಡಿಸುತ್ತಿದ್ದೀ ಯಾದಕಾರಣ ಬಹುಕೆಟ್ಟವನೆಂ ದೆನಿಸಿಕೊಳ್ಳುತ್ತೀಯೆ-

ಚಾರು:—ವಯಸ್ಯನೇ! ನೀನಂತು ತೆಗಳಲಾಗದು. ಏಕೆನೆ:—

ಕಂ॥ ಶತವರ್ಷ ಮಿಕ್ಕೆ ಮಳೆಸುರಿ
ಸುತೆ ದುರ್ದಿನ ಮಿದು, ಶತಹ್ರದೆ ಸ್ಫುರಿಸುಗೆ ಸಂ
ತತ ಮಿಂತಾ ನೆಮ್ಮನ್ನ
ಗ್ಗೆತಿದುರ್ಲಭೆಯಾದ ಪ್ರಿಯೆಯಿನಪ್ಪಿಸಿಕೊಂಡೆಂ ॥ ೧೫೫ ॥

ಮತ್ತಂ॥ ಮಿತ್ರನೇ! ಜಲದದ ಶೀತೋದಕದಿಂ।
ಸಲೆ ನನೆಯುತೆ ಮನೆಗೆ ಬಂದ ಪೆಣ್ಗಳತನುವಂ॥
ಒಲವಿಂ ತಮ್ಮೊಡಲಿಂದ।
ಪ್ಪಲೊಡರ್ಚೆಪ ಪುರವರಬಾಳ್ತೆ ಧನ್ಯಮದಲ್ತೇ ॥ ೧೫೬ ॥

ಪ್ರಿಯೆಯಪ್ಪ ವಸಂತಸೇನೆಯೇ!

ಕಂ॥ ಸಡಿಲ್ದಿರೆ ಮೇಲೆ ವಿತಾನಮು
ಮಡಿಜಗುಲಿಯು, ಮೆಂತುಪೊತ್ತು ನಿಂದುದೊಕಂಬಂ
ಒಡೆದಿರೆಸುಣ್ಣದಲೆಪ್ಪಂ
ನಡೆನಾಂಮುದು ಚಿತ್ರಭಿತ್ತಿ ಯಿದುಜಲಭರದಿಂ ॥ ೧೫೭ ॥

(ಮೇಲೆನೋಡಿ.) ಎಲಾ ಇಂದ್ರನಬಿಲ್ಲಿದೋ! ಮನದನ್ನಳ! ನೋಡುನೋಡು.

ಕಂ॥ ಒಗೆದಿಂದ್ರಾಯುಧಮುದ್ಧಕೆ
ನೆಗಪಿದ ತೋಳೆನಿಸೆಮಿಂಚಿದಪ ಮಿಂಚಿದುನಾ
ಲಗೆಯೆನೆ ಮುಗಿಲ್ನೀಳ್ದ ಕಡಂ
ಪುಗಳೆನೆ ಗಗನಂ ವಿಜೃಂಭಿಸಿದವೊಲ್ಮೆರೆಗುಂ ॥ ೧೫೮ ॥

ಮೃಚ್ಛಕಟಿಕ ಪ್ರಕರಣದಲ್ಲಿ.

ಆದುದರಿಂದೊಳಪುಗುವ ಬಾರೆಂದು(ಏಳ್ದು ನಡೆಯುತೆ.)

ಕಂ ॥ ಮರಗೊಂಬೊಳ್ ಮಂದ್ರಂ, ಬಾ
ಸರೆಯೊಳ್ದೃಢ, ಮುದಕದಲ್ಲಿ ತಿಗ್ಮಂ ತಾಳೀ
ತರುವೊಳಾತ್ತರಂ,ದೀಳ್ಗಂ
ಸರಿಗಳ್ ತಾಳಾನುವಿದ್ಧ ತತವಲ್ಲಕಿ ಪೋಲ್ ॥೧೫॥

[ಇಂತೆಲ್ಲರ್‌ಪೊರಮಟ್ಟರ್]

ಇಂತೆಂಬಲ್ಲಿಗೆಮೃಚ್ಛಕಟಿಕಪ್ರಕರಣ ದೊಳ್
ದು ರ್ದಿ ನ ಮೆಂ ಬ
ಐದನೆಯಅಂಕಂಮುಗಿದುದು

ಮೃಚ್ಛಕಟಿಕ ಪ್ರಕರಣಂ.

ಷ ಷ್ಠಾಂ ಕಂ

[ಚೇಟಿಯು ಪ್ರವೇಶಿಸುವಳು]

ಚೇಟಿ॥ ಇದೇನಿದುವರೆಗೂ ಅಕ್ಕನವರು ಏಳಲೇಯಿಲ್ಲ, ಹೋಗಿಎಬ್ಬಿಸುತ್ತೇನೆ.

(ಎಂದು ನಾಟ್ಯದಿಂದ ಅಡಿಯಿಡುವಳು)

[ಬಳಿಕತುಂಬ ಹೊದ್ದುಕೊಂಡು ಮಲಗಿದ್ದ ವಸಂತಸೇನೆ ಬರುವಳು]

ಚೇಟಿ॥ (ತೋರಿಸಿ) ಅಕ್ಕಾ! ಏಳು ಏಳು. ಬೆಳಗಾಯಿತು

ವಸಂ॥ (ಎದ್ದು.) ಏನು ರಾತ್ರಿಯೇ ಪ್ರಭಾತವಾಯಿತೋ?

ಚೇಟಿ॥ ನಮಗಿದು ಪ್ರಭಾತವು. ಅಕ್ಕಗಿನ್ನೂರಾತ್ರಿಯೇ,

ವಸಂ॥ ಎಲೇ ಮತ್ತು ನಿಮ್ಮಜೂಜುಗಾರ ನೆಲ್ಲಿಗೆ ಹೋದನು?

ಚೇಟಿ॥ ಅಕ್ಕಾ! ವರ್ಧಮಾನಕನಿಗೆ ಹೇಳಿ ಆರ್ಯಚಾರುದತ್ತನು ಪುಷ್ಪಕರಂಡಕವೆಂಬ ಹಳೆಯತೋಟಕ್ಕೆ ಹೋದನು.

ವಸಂತಸೇನೆ॥ಏನುಹೇಳಿ?

ಚೇಟಿ॥ ಬಂಡಿಯನ್ನು ಸಿದ್ಧಪಡಿಸು- ವಸಂತಸೇನೆಯೂಬರಲಿಎಂದು;

ವಸಂ॥ ಎಲೆ! ಎಲ್ಲಿಗೆ?

ಚೇಟಿ॥ ಅಕ್ಕಾ! ಆರ್ಯ ಚಾರುದತ್ತನಿರುವಲ್ಲಿಗೆ;

ವಸಂ॥ (ಚೇಟಿಯನ್ನು ಅಪ್ಪಿಕೊಂಡು-) ಎಲೇ! ರಾತ್ರಿನಾನಿದೊಂದೂ ನೋಡಿರಲಿಲ್ಲ ಈಗಪ್ರತ್ಯಕ್ಷವಾಗಿದೆ- ಆದರೆನಾನೇನು ಈಒಳತೊಟ್ಟಿಗೆಯೂವಾಗಬಂದೆನೋ?

ಚೇಟಿ॥ ನೀನು ಈ ಒಳತೊಟ್ಟಿಗೆ ಮಾತ್ರವೇ ಬಂದವಳಲ್ಲ- ಹುಡುಗ್ರು, ಎಲ್ಲರ ಮನಸ್ಸಿನ ಒಳಕ್ಕೂ ಬಂದವಳೇ.

ವಸಂ॥ ಆದರೆ ಚಾರುದತ್ತನ ಪರಿಜನರು ವ್ಯಸನಪಡುವರೋ?

ಚೇಟಿ॥ ವ್ಯಸನಪಡುವರು.

ವಸಂ॥ ಯಾವಾಗ?

ಚೇಟಿ॥ ನೀನು ಹೊರಟುಹೋದಾಗ,—

ವಸಂ॥ ಆದರೆ ನಾನು ಮುಂಚೆಯೇ ವ್ಯಸನಪಡಬೇಕು. (ಪ್ರೀತಿಯಿಂದ) ಎಲೆ! ಈ ರತ್ನಾವಳಿಯನ್ನು ತೆಗದುಕೊಂಡು ಹೋಗಿ, ನಮ್ಮಕ್ಕನಾದ ಧೂತಾದೇವಿಗೆ ಒಪ್ಪಿಸು. "ನಾನು ಶ್ರೀಚಾರುದತ್ತನ ಗುಣಕ್ಕೆ ಸೋತದಾಸಿಯು. ಹಾಗೇ ನಿಮಗೂ ದಾಸಿಯೇ ಆದ್ದರಿಂದ ಈ ರತ್ನಾವಳಿ ನಿಮಗೇ ಕಂಠಾಭರಣವಾಗಿರಬೇಕು" ಎಂದು ಹೇಳು ಹೋಗು.

ಚೇಟಿ॥ ಅಕ್ಕಾ! ಹಾಗೆ ಮಾಡಿದರೆ ಚಾರುದತ್ತನು ಅಮ್ಮನವರ ಮೇಲೆ ಕೋಪ ಮಾಡುವನು.

ವಸಂ॥ ಕೋಪವನ್ನು ಮಾಡುವದಿಲ್ಲ ಹೋಗು.

ಚೇಟಿ॥ (ತೆಗದುಕೊಂಡು) ಅಪ್ಪಣೆಯಂತೆ ಆಗಲಿ (ಎಂದು ಹೋಗಿ ಮತ್ತು ಬರುತ್ತಾಳೆ)

ಚೇಟಿ॥ ಅಕ್ಕಾ! "ಆರ್ಯಪುತ್ರನು ನಿಮ್ಮ ಪ್ರಸಾದಾರ್ಥವಾಗಿ ಕೊಟ್ಟಿರುವ ಈ ರತ್ನಾವಳಿಯನ್ನು ನಾನು ತೆಗದುಕೊಳ್ಳುವುದು ಯುಕ್ತವಲ್ಲವು. ಆರ್ಯಪುತ್ರನೇ ನನಗೆ ಉತ್ತಮಾಭರಣವೆಂದು ತಾವು ತಿಳಿಯಬೇಕು" ಎಂದು ಅಮ್ಮನವರು ಅಪ್ಪಣೆ ಕೊಟ್ಟರು.

[ಬಳಿಕ ದಾರಕನನ್ನು ಕರೆದುಕೊಂಡು ರದನಿಕೆ ಬರುವಳು]

ರದನಿಕೆ॥ ಮಗುವೇ ಬಾ! ಬಂಡಿಯಿಟ್ಟುಕೊಂಡು ಆಡುವ. ಬಾ!

ದಾರಕ॥ (ವ್ಯಸನದಿಂದ.) ರದನಿಕೆಯೇ! ನನಗೀ ಮಣ್ಣಿನ ಬಂಡಿಯಿಂದೇನು ಪ್ರಯೋಜನವು? ಆ ಚಿನ್ನದ ಬಂಡಿಯನ್ನೇ ತೆಗದುಕೊಡು.

ರದ॥ (ದುಃಖದಿಂದ ನಿಟ್ಟುಸಿರು ಬಿಡುತ.) ಎಲೆ ಹಸುಳೆ? ಈಗ ನಮಗೆ ಚಿನ್ನದ ಮಾತು ಎಲ್ಲಿಯದಪ್ಪ? ಮತ್ತೂ ತಂದೆಗೆ ಸಂಪತ್ತು ಬಂದರೆ ಚಿನ್ನದ ಬಂಡಿಯಿಂದಲೇ ಆಡುವಿ ಅದುವರೆಗೂ ಇದರಿಂದಲೇ ಆಡೋಣ. ಬಾ; ವಸಂತಸೇನೆಯ ಹತ್ತಿರಕ್ಕೆ ಹೋಗೋಣಬಾ? (ಹತ್ತಿರಕ್ಕೆ ಹೋಗಿ) ಅಕ್ಕಾ? ನಮಸ್ಕಾರ ಮಾಡುತ್ತೇನೆ.

ವಸಂ॥ ರದನಿಕೆಯೇ? ಬಾ? ಕೂತುಕೊ- ಇದ್ಯಾರದು ಕೂಸು. ಒಡವೆ ಯಿಡದಿದ್ದರೂ ಯಾದರೂ ಚಂದ್ರನ ಹಾಗೆ ಮನಸ್ಸಿಗೆ ಆಹ್ಲಾದವನ್ನು ಮಾಡುತ್ತದೆ.

ರದ॥ ಇವನೇ ಅಲ್ಲವೆ ಆರ್ಯಚಾರುದತ್ತನ ಮಗ. ರೋಹಸೇನನೆಂಬವನು.

ವಸಂ॥ (ತೋಳುಗಳಂ ಚಾಚಿ) ಬಾ ಮಗುವೇ ಬಾ! ಅಪ್ಪಿಕೋ (ಎಂದು ತೊಡೆಯ ಮೇಲೆ ಕುಳ್ಳಿರಿಸಿಕೊಂಡು) ಇವನಿಂದ ತಂದೆಯ ರೂಪವು ಅಣಕಿಸಿದ ಹಾಗೆ ಯಿರುವದು.

ರದ॥ ರೂಪವೊಂದೇ ಅಲ್ಲ. ಸ್ವಭಾವವೂ ಕೂಡ, ಇವನಿಂದಲೇ ಆಯ್ಯ ಚಾರುದತ್ತನು ವಿನೋದವಾಗಿ ಹೊತ್ತು ಕಳೆಯುವನು.

ವಸಂ॥ ಈಗ ಇವನೇತಕ್ಕೆ ಅಳುತ್ತಾನೆ?

ರದ॥ ಎದುರು ಮನೆಯ ಹುಡುಗನು ಚಿನ್ನದ ಬಂಡಿಯನ್ನು ಇಟ್ಟುಕೊಂಡು ಆಡಿಕೊಳ್ಳುತ್ತಿದ್ದನು, ಅದರನ್ನು ಆ ಹುಡುಗನು ತೆಗದುಕೊಂಡು ಹೋದನು- ಆಮೇಲೆ ಮತ್ತೂ ಅದರನ್ನೇ ಬೇಡಲು ನಾನೀ ಮೃಚ್ಛಕಟಿಕೆಯನ್ನು ಮಾಡಿಕೊಟ್ಟೆನು ಅದು ಪೊಲ್ಲದೆ- "ಎಲೆ ರದನಿಕೆ? ನನಗೀ ಮಣ್ಣಿನ ಬಂಡಿ ಯೇತಕ್ಕೆ? ಆ ಚಿನ್ನದ ಬಂಡಿಯನ್ನೇ ತಂದುಕೊಡು" ಎಂದು ಅಳುತ್ತಾನೆ-

ವಸಂ॥ ಛಿಃ! ಛಿಃ! ಅಯ್ಯೋ! ಇವನೂ ಕೂಡ ಹೆರವರ ಸಂಪತ್ತಿನಿಂದ ಚಿಂತಿಸ ಬೇಕಾಯಿತಲ್ಲ. ಓ ಭಗವಂತನಾದ ವಿಧಿಯೇ! ತಾವರೆಯೆಲೆಯ ಮೇಲೆ ಬಿದ್ದ ಹನಿಗೆ ಸಮಾನವಾದ ಪುರುಷಭಾಗ್ಯಗಳಿಂದ ಆಟವಾಡುತ್ತಿದ್ದೀಯಲ್ಲಾ (ಎಂದು ಕಣ್ಣೀರು ಹಾಕುತ್ತಾ) ಅಪ್ಪಾ ಮಗುವೇ! ಅಳಬೇಡ, ಚಿನ್ನದ ಬಂಡಿಯಿಂದಲಾಡುವಿ.

ದಾರ॥ ರದನಿಕೇ! ಇವಳ್ಯಾರೆ?

ವಸಂತ॥ ನಿಮ್ಮಪ್ಪನ ಗುಣಗಳಿಗೆ ಸೋತಂಥಾ ದಾಸಿಯಪ್ಪಾ.

ರದನಿಕೆ॥ ಹಸುಳೆ? ಈಕೆ ನಿನಗೆ ತಾಯಿಯಾಗಬೇಕು-

ದಾರ॥ ರದನಿಕೆ! ನೀನು ಸುಳ್ಳು ಹೇಳುತ್ತಿ ನಮಗೆ ಈಕೆ ತಾಯಿಯಾದರೆ ಏತಕ್ಕೆ ಅಲಂಕಾರವನ್ನು ಮಾಡಿಕೊಂಡಿದ್ದಾಳೆ?

ವಸಂ॥ ಎಲೆ ಮಗುವೇ! ಮುದ್ದು ಮೊಗದಿಂದ ನೀನು ಬಹು ವ್ಯಸನವಾಗುವಂತೆ ನುಡಿಯುವಿ. (ಎಂದು ನಾಟ್ಯದಿಂದ ಆಭರಣಗಳೆಲ್ಲವನ್ನೂ ತೆಗದು ಅಳುತ್ತಾ) ಇದಿಗೋ ಈಗ ನಾನು ನಿನಗೆ ತಾಯಿಯಾದೆನು ಆದ್ದರಿಂದ ಈ ಅಲಂಕಾರವನ್ನು ತೆಗದುಕೊಂಡು ಚಿನ್ನದ ಬಂಡಿಯನ್ನು ಮಾಡಿಸಿಕೋ-

ದಾರ॥ ಆಚೆಗೆ ಹೋಗು; ನಾನು ತೆಗದುಕೊಳ್ಳುವದಿಲ್ಲ (ಎಂದು ಹೋಗುವನು)

ವಸಂ॥ (ಹತ್ತಿರಕ್ಕೆ ಕರೆದು) ಇದರನ್ನು ತೆಗದುಕೋ ಏತಕ್ಕೆ ಬೇಡವೆಂದು ಹೇಳಲುವಿ?

ದಾರ॥ ನೀನು ಅಳುತ್ತಿ- ಅದಕ್ಕೆ ನಾನು ತೆಗದುಕೊಂಬುವುದಿಲ್ಲ.

ವಸಂ॥ (ಕಣ್ಣೀರು ಒರಸಿಕೊಂಡು) ಅಪ್ಪಾ ನಾನು ಅಳುವದಿಲ್ಲ ತೆಗದುಕೊಂಡು ಹೋಗು? (ಆಡಿಕೋ; ಆ ತೊಡವೆಗಳನ್ನು ಆ ಮಣ್ಣಿನ ಬಂಡಿಗೆ ತುಂಬಿ.) ಮಗುವೇ ಚಿನ್ನದ ಬಂಡಿಯನ್ನು ಮಾಡಿಸಪ್ಪಾ ಹೋಗು,

ದಾರಕನನ್ನು ಕರಕೊಂಡು ರದನಿಕೆಯು ಹೊರಟು ಹೋದಳು.

[ಬಳಿಕ ಪ್ರವಹಣವನ್ನೇರಿದವರ್ಧಮಾನಕನೆಂಬ ಚೇಟನು ಬರುವನು]

ಚೇಟ॥ ರದನಿಕೆ! ರದನಿಕೆ! "ದಿಡ್ಡಿಬಾಗಲಲ್ಲಿ ಸ್ವಾರಿಬಂಡಿಸಿದ್ಧವಾಗಿದೆ" ಎಂದುವಸಂತಸೇನೆಯಮ್ಮನವರಿಗೆ ಅರಿಕೆಮಾಡು.

[ರದನಿಕೆಯುಬಂದು]

ರದನಿಕೆ॥ ಅಕ್ಕಾ! ದಿಡ್ಡೀಬಾಗಲಲ್ಲಿ ಸ್ವಾರಿಬಂಡಿಸಿದ್ಧವಾಗಿದೆ "ಎಂದುಈವರ್ಧಮಾನಕನು ಅರಿಕೆಮಾಡಿಕೊಳ್ಳುತ್ತಾನೆ.

ವಸಂ॥ ಎಲೆ! ಕೊಂಚಹೊತ್ತು ಇರಲಿ, ಅಷ್ಟರಲ್ಲಿ ಸಿಂಗರಿಸಿಕೊಂಡು, ಬರುವೆನು.

ರದನಿಕೆ॥ (ತಿರುಗಿಹೋಗಿ) ವರ್ಧಮಾನಕನೇ! ಕೊಂಚಹೊತ್ತು ಇರು- ಅಕ್ಕನವರುಅಲಂಕಾರಮಾಡಿಕೊಂಡು ಬರುತ್ತಾರೆ.

ಚೇಟ॥ ಓಹೋಹೋ ಯಾನಾಸ್ತರಣವನ್ನುಮರೆತು ಬಂದಿರುವೆನು ಆದ್ದರಿಂದನಾನೀಗ ಅಷ್ಟರಲ್ಲಿಯೇ ಹೋಗಿ ತೆಗದುಕೊಂಡು ಬರುತ್ತೇನೆ ಆದರೆ ಯೀಯೆತ್ತುಗಳು ಹೊಸದಾಗಿ ಮೂಗಿಗೆ ಹಗ್ಗವನ್ನೇರಿಸಿರುವದರಿಂದ ಬಹು ತೀಕ್ಷ್ಣವಾಗಿರುವದಾದ್ದರಿಂದ ಬಂಡಿಯಿಂದಲೇಹೋಗಿಬರುವೆನು(ಎಂದುಹೊರಟುಹೋದನು)

ವಸಂತ॥ ಎಲೆಚೇಟಿಯೇ! ನನಗೆಅಲಂಕಾರವನ್ನು ತಂದುಕೊಡು ಸಿಂಗರಿಸಿಕೊಳ್ಳುವೆನು.

(ಎಂದುಅಲಂಕರಿಸಿಕೊಳ್ಳುತ್ತಿರುವಳು.)

[ಬಂಡಿಯನ್ನೇರಿದಸ್ಥಾವರಕನೆಂಬಚೇಟನುಬರುವನು]

ಸ್ಥಾವರಕ॥ ರಾಜಶ್ಯಾಲಕನಾದ ಶಕಾರನು ಪುಷ್ಪಕರಂಡಕವೆಂಬ ಹಳೆಯತೋಟಕ್ಕೆ ಬೇಗನೆ ಬಂಡಿಯನ್ನು ತೆಗದುಕೊಂಡು ಬಾರೆಂದು ಅಪ್ಪಣೆ ಮಾಡಿರುವನು.ಅದರಿಂದಲ್ಲಿಗೇ ಹೋಗಬೇಕು ನಡೆಯಿರಿ ಎತ್ತುಗಳೇ!ನಡೆಯಿರಿ(ಬಂದುನೋಡಿ) ಓಹೋಹೋ!ದಾರಿಯುತುಂಬಾಊರು ಬಂಡಿಗಳುತುಂಬಿವೆ- ಈಗಿಲ್ಲಿ ಯೇನುಮಾಡಲಿ?(ಕರಳಿ)ಎಲಾಯೆಲಾ? ಓರೆಯಾಗಿರಿವೋರೆಯಾಗಿರಿ. [ಕೇಳಿ] ಇದಾರಬಂಡಿಯೆಂದು ಕೇಳುತ್ತೀರೋ?ಇದುರಾಜಶ್ಯಾಲಕನಸಂಸ್ಥಾನದಬಂಡಿಯು ಆದ್ದರಿಂದ ಬೇಗನೆ ಓರೆಯಾಗಿರಿ ನೋಡಿಇದುಯಾರುನನ್ನನ್ನುನೋಡಿ ಜೂಜಿನಲ್ಲಿ ಸೋತುಓಡಿ ಹೋದವನಂತೆ ಓರೆಮಾಡಿಕೊಂಡುತಪ್ಪಿಸಿಕೊಂಡಲ್ಲಿಗೋಹೋದನು-ಇವನ್ಯಾರು?ಮತ್ತೊಬ್ಬನು?ಅಥವಾವಿಚಾರದಿಂದನನಗೇನುಫಲ?ಬೇಗನೆಹೋಗುವೆನು ಎಲೋ ಯೆಲೋಗ್ರಾಮ್ಯರೇ ಓರೆಯಾಗಿರಿಓರೆಯಾಗಿರಿಕೇಳಿ. ಏನು ಹೇಳುತ್ತೀರಿ? ಕೊಂಚನಿಲ್ಲು ಗಾಲಿಗಳನ್ನು ಸರಿಮಾಡಬೇಕೆಂದೋ? ಎಲ ಯೆಲಾ? ಆಸ್ಥಾನದಶೂರನಾದನಾನೂ ಚಕ್ರಗಳನ್ನು ಸರಿಮಾಡುವೆನು.ಅಥವಾ ಇವನೊಬ್ಬನೆಬಪಿಯಂಥವನುಇವನಕೈಯಲ್ಲಿಯೆನು ಆದೀತು? ಆದ್ದರಿಂದ ನಾನು ಈಬಂಡಿಯನ್ನು ಈಆರ್ಯಚಾರುದತ್ತನಮನೆತೋಟದ ಬಾಗಿಲಲ್ಲಿನಿಲ್ಲಿಸಿಬೇಗ ಹೋಗಿ

ಚಕ್ರಗಳನ್ನು ಹಿಡಿದು ಸರಿಮಾಡಿಬರುವೆನು ಎಂದುಬಂಡಿಯನ್ನು ಅಲ್ಲಿನಿಲ್ಲಿಸಿ ದೊ ಬಂದೆನೆಂದು ಹೊರಟುಹೋದನು-

ಚೇಟಿ॥ ಅಕ್ಕಾ! ಗಾಲಿಗಳ ಸಪ್ಪಳಾಗುತ್ತೆ. ಇದೋ ಬಂಡಿಬಂತು.

ವಸಂತ॥ಎಲೆ! ಹೊಗು. ಬಾಗಲುತೆಗೆಯಿ, ನನ್ನಮನಸ್ಸು ಅವಸರಪಡುತ್ತದೆ- ಆದ್ದರಿಂದ ದಾರಿಯನ್ನು ತೋರಿಸುವುದಕ್ಕೆ ಮುಂದೆನಡೆಯಿ.

ಚೇಟಿ॥ಅಕ್ಕನು ಇತ್ತ ಬರ ಬೇಕು

ವಸಂತ॥ನಡೆನುಬಂದು ಎಲೆರದನಿಕೆ? ಇನ್ನುನೀನುನಿಲ್ಲು ನಾನು ಹೋಗುವೆನು

ಚೇಟಿ॥ಅಪ್ಪಣೆಯೆಂದುಹೊರಟುಹೋದಳು-

ವಸಂತ ಬಲಗಣ್ಣೀಟುತ್ತಿರುವದನ್ನು ಸೂಚಿಸಿಬಂಡಿಯನ್ನೇರಿಇದೇನು! ಬಲದಕಣ್ಣು ಮಿಟುತ್ತಿದೆ. ಆಗಲಿಆರ್ಯಚಾರುದತ್ತನದರ್ಶನವೇಈದುರ್ನಿಮಿತ್ತವನ್ನುಹೋಗಲಾಡಿಸುವುದು.

[ಸ್ಥಾವರಕನೆಂಬಚೇಟನುಬಂದು]

ಸ್ಥಾವರಕ॥ ದಾರಿಗಡ್ಡವಾಗಿದ್ದ ಬಂಡಿಗಳನ್ನೆಲ್ಲಾ ಆಚೆಗೆ ತಳ್ಳಿದೆನು. ಇನ್ನು ಹೋಗುತ್ತೇನೆ. (ನಾಟ್ಯದಿಂದಬಂಡಿಯನ್ನೇರಿಅಲ್ಲಾಡಿಸಿತನ್ನೊಳು)ಇದೇನುಬಂಡಿಯುಭಾರವಾಗಿದ್ದಂತಿದೆ. ಅಥವಾಚಕ್ರಗಳನ್ನುತಳ್ಳಿಬಂದ ಆಯಾಸದಿಂದ ನನಗೆ ಯಿದು ಭಾರವಾಗಿ ತೋರಿರಬಹುದು. ಆಗಲಿಹೋಗುವೆನು. ಇನ್ನು ನಡೆಯಿರಿ ಯೆತ್ತುಗಳೇ! ನಡೆಯಿರಿ.

[ತೆರೆಯಲ್ಲಿ] ಎಲೆಯೆಲೇ! ದ್ವಾರಪಾಲಕರೇ! ನಿಮ್ಮನಿಮ್ಮ ಸ್ಥಳಗಳಲ್ಲಿನೀವು ಜಾಗರೂಕರಾಗಿರಿ ಇದೋ ಈಗಲೇ ಗೋಪಾಲ ದಾರಕನು ಬೇಡಿಯನ್ನೊಡಕೊಂಡು ಕಾವಲುಗಾರನನ್ನು ಕಂಡು ತಪ್ಪಿಸಿಕೊಂಡು ಓಡಿಹೋದನು. ಹಿಡಿದುಕೊಳ್ಳಿರಿ, ಹಿಡಿದುಕೊಳ್ಳಿರಿ.

[ಒಂದು ಕಾಲಿಗೆಸಂಕಲೆಯನ್ನಿಟ್ಟು ಕೊಂಡು ಮುಸುಕುಹಾಕಿಕೊಂಡು, ತೆರೆಯನ್ನ ಹಾರಿಸಿಕೊಂಡು, ಸಂಭ್ರಾಂತನಾದ ಆರ್ಯಕನೆಂಬವನುಬರುವನು]

ಸ್ಥಾವರಕನು॥ (ಮನಸ್ಸಿನಲ್ಲಿ) ಊರಲ್ಲಿ ಯೇನೋ ಗಲಭೆಹತ್ತಿದೆ. ಆದ್ದರಿಂದ ಬೇಗಬೇಗನೆ ಹೋಗುವೆನು. (ಹೊರಟುಹೋಗುವನು)

ಆರ್ಯಕಂ:—ಕಂ॥ ಪುರುಷಗೈ ಹಿತಶಿ ಕ್ಷಾ

ಕರಕಾರಾವ್ಯಸನ ಸಿಂಧುವಂ ದಾಂಟುತಮಾಂ

ಚರಣದ, ನಿಗಡಮ ನೆಳೆಯುತೆ

ತರುಗಿದಪೆಂ ಬಂಧದಿಂನು ಸುಳ್ದಾನೆಯ ವೋಲ್॥ ೧೬೦॥

ಅಯ್ಯಾ! ಆನಾದೊಡೆ ಸಿದ್ಧಾದೇಶದಿಂ ಭಯಂಗೊಂಡ ಪಾಲಕರಾಯನಿಂ ಗೊಲ್ಲರ ಪಳ್ಳಿಯಿಂ ಕರೆಯಿಸಿಕೊಂಡು ಸೆರೆವನೆಯೊಳ್ಕಟ್ಟುವಡೆದಿದ್ದೆಂ-ಬಳಿಕದರಿಂ ಪ್ರಿಯಮಿತ್ರನಾದ ಶರ್ವಿಲಕನ ಅನುಗ್ರಹ ದಿಂ ದಾ ಬಂಧದಿಂ ನುಸುಳ್ದೈತಂದೆಂ. (ಕಂಬನಿಯಂತೊಡೆದು.)

ವೃ॥ ಅರಸುತನಕ್ಕೆ ಯೋಗ್ಯವಿಧಿ ಯಿದೋಡೆತಪ್ಪಿನ ದಾಗಳಿಕ್ಕರ್ಗಮೇ,
ಬರಿದೆಯೆಕಾಡ ಪಲ್ಲಮರಿಯಂ ತಿದೊಕಟ್ಟಿಸಿಕೊಂಡೆನೀಗಳಾಂ,
ಅರಿಯದ ದೈವಸಿದ್ಧಿಯನದಂ ನಡೆಮೀರಲಶಕ್ಯಮಾರ್ಗಮಾ
ನರಪತಿಗಮ್ಯನಲ್ತೆ ತೆರೆಯೊಳ್ ಬಲವಂತರ ವೈರಮಾಗದೈ॥೧೬೧॥

ಅದರಿಂದಮಂದಭಾಗ್ಯನಾದಾನೆತ್ತಪೋದಪೆಂ? (ನೋಡಿ) ಈನೆಲೆಯ ಬಾಗಿಲ್ ತೆರದಿರ್ಪುದು ಆವಸಾಧುವಿನದೋ?

ಕಂ॥ ಸಡಿಲ್ದಿರೆ ಕೀಲ್ಗಳ್ ತೆರೆದಿರೆ
ನಿಡಿದಗುಳಿಯ ನಾಂತಕದಗಳೇ,ಜೀರ್ಣಗೃಹಂ
ಬಡೆದಾಕುಟುಂಬಿನಿಸದಂ
ಕಡಿದೆಡರೀದಶೆಯನಾಂತುಮುತ್ಸಮಭಾಗ್ಯಂ॥೧೬೨॥

ಅದರಿಂದಿಲ್ಲಿ ಪೊಕ್ಕು ಅವಿದಿರ್ಪೆಂ.

[ತೆರೆಯೊಳ್] ನಡೆಯಿರಿ ಯೆತ್ತುಗಳೇ ನಡೆಯಿರಿ;

ಆರ್ಯಕಂ:—(ಕೇಳ್ದು)ಎಲಾ! ಇದೇಂತೇರಿತ್ತಲೇಬಕ್ಕುರ್ಗಂ?

ಕಂ॥ ವರ ಗೋಷ್ಠೀಯಾನಂ ದು
ಶ್ಚರಿತಾರ್ಹಂ ಪ್ರವರಯೋಗ್ಯಮುಂಸ್ತ್ರೀಯಾನಂ॥
ಕರವಾಗದೆ ಪೊರಪೋದೊಡೆ
ಬರಿದಾದೀ ತೇರೆಯೆನಗೆ ವಿಧಿವಿಹಿತಂ ದಲ್॥ ೧೬೩॥

[ಬಳಿಕವರ್ಧಮಾನಕನೆಂಬ ಚೇಟನು ಬಂಡಿಯೊಡನೆಬಂದು]

ವರ್ಧಮಾನಕ॥ ಆಶ್ಚರ್ಯವು ನಾನು ಬಂಡಿಯಗದ್ದುಗೆಯ ಬೊಂತೆಯನ್ನು ಬೇಗನೇ ತಂದೆನಲ್ಲಾ ರದನಿಕೆಯೇ! ಕಳೆಯತೋಟಕ್ಕೆ ಹೋಗುವದಕ್ಕೆ ಬಂಡಿ ಸಿದ್ಧವಾಗಿದೆ, ಎಂದು ವಸಂತಸೇನೆಯಮ್ಮನವರಿಗೆ ಬಿನ್ನಯಿಸು;

ಆರ್ಯಕಂ:—(ಕೇಳ್ದು) ಇದುಬೆಲೆ ವೆಣ್ಗಾತೇರ್. ಪೊರಪೋಪ್ಪುದುಮಕ್ಕುಂ. ಆದುದರಿಂದೊಯ್ಯನೇರಿದಪೆಂ ಎಂದುಮೆಲ್ಲನೆಹತ್ತುವನು.

ಚೇಟನು॥ (ಕೇಳಿ) ಇದೇನುಕಾಲ್ಕಡಗದಸಪ್ಪುಳು? ಅಮ್ಮನವರು ಬಂದರು. ಅವ್ವಾ ಈಯೆತ್ತುಗಳು ಬೆದರುತ್ತವೆಯಾದ್ದರಿಂದ ಹಿಂದುಗಡೆಯಿಂದಲೇ ಹತ್ತಬೇಕು;

ಆರ್ಯಕಂ:—(ಅಂತೆ ಗೈದಪಂ)

ಚೇಟನು॥ ಅಲ್ಲಾಡುವ ಕಾಲ್ಕಡಗಗಳ ಸಪ್ಪುಳು ನಿಂತಿತು. ಈಗಅಮ್ಮನವರು ... ಕೊಂಡಿರಬಹುದು. ಬಂಡಿಯುಭಾರವಾಗಿದೆ - ಆದ್ದರಿಂದ ಹೋಗುವೆನು ... ಯಿರಿ! ಯೆತ್ತುಗಳೇ! ನಡೆಯಿರಿ! (ಎಂದುಹೋಗುತ್ತಾನೆ)

[ವೀರಕನೆಂಬರಾಜಭಟನುಬರುವನು]

...ರಕನು॥ ಎಲೋಯೆಲೋ! ಚಂದನಕಮಂಗಳಪುಷ್ಪಭದ್ರರೇ ಮೊದಲಾದವರೇ!

ಕಂ॥ ಹೀಗೇಕೆಸುಮ್ಮನಿರುವಿರೊ
ಆಗೊಲ್ಲರ ಹುಡುಗನಾರ್ಯಕನುಸೆರೆಯಲ್ಲಿ
ದ್ದೀಗಲೆ ಹೊರಟನು ಭೇದಿಸಿ
ಬೇಗನೆನೃಪಹೃದಯವನ್ನುಬಂಧನವನ್ನಾ॥೧೬೪॥

ಎಲಾ! ನೀನು ಪೂರವಾಡಲ ಬಾಗಿಲಲ್ಲಿ ಯಿರು. ನೀನು ಪಡುವಲಕಡೆ ಯಿರು ನೀನು ಟೆಂಕಲುಕಡೆಯಿರು. ಅವನುಬಡಗಲುಕಡೆಯಿರಲಿ.ನಾನೂ ಚಂದನಕನೂ ಕೂಡ ಈಕೋಟೆಯ ಗೋಡೆಯನ್ನು ಹತ್ತಿ ನೋಡುವೆವು ಎಲಾಚಂದನಕನೇ!ಇಲ್ಲಿ ಬಾರೊ;

[ಸಂಭ್ರಾಂತನಾದಚಂದನಕನುಬಂದು]

ಚಂದನಕನು॥ ಎಲಾ! ವೀರಕ ವಿಶಲ್ಯ ಭೀಮಾಂಗದ ದಂಡಕಾಲ ದಂಡಶೂರರ ಮೊ... ತಾದವರೇ! ಕಂ॥ ಎಲೆಲಾ ಬೇಗನೆ ಬನ್ನಿರಿ
ಸಲೆ ಯತ್ನಗಳನ್ನುಮಾಡಿ ದೃಢನಂಬಿಕೆಯಿಂ
ದಲೆಯಿ ಯರಸಿನಲಕ್ಷ್ಮಿಯು
ಕುಲಾಂತರ ಕ್ಕೆಯ್ದುವಂತೆತೋರಿದಕತದಿಂ॥೧೬೫॥

ಮತ್ತು॥ ಕಂ॥ ವೀರಕನೆ! ಏನುನೋಡುವಿ
ಸಾರದೆ ಮಾತಾಡುತಿರುವೆ ಸುಮ್ಮನೆನಿಂತು
ದಾರಿಯಲಿ ತೋಟದಲಿ ಹೊರ
ಕೇರಿಯಲಂಗಡಿಗಳಲ್ಲಿ ಹಳ್ಳಿಗಳಲ್ಲಿ॥೧೬೬॥

ಕಂ॥ಎಲ್ಲೆಲ್ಲಿ ಶಂಕೆ ಯಿರುವುದೊ
ಅಲ್ಲಲ್ಲಿಯೆ ಹುಡುಕಬೇಕು ಜನಗಳುಬೇಗ
ಗೊಲ ನ ನೊಯ್ವನು ಯಾರೋ
ಯಿಲ್ಲಿಯೆ ಚಂದನಕನಾನು ಬದುಕಿರುವಾಗ ॥ ೧೬೭॥

ಕಂ॥ ಅವನಿಗೆ ನಾಲ್ಕನೆ ಚಂದ್ರಮ|
ನವಗೈದನೆ ವಕ್ರ ನವಗೆಯಾರನೆಶುಕ್ರಂ॥

ಅಪಗತಸ್ತ್ಯಮರವಿ ಯುವನಿಗೆ
ನವಮುಕ್ತನ್ನೈಶ್ಚರನುಜನ್ಮ ಷಡ್ಗುರುಪವಗೆ॥೧೬೮॥

ವೀರ॥ ಎಲಾಚಂಪನಕನೇ! ನಿನ್ನಾಣೆ ಪ್ರಮಾಣಮಾಡಿ ಹೇಳುತ್ತೇನೆ ಕೇಳು. ಆಗೋಲ್ಲರ ಹುಡುಗನನ್ನು ಯಾವನೋಮುಂಜಾನೆಯೇಯೆತ್ತಿಕೊಂಡು ಹೋಗಿದ್ದಾನೆ.

ಚೇಟನು॥ ನಡೆಯಿರಿ ಯೆತ್ತುಗಳೇ! ನಡೆಯಿರಿ.

ಚಂದನ॥ (ನೋಡಿ) ಎಲಯೆಲಾ! ನೋಡುನೋಡು. ರಾಜಮಾರ್ಗದಲ್ಲಿ ಮುಸುಕಿಟ್ಟಿರುವ ಬಂಡಿಯು ಹೋಗುತ್ತಿದೆ. ಇದು ಯಾರದೋ ಎಲ್ಲಿಗೆಹೋಗುತ್ತೋ? ವಿಚಾರಿಸು.

ವೀರ॥ (ನೋಡಿ)ಎಲಾಭಂಡಿಯಾಳೇ! ನಿಲ್ಲಿಸು. ಇದುಯಾರದುಬಂಡಿಯೊಳಗೆಯಾರಿದ್ದಾರೆ? ಎಲ್ಲಿಗೆ ಹೋಗುತ್ತೆ?

ಚೇಟ॥ ಈಬಂಡಿಆರ್ಯಚಾರುದತ್ತನದು, ಒಳಗೆ ವಸಂತಸೇನೆಯಿದ್ದಾಳೆ, ಚಾರುದತ್ತನೊಡನೆ ವಿನೋದವಾಗಿರುವ ಧಕ್ಕೋಸ್ಕರವಾಗಿ ಪುಷ್ಪಕರಂಡಕವೆಂಬಹಳೆಯತೋಟಕ್ಕೆ ಹೋಗುತ್ತಾಳೆ.

ವೀರಕ॥ (ಚಂದನಕನ ಬಳಿಗೆಹೋಗಿ.) ಬಂಡಿಯಾಳು "ಚಾರುದತ್ತನ ಬಂಡಿ, ವಸಂತಸೇನೆ ಹತ್ತಿದ್ದಾಳೆ, ಹಳೆತೋಟಕ್ಕೆ ಹೋಗುತ್ತೆ" ಎಂದು ಹೇಳುತ್ತಾನೆ.

ಚಂದನ॥ ಆದರೆ ಹೋಗಲಿ

ವೀರಕ॥ ಒಳಗೆ ನೋಡದೇನೇ ಹೋಗಲೋ?

ಚಂದನ॥ ಹೌದು ಹೋಗಲಿ.

ವೀರಕ॥ ಯಾರನಂಬಿಕೆಯಿಂದ?

ಚಂದನ॥ ಆರ್ಯ ಚಾರುದತ್ತನ ನಂಬಿಕೆಯಿಂದ.

ವೀರಕ॥ ಚಾರುದತ್ತನುಯಾರು? ವಸಂತಸೇನೆಯಾರು? ನೋಡದೇ ಬಿಡಬಹುದೇ?

ಚಂದನ॥ ಎಲಾ ಆರ್ಯಚಾರುದತ್ತನನ್ನು ವಸಂತಸೇನೆಯನ್ನೂ ನೀನು ಅರಿಯೆ? ಹಾಗಾದರೆ ಆಕಾಶದಲ್ಲಿ ಚಂದ್ರಿಕಾ ಸಹಿತನಾದ ಚಂದ್ರನನ್ನೂ ಕೂಡ ನೀನು ಕಾಣೆಯಾದೀತು?

ಕಂ॥ ಅವನು ಗುಣಾಂಭೋರುಹರವಿ
ಯುವನೇ ಶೀಲೇಂದು ವವನೆ ಆಪನ್ನರದುಃ
ಖವಕಳೆ ವನವನೆ ಚತುರ
ರ್ಣವಸಾರ ಮಣಿಯೆನೆ ಯಾರ್ಕು ತಿಳಿಯರೊಅವನಂ॥೧೬೯॥

ಕಂ॥ ಆರ್ಯಳು ವಸಂತಸೇನೆಯು
ಆರ್ಯನು ಧರ್ಮಿಷ್ಠ ಚಾರುದತ್ತನೆಇವರಾ

ಮೃಚ್ಛಕಟಿಕ ಪ್ರಕರಣದಲ್ಲಿ,

ದಾರ್ಯ ನಿಧಿಗ ಳಿಬ್ಬರೆಗಾಂ
ಭೀರ್ಯ ಯುತರು ತಿಲಕಭೂತ ರೀಪುರದಲ್ಲಿ॥೧೬೦॥

ವೀರಕ॥ ಎಲಾ ಚಂದನಕಾ! ಕಂ॥ ಅರಿವೆನು ವಸಂತಸೇನೆಯು
ನರಿವೆನು ತಚ್ಚಾರುದತ್ತ ನಂಚೆನ್ನಾಗೀ
ಯರಸಿನ ಕೆಲಸವು ಬಂದಾ
ಗರಿಯೆನು ನಾನ್ನಮ್ಮ ತಂದೆಯನ್ನಾ ಕೂಡಾ॥೧೬೧॥

ಆರ್ಯಕಂ:—(ತನ್ನೊಳ್) ಈತನೆನಗೆ ಮುಂಬಗೆ ಈತನೆನ್ನ ಮುನ್ನಂತೆಂ ಎಂತೆನೆ:—

ಕಂ॥ ಒಂದೇ ಕಜ್ಜದೆ ಬೆಸನವು
ನೊಂದಿಯು ಮೊಂದೇ ಸ್ವಭಾವ ಮಿಲ್ಲ ವರೀರ್ವ
ರ್ಗಂದ್ವಾರ ಸಂಗ್ರಹಣಾ ಕಂ
ಸಂದಮೃತಿಯು ಚಿತೆಗೆಸಂದ ದಹನಂಗಳವೋಲ್॥೧೬೨॥

ಚಂದನ॥ ನೀನು ರಾಜ್ಯ ಕಾರ್ಯದಲ್ಲಿ ಯುಕ್ತಿವಂತನಾದ ಸೇನಾಪತಿಯು- ಆದ್ದರಿಂದ ನೋಡು ಬಂಡಿಯನ್ನು ನಿಲ್ಲಿಸಿರುವೆನು.

ವೀರಕ॥ ನೀನೂ ಅರಸಿಗೆ ನಂಬಿಕೆಯಾದ ಸೇನಾಪತಿಯೇ ಆದ್ದರಿಂದ ನೀನೂ ನೋಡು.

ಚಂದನ॥ ನಾನು ನೋಡಿದರೆ ನೀನು ನೋಡಿದಹಾಗಲ್ಲವೆ?

ವೀರಕ॥ ನೀನು ನೋಡಿದರೆ ರಾಜನಾದ ಪಾಲಕರಾಯನೇ ನೋಡಿದಹಾಗೆ.

ಚಂದನ॥ ಎಲಾ ಚೇಟನೇ ನೊಗವನ್ನು ಮೇಲಕ್ಕೆತ್ತು?

ಚೇಟ॥ (ಹಾಗೆ ಮಾಡುತ್ತಾನೆ)

ಆರ್ಯಕಂ:—(ತನ್ನೊಳ್) ಅರಸಾಳ್ಗಳೆನ್ನಂ ನೋಡಿದಪರೋ? ಮಂದಭಾಗ್ಯನಾದ್ದೂಂ ಕೈದುವುಮಿಲ್ಲದಿರ್ಪೆಂ.

ಕಂ॥ ಮರುದಾತ್ಮಜ ವೃತ್ತಿಯನನು
ಕರಿಸುವೆ ನೀತೋಳೆ ಶಸ್ತ್ರಮಾಗುವುದೆನಗಂ
ವರಮಲ್ತೆ ಸೆಣಸುವಗೆಮೃತಿ
ಸೆರೆಯೊಳ್ಮಡಿದಂಗೆಗತಿಯು ದೇನಾದಪ್ಪುದೇ॥೧೬೩॥

ಮೇಣ್ ಸಾಹಸಕ್ಕೆ ದವಸರಮಲ್ಲಂ,

ಚಂದನ॥ (ನಾಟ್ಯದಿಂದ ಬಂಡಿಯನ್ನು ಹತ್ತಿ ನೋಡುತ್ತಾನೆ)

ಆರ್ಯಕಂ:—ಶರಣಾಗತನಾದಪೆಂ,

ಚಂದನಕ:—(ಪಳೆಗನ್ನಡದಿಂದೆ) ಶರಣಾಗತಂಗಭಯಂ-

ಆರ್ಯನೇ! ಕಂ॥ ಬಿಡುವುದು ಜಯಸಿರಿ ಯವನಂ
ಬಿಡುವರ್ನಂಟರ್ ಸುಮಿತ್ರುವರ್ಗಮುಮೆಂತುಂ

ಪಡೆವ ನಪಹಾಸ್ಯತೆಯ ಗಡ
ಬಿಡುವನೊ ಯಾವಂಸಮಂತುಮರೆಯೊಕ್ಕಪನಂ ೧೭೪॥

ಚಂದನಕನು॥ ಇದೇನುಗೊಲ್ಲನಾದಾರ್ಯಕನೋ? ಗಿಡಗಕ್ಕೆ ಭಯಪಟ್ಟ ಪಕ್ಷಿಯು ಬೇಡನ ಕೈಯಲ್ಲಿ ಬಿದ್ದಹಾಗಾಯಿತು (ಯೋಚಿಸಿ) ಇವನು ನಿರಪರಾಧಿ ಶರಣಾಗತನು - ಮತ್ತು ಆರ್ಯ ಚಾರುದತ್ತನ ಬಂಡಿಯನ್ನೇರಿರುವನು. ನನ್ನ ಪ್ರಾಣಪ್ರದನಾದ ಆರ್ಯಶರ್ವಿಲಕನಿಗೆ ಗೆಳೆಯನೂ ಆಗಿದ್ದಾನೆ. ರಾಜಾಜ್ಞೆಯೊಂದು ಕಡೆಬಲವಾಗಿದೆ, ಆದ್ದರಿಂದ ಈಗೇನುಮಾಡಬಹುದು? ಅಥವಾ ಏನಾಗುತ್ತೋ ಅದಾಗಲಿ. ಮೊದಲೇ ಅಭಯವನ್ನು ಕೊಟ್ಟಿರುವೆನು-

ಕಂ॥ ಭಯದಿಂಮರೆ ಹೊಂದಿದವಗ
ಭಯದಾನವ ಮಾಡಿಲೋಕ ದೊಳಗಿಂತುಪಕಾ
ರಿಯೆನಿಸಿದ ವಸಿಗೆ ಕೇಡುಸ
ಮಯದಲಿ ಬರಬಹುದು ಬರಲಿ ಯಾದರು ಗುಣವೇ॥೧೭೫॥

(ಭಯದಿಂದಿಳಿದು) ನೋಡಿದೆನು ಆರ್ಯನನ್ನು (ಅಷ್ಟರಲ್ಲಿಯೇ) ಉಃ, ಅಲ್ಲಲ್ಲ; ಆರ್ಯಳಾದ ವಸಂತಸೇನೆಯನ್ನು ಆಕೆ "ಇದುಸರಿಯಲ್ಲವು ಇದೋ ನಾನು ಆರ್ಯಚಾರುದತ್ತನೊಂದಿಗೆ ವಿಹಾರಾರ್ಥವಾಗಿ ಹೋಗುವಾಗರಾಜಮಾರ್ಗದಲ್ಲಿ ಹೀಗೆಅವಮಾನಮಾಡುವದು ಯುಕ್ತವಲ್ಲ" ವೆಂದುಹೇಳುತ್ತಾಳೆ.

ವೀರಕ॥ ಚಂದನಕನೇ! ಇಲ್ಲಿ ನನಗೊಂದು ಸಂದೇಹವುಂಟಾಯಿತು.

ಚಂದನ॥ ನಿನಗೆಸಂಶಯವೇತಕ್ಕೆ?

ವೀರಕ॥ ಭಯದಗದ್ಗದಸ್ವರದಿಂದ ಮುಂಚೆನೋಡಿದೆನು ಆರ್ಯನನ್ನು, ಎಂದುಹೇಳಿ ಆಮೇಲೆ "ಉಃ ಅಲ್ಲಲ್ಲ ಆರ್ಯಳಾದ ವಸಂತಸೇನೆಯನ್ನು" ಎಂದು ಹೇಳಿದಿ ಆದ್ದರಿಂದನನಗೆ ಅಪನಂಬಿಕೆ.

ಚಂದನ॥ ಎಲಾ! ನಿನಗೇಕೋ ಅಪನಂಬಿಕೆ? ನಾವುದಾಕ್ಷಿಣಾತ್ಯರು. ದ್ರಾವಿಡಾದ್ಯನೇಕದೇಶಭಾಷಾಭಿಜ್ಞರಾಆದ್ದರಿಂದ ದ್ರುತೋಚ್ಚಾರಣೆಯಿಂದ ಯಥೇಚ್ಛವಾಗಿ ಮಾತನಾಡುವೆವು. ಏನುಶಬ್ದವಿಚಾರವೋ ಲಿಂಗವಿಚಾರವೋ?

ವೀರಕ॥ ಸರಿಸರಿ, ಆದರೆನಾನು ನೋಡುತ್ತೇನೆ. ಇದುರಾಜಾಜ್ಞೆಯು ನಾನು ಅರಸಿಗೆ ಆಪ್ತನಾಗಿರುವೆನು-

ಚಂದನ॥ ಆದರೆನಾನೇನು ಆಪ್ತನಲ್ಲವಷ್ಟೆ?

ವೀರಕ॥ ಹಾಗಲ್ಲ. ನನಗೆ ಅರಸಿನಕಟ್ಟಳೆಯುಂಟು.

ಚಂದನ॥ (ಮನಸ್ಸಿನಲ್ಲಿ) ಈಗೊಲ್ಲನು ಆರ್ಯಚಾರುದತ್ತನಬಂಡಿಯನ್ನು ಹತ್ತಿಹೋಗುತ್ತಿದ್ದಾನೆಯೆಂದು- ಹೇಳಿದರೆ ಆಗ ಆರ್ಯಚಾರುದತ್ತನಿಗೂ ಶಿಕ್ಷೆಯಾದೀತು

ಮೃಚ್ಛಕಟಿಕಪ್ರಕರಣದಲ್ಲಿ,

ಈಪ್ರಯೋಗವನ್ನು ಮಾಡುತ್ತೇನೆ- (ಪ್ರಕಾಶವಾಗಿ) ಎಲಾ, ವೀರಕನೇ! ಈ ಚಂದನಕನೇ ನೋಡಿಹೇಳಿದಮೇಲಿವರಳಿನೋಡುವದಕ್ಕೆನೀನುಯಾರೋ.

ವೀರಕ॥ ಎಲಾ! ನೀನಾರೋ?

ಚಂದನ॥ ಬಹುಯೋಗ್ಯನೂ ಪೂಜ್ಯನೂ ಆದನೀನು ನಿನ್ನ ಜಾತಿಯನ್ನು ನೆನಸಿಕೊ.

ವೀರಕ॥ (ಕೋಪದಿಂದ) ಎಲಾ! ಯಾವದೋನನ್ನಜಾತಿ?

ಚಂದನ॥ ಯಾವದೋನೀನೇಹೇಳು,

ವೀರಕ॥ ನೀನೇ ಹೇಳು,

ಚಂದನ॥ ಹೇಳಕೂಡದು- ನಿನ್ನಜಾತಿನನಗೆ ತಿಳಿದಿದ್ದರೂ, ಹೇಳಿದರೆ ನನ್ನಶೀಲಪ್ರಕೇದವಾದ್ದರಿಂದ ಹೇಳಲಾರದೇ ನನ್ನಮನಸ್ಸಿನಲ್ಲಿಯೇ ಯಿಟ್ಟುಕೊಂಡಿರುವೆನು. ಹಾಗೆಯೇಯಿರಲಿ, ಬೇಲದಕಾಯಿಯನ್ನುಒಡೆಯಬೇಕೇತಕ್ಕೆ?

ವೀರಕ॥ ಇಲ್ಲ ಇಲ್ಲ ಹೇಳುಹೇಳು,

ಚಂದನ॥ (ಸನ್ನೆಯನ್ನುಮಾಡುತ್ತಾನೆ-)

ವೀರಕ॥ ಎಲಾ ಏನೋ ಯಿದು?

ಚಂದನ॥ ಕಂ॥ ಕ್ಷುರವನು ಮಸೆಯುವ ಕಲ್ಲನು
ಕ್ಷುರ ಕತ್ತರಿಗಳನು ಮೊದಲುಕೈಯಲಿ ಹಿಡಿದೇ
ಪುರುಷರ ತಲೆಯನುಬಗ್ಗಿಸಿ
ಕೆರೆಯುವನಹ ನೀನು ದಂಡಿಗೇಗೊಡೆಯನಹೈ॥ ೧೩೬ ॥

ವೀರಕ॥ ಎಲಾಚಂದನಕನೇ! ಬಹುಮಾನಿತನಾದನೀನೂ ನಿನ್ನಜಾತಿಯನ್ನು ಸ್ಮರಿಸಿಕೊಳ್ಳಲಿಲ್ಲವೆ?

ಚಂದನ॥ ಎಲಾ! ಚಂದ್ರನಂತೆನಿರ್ಮಲವಾದ ಚಂದನಕನಜಾತಿಯುಯಾವದೋ?

ವೀರಕ॥ ಯಾವದೋ ನೀನೇಹೇಳು?

ಚಂದನ॥ ನೀನೇ ಹೇಳುಹೇಳು;

ವೀರ॥ (ನಾಟ್ಯದಿಂದಸನ್ನೆಮಾಡುತ್ತಾನೆ)

ಚಂದ॥ ಎಲಾ! ಏನೋ ಯಿದು?

ವೀರ॥ ಎಲಾ! ಕೇಳುಕೇಳು. ಕಂ॥ ಜಾತಿಯುನಿನ್ನದುಶುದ್ಧವೆ
ಮಾತೆಯೆ ಭೇರಿಯೆನೆತಂದೆ ಢಕ್ಕೆಯುನಿಮ್ಮ.
ಭ್ರಾತನು ಕರಡಕವಾದ್ಯವೆ
ಯಿಾತೆರದಿಂ ನೀನುಕೂಡ ಸೈನಿಕನಾದೈ॥ ೧೩೭ ॥

ಚಂದನ॥ (ಕೋಪದಿಂದ) ನಾನು ಚಂದನಕನು ಚರ್ಮಕಾರನೋ? ಆದರೆ ಬಂಡಿಯನ್ನು ನೋಡು ಬಾ.

ವೀರಕ॥ ಎಲಾ ಬಂಡಿಯಾಳೇ ತಿರುಗಿಸು ಬಂಡಿಯನ್ನು ನೋಡುವೆನು,

ಚೇಟನು॥ (ಹಾಗೆಯೇ ತಿರುಗಿಸುತ್ತಾನೆ)

(ವೀರಕನು ಬಂಡಿಯನ್ನು ಹತ್ತುವದಕ್ಕೆ ಬರಲು; ಚಂದನಕನು ಬಲಾತ್ಕಾರದಿಂದ ಕೂದಲು ಹಿಡಿದೆಳದು ಕೆಡವಿ ಕಾಲಿಂದೊದೆಯುತ್ತಾನೆ.)

ವೀರಕನು॥ (ಸಿಟ್ಟಿನಿಂದೆದ್ದು) ಎಲಾ! ನಂಬಿಕೆಯಿಂದ ಅರಸಿನಪ್ಪಣೆಯನ್ನು ನಡಿಸುತ್ತಾ ನಾನು ನಿನ್ನ ಕೈಯಿಂದೆಳಸಿಕೊಂಡು ಕಾಲಿನಿಂದೊದಿಸಿಕೊಂಡದ್ದಕ್ಕೆ- ಕೇಳೆಲೋ! ಓಲಗದಲ್ಲಿ ಎಲ್ಲರ ಯೆದಿರಿಗೂ ನಿನಗೆ ಶಿಕ್ಷೆ ಮಾಡಿಸದೇ ಹೋದರೆ ನಾನು ವೀರಕನೇ ಅಲ್ಲ,

ಚಂದನ॥ ಎಲಾ! ಓಲಗಕ್ಕಾದರೂ ಹೋಗು- ಸುಡುಗಾಡಿಗಾದರೂ ಹೋಗು- ನಾಯಿಯಿಂದಾಗತಕ್ಕದ್ದೇನು?

ವೀರಕ॥ ಹಾಗೆಯೇ ಆಗಲಿ (ಎಂದು ಹೊರಟು ಹೋದನು)

ಚಂದನ॥ (ದಿಕ್ಕುಗಳನ್ನು ನೋಡಿ) ಎಲಾ ಬಂಡಿಯಾಳೆ! ನಡಿ. ಹೋಗು. ದಾರಿಯಲ್ಲಿ ಯಾರಾದರೂ ಕೇಳಿದರೆ "ಚಂದನಕ ವೀರಕರು ಬಂಡಿಯನ್ನು ನೋಡಿ ಕಳುಹಿಸಿದ್ದಾರೆ" ಎಂದು ಹೇಳು, ಎಲೌ ವಸಂತಸೇನೆಯೇ! ಇದೋ ಗುರುತಿಗೋಸ್ಕರ ಇದನ್ನು ತೆಗದುಕೋ. (ಎಂದು ಕತ್ತಿಯನ್ನು ಕೊಡುತ್ತಾನೆ.)

ಆರ್ಯಕಂ:—(ಸಂತೋಷದಿಂದ ಖಡ್ಗವಂ ಪಿಡಿದು ತನ್ನೊಳು)

ಕಂ॥ ಎಲೆಲಾ! ಕೈದುವನಾಂತೆಂ
ಬಲದೋಳುಂ ಮತ್ತೆ ಮತ್ತೆ ಯದಿರುತ್ತಿರ್ಕ್ಕುಂ
ಸಲೆ ಯನುಕೂಲಿಕುವೆಲ್ಲಂ
ಸಲಹಿಸಿಕೊಂಡೆಂ ಮಹಾತ್ಮ ನಿವನಿಂದೀಗಳ್॥ ೧೭೮॥

ಚಂದನ॥ ಆರ್ಯರೇ! ಪ್ರೀತಿಯಿಂದ ವಿಜ್ಞಾಪನೆ ಮಾಡಿಕೊಳ್ಳುವೆನು - ಚಂದನಕನ ಜ್ಞಾಪಕವಿರಲಿ. ಅವನು ಕೆಟ್ಟ ಮಹಾಕೃಪಣನು. ಅದು ನಾನು ಹೇಳಕೂಡದಾದರೂ ಸ್ನೇಹದಿಂದ ಹೇಳಿರುವೆನು.

ಆರ್ಯಕಂ:—ಕಂ॥ ಚಂದಿರನೋಲ್ ಸಚ್ಚೀಲಂ
ಚಂದನ ನಿವನೆನಗೆ ನೃಪನಿಂ ಕೆಳೆಯಾದಂ
ಇಂದಿದು ಮೊದಲಾಂ ನೆನೆವೆಂ
ಚಂದನನೇ! ಇದೊರ್ಗಡಂತು ಸಿದ್ಧಾದೇಶಂ॥ ೧೭೯॥

ಚಂದನ॥ ಕಂ॥ ಶುಂಭ ನಿಶುಂಭರ ಕೊಂದಾ
ಶಾಂಭವಿ ಜಗಕಭಯವಿತ್ತು ಹಾಗೆಯೆ ಕಾಡಲೀ
ನಂಬಿದನಿನಗೀ ಗಭಯವ
ಶಂಭುವು ವಿಷ್ಣುವು ವಿರಿಂಚಿ ಸೂರ್ಯನು ಶಶಿಯುಂ॥ ೧೪॥

ಚೇಟನು॥ (ಬಂಡಿಯಿಂದಕೂಡಿ ಹೊರಟುಹೋದನು.)

ಚಂದನ॥ ತೆರೆಯುಕಡೆಯನ್ನು (ನೋಡಿ) ಎಲಾ ನಾನು ಹೊರಟುಬರುವಾಗ ಸ್ನೇಹಿತನಾದ ಶರ್ವಿಲಕನೂ ಹಿಂಭಾಗದಲ್ಲಿಯೇ ಹೋದನು-ಆಗಲಿ,ಅರಸಿಗೆ ಪ್ರಿಯನಾಗಿ ಪ್ರಧಾನಸೇನಾಪತಿಯಾದ ವೀರಕನ ಸಂಗಡವಿರೋಧವುಂಟಾಯಿತು. ಆದ್ದರಿಂದಇನ್ನು ನಾನಿಲ್ಲಿರದೇ ಅಣ್ಣ ತಮ್ಮಂದಿರಿಂದಲೂ ಮಕ್ಕಳಿಂದಲೂ ಕೂಡಿ ಅವನನ್ನೇಅನುಸರಿಸುವೆನು.

(ಎಂದೆಲ್ಲರೂ ಹೊರಟುಹೋದರು)

'ಇಂತೆಂಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್
ಪ್ರವಹಣವಿಪರ್ಯಯವೆಂಬ
ಆರನೆಯಅಂಕಂ.
ಮುಗಿದುದು.

ಮೃಚ್ಛಕಟಿಕ ಪ್ರಕರಣಂ.

ಸಪ್ತಮಾಂಕಂ.

[ಬಳಿಕಚಾರುದತ್ತಂವಿದೂಷಕನುಂ ಪುಗುವರ್.]

ವಿದೂ॥ ಆರ್ಯ್ಯಾಮಿತ್ರನೇ! ನೋಡುನೋಡು,ಪುಷ್ಪಕರಂಡಕಜೀರ್ಣೋದ್ಯಾನವುಎಷ್ಟು ಸೊಗಸಾಗಿದೆ.

ಚಾರು:—ಮಿತ್ರನೇ! ಇದಿಂತೆಯೆತೋರ್ಕುಂ. ಎಂತೆನೆ.—

ಕಂ॥ ತರುಗಳ್ಪರದರತೆರದಿಂ
ದರಲ್ದರಲ್ಗಳ್ ಪಣ್ಯವಸ್ತು ಗಣದಂತೆಸೆಗುಂ
ಕರಮುಂ ಸಾಧಿಪ್ಪ ವೆಂಬೋಲ್
ಕರಮೀ ಬಂಡುಣಿಗಳೊಡು ಮಂಡಳಿ ೩.೪.

ವಿದೂ॥ ಅಯ್ಯಾ! ಈ ಬಂಡಿಯು ಯಾರೂ ನೆಟ್ಟಗೆ ನೋಡದಂತೆ [illegible] ಗಿದೆ. ಆದರಿಂದ ನೀನು ಇಲ್ಲಿ ಕೂತುಕೊಳ್ಳಬೇಕು

ಚಾರು:— (ಕೇಳಿತು) ಮಿತ್ರನೇ! ವರ್ಧಮಾನಕ ನೇಸಿಂತು ತೊಳಲ್ಪಕೆಳೆದಪಂ?

ವಿದೂ॥ ವಸಂತಸೇನೆಯನ್ನು ಕರದುಕೊಂಡು ಬೇಗಬೇಗ ಬರಬೇಕೆಂದು ವರ್ಧಮಾನಕನಿ ಗೆ ನಾನು ಆಗಲೇ ಹೇಳಿದ್ದೆನು.

ಚಾರು:—ಅದೊಡೇನಿಂತು ತಳ್ವಿದಪಂ?

ವೃ॥ ನಡೆಯುತ್ತೊತ್ಯ್ವನೆಮುಂದೆಬಂಡಿಗಳಿರಲ್ ತನ್ನಾಗ್ರಮಂ ಪೋಳ್ವನೋ
ಕಡಿದತ್ತೋನಿಡುಪಗ್ಗ ಮುಚ್ಚು ಮುರಿಯಲ್ ಬೇರೊಂದ ನೊಂದಿಪ್ಪನೋ
ಕಡೆಗಧ್ವಾನದೊಳಡ್ಡ ಕಟ್ಟಿಗೆಯಿರಲ್ ಪಿಂಬಟ್ಟೆಯಂ ಬೇರೆ ತಾಂ
ಪುಡುಕುತ್ತಿರ್ಪ್ಪನೊ? ಎತ್ತುಮೊಯ್ಯನೆಬರಲ್ ಸ್ವೇಚ್ಛೆಯಿಂದ ಮೈತರ್ಪ್ಪನೋ?

[ಬಳಿಕ ಆರ್ಯಕನವಿತುಕೊಂಡಿರುವ ಬಂಡಿಯನ್ನು ತೆಗದುಕೊಂಡು ಚೇಟನು ಬರುತ್ತಾನೆ]

ಚೇಟನು॥ ನಡೆಯಿರಿ ಯೆತ್ತುಗಳೇ! ನಡೆಯಿರಿ.

ಆರ್ಯಕಂ:—(ತನ್ನೊಳ್) ಕಂ॥ ಅರಸಾಳ್ಗಳ್ಗಳ್ಕಿತಮಾಂ
ಚರಣದೆ ನಿಗಡಮಿರೆ ಯೋಡಲಾರದೆಗಾಡೊಳ್
ಚಿರಜೀವಿಗಳಿಂ ಪಾಲಿತ
ಪರಭೃತದೊಲ್ ಸಾಧುಯಾನ ಮಡರ್ದಾಂಪೋಪೆಂ॥ ೧೮೩॥

ಓಹೋ! ಪುರದತ್ತಣಿಂದಂಬಹುದೂರವ್ಯೆತಂದೆಂ. ಈಗಳಾದೊಡಾನೇ ನೀತೇರಿಂದಿಳಿದುಮರಗಳ ಮರೆಯಂಪೊಕ್ಕಪೆನೋ? ಮೇಣ್ ತೇರೊಡೆಯನಂ ಕಂಡಪೆನೋ! ಮರಗಳಂತಿರ್ಕೆ- ಪೂಜ್ಯನಾದ ಆರ್ಯಚಾರುದತ್ತಂ ಆಪನ್ನವತ್ಸಲನೆಂದು ಕೇಳ್ದಪೆಂ- ಆದರಿಂದಿದಿರೊಳ್ಸಂದಪೆಂ.

ಕಂ॥ ಎಡರ್ಗಡಲೊಳಾಳ್ದ ಪೆನ್ನಂ
ಪಿಡಿದೆತ್ತಿಯೆ ನೋಡಿಯಾತನಾಂಪಂ ಸುಖಿಮಂ
ಒಡಲಿದುಮೀ ದುರ್ದಶೆಯಂ
ಬಿಡೆದೊಡಮಾ ಸಾಧುಗುಣಗಳಿಂ ಧೃತಮುಕ್ಕಂ॥ ೧೮೪॥

ಚೇಟ॥ ಇದೇತೋಟವು. ಒಳಗೆಹೋಗುವೆನು. ಅಯ್ಯಾ! ಆರ್ಯಮೈತ್ರೇಯನೇ!

ವಿದೂ॥ ಅಯ್ಯಾ! ನಿನಗೊಂದು ಪ್ರಿಯವನ್ನುತಿಳಿಸುವೆನು. ಇದೋ ವರ್ಧಮಾನಕನು ಕರೆಯುತ್ತಾನೆ. ವಸಂತಸೇನೆ ಬಂದಿರಬಹುದು.

ಚಾರು:—ಪ್ರಿಯಮೇಸರಿ.

ವಿದೂ॥ ಎಲಾತೊತ್ತಿನಮಗನೇ! ಏಕೋ ಸಾವಕಾಶಮಾಡಿದಿ!

ಚೇಟ॥ ಆರ್ಯಮೈತ್ರೇಯನೇ! ಕೋಪಿಸಿಕೊಳ್ಳಬೇಡ- ಬಂಡಿಯಗದ್ದುಗೆಯನ್ನು ಮರೆ ತು ಬಂದಿದ್ದೆನು- ಅದುತರುವದಕ್ಕೆ ಹೋಗಿಬರಲುಸಾವಕಾಶವಾಯಿತು. ಕ್ಷಮಿಸು.

ಚಾರು:—ವರ್ಧಮಾನಕನೇ! ತೇರಂಮರಳ್ಚು- ವಯಸ್ಯಮೈತ್ರೇಯನೇ! ವಸಂತಸೇನೆಯಿ ನಿಳಿಸ್ಟೆ-

ವಿದೂ॥ ಇದೇನು ಇವಳಕಾಲಿಗೆ ಸಂಕೋಲೆಹಾಕಿದೆಯೋ ತಾನಾಗಿಯೇ ಯಿಳಿಯಲಾ ರ ಳಾದೀತು. (ಎದ್ದು ಬಂಡಿಯ ಬಾಗಿಲನ್ನು ತೆರದುನೋಡಿ) ಅಯ್ಯೋ? ವಸಂತಸೇ ನೆಯಲ್ಲ- ಇವನುವಸಂತಸೇನ ನಾಗಿದ್ದಾನೆ.

ಚಾರು:—ಮಿತ್ರನೇ! ಪರಿಹಾಸಂಸಾಲ್ಗುಂ- ನೇಹಂ ಪೊಳ್ತುಂ ಸೈರಿಸದು-ಅದೊಡಾನೆ ಯಿಳಿಪಿದಪೆಂ (ಎಂದೇಳ್ದಪಂ)

ಆರ್ಯಕಂ:—(ನೋಡಿ)ಇದೊ ಈತನೇ ತೇರೊಡೆಯಂ ಆಃ! ಇವಂ ಶ್ರುತಿಮಾತ್ರರಮ ಣೀಯನಲ್ಲಂ- ಮತ್ತಂದೃಷ್ಟಿಗಂ ರಮಣೀಯಂ- ಅದರಿಂ ಪಾಲಿತನಾದೆಂ.

ಚಾರು:—(ತೇರನೇರಿನೋಡಿ) ಎಲೆಲೆ! ಇವನಾರ್?

ವೃ॥ ಕರಿಕರದಂತೆತೋಳೆಸೆಯೆ ಸಿಂಗದವೋಲ್ಮಡುಪೇಳ್ಗೆವೆತ್ತುಪೀ
ವರಮೆನಿಸಲ್ ಸುವಿಸ್ತರದಿ ನೆರ್ದೆಯಿರಲ್ನಯನಂವಿಲೋಲಮಾ
ಗಿರೆನೆರೆತಾಮ್ರಮಾಯುತಮು ಮಿಂತಿವನಾರಸಮಾನಲಕ್ಷಣಂ
ಚರಣದೆಶೃಂಖಲಂದಳೆದ ನೆಂತೊಮಹಾತ್ಮನಿವಂಮದೇಭದೋಲ್॥೧೪೩॥

ಆದುದರಿಂ ನೀನಾರ್?

ಆರ್ಯಕಂ:—ಗೋಪಾಲದಾರಕನಾ ದಾರ್ಯಕನಾಂ ಮರೆವೊಕ್ಕಪೆಂ.

ಚಾರು:—ಪಳ್ಳಿಯತ್ತಣಿಂದಂಬಂದು ಪಾಲಕರಾಯನಿಂ ಸೆರೆಗೊಂಡಿರ್ದ ನಿವನೆಯೋ!

ಆರ್ಯಕಂ:—ಮತ್ತೇಂ.

ಚಾರು:—ಕಂ॥ ವರಭಾಗಧೇಯದಿಂ ನೀಂ
ಪೊರೆಗೆಯ್ತಂದೊಡನೆ ಕಣ್ಗೆ ಕಾಣಿಸಿಕೊಂಡೈ
ಹರಣಂಗಳನಾದೊಡ ಮಾಂ
ತೊರೆವೆಂ ಬಿಡಲಾರೆ ನಿಂತುಶರಣಾಗತನಂ॥ ೧೪೪॥

ಆರ್ಯಕಂ:—(ಸಂತಸಮನಭಿನಯಿಪಂ.)

ಚಾರು:—ವರ್ಧಮಾನಕನೇ! ಕಾಲಿಂ ನಿಗಡಮಂ ತೊಲಗಿಸು.

ಚೇಟ॥ ಅಪ್ಪಣೆಯಂತಾಗಲಿ- (ಹಾಗೆಮಾಡಿ) ಆರ್ಯನೇ ಸಂಕೋಲೆಯನ್ನು ತೆಗೆದೆನು

ಆರ್ಯಕಂ:— ಬಲಮಾದ ಸ್ನೇಹಮಯ ನಿಗಡಂಗಳನೊಂದಿದೆಂ.

ವಿದೂ॥ ಸಂಕೋಲೆಗಳನ್ನು ಸೇರಿಸು. ಈತನೂಮುಕ್ತನಾಗಿರುವನು. ಇನ್ನುನಾವು ಹೋ ಗೋಣ.

ಚಾರು:—ಚಿಃ! ಸಾಲ್ಗಂ- ನಿಲ್ಲಿಸು.

ಆರ್ಯಕಂ:—ಕೆಳೆಯನಾದಆರ್ಯಚಾರುದತ್ತನೇ! ಆನುಮಿಾ ತೇರನೇಱಿದೆಂ ಕಾವೆರ್ಯಿಂದಂ. ಆದುದರಿಂ ಸೈರಿಸುಗೆ.

ಚಾರು:— ನಿನ್ನೀಯುಪಚಾರದಿಂದ ಮಾಂ ಸಿಂಗರಿಸಿಕೊಂಡಿಪ್ಪೆಂ.

ಆರ್ಯಕಂ:—ಅಂ ಪೋಗಲ್ಕೆ ನೀಂ ಬೆಸಸುಗೆ-

ಚಾರು:—ಪೋಪುದು.

ಆರ್ಯಕಂ:—ಅಕ್ಕೆ- ಇೞಿದಪೆಂ.

ಚಾರು:—ಸಖಾಯನೇ! ಇೞಿಯಲಾಗದು. ಬಂಧನಮಂ ಕಳೆಲ್ದೊಡನೆಯೇ ನಡೆಯಲ್ತೊಡೆಯುಪ್ಪುದು. ಅದಲ್ಲದೆ ಆವಗಂ ಜನದ ಸುೞಿವುಳ್ಳೀಯೆಡೆಯಲ್ಲಿ ತೇರೇ ಜನಂಗಳಲ್ಲಿ ವಿಶ್ವಾಸಮಂ ನುಂಟುಮಾಳ್ಪುದು ಆದುದರಿಂ ಮೀ ತೇರ ನೇಱಿಯೇ ಪೋಪುದು.

ಆರ್ಯಕಂ:—ನೀಂ ಪೇಳ್ದಂತಕ್ಕೆ.

ಚಾರು:—*ಪೃ*ಪದುಳದಿ ನೆಯ್ದಿ ಬಂಧುಗಳನೊಂದು

ಆರ್ಯಕಂ:—ಎನಗಿಂದುಪಕಾರಿ ಬಂಧು ನೀನೊದವಿದೆಯಲ್ತೆ

ಚಾರು:—ಯೆನ್ನ ನೆನಪಿಕ್ಕೆರ್ಕಥಾಂತರದಲ್ಲಿ

ಆರ್ಯಕಂ:—ತನ್ನತಾಂ ಸದುಪಕೃತಂ ನರಂ ಮಱೆವನೇ?

ಚಾರು:—ಸುರ ರೋವುಗೆ ನಿನ್ನನಧ್ವದೊಳ್

ಆರ್ಯಕಂ:—ತ್ವದವಿತನಾಂ

ಚಾರು:—ಸ್ವಭಾಗ್ಯಪರಿರಕ್ಷಿತನಾದೆ

ಆರ್ಯಕಂ:— ನಿದಾನಮಲ್ಲಿ ನೀಂ॥*॥೧೪೭॥*॥

ಚಾರು:—ಪಾಲಕರಾಯುಂ ಜಾಗರೂಕ ನಾಗಿಪ್ಪರಲ್ಲಿ ಪುರದೊಳ್ಪಿಂದು ಕಟ್ಟಳೆ ಯಿಕ್ಕರ್ಗಂ. ಆದುದರಿಂ ನೀಂ ಭೋಂಕನೆ ಪೋಗಲ್ತಕುದು.

ಆರ್ಯಕಂ:—ಮಗುಳ್ದುಮಿಂತು ನೋಡಲ್ಕೆ ಯ್ದಿದಪೆಂ.

(ಎಂದು ಪೊರಟು ಪೋದಂ.)

ಚಾರು:—ಎಲೆ ಮೈತ್ರೇಯನೇ!

ಕಂ॥ ಅರಸಂಗಿಂತಪ್ರಿಯಮಂ
ನೆರೆಗೆಯ್ದಾ ಮಿಲ್ಲಿರಲ್ಕಯುಕ್ತಂ ಕ್ಷಣಮುಂ
ಇರಸೀನಿಗಡದ ಬಾವಿಯೊ
ಳರಸರ್ಕಳ್ಚಾರದೃಷ್ಟಿಯಿಂ ನೋಳ್ಪರ್ದಲ್॥೧೪೮॥

ಶಕಾರ॥ ಉಪಾಸಕನೆಂದು ಹೇಳುತ್ತಾನೆ. ನಾನೇನು ಪಾದಸೇವಕನೋ!

ವಿಟಂ:—ನಿನ್ನಂ ಬುದ್ಧೋಪಾಸಕನೆಂದು ಪೊಗಳ್ದಪಂ.

ಶಕಾರ॥ ಎಲಾ ಶ್ರಮಣಕನೇ! ಹೇಳುಹೇಳು,

ಯತಿಯು॥ ನೀನು ಧನ್ಯನು. ನೀನುಪುಣ್ಯವಂತನು.

ಶಕಾರ॥ ಭಾವ! ಧನ್ಯ,ಪುಣ್ಯ ಯೆಂತಹೇಳುತ್ತಾನೆ. ನಾನೇನು ದಾಸಿಯೋ! ಪಾಪಿಯೋ? ಕುಂಬಾರನೋ?

ವಿಟಂ:—ಕಾಣೇಲಿ ಪುತ್ರನೇ!'ನೀನೇಧನ್ಯಂ,'ನೀನೇಪುಣ್ಯಂ'ಎಂದುನಿನ್ನಂ ಪೊಗಳ್ದಪಂ.

ಶಕಾರ॥ ಭಾವಾ! ಆದರೆ ಇವನು ಹ್ಯಾಗೆ ಯಿಲ್ಲಿಗೆಬಂದ? ಯಾತಕ್ಕೆ?

ಯತಿಯು॥ ಈಬಟ್ಟೆಗಳನ್ನು ಪೊಗೆಯುವದಕ್ಕೆ ಹೀಗೆಬಂದೆನು-

ಶಕಾರ॥ಎಲಾದುಷ್ಟಶ್ರಮಣಕನೇ! ನಮ್ಮಕ್ಕನ ಗಂಡನು ಈತೋಟವನ್ನುಎಲ್ಲಾ ತೋಟಕ್ಕಿಂತಲೂಉತ್ತಮವಾದದ್ದೆಂದು ನನಗೆಕೊಟ್ಟಿರುವನು. ಇದೋನೋಡು ನಾಯಿ ನರಿಗಳು ನಮ್ಮತೊರೆಯಲ್ಲಿ ನೀರುಕುಡಿಯುತ್ತಿವೆ. ದೊಡ್ಡ ಮನುಷ್ಯನಾದ ನಾನೂಕೂಡ ಇದರಲ್ಲಿ ಸ್ನಾನ ಮಾಡುವದಿಲ್ಲ. ಆದ್ದರಿಂದ ನೀನು ಈ ಪುಷ್ಕರಿಣಿಯಲ್ಲಿ ಕೆಟ್ಟಕೊಳಕು ಬಟ್ಟೆಗಳನ್ನು ತೊಳೆಯುತ್ತಿದ್ದೀಯೆ. ಅದಕ್ಕೆ ನಿನ್ನನ್ನು ಒಂದು ಪೆಟ್ಟಿನಿಂದಲೇ ಕೆಡವುವೆನು.

ವಿಟಂ:—ಎಲಾ! ಈತ ನಿಡೊ ನಿನ್ನೆ ಮೊನ್ನೆಯೋ ಯತಿಯಾದಂತೆ ತೋರ್ಕುಂ.

ಶಕಾರ॥ ನಿನಗೆ ಹ್ಯಾಗೆ ತಿಳಿಯಿತು. ?

ವಿಟಂ:—ಇಲ್ಲಿಯೇಂ ತಿಳಿಯಲ್ಕಕ್ಕುದು! ನೋಡು.

ವೃ॥ ಫಾಲದ ಶೋಭೆಯಿಂತು ನವಿರಿಲ್ಲದೆ ಬೆಳ್ಪಿಡಿ ದತ್ತಿವಂಗೆಮೇಣ್
ಕಾಲಮುದಲ್ಪಮಾದುದರಿ ನಂಸದೆಜೋಳಿಗೆಯಾಂತಗಾಯ್ಯುಮುಂ
ಸಾಲಿಡಲಿಲ್ಲ ಮಭ್ಯಸಿಸ ಲಿಲ್ಲಿದೊ ಬಣ್ಣದಬಟ್ಟೆಗರ್ಚಲುಂ
ಚೇಲದ ಮೂಲೆ ನೇಲದೆ ಭುಜಾಗ್ರದೆ ತಾಂಸಡಿಲಾಗಿನಿಲ್ಲದೈ॥ ೧೯೪॥

ಯತಿಯು॥ಉಪಾಸಕನೇ! ನಾನು ಹೀಗೆ ಯತಿಯಾಗಿ ಸ್ವಲ್ಪಕಾಲವೇ ಆಯಿತು.

ಶಕಾರ॥ ಆದರೆ ನೀನು ಹುಟ್ಟುತಲೇ ಯೇಕೆ ಯತಿಯಾಗಲಿಲ್ಲ? (ಎಂದು ಹೊಡೆಯುತ್ತಾನೆ.)

ಯತಿಯು॥ ಬುದ್ಧದೇವರಿಗೆ ನಮಸ್ಕಾರವು.

ವಿಟಂ:—ಇವನಂ ಬಡಿದೇಂ ಫಲಂ? ಬಿಡು. ಪೋಗಲಿ.

ಶಕಾರ॥ ಎಲಾ? ಸ್ವಲ್ಪನಿಲ್ಲು. ಯೋಚನೆಮಾಡಿ ಹೇಳುತ್ತೇನೆ-

ವಿಟಂ:—ಆರೊಡನೆ?

ಶಕಾರ॥ ತನ್ನಮನಸ್ಸಿನೊಡನೆ.

ವಿಟಂ:—ಅಕ್ಕಟಾ! ಆದೊಡಾತಂ ಪೋಗಲಾರಂ.

ಶಕಾರ॥ ಎಲಾಮಗನೇಮನಸ್ಸೇ! ಈಶ್ರಮಣಕನು ಹೋಗಲೊ? ಇರಲೋ? (ಸ್ವಗತವಾಗಿ) ಹೋಗಲೂಬೇಡ, ಇರಲೂ ಬೇಡ- (ಪ್ರಕಾಶವಾಗಿ) ಭಾವನೇ! ಮನಸ್ಸಿನೊಂದಿಗೆ ಯೋಚಿಸಿದೆನು. ಅದುಹೇಗೆ ಹೇಳುತ್ತೆ.

ವಿಟಂ:— ಏನೆಂದು?

ಶಕಾರ॥ "ಹೋಗಬೇಡ- ಇರಬೇಡ, ಉಸಿರು ಬಿಡಬೇಡ, ಉಸಿರುತೆಗದುಕೊಳ್ಳಬೇಡ ಇಲ್ಲಿಯೇಬಿದ್ದು ಸಾಯಲಿ." ಎಂದು-

ಯತಿ॥ ಬುದ್ಧದೇವರಿಗೆ ನಮಸ್ಕಾರವು- ಶರಣಾಗತನಾಗಿರುವೆನು-

ವಿಟಂ:—ಪೋಗಲಕ್ಕುಂ-

ಶಕಾರ॥ ಕಟ್ಟಳೆ ಮಾಡಿಕೊಂಡು ಹೋಗಲಿ!

ವಿಟಂ:—ಎಂತಪ್ಪ ಕಟ್ಟಳೆ?

ಶಕಾರ॥ ನೀರುಕಲಕದಹಾಗೆ ಕೊಳದಲ್ಲಿ ಕೆಸರನ್ನುಹಾಕಲಿ- ಅಥವಾ ನೀರೆಲ್ಲವನ್ನೂ ಗಂಟು ಕಟ್ಟಿಯಾದರೂ ಕೆಸರುಹಾಕಲಿ.

ವಿಟಂ:—ಅಯ್ಯೋ ಮೂರ್ಖತೆಯೇ! ಕಂ॥ ಉಪಲೋಪಮಾನ ತನುವಿನ
ವಿಪರೀತಸ್ವಾಂತ ಚೇಷ್ಟೆಯುಳ್ಳಡಗಿನಪಾ
ದಪಮೆನಿಪ ಮೂರ್ಖರಿಂದಂ
ವಿಪುಲೆ ಯಿದಾದತ್ತು ನಾಡೆ ಭಾರಾಕ್ರಾಂತಂ॥ ೧೯೫॥

ಯತಿ॥ (ನಾಟ್ಯದಿಂದಳುತ್ತಾ ಕೂಗುತ್ತಾನೆ)

ಶಕಾರ॥ ಏನುಹೇಳುತ್ತಾನೆ?

ವಿಟಂ॥ ನಿನ್ನಂಪೊಗಳ್ದಪಂ-

ಶಕಾರ॥ ಹೇಳು ಹೇಳು! ಮತ್ತಾ ಹೇಳು-

ಯತಿಯು॥ (ಹಾಗೆಯೇ ಅಳುತ್ತಾ ಹೊರಟು ಹೋದನು.)

ವಿಟಂ:—ಎಲೆ ಕಾಣೇಲೀಪುತ್ರನೆ! ತೋಂಟದಸಿರಿಯಂ ನೋಡು-

ಕಂ॥ ಅರಲಿಂ ಪಣ್ಣಿಂ ಶೋಭಿಪ
ಮರಗಳಿವುಂ ನಾಡೆಯುಪ್ಪಿ ಲತೆಗಳ ಗುಂಪಂ
ಅರಸಾಳ್ಗಳೆ ನೋವಿಸಿ ಕೊಳು
ತುರೆಸೊಗಮಂ ಪಡೆಗುವಿಲ್ಲಿ ದಾರಾನ್ವಿತರೋಲ್॥ ೧೯೬॥

ಮೃಚ್ಛಕಟಿಕಪ್ರಕರಣದಲ್ಲಿ.

ಸ್ರ॥ ಮರಗಳೆಲ್ಲ ಪುಷ್ಪಗುಚ್ಛ ಮಾಲೆಯಿಂದಬೊಗ್ಗಿದೇ
ಧರೆಯಿದೆಲ್ಲ ಬಿದ್ದಹುವ್ವಿ ನಿಂದಚಿತ್ರವಾಗಿದೇ
ಮರದಕೊಂಬು ಗೊಂಬಿನಲ್ಲಿ ಜಗ್ಗಿಜಗ್ಗಿ ನುತ್ತ್ಯಾಡು
ಸರಗಳುದ್ಯ ಲತಾತತಿವೆ ನೋಡುಹಸನುಹೃತ್ಕಿರೋಳ್॥೧೯೩॥

ವಿಟಂ:—ಎಲ್ಲಿ ಈ ಪಾಸರೆಯಲ್ಲಿ ಕುಳ್ಳಿರಲಕ್ಕಂ-

ಶಕಾರ॥ ಇದೋ ನಾನುಕೂತುಕೊಂಡೆನು (ವಿಟನೊಡನೆ ಕೂತುಕೊಳ್ಳುತ್ತಾನೆ) ಭಾವನೇ! ಈಗಲೂ ಆವಸಂತಸೇನೆಯುನೆನಪೇ ಬರುತ್ತೆ- ದುರ್ಜನರ ಮಾತಿನಹಾಗೆ ಮನಸ್ಸನ್ನು ಬಿಟ್ಟುಹೋಗದು.

ವಿಟಂ:— (ತನ್ನೊಳು) ಅಂತುಪಳಿಯಿಸಿ ಗೊಂಡುಂ ನೆನದಪ ನಾಕೆಯುಂ.—

ಕಂ॥ ಉರೆಬೆಳೆಗುಂ ಕಾಮಂ ಸಂ
ದರಿಯುರಿ ನವಮಾನಿತಗ್ಗೆ ಕಾಪುರುಷಗ್ಗೇ
ತೆರೆಗೊಳ್ಳುಜನಗ್ಗದುವೇ
ಕಿರಿದಕ್ಕುಂ ಮೋಣಭಾವಮಾದೊಡಮಕ್ಕುಂ॥೧೯೪॥

ಶಕಾರ॥ ಸ್ಥಾವರಕನೆಂಬ ಚೇಟನಿಗೆ ಬಂಡಿಯನ್ನುತೆಗದುಕೊಂಡು ಬೇಗನೆ ಬರುವಂತೆ ಹೇಳಿದ್ದೆನು. ಅವನಿನ್ನೂಬಾರದೇ ತಡಮಾಡಿದನಲ್ಲ. ಹಸಿವಾಗುತ್ತಿದೆ. ಮಧ್ಯಾಹ್ನವಾಗುತಬಂತು ನಡೆದುಹೋಗುವದಕ್ಕಾಗದು- ಅದೋ ನೋಡುನೋಡು. ಸೂರ್ಯನು ಕೋಪಿಸಿಕೊಂಡ ಕೋತಿಯಂತೆ ಕಾಣುತ್ತಾನೆ. ಭೂಮಿಯು ಮಕ್ಕಳನ್ನು ಕಳಕೊಂಡ ಗಾಂಧಾರಿಯಂತೆ ತಪಿಸುತ್ತಿದೆ.

ವಿಟಂ:—ಇದಿಂತೆಯೇಸರ—

ಸ್ರ॥ ಬಿಸಿಲಂಬಿಟ್ಟೊರಗಿರ್ಪ್ಪುದ್ದೈ ನೆಳಲೊಳೀಗೋಜಾತಿ ಪುಲ್ಮೆಲ್ಲುತಂ
ಬಿಸಿನೀರಂ ಕುಡಿಗುಂ ಕೊಳಂಗಳೆಡೆಯೊಳ್ನೀರಳ್ಕೆ ಯಿಂಕಾಳ್ಮಿಗಂ
ಬಿಸಿಲುರ್ಕಿಂ ಭಯಮಾಂತಪೌರಜನಮುಂ ಕಾಲೂರರೀಮಾರ್ಗದೊಳ್
ಬಿಸುಪಾದೀನೆಲಮಂಬಿಡುತ್ತೆನೆಳಲೊಳ್ತೀರಿಕ್ಕುವೆಂದೂಹಿಪೆಂ॥೧೯೫॥

ಶಕಾರ॥ ಭಾವಾ! ಸೂರ್ಯನಪಾದಗಳು ನನ್ನ ತಲೆಯಮೇಲೆ ಅಡಗಿರುವವು. ಪಕ್ಷಿಗಳು ಮರದ ತಲೆಯಮೇಲೆ ಅಡಗಿರುವವು- ನರಪುರುಷಮನುಷ್ಯರೆಲ್ಲರೂ ಬೆಚ್ಚಗೆನಿಟ್ಟುಸಿರುಬಿಡುತ್ತಾ ಮನೆಯಲ್ಲಿ ಕೂತುಕೊಂಡು ಬಿಸಿಲನ್ನು ನಿರ್ವಹಿಸುತ್ತಿದ್ದಾರೆ. ನೋಡು- ಚೇಟ ನಿನ್ನೂ ಬರಲಿಲ್ಲವಲ್ಲ- ವಿನೋದವಾಗಿ ಯೇನಾದರೂ ಹಾಡಲೋ? (ಎಂದುಹಾಡುತ್ತಾನೆ) ಭಾವಭಾವ! ನಾನುಹಾಡಿದ್ದನ್ನು ಕೇಳಿದೆಯಾ?

ವಿಟಂ:—ಪೇಳಲೇಂ? ಗಂಧರ್ವನೇ ನೀಂ-

ಶಕಾರ॥ ನಾನುಹ್ಯಾಗೆ ಗಂಧರ್ವನಾಗದೇಹೋದೇನು? ಇಂಗು, ಜೀರಿಗೆ, ಮುಸ್ತೆ, ಬಜೆ, ಶುಂಠಿ, ಬೆಲ್ಲ, ಇವುಗಳಚೂರ್ಣವನ್ನು ಸೇವಿಸಿಯೂ ನಾನು ಮಧುರ ಸ್ವರನಲ್ಲವೆ? ಭಾವಾ! ತಿರುಗಹಾಡುತ್ತೇನೆ ಕೇಳು(ಹಾಗೆಮಾಡಿ) ಭಾವಾ! ಕೇಳಿದೆಯಾ?

ವಿಟಂ:—ಪೇಳಲೇಂ? ನೀಂಗಂಧರ್ವನೇಸರಿ

ಶಕಾರ॥ ಮತ್ತೂ ನಾನು ಇಂಗು ಮೆಣಸು ಸೇರಿಸಿದ ತುಪ್ಪದಲ್ಲಿ ಊರಿಟ್ಟಿದ್ದ ಕೋಗಿಲೆಯ ಮಾಂಸವನ್ನುಂಡೂ ಕೂಡ ಗಂಧರ್ವನಲ್ಲದೇ ಹೋದೇನೇ? ಭಾವಾ! ಚೇಟ ನಿನ್ನೂ ಬರಲಿಲ್ಲವಲ್ಲಾ.

ವಿಟಂ:—ನೀಂಸ್ವಸ್ಥನಾಗಿರು, ಈಗಳೇಬಂದಪಂ

[ಬಳಿಕತೇರನೇರಿದವಸಂತಸೇನೆಯಿಂ ಕೂಡಿ ಚೇಟಂಪುಗುವಂ]

ಚೇಟನು॥ ಭಯವಾಗುತ್ತೆ. ಹೊತ್ತುನೆತ್ತಿಗೆ ಬಂತು- ರಾಜಶ್ಯಾಲಸಂಸ್ಥಾನಕನು ಈಗ ಕೋಪಿಸಿ ಕೊಂಡಿರುವನೋಯೇನೋ? ಆದ್ದರಿಂದಬೇಗನೆ ಹೋಗಬೇಕು-ನಡೆಯಿರಿ ಯೆತ್ತುಗಳೇ! ನಡೆಯಿರಿ.

ವಸಂತಸೇನೆ॥ ಓಹೋ! ಇದೇನು? ಈ ಸ್ವರವು ನಮ್ಮಚೇಟನಾದ ವರ್ಧಮಾನನದಾಗಿಲ್ಲವಲ್ಲ. ಆರ್ಯಚಾರುದತ್ತನು ಅವನನ್ನುಬಿಟ್ಟು ಬೇರೇ ಮನುಷ್ಯನನ್ನು ಬಂಡಿಯನ್ನು ಹೊಡೆಯಲಿರಿಸಿದನಾದೀತೇ? ಎಡದಕಣ್ಣು ಹಾರುತ್ತಿದೆ. ಎದೆನಡುಗುತ್ತೆ- ದಿಕ್ಕುಗಳೆಲ್ಲಾ ಬರಿದಾಗಿಕಾಣುತ್ತೆ. ಎಲ್ಲವೂ ವಿಪರೀತವಾದ ಹಾಗಿದೆ.

ಶಕಾರ॥ (ಗಾಲಿಗಳಸಪ್ಪಳಂಕೇಳಿ) ಬಾವಬಾವ! ಬಂಡಿಬಂತು-

ವಿಟಂ:—ನೀನೆಂತು ತಿಳಿದೆ.

ಶಕಾರ॥ ನೀನುನೋಡಲಿಲ್ಲವೇ? ಮುದಿಹಂದಿಯುಹಾಗೇ ಘುರಘುರ, ಎನ್ನುತ್ತಿದೆ.

ವಿಟಂ:—(ಕಂಡು) ಒಳ್ಳಿತುತೋರಿದ್ದೈ. ಇದೊಬಂದುದು-

ಶಕಾರ॥ ಮಗನೇ! ಚೇಟ ಸ್ಥಾವರಕನೇ! ಬಂದೆಯಾ?

ಚೇಟ॥ ಬಂದೆನು.

ಶಕಾರ॥ ಬಂಡಿಯೂ ಬಂತೇ?

ಚೇಟ॥ ಬಂತು

ಶಕಾರ॥ ಎತ್ತುಗಳು ಬಂದವೊ?

ಚೇಟ॥ ಬಂದವು-

ಶಕಾರ॥ ನೀನೂಬಂದೆಯೋ?

ಚೇಟ॥ (ನಕ್ಕು) ಬುದ್ಧಿ! ನಾನೂಬಂದೆನು.

ಶಕಾರ॥ ಆದರೆ ಬಂಡಿಯನ್ನು ಒಳಗೆ ತೆಗದು ಕೊಂಡು ಬಾ-

ಚೇಟ॥ ಯಾವದಾರಿಯಿಂದ ತರಲಿ?

ಶಕಾರ॥ ಈ ಮೋಟು ಗೋಡೆಯಮೇಲಿನಿಂದ

ಚೇಟ॥ ಬುದ್ಧೀ! ಹಾಗಾದರೆ ಯೆತ್ತುಗಳೊರಗುವವು. ಬಂಡಿಮುರಿಯುವದು. ನಾನೂ ಸಾಯುವೆನು.

ಶಕಾರ॥ ಎಲಾ! ನಾನುರಾಜ ಶ್ಯಾಲಕನಲ್ಲವೆ? ಯೆತ್ತುಸತ್ತರೆ ಬೇರೆ ಯೆತ್ತುಗಳನ್ನು ಕೊಂಡುಕೊಳ್ಳುವೆನು. ಬಂಡಿಮುರಿದರೆ ಬೇರೆ ಮಾಡಿಸುವೆನು. ನೀನು ಸತ್ತರೆ ಇನ್ನೊಬ್ಬಬಂಡೀ ಹೊಡೆಯುವನಾಗುವನು.

ಚೇಟ॥ ಎಲ್ಲವೂ ಸರಿಯೆ. ನಾನು ತಮ್ಮವನು ಆಗಲಾರೆನು

ಶಕಾರ॥ ಎಲಾ! ಎಲ್ಲವೂ ಹೋಗಲಿ ಬಂಡಿಯನ್ನಾದಾರಿಯಿಂದಲೇಹೊಡಿ.

ಚೇಟ॥ ಎಲೆಬಂಡಿಯೇ! ಮುರಿದುಹೋಗು. ಬೇರೆಬಂಡಿಯಾಗಲಿ, ಹೋಗಿ ಅರಸಿಗೆತಿಳಿಸುವೆನು (ಒಳಗೆತಂದು) ಇದೇನುಮುರಿಯಲಿಲ್ಲ? ಬುದ್ಧೀ! ಬಂಡಿ ಬಂತು

ಶಕಾರ॥ ಎತ್ತುಗಳು ಮುರಿಯಲಿಲ್ಲ? ಬಂಡಿಹರಿಯಲಿಲ್ಲ? ಹಗ್ಗಗಳೊಡೆಯ ಲಿಲ್ಲ? ನೀನೂಸಾಯಲಿಲ್ಲವಲ್ಲ?

ಚೇಟ॥ ಇಲ್ಲಬುದ್ಧಿ.

ಶಕಾರ॥ ಭಾವಾ! ಬಾ. ಬಂಡಿಯನ್ನು ನೋಡೋಣ. ನೀನೇ ನನಗೆ ಗುರುವು. ಮತ್ತು ಪರಮಗುರುವು, ರಹಸ್ಯಬಂಧುವು, ಪುರೋಹಿತನೂ ಆಗಿದ್ದೀಯೆ. ಆದ್ದರಿಂದ ನೀನು ಮುಂಚೇ ಬಂಡಿಯನ್ನು ಹತ್ತು-

ವಿಟಂ:—ಅಂತಕ್ಕೆ- (ಎಂದೇರುತ್ತಿರಲು)

ಶಕಾರ॥ ಅಥವಾ ನೀನು ಹಾಗಿರು. ಈಬಂಡಿ ನಿಮ್ಮಪ್ಪನಗಂಟೋ? ನಾನು ಬಂಡಿಗೆ ಯಜಮಾನನು. ಆದರಿಂದ ನಾನು ಮುಂಚೇಹತ್ತುತ್ತೇನೆ.

ವಿಟಂ:—ನೀನಂತೆಯೇ ಪೇಳಲಕ್ಕುಂ-

ಶಕಾರ॥ ನಾನೇನೋ ಹಾಗೆಹೇಳಿದರೂ 'ಭಟ್ಟಾರಕನೇ ಬಂಡಿಯನ್ನೇರು' ಎಂದು ಹೇಳುವದೇ ನಿನ್ನವಿಶ್ವಾಸವಾಗಿರುತ್ತೆ.

ವಿಟಂ:—ನೀನೇರಲ್ತಕ್ಕುದು.

ಶಕಾರ॥ ಇದೋ ಈಗನಾನು ಹತ್ತುತ್ತೇನೆ. ಎಲಾಚೇಟನೇ! ತಿರುಗಿಸುಬಂಡಿಯನ್ನು

ಚೇಟ॥ (ತಿರುಗಿಸಿ) ಬುದ್ಧೀಹತ್ತಬಹುದು.

ಶಕಾರ॥ (ಹತ್ತಿನೋಡಿಭಯವನ್ನಭಿನಯಿಸುತ್ತಾಕೆಳಗಿಳಿದು ವಿಟನಕೊರಳುಕಟ್ಟಿಕೊಂಡು) ಭಾವಭಾವ! ಸತ್ತೆ ಸತ್ತೆ. ಬಂಡಿಯೊಳಗೆರಾಕ್ಷಸಿಯೋಕಳ್ಳನೋಯಿರಬೇಕು- ರಾಕ್ಷಸಿಯಾದರೆ ನಮ್ಮಿಬ್ಬರನ್ನೂ ಹೊತ್ತು ಕೊಂಡು ಹೋಗುತ್ತಾಳೆ. ಕಳ್ಳನಾದರೆ ತಿಂದುಬಿಡುತ್ತಾನೆ.

ವಿಟಂ:—ಅಳ್ಕವೇಡ-ಎತ್ತಿನತೇರೊಳ್ ರಾಕ್ಷಸಿಯು ಸುಳಿವೆತ್ತಾಡು? ಮಧ್ಯಾಹ್ನದ ಬಿಸಿಲ ತಾಪದಿಂ ಮಸುಳ್ದ ದೃಷ್ಟಿಯುಳ್ಳ ನಿನಗೆ ಸ್ಥಾವರಕನ ನೈನೆಳಲಂ ನೋಳ್ಪುದರಿಂ ಭ್ರಾಂತಿ ಯುಂಟಾಗಿರ್ಕುಂ-

ಶಕಾರ॥ ಎಲಾ ಸ್ಥಾವರಕನೇ! ಬದುಕಿರುವೆಯಾ?

ಚೇಟ॥ ಬದುಕಿರುವೆನು ಬುದ್ಧೀ-

ಶಕಾರ॥ಭಾವಾ! ಬಂಡಿಯೊಳಗ್ಯಾರೋ ಹೆಂಗಸಿದ್ದಾಳೆ- ನೋಡು.

ವಿಟಂ:—ಪೆಣ್ಣೋ? ಕಂ॥ ತಲೆವಾಗಿಪೋಪೆನೊಯ್ಕನೆ

ಬಲುಸರಿಯಿಂ ಕಣ್ಣಬಿಗಿದ ಬಸವಂಗಳವೋಲ್
ಕುಲವಧುವ ನೋಡೆ ಮರಲ್ಗಂ
ಪಲಿಸಭೆಯೊ ಳ್ಮಾನ್ಯನಾದ ಪೆಣ್ಣಯುಕಂಗಳ್॥೨೦೦॥

ವಸಂತಸೇನೆ॥ (ಆಶ್ಚರ್ಯದಿಂದತನ್ನೊಳು) ಹೇಗೆ ಮಾಡಲಿ? ರಾಜಶ್ಯಾಲನು ಯಾವಾಗಲೂ ನನ್ನ ಕಣ್ಣುಗಳಿಗೆ ಆಯಾಸಕರನೇ ಆಗಿರುವನು. ಪುಣ್ಯಹೀನಳಾದ ನಾನು ಇಲ್ಲಿಗೆಬಂದದ್ದು ಊಷರ ಕ್ಷೇತ್ರದಲ್ಲಿ ಹಾಕಿದ ಬೀಜದಹಾಗೆ ವ್ಯರ್ಥವಾಯಿತು. ಆದ್ದರಿಂದೀಗಲೇನು ಮಾಡಲಿ?

ಶಕಾರ॥ ಬಂಡಿಯನ್ನುನೋಡಲಾರದೆ ಭಯಪಡುತ್ತಿದ್ದಾನಲ್ಲ-ಭಾವಾ! ಬಂಡಿಯೊಳಗೆ ನೋಡು;

ವಿಟಂ:—ದೋಷಮೇಂ? ಅಂತಕ್ಕೆ;

ಶಕಾರ॥ ಇದೇನು ನರಿಗಳು ಹಾರುತ್ತವೆ- ಕಾಗೆಗಳು ನಡೆಯುತ್ತವೆ ಭಾವನೂ ಹಲ್ಲುಗಳಿಂದನೋಡುತ್ತಾನೆ-ಕಣ್ಣುಗಳಿಂತಿನ್ನುತ್ತಾನೆ. ನಾನೂವೋಡಿಹೋಗುತ್ತೇನೆ.

ವಿಟಂ:—(ವಸಂತಸೇನೆಯಂನೋಡಿ, ವ್ಯಸನದಿಂದ ಮನದೊಳು) ಇದೇಂ ಮೃಗಿಯುಂ ವ್ಯಾಘ್ರಮನನುಸರಿಪುದು? ಅಹ! ಕಷ್ಟಂ.

ಕಂ॥ ಶಾರದ ಚಂದ್ರಂ ಗೆಣೆಯಾ
ದೋರಣದೆ ಪುಳಿಲ್ಗಳಲ್ಲಿ ಸೊಗದಿಂದೊರಗಿ
ಪ್ಪಾರಾಜಹಂಸ ಮಂತೊರೆ
ದೀರಾಜಮರಾಳಿ ಯೆಂತು ಕಾಗೆಯ ನೊಲ್ಗಂ ॥ ೨೦೧॥

(ಜನದಬಳಿ) ವಸಂತಸೇನೆಯೇ! ಇದುಸರಿಯಲ್ಲಂ ಇದುಚಿತವುಮಲ್ಲಂ.

ಕಂ॥ಮುನ್ನಂ ಗರ್ವದಿ ನೇಳಿಸಿ
ಪೊನ್ನಂಪಡೆಯಲ್ಕೆ ತಾಯಬೆಸನದಿನೆಯ್ದಲ್

ವಸಂತ॥ಅಲ್ಲ— (ಎಂದು ತಲೆಯಾಡಿಸುವಳು)

ಮೃಚ್ಛಕಟಿಕ ಪ್ರಕರಣದಲ್ಲಿ.

ವಿಟಂ:—

ಇನ್ನೀಗ ಕ್ಷಜನ ಮರಿವುದು
ಮನ್ನಣೆಯನುವೃತ್ತಿ ವೇಶ ಭಾವಕೆಸಹಜಂ॥೨೦.೨॥

ನಿನಗಾಂ ಮುನ್ನಮೆ. ‹‹ ಲಲನೆಯೆ ಸಮವೊಂದು ರಸಿಕನುಮನರಸಿಕಸು ಎಂದು ಪೇಳ್ದೆನಲ್ತೆ?

ವಸಂತ॥ ಬಂಡಿಯುಬದಲಾಯಿಸಿದ್ದರಿಂದ ಹೀಗೆಬಂದೆನು-ಶರಣಾಗತಳಾಗಿರುವೆನು.

ವಿಟಂ:—ಅಳ್ಕವೇಡ, ಅಳ್ಕವೇಡ, ಅಂತಕ್ಕೆ ಇವನಂವಂಚಿಪೆಂ.

(ಶಕಾರನಬಳಿಗೆಬಂದು.) ಎಲಾ! ದಿಟವಮಾಗಿರಾಕ್ಷಸಿಯೇ ಅದರೊಳಿರ್ದ್ದಪಳ

ಶಕಾರ॥ ಭಾವಭಾವ! ರಾಕ್ಷಸಿಯಿದ್ದರೆ ನಿನ್ನನ್ನೇತಕ್ಕಪಹರಿಸಲಿಲ್ಲ? ಕಳ್ಳನಾದರೆನಿನ್ನನ್ನೇತಕ್ಕೆ ತಿನ್ನಲಿಲ್ಲ?

ವಿಟಂ:—ಈನಿರೂಪಣದಿಂದೇಂಫಲಂ? ಮಗುಳ್ದಾಮೀರ್ವರುಂ ತೋಂಟದ ಸಾಲೊಳ್ ನಡೆದೂರಪೊಕ್ಕೊಡೆ ತಪ್ಪೇಂ? ಪೋದಪೆವು - ಬಾರ್‍ಯ;

ಶಕಾರ॥ ಹಾಗೆಮಾಡಿದ ರೇನಾಗುತ್ತೆ?

ವಿಟಂ:—ಅಂತಾದೊಡೆ ವೃಷಭಂಗಳ್ಗೆ ಶ್ರಮಪರಿಹಾರಮುಂ, ಎಮಗೆವ್ಯಾಯಾಮ ಸೇವೆಯು ಮಕ್ಕುಂ-

ಶಕಾರ॥ ಹಾಗೆಯೇ ಆಗಲಿ- ಸ್ಥಾವರಕನೇ ಬಂಡಿಯನ್ನು ಹೊಡೆದು ಕೊಂಡು ಹೋಗು- ನಾನು ದೇವಬ್ರಾಹ್ಮಣರೆದಿರಿಗೆ ಕಾಲಿನಿಂದನಡೆದು ಹೋಗುತ್ತೇನೆ- ಅಲ್ಲ ಅಲ್ಲ- ನಿಲ್ಲು ನಿಲ್ಲು- ಬಂಡಿಯನ್ನೇರಿಯೇ ಹೋಗುತ್ತೇನೆ - ದೂರದಿಂದಯಾರಾದರೂ ನನ್ನನ್ನು ನೋಡಿದರೆ ಇದೋ ಆರಾಜಶ್ಯಾಲಕನಾದ ಭಟ್ಟಾರಕನೇ ನಡೆದು ಹೋಗುತ್ತಾನೆಂದು ಹೇಳ್ಯಾರು-

ವಿಟಂ:— (ತನ್ನೊಳ್) ವಿಷಮನೌಷಧಂ ಗೆಯ್ಯಲಸದಳಮಲ್ತೇ- ಅದೊಡಿಂತಕ್ಕೆ (ಪ್ರಕಾಶವಾಗಿ)ಎಲೆಕಾಣೇಲೀ ಸುತನೇ! ಇದೊ ವಸಂತಸೇನೆ ನಿನ್ನಂಸ್ರೇರಲ್ಕೆ ತಂದಿರ್ಪಳ್.

ವಸಂತ॥ ಪಾಪವುಶಾಂತವಾಗಲಿ, ಪಾಪವುಶಾಂತವಾಗಲಿ;

ಶಕಾರ॥ (ಸಂತೋಷದಿಂದ) ಭಾವಭಾವ! ವಾಸುದೇವ ನಂಥಾ ದೊಡ್ಡಮನುಷ್ಯನಾದ ನನ್ನನ್ನು ಸೇರುವದಕ್ಕೋ?

ವಿಟಂ:—ಮತ್ತೇಂ-

ಶಕಾರ॥ಆದರೆ ಭಾಗ್ಯಲಕ್ಷ್ಮಿಯೇ ಬಂದಳು. ಆದಿನವುಸಿಟ್ಟಾಗಿದ್ದಳು. ಈಗಕಾಲಿಗೆಬಿದ್ದು ಒಪ್ಪಿಸಿಕೊಳ್ಳುತ್ತೇನೆ.

ವಿಟಂ :—ಸರಿ-ಒಳ್ಳಿತುಸಿದ್ಧೈ

ಶಕಾರ॥ (ವಸಂತಸೇನೆಯ ಹತ್ತಿರಕ್ಕೆ ಬಂದು) ಇದೋಕಾಲಿಗೆಬಿದ್ದೆನು- ಲಲಿತಾಂಗಿಯೇ!

ಅಮ್ಮಾ! ನನ್ನವಿಜ್ಞಾಪನೆಯನ್ನುಕೇಳು. ಎಲೆಸುಂದರಿಯೇ! ಕಾಮಾತುರನಾದ ನಾನು ಏನಪರಾಧಮಾಡಿದ್ದರೂ ಕ್ಷಮಿಸಿ ನನ್ನನ್ನುವರಿಸು. ಇದೊ ಕೈಮುಗಿಯುವೆನು. ಕಾಲಿಗೂಬೀಳುವೆನು ನಿನ್ನದಾಸನುನಾನು (ಎಂದುಕಾಲನ್ನು ಹಿಡಿದುಕೊಳ್ಳುವನು)

ವಸಂತ॥ (ಕೋಪದಿಂದ) ಆಚೆಗೆಹೋಗು, ಕೆಟ್ಟ ಯೋಚನೆಯನ್ನುಮಾಡುತ್ತಿ (ಎಂದು ಕಾಲಿಂದೊದೆಯುತ್ತಾಳೆ)

ಶಕಾರ॥ (ಕೋಪದಿಂದ) ಎಲೇಗರ್ಭದಾಸಿಯೇ! ದೇವತೆಗಳಿಗೂ ಕೂಡ ನಮಸ್ಕಾರ ಮಾಡದ ನನ್ನತಲೆಯನ್ನು, ನರಿಗಳು ಹೆಣವನ್ನುರುಳಿಸಿದಹಾಗೆ ಕಾಲಿನಿಂದನೂಕಿದೆಯಲ್ಲಾ. ಎಲಾಸ್ಥಾವರಕನೇ! ಇವಳನ್ನುನೀನು ಎಲ್ಲಿಂದ್ದ ಕರತಂದೆ?

ಸ್ಥಾವರ॥ ಬುದ್ಧೀ! ದಾರಿಯಲ್ಲಿ ಊರುಬಂಡಿಗಳು ಅಡ್ಡವಾಗಿನಿಂತಿದ್ದಾಗ ನಾನು ಬಂಡಿಯನ್ನಿಳಿದು ಚಾರುದತ್ತನ ಮನೆಯತೋಟದಬಳಿಬಂಡಿಯನ್ನಿರಿಸಿ ಹೋಗಿ ದಾರಿಗಡ್ಡವಾಗಿದ್ದ ಬಂಡಿಗಳನ್ನಾಚೆಗೆ ತಳ್ಳಿ ಬಂದೆನು. ಅಷ್ಟರೊಳಗಾಗಿ ಯೇನಾದರೂ ಇವಳು ತನ್ನಬಂಡಿಯೆಂಬ ಭ್ರಾಂತಿಯಿಂದ ಹತ್ತಿರಬಹುದೆಂದು ತೋರುತ್ತೆ?

ಶಕಾರ॥ ಆದರೆ ಬಂಡಿಯುಬದಲಾಯಿಸಿದ್ದರಿಂದ ಬಂದವಳೇಹೊರತು ನನ್ನನ್ನು ಸೇರುವದಕ್ಕಲ್ಲವಷ್ಟೆ? ಹಾಗಾದರೆ ಇಳಿ ನನ್ನ ಬಂಡಿಯಿಂದ ಕೆಳಕ್ಕಿಳಿ - ಆದರಿದ್ರಚಾರುದತ್ತನನ್ನು ಸೇರುವದಕ್ಕೆ ಹೋಗಬೇಕು, ನನ್ನಯೆತ್ತುಗಳುನಿನ್ನನ್ನುಹೊರಬೇಕು? ಇಳಿಯಿಳಿ! ಗರ್ಭದಾಸಿಯೇ! ಯಿಳಿಯಿಳಿ;

ವಸಂತ॥ ಆರ್ಯಚಾರುದತ್ತನನ್ನು ಸೇರುವದಕ್ಕೆ ಎಂದು ಹೇಳಿದೆಯಷ್ಟೆ. ಆಮಾತುದಿಟ್ಟಟವು ಅದುನನಗಲಂಕಾರವಾಗಿದೆ; ಈಗೇನುಬೇಕಾದರೂ ಆಗಲಿ;

ಶಕಾರ॥ ಜಟಾಯು ತಾರಾದೇವಿಯನ್ನೆಳದಂತೆ ಎರಡುಕೈಗಳಿಂದಲೂ ನಿನ್ನಕೂದಲುಹಿಡಿದು ಬಂಡಿಯಿಂದ ಕೆಳಕ್ಕೆ ಸೆಳೆದಾಕುತ್ತೇನೆ.

ವಿಟಂ॥ ಕಂ॥ ತರಿಯಲ್ಕಾಗದು ಮುಂದಲೆ
ಗುರುಳಂಪಿಡಿ ದೀಗುಣಾಢ್ಯ ವಾರಾಂಗನೆಯಾ
ಪುರದುಪವನೋತ್ಥವಲ್ಲೀ
ವರ ಕಿಸಲಯ ಮಿಂತು ತರಿಯಲರ್ಹಮೆ ಪೇಳ್ಳೈ॥ ೨೧॥

ಆದುದರಿಂದೆ ನೀನೇಳ್. ಅನೀಕೆಯು ನಿಳುಪಿದಪೆಂ. ವಸಂತಸೇನೆಯೇ! ಇಳಿಯುಲ್ವೇಳ್ಕುಂ;

ವಸಂತ॥ (ಕೆಳಗಿಳಿದು ಒರೆಯಾಗಿನಿಲ್ಲುವಳು)

ಶಕಾರ॥ (ಮನಸ್ಸಿನಲ್ಲಿ) ಆದಿನಇವಳ ಅವಮಾನದ ಮಾತಿನಿಂದ ಕೋಪಾಗ್ನಿ ಹೊತ್ತಿ

ತು. ಈದಿನ ಕಾಲೊದೆಯಿಂದ ಉರಿಯುತ್ತದೆ. ಅದಕ್ಕೀಗಲೇಯಿವಳನ್ನು ಕೊಂದು ಬಿಡುತ್ತೇನೆ. (ಪ್ರಕಾಶವಾಗಿ) ಭಾವಭಾವ! ನಿನಗೆದಿವ್ಯಪೀತಾಂಬರಗಳನ್ನು ತರಿಸಿಕೊಡುತ್ತೇನೆ. ರುಚಿಯಾದಮಾಂಸ ದೂಟವನ್ನಿಡುವೆನುಮತ್ತಾಬೇಡಿದ್ದನ್ನು ಕೊಡುವೆನು.

ವಿಟಂ:—ಆದೊಡೇಂ?

ಶಕಾರ॥ ನೀನು ನನ್ನ ಇಷ್ಟವನ್ನುಮಾಡಬೇಕು.

ವಿಟಂ:—ಆದಂ ಮಾಡಿದಪೆಂ ಅಕಾರ್ಯಮನುಳಿದು.

ಶಕಾರ॥ ಭಾವಾ! ಅಕಾರ್ಯದ ಗಂಧವೇಯಿಲ್ಲ. ಇವಳು ರಾಕ್ಷಸಿಯೂ ಅಲ್ಲ.

ವಿಟಂ॥ ಆದೊಡೆ ಪೇಳ್.

ಶಕಾರ॥ ವಸಂತಸೇನೆಯನ್ನು ಕೊಲ್ಲು.

ವಿಟಂ:— (ಕಿವಿಗಳಂಮುಚ್ಚಿ) ಕಂ॥ಪುರದೊಡವೆಬಾಲೆಬೆಲೆವೆಣ್
ವಿರಹಿತ ವೇಶ್ಯಾವಿಲಾಸೆ ಗುಣವತಿ ಯುಪರಾ
ಧರಹಿತೆ ಯಿವಳಂ ಕೊಂದೊಡೆ
ಪರಲೋಕಾ ಪಗೆಯ ನಾವ ತರಿಯಿಂ ತರಿಪೆಂ॥ ೨೦೪॥

ಶಕಾರ॥ ನಾನು ತೆಪ್ಪವನ್ನು ಕೊಡುತ್ತೇನೆ. ಇದಲ್ಲದೆ ರಹಸ್ಯನಾದೀತೋಟದಲ್ಲಿ ಕೊಲ್ಲುವಾಗನಿನ್ನನ್ನು ಯಾರುತಾನೇನೋಡುತ್ತಾರೆ?

ವಿಟಂ:—ವೃ॥ನಿರುಕಿಪರಾವಗಂ ಸುಕೃತ ದುಷ್ಕೃತಸಾಕ್ಷಿಗಳಾಗಿಯೆನ್ನನೀ
ಧರಣಿಯು ಮಂತರಿಕ್ಷ ಮನಿಲಂ ವನದೇವತೆಗಳ್ಗಳುಂ ನಿಶಾ
ಕರನುಡುಗಳ್ಸುದೀಪ್ತ ಕಿರಣಂರವಿ ಯೆಣ್ದೆಸೆಗಳ್ಮನಂ ಮಗುಳ್
ಪರಿಕಿಸದೆ ಯಂತರಾತ್ಮ ನಿರುಳುಂ ಪಗಲುಂ ಯಮಧರ್ಮ ರಾಯನುಂ॥

ಶಕಾರ॥ ಆದರೆ ಬಟ್ಟೆಯನ್ನು ಮರೆಮಾಡಿಕೊಂಡು ಕೊಲ್ಲು

ವಿಟಂ:— ಚಿಃ! ಮೂರ್ಖನೇ! ನೀಚವಂಶಜನಾದಪಯ್

ಶಕಾರ॥ ಇವನು ಅಧರ್ಮಭೀರು ವಾಗಿದ್ದಾನೆ. ಆಗಲಿ. ಸ್ಥಾವರಕನನ್ನು ಒಪ್ಪಿಸುವೆನು ಎಲಾಚೇಟನೇ! ನಿನಗೆಬಂಗಾರದ ಕಡಗಗಳನ್ನು ಕೊಡುತ್ತೇನೆ.

ಚೇಟ॥ ಬುದ್ಧೀ! ನಾನೂಯಿಟ್ಟುಕೊಳ್ಳುತ್ತೇನೆ.

ಶಕಾರ॥ ನೀನುಕೂತು ಕೊಳ್ಳುವದಕ್ಕೆ ಚಿನ್ನದಪೀಠವನ್ನುಮಾಡಿಸುವೆನು.

ಚೇಟ। ಬುದ್ಧೀ! ನಾನೂಕೂತು ಕೊಳ್ಳುವೆನು.

ಶಕಾರ॥ ನಿನಗೆ ತಿನ್ನುವದಕ್ಕೆ ಉಚ್ಛಿಷ್ಟವನ್ನೆಲ್ಲಾ ಕೊಡುತ್ತೇನೆ.

ಚೇಟ॥ಬುದ್ಧೀ! ನಾನೂ ತಿನ್ನುತ್ತೇನೆ.

ಶಕಾರ॥ ನಿನ್ನನ್ನು ಎಲ್ಲಾ ಚೇಟರಿಗೂ ಯಜಮಾನನನ್ನು ಮಾಡುವೆನು-

ಚೇಟ॥ ಬುದ್ಧೀ ಹಾಗೆ ಆದೇನು

ಶಕಾರ॥ ಆದ್ದರಿಂದ ನಾನು ಹೇಳಿದ್ದನ್ನು ಮಾಡು-

ಚೇಟ॥ ಬುದ್ಧೀ! ಎಲ್ಲವನ್ನು ಮಾಡುವೆನು- ಅಕಾರ್ಯವನ್ನು ಮಾತ್ರ ಮಾಡಲಾರೆನು.

ಶಕಾರ॥ ಅಕಾರ್ಯದಗಂಧವೂ ಕೂಡಇಲ್ಲ.

ಚೇಟ॥ ಬುದ್ಧೀ! ಹೇಳಬೇಕು.

ಶಕಾರ॥ ಈ ವಸಂತಸೇನೆಯನ್ನು ಕೊಲ್ಲು.

ಚೇಟ॥ ಬುದ್ಧೀ! ದಯಮಾಡಬೇಕು. ನನ್ನ ಧಡ್ಡತನದಿಂದಲೇ ಈಕೆಯು ಹೀಗೆ ಬಂದಿರುವಳು.

ಶಕಾರ॥ ಎಲಾ! ಚೇಟನೇ! ನಿನಗೂ ನನ್ನ ತಾಳಿಕೆಯಿಲ್ಲವೇ?

ಚೇಟನು॥ ಬುದ್ಧಿಯವರಲ್ಲಿ ತಾಳಿಕೆಯಿಲ್ಲದುಂಟೆ? ದಯಮಾಡಬೇಕು! ದಯಮಾಡಬೇಕು! ನಾನು ಭಯ ಪಟ್ಟಿರುವೆನಲ್ಲ.

ಶಕಾರ॥ ನೀನು ನನಗೆ ಚೇಟನಾಗಿಯೂ ಭಯವ್ಯಾರಿಂದ?

ಚೇಟ॥ ಬುದ್ಧೀ! ಪರಲೋಕದಿಂದ-

ಶಕಾರ॥ ಅದುಯಾವದೋ ಪರಲೋಕ?

ಚೇಟ॥ ಬುದ್ಧೀ ಪುಣ್ಯ ಪಾಪಗಳ ಪರಿಣಾಮವೇ ಪರಲೋಕವು.

ಶಕಾರ॥ ಪುಣ್ಯಪರಿಣಾಮವೆಂಥಾದ್ದು?

ಚೇಟ॥ ಬುದ್ಧೀ! ಸ್ವಾಮಿಯವರು ಈಗ ಚಿನ್ನದಿಂದಲಂಕಾರ ಮಾಡಿಕೊಂಡು ವೈಭವದಿಂದಿರುವಂಥಾದ್ದು.

ಶಕಾರ॥ ಆದರೆ ಪಾಪಪರಿಣಾಮವೆಂಥಾದ್ದು?

ಚೇಟ॥ ಇದೋ ನಾನು ಹೆರವರನ್ನವನ್ನು ತಿಂದು ದಾಸನಾಗಿದ್ದೇನಷ್ಟೆ. ಇಂಥಾದ್ದು ಆದ್ದರಿಂದ ನಾನು ಅಕಾರ್ಯವನ್ನು ಮಾಡಲಾರೆನು.

ಶಕಾರ॥ ಎಲಾ! ನೀನು ಕೊಲ್ಲಲಾರೆಯೋ? (ಎಂದು ಬಹಳವಾಗಿ ಹೊಡೆಯುತ್ತಾನೆ)

ಚೇಟ॥ ಬುದ್ಧೀ! ಹೊಡೆಯಿರಿ. ಬಡಿಯಿರಿ - ಕೊಲ್ಲಿರಿ ನಾನೇನೋ ಕೆಟ್ಟ ಕೆಲಸವನ್ನು ಮಾಡುವದಿಲ್ಲ. ನಾನಿದುವರೆಗೆ ಎಷ್ಟು ಪಾಪಗಳನ್ನು ಮಾಡಿದ್ದೆನೊ ಅದಕ್ಕಿಂಥಾ ಗರ್ಭದಾಸನಾದೆನು. ಇನ್ನೂ ಪಾಪವನ್ನು ಕೊಂಡುಕೊಳ್ಳಲಾರೆನು.

ವಸಂತ॥ ಭಾವನೇ! ಶರಣಾಗತಳಾಗಿರುವೆನಲ್ಲವೆ

ವಿಟಂ:—ಎಲೆ ಮೂಢನೇ! ಸೈರಿಸು ಸೈರಿಸು. ಎಲೆ ಸ್ಥಾವರಕನೇ? ಒಳ್ಳೆತುಸುಧೈರ್ಯ.

ಕಂ॥ ದುರವಸ್ಥೆ ನಿವಂ ಪ್ರೇಷ್ಯಂ

ದರಿದ್ರನುಂ ಬಯಸಿದಪ್ಪನಾ ಮುಷ್ಮಿಕಮುಂ

ಮೃಚ್ಛಕಟಿಕಪ್ರಕರಣದಲ್ಲಿ;

ಉರುಧನ ಮುಳ್ಳವ ನೊಡೆಯಂ
ಪರಲೋಕ ಫಲೇಚ್ಛೆ ಯುಳಿದ ಕೃತ್ಯವಮಾಳ್ಪಂ॥ ೨೦೬॥

ಕಂ॥ ಆದರಿಂದಾರನುಚಿತವಂ
ಪದೆದಿಸಗುವರೋ ವಿಚಾರಮಿಲ್ಲದೆ ಮೇಣಾರ್
ಸದೃಶೋಚಿತವಂ ಬಿಡುವರೊ
ಮೊದಲಿಂದವರೆಂತು ನಾಶಮಾಗದೆ ಯಿರ್ಪ್ಪರ್॥ ೨೦೭॥

ಮತ್ತಂ॥ ಶಕಾರನೇ! ಕಂ॥ ಇವನುಣ್ಣಂ ತ್ವದ್ವಿಭವಮು,
ನಿವನಾಜ್ಞೆಯು ನೆಸಗದಿರ್ಪ್ಪೆ ನೀನಾವುದರಿಂ,
ದವಗೀದಾಸ್ಯವ, ನಿನಗೀ
ಕುವಿಭವಮನುಮಿತ್ತು ವಿಧಿಯೆ ಅದರಿಂವಿಷಮಂ॥ ೨೦೮॥

ಶಕಾರ॥ (ತನ್ನೊಳಗೆ) ಈ ಮುದಿನರಿಯು ಅಧರ್ಮಭೀರುವು. ಆಚೇಟನೂ ಪರಲೋಕಭಯದವನು. ನಾನು ಪ್ರವರಮನುಷ್ಯನೂ ರಾಜಶ್ಯಾಲನೂ ಆಗಿ ಯೇತಕ್ಕೆ ಭಯ ಪಡಲಿ. ? (ಹೊರಗೆ.) ಎಲಾ ಗರ್ಭದಾಸನಾದ ಚೇಟನೇ! ಹೋಗು. ಯಾರೂ ಇಲ್ಲದಕಡೆ ಹೋಗಿ ಸ್ವಸ್ಥವಾಗಿ ನಿದ್ದೆಹೋಗು ನಡಿ.

ಚೇಟನು॥ ಬುದ್ಧೀ! ಅಪ್ಪಣೆಯಂತೆ ಆಗಲಿ (ವಸಂತಸೇನೆಯ ಬಳಿಗೆ ಬಂದು) ಅಮ್ಮಾ! ನನ್ನ ಕೈಯಲಾದದ್ದು ಇಷ್ಟೇಸರಿ. (ಎಂದು ಹೊರಟುಹೋದನು.)

ಶಕಾರ॥ (ನಡುಕಟ್ಟ ಸರಿಮಾಡಿಕೊಳ್ಳುತ್ತಾ) ಇರು ವಸಂತಸೇನೆಯೇ! ಯಿರು- ನಾನೇ ಕೊಲ್ಲುತ್ತೇನೆ.

ವಿಟಂ:—ಆ! ಎನ್ನಿದಿರೊಳ್ ಕೊಂದಪೆಯಾ? (ಎಂದು ಕೊರಳಂ ಪಿಡಿವನು)

ಶಕಾರ॥ (ನೆಲದಲ್ಲಿ ಬಿದ್ದು) ಭಾವನು ಭಟ್ಟಾರಕನಾದ ನನ್ನನ್ನು ಕೊಲ್ಲುತ್ತಾನೆ (ಎಂದು ಮೂರ್ಛೆ ಹೋಗಿ— ಎದ್ದು (ತನ್ನೊಳಗೆ) ಯಾವಾಗಲೂ ನಮ್ಮನ್ನ ತಿಂದು ಬೆಳದು, ಸಮಯ ಬಂದಾಗ ನನಗೇ ವೈರಿ ಹ್ಯಾಗಾದ (ಎಂದು ಯೋಚಿಸಿ) ಆಗಲಿ ಉಪಾಯವು ಸಿಕ್ಕಿತು. ಇವನು ಮುಂಚೆಯೇ ಅವಳಿಗೆ ಸೈಗೆಮಾಡಿ, ನನ್ನ ಸಂಗಡ ಬಂಡಿಯಲ್ಲಿ ರಾಕ್ಷಸಿಯಿದ್ದಾಳೆಯೆಂದು ಹೇಳಿದನು. ಆದ್ದರಿಂದ ಇವನಿಗೆ ಮೋಸಮಾಡಿ ಅವಳನ್ನು ಕೊಲ್ಲಬೇಕ- (ಹೊರಗೆ) ಭಾವನೇ! ನೀನು ಆಗಲೇ "ನಾಯಿಯಂಥಾ ಕುಲದಲ್ಲಿ ಹುಟ್ಟಿ ಇಂಥಾ ಅಕಾರ್ಯವನ್ನು ಹ್ಯಾಗೆಮಾಡೇನು?" ಎಂದು ಹೇಳಿದ್ದಿ. ಅದನ್ನು ಒಪ್ಪಿಸುವದಕ್ಕೋಸ್ಕರವೇ ಹೀಗೆ ಹೇಳಿದೆನು-

ವಿಟಂ:—ಕಂ॥ ಕುಲಮುಂ ಪೇಳ್ದುದರಿಂದೇಂ
ಫಲಮಿಲ್ಲ ಸುಶೀಲ ಮೊಂದೆ ಕಾರಣಮಲ್ತೆ
ಪಲೆಬೆಳೆಗುಂ ಸುಕ್ಷೇತ್ರದ
ನೆಲದೊಳು ಮಲ್ಲಲ್ಲಿ ಕಂಟಕಿದ್ರುಮ ತತಿಗಳ್॥ ೨೦೯॥

ಶಕಾರ॥ಭಾವಾ! ನಿನ್ನೆದುರಿಗೆಯಿವಳು ನಾಚಿಕೆ ಪಡುತ್ತಾಳೆ. ನನ್ನನ್ನು ಒಪ್ಪುವದಿಲ್ಲ.ಆದ್ದರಿಂದ ಮರೆಯಾಗು. ಹಾಗೆಯೇ ಆ ಸ್ಥಾವರಕನು ಹೊಡಿಸಿಕೊಂಡವನು ಓಡಿಹೋಗುತ್ತಿದ್ದಾನೆ. ಅವನನ್ನಾ ಎಳಕೊಂಡು ಬಾ.

ವಿಟಂ:—(ತನ್ನೊಳು)ಕಂ॥ಭಜಿಸಳ್ ಮೂರ್ಖನನೀಗಂ
ನಿಜಮಾನಹ್ರೀಗಳಿಂದ ಮಿವಳೆ ಮ್ಮದಿರೊಳ್
ವಿಜನವು ನದಲಿಂದೀಕೆಗೆ
ಸೃಜಿಪಂ, ಕಾಮಪ್ರವೃತ್ತಿವಿಜನದೊಳಲ್ತೇ॥೨೧॥

(ಪ್ರಕಾಶವಾಗಿ) ಅಂತಕ್ಕೆ. ಪೋದಪಂ.

ವಸಂತೆ॥ (ವಿಟನಬಟ್ಟೆಯಸೆರಗನ್ನುಹಿಡಿದು) ಶರಣಾಗತಳಾಗಿದ್ದೇನೆಂದುಹೇಳಿದೆನಲ್ಲವೆ!

ವಿಟಂ:—ವಸಂತಸೇನೆಯೇ! ಅಳ್ಕವೇಡ, ಅಳ್ಕವೇಡ, ಎಲಾ! ಕಾಣೇಲೀ ಪುತ್ರನೇ! ವಸಂತಸೇನೆಯಂ ನಿನ್ನಕೈಯ್ಯೊಳಿರಿಸಿರ್ಪೆಂ. ಜೋಕೆಯಾಗಿರು.

ಶಕಾರ॥ ಹೀಗೆಯೇಯಿವಳು ನನ್ನ ಕೈಯಲ್ಲಿ ಯಿರಲಿ.

ವಿಟಂ:—ನಿಶ್ಚಯುವೋ?

ಶಕಾರ॥ ನಿಶ್ಚಯವು.

ವಿಟಂ:—(ನಸುನಡೆದು) ಪೇಣಾಲಂಪೋಗೆ ನೃಶಂಸನಾದಿವಂ ಎತ್ತಾನುಮೀಕೆಯ ನಿಕ್ಕಿದಪಂ. ಅದರಿಂ ಮರೆಯಾಗಿ ಯಾತಂಮಾಡಲೆಳಸಿದುದಂ ನೋಡಿದಪೆಂ.(ಎಂದು ಮರೆಯಾದಪಂ)

ಶಕಾರ॥ ಆಗಲಿ- ಕೊಲ್ಲುವೆನು- ಅಥವಾ ಈ ಬ್ರಾಹ್ಮಣನು ಮುದಿನರಿಯಂಥಾ ಮೋಸಗಾರನು- ಯಾವಾಗಲಾದರೂ ಮರೆಯಾಗಿದ್ದು ಮೋಸಮಾಡ್ಯಾನು? ಆದ್ದರಿಂದ ಇವನನ್ನು ವಂಚಿಸುವದಕ್ಕೆ ಹೀಗೆ ಮಾಡುತ್ತೇನೆ. (ಎಂದು ಹುವ್ವನ್ನುಕಿಯ್ದು ಅಲಂಕರಿಸಿ ಕೊಳ್ಳುತ್ತಾ) ಎಲೆ ಬಾಲೆ ವಸಂತಸೇನೆ! ಬಾ ಬಾ!

ವಿಟಂ:—ಎಲಾ! ಇವಂಕಾಮಿಯಾದಂ- ಸಂತಸಂ-ಸುಖವಾಗಿ ಪೋದಪೆಂ (ಎಂದು ಪೋಪ ಮಟ್ಟಂ-)

ಶಕಾರ॥ಎಲೇ! ಕಂ॥ ಚಿನ್ನವ ಕೊಡುವೆನು ಚೆಲುವೆಯೆ
ಮನ್ನಿಸು ತಲೆಯಿಂದ ನಿನ್ನ ಕಾಲಿಗೆಬಿದ್ದೇ
ನನ್ನನ್ನು ವರಿಸ ದಿರುವೆಯೊ
ಯಿನ್ನೇಕೀ ಸೇವೆ! ನರರೆ ಕಷ್ಟಗಳಾಹಾ॥೨೧॥

ವಸಂ॥ಅವಿವೆಯದಲ್ಲಿ ಸಂಶಯವೇನು! (ತಲೆಬಾಗಿ,ದುಶ್ಚರಿತ ಮುಂತಾದ ಪದ್ಯಗಳಂ ಪಠಿಪಳ್,ಪಳೆಗನ್ನಡದಿಂದೆ):—

ಮೃಚ್ಛಕಟಿಕಪ್ರಕರಣದಲ್ಲಿ,

ಕಂ॥ ದುಶ್ಚರಿತ ನೀಚ ಬಾಲಿಶ
ವೃಶ್ಚಿಕ ಸಮ! ಎಂತು ಧನದಿ ಮಂಚಿಪೆಯೆನ್ನಂ
ನಿಶ್ಚಯ ಮಳಿಗಳ್ತೊರೆಯುವು
ನಿಶ್ಚಲಗುಣ ವೃತ್ತಕಾಂತ ವಿಮಲಾಂಬುಜಮಂ॥ ೨೧೫॥

ಕಂ॥ ಪುರುಷಂ ದರಿದ್ರ ನಾದೊಡ
ಮುರೆಕುಲಶೀಲಾದಿ ಯುತನೆ ಸೇವಿಸಲರ್ಹಂ
ವರ ವಾರಾಂಗನೆ ಯಗ್ಗಿದು
ಪರಿಶೋಭೆ ಗಡಾಸಮಾನ ಜನರತಿಕಾಮಂ॥ ೨೧೬॥

॥ಮತ್ತುಸೀಮಾವಿನಮರವನ್ನು ಸೇವಿಸಿದಮೇಲೆ ಮುಳ್ಳು ಮುತ್ತುಗ ವನ್ನು ಒಪ್ಪುವವೇ? ತುಂಬಿಗಳು-

ಶಕಾರ॥ ಎಲೆ ತೊತ್ತಿನಮಗಳೇ! ಆದರಿದ್ರಚಾರುದತ್ತನು ಸೀಮಾವಿನಮರವಾದನು, ನಾನು ಮುಳ್ಳುಮುತ್ತುಗವಾದೆನು; ಮತ್ತು ಒಳ್ಳೆಯ ಮುತ್ತುಗ ವಾದರೂ ಆಗದೇ ಹೋದೆನೇ. ಹೀಗೆ ನನ್ನಮನಸ್ಸಿಗೆ ತೊಂದರೆಯನ್ನು ಕೊಡುತ್ತಾ ಇನ್ನೂ ಆದರಿದ್ರ ಚಾರುದತ್ತ ಹತಕನನ್ನೇ ನೆನೆಯುತ್ತಿದ್ದೀಯಾ?

ವಸಂತ॥ ಮನಸ್ಸಿನಲ್ಲಿಯೇ ಯಿರುವವನು ನೆನಪಿಗೆಬಾರದೇ ಯಿರುವನೇ?

ಶಕಾರ॥ ಈಗಲೇ ಆಮನಸ್ಸಿನಲ್ಲಿರುವವನನ್ನೂ ನಿನ್ನನ್ನೂ ಕೂಡಮುರಿದುಬಿಡುವೆನು ನಿಲ್ಲು; ದರಿದ್ರಸಾರ್ಥವಾಹ ಕಾಮುಕಿಯೇ ನಿಲ್ಲು,

ವಸಂತ॥ ಹೇಳು; ಹೇಳು; ಆಮಾತು ಶ್ಲಾಘ್ಯವಾದದ್ದು-

ಶಕಾರ॥ ಎಲ್ಲಿ ? ತೊತ್ತಿನಮಗನಾದ ಚಾರುದತ್ತನು ಕಾಪಾಡಲಿ.

ವಸಂತ॥ ನನ್ನನ್ನು ನೋಡಿದರೆ ಕಾಪಾಡುತ್ತಾನೆ.

ಶಕಾರ॥ ಆಹ ಅವನು. ಕಂ॥ ಫಾಲಾಕ್ಷನೊ ದೇವೇಂದ್ರನೊ
ವಾಲಿಜನೋ ದ್ರೌಣಿಕಾಲನೇಮಿಗಳೋಯೇ
ಕಾಲನೊ ಅಶ್ವತ್ಥಾಮನೊ
ನೀಲಾಂಬರನೋತ್ರಿಶಂಕು ರಂಭಾಸುತರೋ॥ ೨೧೭॥

ಅಥವಾ ಇವರಾದರೂ ನಿನ್ನನ್ನು ಕಾಪಾಡ್ಯಾರೇ?

ಕಂ॥ ಭಾರತ ಯುಗದಲಿ ಸೀತಾ
ನಾರಿಯಚಾಣಕ್ಯ ನೆಂತುಕೊಂದನೊ ಮತ್ತಾ
ಹಾರಿಸಿಜಟಾಯುದ್ರೌಪದಿ
ನೀರೆಯ ಕೊಂದಂತೆನಿನ್ನ ಕೊಲ್ಲುವೆನಾನಾ॥ ೨೧೮॥

(ಎಂದು ಹೊಡೆಯ ತೊಡಗಿದನು.)

ವಸಂತ॥ ಅಯ್ಯೋ ಅಮ್ಮಾ ಎಲ್ಲಿದ್ದೀಯೆ? ಹಾ! ಆರ್ಯಚಾರುದತ್ತನೇ! ಇದೋ ಯಾ ವಮನೋರಥವೂ ಕೊನೆ ಮುಟ್ಟದೇ ಸಾಯುವೆನಲ್ಲ. ಅಯ್ಯೋ ಹಿಗೆ ಅತ್ತರೆ 'ವ ಸಂತಸೇನೆ ಗೋಳಿಡುತ್ತಾಳೆ' ಯೆಂಬುವುದು ನಾಚಿಕೆಗೇಡಲ್ಲವೇ. ಅದರಿಂದಾ ರ್ಯ ಚಾರುದತ್ತನಿಗೆ ನಮಸ್ಕಾರವು-

ಶಕಾರ॥ ತೊತ್ತಿನಮಗಳು ಇನ್ನೂ ಆ ಪಾಪಿಯ ಹೆಸರು ಹೇಳುತ್ತಾಳೆ? (ಎಂದು ಕೊರಳು ಹಿಸುಕುತ್ತಾ) ಸ್ಮರಿಸು ತೊತ್ತಿನಮಗಳೇ! ಸ್ಮರಿಸು.

ವಸಂತ॥ ಆರ್ಯಚಾರುದತ್ತನಿಗೆ ನಮಸ್ಕಾರವು.

ಶಕಾರ॥ ಸಾಯಿ ಗರ್ಭದಾಸಿಯೇ ಸಾಯಿ. (ನಾಟ್ಯದಿಂದ ಕೊರಳು ಹಿಂಡುತ್ತಾನೆ)

ವಸಂತ॥ (ಮೂರ್ಛೆಯಿಂದ ನಿಶ್ಚೇಷ್ಟೆಯಾಗಿ ಬೀಳುತ್ತಾಳೆ.)

ಶಕಾರ॥ (ಸಂತೋಷದಿಂದ) ದುರ್ಮಾರ್ಗಗಳು, ಅವಿಧೇಯಳು, ಪಾಪಕ್ಕೆ ತವರು ಮನೆಯು, ದರಿದ್ರನನ್ನು ಕಾಮಿಸಿಬಂದವಳಾದಿವಳನ್ನು ನಾನು ಕೊಂದೆ ಯೆಂದು ಬಾಹು ಶೌರ್ಯವನ್ನು ಏನು ಹೇಳಲಿ? ನಾನು ಉಸುರು ಬಿಟ್ಟ ಮಾತ್ರಕ್ಕೇನೇ ಸತ್ತಳು, ಭಾರತದಲ್ಲಿ ಸೀತೆ ಸಾಯಲಿಲ್ಲವೇ? ನಾನವಳನ್ನು ಬೇಡಿಕೊಂಡರೂ ನನ್ನನ್ನು ವರಿಸಲಿಲ್ಲವಾದ್ದರಿಂದ ಈ ಹಾಳು ತೋಟದಲ್ಲಿ ಕೊಂದುಬಿಟ್ಟೆನು- ಈ ನನ್ನ ಶೂರತ್ವವನ್ನು ನಮ್ಮ ತಾಯಿ ತಂದೆ ಅಣ್ಣ ಇವರ್‍ಯಾರೂ ನೋಡದೇ ಮೋಸಹೋದರಲ್ಲ ಆಗಲಿ ಈಗ ಅಮುದಿನರಿಯು ಬರುತ್ತಿದೆ. ಆದ್ದರಿಂದ ಬರೆಯಾಗಿ ಹೋಗಿರುವೆನು ಹಾಗೆಯೇ ಮಾಡುತ್ತಾನೆ.)

[ವಿಟಂ ಚೇಟನೊಡನೆ ಬಂದು]

ವಿಟಂ:—ಸ್ಥಾವರಕನಂ ಸಂತವಿಟ್ಟು ಕರೆತಂದೆಂ. ಇನ್ನಾ ಶಕಾರನಂ ನೋಡಿದಪೆಂ. (ಸುಳಿದು ನೋಡಿ) ಎಲೆ ಇವಂ ಬಟ್ಟೆಯೊಳಾಗಳೆ ಆಕೆಯ ಕಾಲ್ಕೆರ ಗಿರ್ದಂ- ಅಂತಪ್ಪನವನು ಮಾಕೆಯ ನಿಕ್ಕಿದನೋ ಏಂ? ಎಲೆ ಪಾಪಿಯೇ! ಇಂತಪ್ಪ ದುಷ್ಕಾರ್ಯಮಂ ಗೆಯ್ದೆಯಾ? ಪಾಪಿಯಾದ ನಿನ್ನ ಸಂಗದಿಂದಾಮುಂ ದೋಷಿಗಳಪ್ಪೆವು. ವಸಂತಸೇನೆಯ ವಿಷಯದೊಳಪಶಕುನಮಂ ಶಂಕಿಸಿ ದೆನ್ನಮನ ಮೊಣೆಸಿ ದುದು ಯಥಾರ್ಥಮಪ್ಪುದೆ? ಎಂತುಂ ದೇವತೆಗಳ್ ಶುಭಮನೆಸಗುಗೆ-(ಶಕಾರನಬಳಿಗೆ ಬಂದು) ಕಾಣೇಲಿ ಪುತ್ರನೇ! ಸ್ಥಾವರಕನ ನಿಂತು ಸಂತೈಸಿ ಕರೆತಂದೆಂ-

ಶಕಾರ॥ ಭಾವನೇ! ನಿನಗೆ ಸ್ವಾಗತವು. ಮಗನೇ ಸ್ಥಾವರಕನೇ! ನಿನಗೂ ಸ್ವಾಗತವು-

ವಿಟಂ:—ಆನಿರಿಸಿದ ನ್ಯಾಸಮಂ ತಾರೈ.

ಶಕಾರ॥ ನ್ಯಾಸವೆಂಥಾದ್ದು?

ವಿಟಂ:—ವಸಂತಸೇನೆ.

ಶಕಾರ॥ ಹೋದಳು.

ವಿಟಂ:—ಎತ್ತ?

ಮೃಚ್ಛಕಟಿಕಪ್ರಕರಣದಲ್ಲಿ,

ಶಕಾರ॥ ಭಾವನ ತಿಂದುಗಡೆಯೋ.

ವಿಟಂ:— (ಯೋಚನೆಯಿಂದ.) ಆಕೆ ಯಾಕಡೆಗೆಬರಲಿಲ್ಲವಲ್ಲೋ.

ಶಕಾರ॥ ನೀನು ಯಾವಕಡೆಗೆಹೋದಿ?

ವಿಟಂ:—ಅಂ ಪಡುವಲ್ಲಡೆಗೆ.

ಶಕಾರ॥ ಅವಳುದಕ್ಷಿಣಕ್ಕೆ ಹೋದಳು.

ವಿಟಂ:—ಅಂತೆಂ ಕೆಲ್ಲಡೆಗೆ ಪೋದೆಂ.

ಶಕಾರ॥ ಅವಳು ಉತ್ತರಕ್ಕೆ ಹೋದಳು.

ವಿಟಂ:—ನೀಂ ಕಳವಳಮಪ್ಪಂತೆ ಪೇಳ್ದಪಯ್ ಎನ್ನಮನಂ ಸ್ವಸ್ಥ ಮಾಗಲಾರದು. ಪರಿಂ ಸತ್ಯಮಂ ಪೇಳ್,

ಶಕಾರ॥ ಆ ಕೆಟ್ಟಮನಸ್ಸನ್ನು ಹಿಡಿದುನಿಲ್ಲಿಸಿಕೋ- ಭಾವನತಲೆಯಮೇಲೆ ಕಾಲಿಟ್ಟು ಕಾದರೆ ಪ್ರಮಾಣಮಾಡುತ್ತೇನೆ. ನಾನವಳನ್ನು ಕೊಂದೆನು.

ವಿಟಂ:— (ವ್ಯಸನದಿಂದ) ನಿಸದಂ ನೀಂ ಕೊಂದೆಯಾ?

ಶಕಾರ॥ ನನ್ನ ಮಾತಿನಲ್ಲಿ ನಿನಗೆ ನಂಬಿಕೆಯಿಲ್ಲದಿದ್ದರೆ ರಾಜಶ್ಯಾಲನ ಶೂರತ್ವವನ್ನು ನೋಡು ಬಾ. (ಎಂದು ತೋರಿಸುತ್ತಾನೆ.)

ವಿಟಂ:—ಹಾ! ಹತನಾದೆನು. ನಿರ್ಭಾಗ್ಯನಾಂ, (ಎಂದು ಮೂರ್ಛೆಯಿಂ ಬೀಳ್ದಂ)

ಶಕಾರ॥ ಹೀ ಹೀ ಭಾವನೂ ಸತ್ತನು.

ಸ್ಥಾವರಕನು॥ ತೆಪ್ಪತ್ತುಕೊಳ್ಳಿ! ತೆಪ್ಪತ್ತುಕೊಳ್ಳಿ. ವಿಚಾರವಿಲ್ಲದೆ ಬಂಡಿಯನ್ನು ತಂದನಾನೇ ಮೊದಲು ಕೊಂದೆನು.

ವಿಟಂ॥ (ತೆಪ್ಪತ್ತುಕೊಂಡು ಶೋಕಿಸುತ) ಹಾ ವಸಂತಸೇನೆಯೋ!

ವೃ॥ ಹಾಹಾ ಚಂದ್ರಮುಖೀ! ವಿಳಾಸನಿಧಿಯೇ! ಸೌಭಾಗ್ಯ ಪಣ್ಯಾಕರೇ!
ಹಾಹಾ ಭೂಷಣಭೂಷಣೇ! ಸುಜನತಾಕಾರುಣ್ಯ ಫೇನೋರ್ಮಿಕೇ!
ಹಾಹಾ ಕೇಳಿರಸೇ! ಪ್ರಹಾಸಪುಳಿನೇ! ದಾಕ್ಷಿಣ್ಯವಾಹಿನೀ!
ಹಾಹಾ ಪೋದೆಯೊ ಕಾಮನಾವಿಪಣಿಯೇ ಯೆಮ್ಮನ್ನರಾಧಾರಮೇ! ೨೧೬
(ಕಣ್ಣೀರಿಂದೆ) ಕಷ್ಟಂ ಕಷ್ಟಂ ಆಯ್ಯೋ !!! ಮೂಢನೇ?

ಕಂ॥ ಈಕೆಯ ವಧೆಗೇಂ ಫಲವೋ
ಈ ಕಜ್ಜಂ ಪಾಪಪುರುಷ ಸಮನಿಂ ನಿನ್ನಿಂ
ದೇಕಾಯ್ತೋ ನಿರ್ದೋಷಿಣಿ
ಲೋಕದೊಳೆ ನಿಸಿದ್ದ ಪುರದ ಲಕ್ಷ್ಮಿಯೆ ಕೆಡೆದಳ್॥ ೨೧೭॥

(ತನ್ನೊಳ್) ಎಲಾ! ಈಪಾಪಿ ಯೆತ್ತಾನುಂ ತಾಂಗೆಯ್ದ ಕಜ್ಜಮಂ ಎನ್ನೊಳೆರಿಸುವಂ. ಆದರಿಂದಿತ್ತ ಪೋದಪೆಂ (ಎಂದು ನಡೆಯುತ್ತಾನೆ)

ಶಕಾರ॥ ಇಲ್ಲಿ ಬಾ ಇಲ್ಲಿ ಬಾ- ಎಂದು (ಹಿಡಿಯುತ್ತಾನೆ.)

ವಿಟಂ:—ಪಾಪಿಯೇ! ಎನ್ನಂ ಮುಟ್ಟವೇಡ. ನಿನ್ನ ಸಂಗಂ ಸಾಲ್ಗುಂ, ಪೋದಪೆಂ;

ಶಕಾರ॥ ಎಲಾ ವಸಂತಸೇನೆಯನ್ನು ನೀನು ಕೊಂದು ಹೀಗೆ ನನ್ನನ್ನು ಅನಾಥನನ್ನು ಮಾಡಿ ತಪ್ಪು ಹೊರಿಸಿ ಹೋಗುತ್ತೀಯಾ?

ವಿಟಂ:—ನೀಚನೇ! ನೀಂ ಕೆಟ್ಟು ಪೋಗು-

ಶಕಾರ॥ ಅಯ್ಯಾ! ನಿನಗೆ ಬೇಕಾದಷ್ಟು ಹಣ ಕೊಡುತ್ತೇನೆ- ಚಿನ್ನದೊಡವೆಗಳನ್ನಾ ಕೊಡುತ್ತೇನೆ- ಜನಗಳಲ್ಲಿ ಯಾ ಯಪಶಬ್ದವು ನನಗೆ ಬಾರದ ಹಾಗೆ ಇರಲಿ.

ಸ್ಥಾವರಕ॥ ಪಾಪವು ಶಾಂತವಾಗಲಿ;

ವಿಟಂ:—ಚೀ! ಮೂರ್ಖನೆ! ನಿನಗೇ ಇರಲಿ;

ಶಕಾರ॥ (ನಗುತ್ತಾನೆ)

ವಿಟಂ:—ಬಾಲಿಶನೇ! ಕಂ॥ ಬಿಡುನಗೆಯಂ ದುಃಖಿಸು ಪಳಿ
ಗೆಡೆಯಾದೀ ನಿನ್ನ ದುಷ್ಟ ವಿಶ್ವಾಸವನುಂ।
ಸುಡು ಸೇರ್ಕೆ ಬೇಡ ನಿನ್ನೊಳ್
ಬಿಡುವೆಂ ನಿನ್ನಂ ನಿಕೃತ್ತ ನಿರ್ಗುಣಧನುವೋಲ್॥ ೨೧೮॥

ಶಕಾರ॥ ಭಾವನೇ! ಪಸನ್ನನಾಗು ಪ್ರಸನ್ನನಾಗು- ಬಾ ಕೊಳದೊಳಗಿಳಿದು ಆಡೋಣ.

ವಿಟಂ:—ಎಲೆ ದುರಾತ್ಮನೇ! ಕಂ॥ ವನಿತೆಯ ಕೊಂದನ ನೊಂದಲ್
ಜನಮೆನ್ನಂ ಪತಿತನೆಂದು ತಿಳಿಗುಂ ಮಗುಳ್ದಾಂ।
ಅನುಸರಿಪೆ ನೆಂತು ಪುರಭಾ
ಮಿನೀಭಯಾರ್ಧಾಕ್ಷಿ ದೃಷ್ಟ ನಾದಪ ನಿನ್ನಂ॥ ೨೧೯॥
(ದುಃಖದಿಂದ) ಅಯ್ಯೋ! ವಸಂತಸೇನೆಯೇ!
ಕಂ॥ ಬೇರೊಂದು ಜನ್ಮದೊಳಗಂ
ವಾರಾಂಗನೆಯಾಗವೇಡ ವರವರ್ಣಿನಿ ನೀಂ।
ಚಾರಿತ್ರ್ಯಾದಿಗುಣೋಜ್ವಲ
ಪೂರುಷ ವಿಮಲಾನ್ವವಾಯದಲ್ಲಿಯೆ ಜನಿಸಾ॥ ೨೨೦॥

ಶಕಾರ॥ ನನ್ನ ತೋಟದಲ್ಲಿ ನೀನು ವಸಂತಸೇನೆಯನ್ನು ಕೊಂದು ಎಲ್ಲಿಗೆ ಓಡಿ ಹೋಗುವೆ? ನಮ್ಮ ಭಾವನ ಹತ್ತಿರ ಉತ್ತರವನ್ನು ಹೇಳು ಬಾ-(ಎಂದು ಹಿಡಿಯುತ್ತಾನೆ)

ವಿಟಂ:—ಅಃ ಎಲೆ ಜಾಲ್ಮನೇ! ಇರು (ಎಂದು ಕತ್ತಿಯಂ ತೆಗೆವನು)

ಶಕಾರ॥ (ಭಯದಿಂದ ನಡೆದು) ಏನೆಲಾ! ಭಯಪಟ್ಟೆಯೋ? ಆದರೆ ಹೋಗು;

ವಿಟಂ:—(ತನ್ನೊಳು) ಇನ್ನಿಲ್ಲಿರ ಲನುಚಿತಂ- ಆರ್ಯಶರ್ವಿಲಕ ಚಂದನಕ ಮುಂತಾದವರಿಪ್ಪೆಡೆಗೆ ಪೋದಪೆಂ- (ಎಂದು ಪೊರಮಟ್ಟಂ-)

ಮೃಚ್ಛಕಟಿಕಪ್ರಕರಣದಲ್ಲಿ,

ಶಕಾರ॥ಸುಡು ಗಾಡಿಗೆ ಹೋಗು, ಎಲಾ ಸ್ಥಾವರಕನೇ! ನಾನೆಂಥಾ ಕೆಲಸವನ್ನು ಮಾಡಿದೆನೋ?

ಸ್ಥಾವರಕ॥ಬುದ್ಧೀ! ದೊಡ್ಡ ಕೆಟ್ಟ ಕೆಲಸವಾಯಿತು.

ಶಕಾರ॥ಎಲೆ ಚೇಟನೇ! ಕೆಟ್ಟಕೆಲಸವೆಂದು ಹೇಳುತ್ತೀಯೋ? ಆದರೆ- ಹೀಗೆಮಾಡುವೆನು- (ಒಡಿವೆಗಳೆಲ್ಲವನ್ನೂ ತೆಗದು) ಈ ಅಲಂಕಾರಗಳೆಲ್ಲವನ್ನೂ ನೀನೇ ತೆಗದುಕೋ- ನೀನು ಈ ಒಡವೆಯಿಟ್ಟುಕೊಂಡಾಗಲೇ ನಿನಗೇನಾದರೂ ಕೆಲಸ ಹೇಳುತ್ತೇನೆ-

ಸ್ಥಾವರ॥ ಈ ವೊಡೆವೆಗಳು ದಣಿಗಳಿಗೇನೇ ಚೆನ್ನಾಗಿರುವುದು ನನಗಿದರಿಂದೇನು ಪ್ರಯೋಜನವು?

ಶಕಾರ॥ಆದರೆ ಹೋಗು. ಈ ಯೆತ್ತುಗಳನ್ನು ಕೊರಳದಲ್ಲಿ ಕಟ್ಟಿ ನೀನು ನಿನ್ನ ಹೊಸವುಹಡಿಯ ಕೈಸಾಲೆಯಲ್ಲಿ ನಾನು ಬರುವತನಕ ಇರು-

ಸ್ಥಾವರಕ॥ ಬುದ್ಧೀ ಅಪ್ಪಣೆಯ ಮೇರೆಗೆ-(ಎಂದು ಹೊರಟು ಹೋದನು)

ಶಕಾರ॥ಭಾವನೇನೋ ಆತ್ಮರಕ್ಷಣಾಕ್ಕಾಗಿ ಹೊರಟು ಹೋದ- ಚೇಟನೂ ಮಹಡಿಯ ಮೇಲಿರುತ್ತಾನೆ. ಹೋಗಿ ಬೇಡಿ ಯನ್ನು ತಗುಲಿಸಿ ಅಲ್ಲಿಯೇ ಯಿರಿಸುತ್ತೇನೆ ಹಾಗಾದರೆ ಇದು ರಹಸ್ಯವಾಗಿರುತ್ತ- ಆದರಿಂದ ಹೋಗುವೆನು- ಅಥವಾ ಇವಳೇನು ಸತ್ತಳೋ ಯಿಲ್ಲವೋ? ನೋಡುತ್ತೇನೆ. (ಎಂದು ನೋಡಿ) ಚೆನ್ನಾಗಿ ಸತ್ತಳು ಆಗಲಿ ಯೀ ಬಟ್ಟೆಯನ್ನು ಆಹೆಣಕ್ಕೆ ಹೊದ್ದಿಸುವೆನು- (ತನ್ನ ಬಟ್ಟೆಯನ್ನು ತೆಗದು) ಓ!! ಈ ಬಹಿರ್ಮಾಸದಲ್ಲಿ ನನ್ನ ಹೆಸರಿರುವದು- ಯಾವನಾದರೂ ಓದಿಕೊಂಡುವನು ಗುರುತುಹಿಡಿದಾನು- ಆದ್ದರಿಂದ ಇಲ್ಲಿ ರಾಶಿಯಾಗಿರುವ ಒಣಗಿದೆಲೆಗಳನ್ನು ಹೊದ್ದಿಸುತ್ತೇನೆ- (ಹಾಗೆಮಾಡಿ, ಯೋಚಿಸಿ) ಆಗಲಿ ಹಾಗೆಮಾಡೋಣ- ಈಗಲೇ ಬೇಗನೆ ಕಛೇರಿಗೆ ಹೋಗಿ ಅರ್ಜಿ ಬರೆಯುತ್ತೇನೆ ಹೇಗೆಂದರೆ— "ಸಾರ್ಥವಾಹನ ಮಗನಾದ ದರಿದ್ರ ಚಾರುದತ್ತನು ನಮ್ಮ ಪುಷ್ಪಕರಂಡಕವೆಂಬ ಹಳೇ ತೋಟಕ್ಕೆ ಬಂದು ಅಲ್ಲಿಗೆ ಬಂದಿದ್ದ ವಸಂತಸೇನೆಯನ್ನು ಒಡವೆಯಾಶೆಗೆ ಕೊಂದುಬಿಟ್ಟನು-" ಎಂದು- ಚಾರುದತ್ತನನಾಶಕ್ಕೆ ಇಂಥಾ ಕ್ರೂರವಾದ ಮೋಸವನು ಮಾಡಬೇಕು-(ಎಂದು ಹೊರಟು, ನೋಡಿ, ಭಯದಿಂದ) ಛೀ ಛೀ! ನಾನು ಯಾವ ಯಾವದಾರಿಗೆ ಹೋದರೆ ಅಲ್ಲೆಲ್ಲಾ ಈ ಶ್ರಮಣಕನು ಒದ್ದೆ ಬಟ್ಟೆಯನ್ನು ಹಿಡಿದೆ ದುರಿಗೆ ಬರುತ್ತಿದ್ದಾನೆ- ಮುಂಚೆ ಯಿವನ ಮೂಗನ್ನು ಹಿಂಡಿಯೆಳದಿದ್ದೆನಾದ್ದರಿಂದ ಯಾವಾಗಲಾದರೂ ನನ್ನನ್ನು ನೋಡಿದರೆ ನಾನು ಕೊಂದಹಾಗೆ ಪ್ರಕಟಮಾಡ್ಯಾನು! ಆದ್ದರಿಂದ ಹ್ಯಾಗೆ ಹೋಗಲಿ- (ನೋಡಿ) ಆಗಲಿ ಈ ಮೋಟು ಕೋಟೆ

ಯಿ ಗೋಡೆಯನ್ನು ದಾಟಿಕೊಂಡು ಹನುಮಚ್ಛಿಖರದಲ್ಲಿ ಮಹೇಂದ್ರಹಾರಿದಹಾಗೆ ಬೇಗಬೇಗ ಹೋಗುವೆನು (ಎಂದು ಹೋದನು)

[ತೆರೆಯೆತ್ತಿದೇಸಂವಾಹಕನೆಂಬಯತಿಯು ಪ್ರವೇಶಿಸುವನು.]

ಯತಿ॥ ಈ ಶಾಟಿಯನ್ನು ತೊಳದುತಂದೆನು- ಎಲ್ಲಿ ಒಣಗಿಸಲಿ? ಯಿಾಗಿಡಗಳಮೇಲೆಕೋತಿಗಳಿವೆ- ನೆಲದಮೇಲೆಧೂಳು- ಇನ್ನೆಲ್ಲಿ ಹರವಿಒಣಗಿಸಲಿ? (ನೋಡಿ) ಇದೋ ಇಲ್ಲಿ ರಾಶಿಯಾಗಿರುವ ಒಣಗಿದೆಲೆಗಳಮೇಲೆಹರಡುತ್ತೇನೆ(ಹಾಗೆಮಾಡಿ)ಬುದ್ಧನಿಗೆನಮಸ್ಕಾರವು(ಎಂದುಕೂತುಕೊಂಡು) ಧರ್ಮವಾಕ್ಯಗಳನ್ನುಹೇಳುತ್ತೇನೆ ಎಂದು 'ಹೊಟ್ಟೆಯನ್ನು ಕಟ್ಟಬೇಕು' ಮುಂತಾದ ಪೂರ್ವ ಪದ್ಯಗಳನ್ನು ಪಠಿಸುತ್ತಾನೆ- ಅಥವಾ ಯಿಾಸ್ವರ್ಗದಿಂದ ನನಗೇನುಫಲವು? ಆಬುದ್ಧೋಪಾಸಕಳಾದ ವಸಂತಸೇನೆಗೆ ನಾನೇನೂ ಪ್ರತ್ಯುಪಕಾರವನ್ನುಮಾಡಲಿಲ್ಲವಲ್ಲ-ಜೂಜುಗಾರರುನನ್ನನ್ನುಹತ್ತುಹಣಕ್ಕಾಗಿ ಹಿಡಿದುನಿಲ್ಲಿಸಿದಾಗ ಅವಳು ಕೈಕಡಗವನ್ನೇ ಕೊಟ್ಟು ಉಪಕರಿಸಿದಳು- ಅದುಮೊದಲು ನನ್ನನ್ನುನಾನು ಮಾರಿ ಕೊಂಡಿರುವವಂತೆ ತಿಳಿದಿರುವೆನು- (ಮುಂದೆನೋಡಿ) ಅದೇನದು? ಎಲೆಗಳರಾಶಿಯಲ್ಲಿ ಉಸಿರುಬಿಟ್ಟಹಾಗೆ ಯಿದೆಯಲ್ಲಾ-ಅಥವಾ-ಹೀಗೆಯಿರಬಹುದು-

ಕಂ॥ ಎಲರಿಗೆ ಬಿಸಿಲಿಗೆವೊಣಗಿ
ದ್ದೆಲೆಗಳಿದೋ ತೊಯ್ದು ಚೀವರಾಂಬುವಿನಿಂದಾ
ಚಲಿಸುತ್ತಿವೆ ರೆಕ್ಕೆಗಳ
ನ್ನಲುಗಿಸಿ ತೋಡಾಡುತಿರುವಹಕ್ಕಿಗಳಂತೆ॥ ೨೨೧॥

[ವಸಂತಸೇನೆತೆಪ್ಪತ್ತುಕೊಂಡು ಕೈಯೆತ್ತಿತೋರಿಸುತ್ತಾಳೆ.]

ಯತಿ॥ ಆಹ! ಅಲಂಕಾರವಾಗಿರುವಹೆಂಗಸಿನಕೈಯಾಗಿ ಕಾಣುತ್ತೆ- ಓಹೋ! ಇದೇನು ಎರಡನೇ ಕೈಯೂಕೂಡ ಯಿಾಚಿಗೆಬಂತು? ಎಲ್ಲಿಯೋಯಿಾಕೈಯನ್ನು ನೋಡಿದ ಹಾಗೆ ಜ್ಞಾಪಕವು [ಎಲ್ಲಿಯೆಂದುಬಹಳವಾಗಿಯೋಚಿಸಿ] ಆ! ತಿಳಿಯಿತು-ದಿಟವಾಗಿ ನನಗೆ ಅಭಯಕೊಟ್ಟ ಹಸ್ತವೇ ಇದಾಗಿರಬಹುದು- ಆಗಲಿ. ನೋಡೋಣ- [ಹೋಗಿನಾಟ್ಯದಿಂದ ಮುಚ್ಚಿದ್ದು ತೆಗದು ನೋಡಿ, ನೆನಕೊಂಡು] ಆಬುದ್ಧೋಪಾಸಕಳೇ ಯಿವಳು.

ವಸಂತ [ನೀರಕುಡಿಯಲೆಳಸುತ್ತಾಳೆ]

ಯತಿ॥ಹ್ಯಾಗೆ? ನೀರನ್ನುಕೇಳುತ್ತಾಳಲ್ಲ-ಕೊಳವಾದರೋದೂರದಲ್ಲಿದೆ. ಯಿಾಗಿಲ್ಲೇನು ಮಾಡಲಿ? ಆಗಲಿ. ಯಿಾವೊದ್ದೆ ಬಟ್ಟೆಯನೀರನ್ನು ಇವಳ ಮೇಲೆ ಹಿಂಡುತ್ತೇನೆ. [ಹಾಗೆಮಾಡುವನು]

ವಸಂತೆ॥(ತೆಪ್ಪತ್ತುಕೊಂಡು ಏಳುತ್ತಾಳೆ)

ಯತಿ॥[ಬಟ್ಟೆಯ ಕೊನೆಯಿಂದ ಬೀಸುತ್ತಾನೆ]

ವಸಂತ॥ ಅಯ್ಯಾ! ನೀನ್ಯಾರು?

ಯತಿ॥ಬುದ್ಧೋಪಾಸಕಳಿಗೆ ಜ್ಞಾಪಕವಿಲ್ಲವೇ? ನನ್ನನ್ನು ನೀನು ಹತ್ತು ಹಣ ಕೊಟ್ಟು ಕೊಂಡುಕೊಂಡಿದ್ದವಳಲ್ಲವೇ?

ವಸಂತೆ॥ನಾನು ದಿಟವಾಗಿ ಸತ್ತು ಹೋದವಳೇ ಸರಿ- ನೀನು ಹೇಳುವ ದೊಂದೂ ನನಗೆ ಜ್ಞಾಪಕಕ್ಕೆ ಬರಲಿಲ್ಲ.

ಯತಿ॥ಬುದ್ಧೋಪಾಸಕಳೇ! ಇದೇನೀ ಯವಸ್ಥೆ?

ವಸಂತೆ॥ (ದುಃಖದಿಂದ) ಸೂಳೆಯ ತನಕ್ಕೆ ತಕ್ಕದ್ದು.

ಯತಿ॥ಬುದ್ಧೋಪಾಸಕಳೇ! ಏಳು ಏಳು-ಯೀ ಮರದ ಬಳಿಯಿರುವ ಬಳ್ಳಿಯನ್ನು ಹಿಡಿದು ಕೊಂಡೇಳು [ಬಳ್ಳಿಯನ್ನು ಬಗ್ಗಿಸುತ್ತಾನೆ-]

ವಸಂತ॥[ಆ ಬಳ್ಳಿಯನ್ನು ಹಿಡಿದುಕೊಂಡು ಮೆಲ್ಲಗೆ ಯೇಳುತ್ತಾಳೆ]

ಯತಿ॥ ಈ ಚೈತ್ಯಾಲಯದಲ್ಲಿ ನಮ್ಮ ಧರ್ಮಭಗಿನಿಯಿದ್ದಾಳೆ- ಅಲ್ಲಿಯೇ ನೀನು ಕೊಂಚ ಉಪಚಾರಿಸಿಕೊಂಡು ಬಳಿಕ ಮನೆಗೆ ಹೋಗಬಹುದು- ಆದ್ದರಿಂದ ಬುದ್ಧೋಪಾಸ ಳು ಮೆಲ್ಲ ಮೆಲ್ಲಗೆ ಬರಬೇಕು (ಎಂದು ಹೊರಡುತ್ತಾರೆ; ಮುಂದೆ ನೋಡಿ) ಓ ಹಾಗಿ ರಯ್ಯಾ! ಓರೆಯಾಗಿರಿ. ಇವಳು ಪ್ರಾಯದ ಹೆಂಗಸು. ಇದೋ ನಾನು ಯ ಯು, ಆದರೂ ನನ್ನ ಧರ್ಮವು ಶುದ್ಧವಾದದ್ದೇ ಸರಿ. ಯಾವ ಮನುಷ್ಯನು, ಮನೋ ವಾಕ್ಕಾಯ ಕರ್ಮಗಳಲ್ಲಿ ಚಲಿಸದೆ, ಜಿತೇಂದ್ರಿಯನಾಗಿರುವನೋ ಅವನಿಗೆ ಪರಲೋಕವು ಕೈಯಲ್ಲಿಯೇ ಯಿರುವದು. ರಾಜಭಯವೂ ಯಿಲ್ಲ ದಾರಿಯ ಬಿಡಿ ಹೊರಡೇ ದಾರಿಯ ಬಿಡಿ,

(ಇಂತೆಲ್ಲರ್ ಪೊರಮಟ್ಟರ್

ಇಂತೆಂಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್

ವಸಂತಸೇನಾ ಮೋಟನಮೆಂಬ

ಎಂಟನೆಯ ಅಂಕಂ ಮುಗಿದದು.

ಮೃಚ್ಛಕಟಿಕ ಪ್ರಕರಣಂ.

ನವಮಾಂಕಂ.

[ಬಳಿಕ ಶೋಧನಕನೆಂಬ ಕಂಚುಕಿಯು ಬರುತ್ತಾನೆ]

ಶೋಧನಕ॥ ಕಾರ್ಯದರ್ಶಿಗಳು "ವ್ಯವಹಾರಮಂಟಪವನ್ನು ಗುಡಿಸಿ ಆಸನಗಳನ್ನು ಸಿದ್ಧಪಡಿಸು" ಎಂದು ಹೇಳಿರುವರು- ಅದಕ್ಕೆ ಹೋಗಿ ಚೊಕ್ಕಟಮಾಡುತ್ತೇನೆ. (ನಡೆದುನೋಡಿ) ಇದೇ ವ್ಯವಹಾರಸ್ಥಾನವು ಇದೋ ಒಳಗೆ ಹೋಗುವೆನು. (ಒಳಗೆ ಹೋಗಿ, ಗುಡಿಸಿ, ಆಸನಗಳನ್ನು ಹಾಕಿ) ಕಾರ್ಯದರ್ಶಿಗಳ ಅಪ್ಪಣೆಯ ಮೇರೆಗೆ ಮಾಡಿರುವೆನು- ಇನ್ನು ಹೋಗಿ ಅವರಿಗೆ ಹೇಳುತ್ತೇನೆ- (ಮುಂದೆ ಹೋಗಿ) ಇದೇನು ದುರ್ಜನನಾದ ರಾಜಶ್ಯಾಲನು ಈಕಡೆಯೇ ಬರುತ್ತಿದ್ದಾನೆ. ಇವನ ಕಣ್ಣಿಗೆ ಬೀಳದೇ ಮರೆಯಾಗಬೇಕು. (ಎಂದು ಮರೆಯಾದನು)

[ಬಳಿಕ ಸೊಗಸಾದ ಅಲಂಕಾರದಿಂದ ಶಕಾರನು ಬರುತ್ತಾನೆ]

ಶಕಾರ॥ ರಾಷ್ಟ್ರಿಯನಾದ ನಾನು ಉದ್ಯಾನದ ತೋಟದ ಉಪವನದಲ್ಲಿ ಸರಸ್ಸಲಿಲಪಾನೀಯ ಜಲಗಳಲ್ಲಿ ಸ್ನಾನಮಾಡಿದೆ ಮುಳುಗಿದೆ. ಸ್ತ್ರೀನಾರೀ ಯುವತಿಗಳು ಒಪ್ಪುವಂಥಾ ಸಿಂಗಾರವನ್ನು ಮಾಡಿಕೊಂಡು; ಜುಟ್ಟು ಕ್ಷಣಕ್ಕೆ ಜಡೆ, ಕ್ಷಣಕ್ಕೆ ಗಂಟು, ಕ್ಷಣಕ್ಕೆ ಕೆದರುವದು, ಹೀಗಿರುವದರಿಂದ ನಾನು ವಿಚಿತ್ರವಾಗಿರುವೆನು- ಮತ್ತೂ- ವಿಷಗ್ರಂಥಿಯೊಳಗೆ ಸಿಕ್ಕಿದ ಹುಳುವಿನ ಹಾಗಿದ್ದ ನನಗೆ ತಪ್ಪಿಸಿ ಕೊಳ್ಳುವ ಉಪಾಯವು ಸಿಕ್ಕಿತು- (ನೆನದು) ಆ ದರಿದ್ರ ಚಾರುದತ್ತನ ಮೇಲೆ ಈ ತಪ್ಪನ್ನು ಹೊರಿಸುತ್ತೇನೆ- ದರಿದ್ರನಿಗಾದರೆ ಎಲ್ಲಾ ದೋಷಗಳೂ ಸರಿಹೋಗುತ್ತೆ- ಆಗಲಿ- ಕಛೇರಿಗೆ ಹೋಗಿ ಮುಂಚೆ ಅರ್ಜೀ ಬರೆಯುತ್ತೇನೆ-(ನಡೆದುನೋಡಿ) ಇದೇ ಕಛೇರಿಯ ಮುಂದಿನ ಚಾವಡಿ- ಹೋಗುತ್ತೇನೆ ಒಳಕ್ಕೆ (ಹೊಕ್ಕುನೋಡಿ) ಆಸನಗಳು ಸಿದ್ಧವಾಗಿವೆ- ಅಮಲ್ದಾರರು ಬರುವ ಹೊತ್ತಾಗಿದೆ. ಅದು ವರೆಗೂ ಈ ಗರಿಕೆಯ ನೆಲದಲ್ಲಿ ಕೂತಿದ್ದು ಕಾದಿರುತ್ತೇನೆ- (ಹಾಗೆ ಮಾಡುತ್ತಾನೆ)

ಶೋಧನ॥ (ಮತ್ತೊಂದು ಕಡೆಯಿಂದ ಹೋಗಿ ಮುಂದೆ ನೋಡಿ) ಇದೋ ಕಾರ್ಯದರ್ಶಿಗಳು ಬರುತ್ತಿದ್ದಾರೆ- ಬಳಿಗೆ ಹೋಗುವೆನು-

[ಬಳಿಕ ಶ್ರೇಷ್ಠಿ ಕಾಯಸ್ಥರೊಡನೆ ಕಾರ್ಯದರ್ಶಿಪುಗುವಂ]

ಕಾರ್ಯದ:—ಅಯ್ಯಾ! ಶ್ರೇಷ್ಠಿ ಕಾಯಸ್ಥರೇ!

ಶ್ರೇಷ್ಠಿ ಕಾಯ॥ ಅಪ್ಪಣೆಯಾಗಬೇಕು.

ಕಾರ್ಯ॥—ಪೆರರ ಮನಮಂ ತಿಳಿವುದು ಕಾರ್ಯದರ್ಶಿಗಳ್ಗೆ ವ್ಯವಹಾರಾಧೀನತೆಯಿಂ ಬಹುಕಷ್ಟಮಲ್ತೇ- ಎಂತೆನೆ:—

ಮೃಚ್ಛಕಟಿಕಪ್ರಕರಣದಲ್ಲಿ

ವೃ॥ ಮುಳಿದನ್ಯಾಯವಿರುದ್ಧ ಕಾರ್ಯಕನ್ನತಂ ಪೇಳ್ದಲ್ಲಿ ತಥ್ಯಾಂಶಮಂ
ಕಳೆವರ್ಸಾಧುಗಳುಂ ಸ್ವದೋಷಮನೆತಾಂ ಪೇಳರ್ದಲಿಸ್ಸಿ ... ದಿಂ
ಸಲೆಪಕ್ಷದ್ವಯ ದೋಷವಿರ್ಯದೊಳೆಂ ಪಾಪಂ ನೃಪಂಗೆಂದಿರಲ್
ಸುಲಭಂನಿಂದೆಯುಕಾರ್ಯದರ್ಶಿಗೆಗುಣಂ ಸಾಮಾನ್ಯದಿಂದುರ್ಲಭಂ॥ ೩೩॥

ಅಧಿಕಾರಿ ಯಾದೊಡೆ ಇಂತಿರಲ್ತಕ್ಕದು—

ವೃ॥ ಮುಳಿಸಿಲಿ ಶಾಸ್ತ್ರವೇದಿ ಸಮದರ್ಶಿ ಸುಹೃತ್ಪರಬಂಧು ವಾದದೊಳ್
ಮಿಲ ಕಪಟಂಗಳಂತಿಳಿದು ಪಂಡಿಪ ಸತ್ತ್ವಮಧರ್ಮಲೋಭಿ ದು
ರ್ಬಲಪರಿಪಾಲಕಂ ಪರರತತ್ತ್ವವಿಚಾರದೊಳಾತ್ತಚಿತ್ತನುಂ
ಕುಲಪತಿ ವಾಗ್ಮಿ ಪಾರ್ಥಿವನ ಶಾಸನಮುಂ ನಸುಮೀರದಿದ್ದರ್ಪಂ॥ ೩೪॥

ಶ್ರೇಷ್ಠಿ, ಕಾಯಸ್ಥರು॥ ಆರ್ಯರಾದ ತಮ್ಮ ಗುಣಗಳಲ್ಲಿಯೂ ದೋಷವನ್ನು ಹೇಳಬಹುದೇ? ಆದರೆ ಬೆಳ್ದಿಂಗಳಲ್ಲಿಯೂ ಕತ್ತಲೆ ಯಿದೆಯೆನ್ನಬಹುದಷ್ಟೆ?

ಕಾರ್ಯ:—ಎಲೆ ಶೋಧನಕನೇ! ಓಲಗಕ್ಕೆ ಬಟ್ಟೆಯೊಳ್ಳಿತೋ?

ಶೋಧನ॥ ಬುದ್ಧಿ! ಇತ್ತ ಬರಬೇಕು ಇತ್ತ ಬರಬೇಕು. (ಎಲ್ಲರೂ ಹೋಗುತ್ತಾರೆ) ಇದು ಬುದ್ಧಿ! ಓಲಗವು. ಪ್ರವೇಶಿಸಬೇಕು (ಒಳಗೆ ಹೋಗುತ್ತಾರೆ)

ಕಾರ್ಯದ:—ಎಲೆ ಶೋಧನಕನೇ! ಹೊರಗೆ ಹೋಗಿ ಕಾರ್ಯಾರ್ಥಿಗಳಾರಾರೋ! ತಿಳಿದು ಬಾರ್ರೈ.

ಶೋಧನ॥ ಬುದ್ಧಿ ಅಪ್ಪಣೆ (ಎಂದು ಹೋಗಿ) ಅಯ್ಯಾ! ಇಲ್ಲಿ ಯಾರುಯಾರು ಕಾರ್ಯಾರ್ಥಿಗಳಾಗಿದ್ದೀರೋ? ಅಪ್ಪಣೆಯಾಗುತ್ತೆ.

ಶಕಾರನು॥ (ಹರ್ಷದೊಡನೆ) ಅಮಲ್ದಾರಬಂದನಾದೀತು. ಎಲಾ! ಪ್ರವರಮನುಷ್ಯನಾದ ವಾಸುದೇವನಂಥಾ ನಾನು ರಾಷ್ಟ್ರಿಯಶ್ಯಾಲನು ಕಾರ್ಯಾರ್ಥಿಯು.

ಶೋಧನ॥ (ತ್ವರೆಯಿಂದ) ಅಯ್ಯೋ! ಮೊದಲೇ ರಾಜಶ್ಯಾಲನು ಕಾರ್ಯಾರ್ಥಿಯೇ! ಅಯ್ಯಾ! ಕೊಂಚ ಇರಿ. ಹೋಗಿ ಅರಿಕೆಮಾಡುತ್ತೇನೆ. (ಹೋಗಿ) ಬುದ್ಧಿ! ರಾಜಶ್ಯಾಲನು ಕಾರ್ಯಾರ್ಥಿಯಾಗಿ ವ್ಯವಹಾರವನ್ನು ತಂದಿದ್ದಾನೆ.

ಕಾರ್ಯ:—ಇದೇಂ ಮೊದಲೆ ರಾಷ್ಟ್ರಿಯಂ ಕಾರ್ಯಾರ್ಥಿಯೆ? ನೇಸರ್ಮೂಡದ ಉಪರಾಗಂ ಮಹಾಪುರುಷನಿಪಾತಮಂ ತಿಳಿಪುದು. ಶೋಧನಕನೇ! ವ್ಯವಹಾರಮಿಂದು ವ್ಯಾಕುಲಮಕ್ಕುಂ. ಅದರಿಂ ಪೋಗಿ, 'ಇಂದು ನಿನ್ನ ವ್ಯವಹಾರವಂ ನೋಡಲ್ಕಿಲ್ಲ' ವೆಂದು ಪೇಳ್.

ಶೋಧನ॥ ಅಪ್ಪಣೆ. (ಎಂದು ಹೋಗಿ ಶಕಾರನಬಳಿಗೆ ಬಂದು) ಅಯ್ಯಾ! ಕಾರ್ಯದರ್ಶಿಗಳು ಈ ಹೊತ್ತು ನಿಮ್ಮ ವ್ಯವಹಾರವನ್ನು ನೋಡುವದಿಲ್ಲವೆಂದು ಹೇಳುತ್ತಾರೆ.

ಶಕಾರ॥ (ಕೋಪದಿಂದ) ನನ್ನ ವ್ಯವಹಾರವನ್ನು ನೋಡುವದಿಲ್ಲವೋ? ಹಾಗಾದರೆ ಈಗಲೇ ಹೋಗಿ ನಮ್ಮಕ್ಕನಗಂಡನಾದ ಪಾಲಕ ರಾಯನಿಗೆ ಹೇಳಿ, ನಮ್ಮಕ್ಕಗೂ ಅಮ್ಮಗೂ ಹೇಳಿಕೊಂಡು, ಈಕಾರ್ಯದರ್ಶಿಯನ್ನು ಬರತರಫ್‌ಮಾಡಿಸಿ, ಇಲ್ಲಿ ಬೇರೆ ಯಿನ್ನೊಬ್ಬನನ್ನು ಇಡಿಸುತ್ತೇನೆ-(ಎಂದುಹೋಗುತ್ತಿರಲು)

ಶೋಧನಕ॥ ಅಯ್ಯಾರಾಜಶ್ಯಾಲರೇ! ಕೊಂಚಇರಿ. ದಣಿಗಳಿಗೆಹೋಗಿಅರಿಕೆಮಾಡುವೆನು.(ಎಂದುಹೋಗಿ) ಬುದ್ಧಿ! ಆರಾಜಶ್ಯಾಲನು ಸಿಟ್ಟಾಗಿದ್ದಾನೆ. (ಎಂದುಅವನು ಹೇಳಿದಮಾತುಗಳನ್ನೇಹೇಳುತ್ತಾನೆ)

ಕಾರ್ಯ:—ಮೂರ್ಖಂಗೆಲ್ಲಂ ಸರಿವಕ್ಕುಂ. ಭದ್ರನೇ! ಪೋಗಿ ನಿನ್ನ ವ್ಯವಹಾರಮಂ ನೋಡಲಕ್ಕುಂ. ತಾರೆಂದುಪೇಳ್

ಶೋಧನ॥ (ಶಕಾರನಬಳಿಗೆಬಂದು) ಅಯ್ಯಾ! ನೋಡುತ್ತಾರೆ. ಬರಬೇಕು.

ಶಕಾರ॥ಮುಂಚೆ ನೋಡುವದಿಲ್ಲ. ಈಗನೋಡುತ್ತಾರೋ? ಆದ್ದರಿಂದ ಯಿಾಕಾರ್ಯದರ್ಶಿಗಳು ಭಯಪಟ್ಟಿರುವರು. ನಾನು ಹೇಳಿದಹಾಗೆಲ್ಲಾ ಆಗುವ ಹಾಗೆಮಾಡುತ್ತೇನೆ. ಆಗಲಿ ಹೋಗೋಣ. (ಪ್ರವೇಶಿಸಿ) ಅಯ್ಯಾ. ನಮಗೆಸುಖವು ನಿಮಗೆ ಸುಖವನ್ನು ಕೊಡುತ್ತೇನೆ ಅಥವಾಕೊಡುವದಿಲ್ಲ.

ಕಾರ್ಯ:— (ತನ್ನೊಳ್) ಆಹ! ವ್ಯವಹಾರಾರ್ಥಿ ಯಾದೀತನ ಸ್ಥಿರಜ್ಞಾನ ಮಾಶ್ಚರ್ಯಂ. (ಪ್ರಕಾಶವಾಗಿ) ಕುಳ್ಳಿರಲಕ್ಕುಂ.

ಶಕಾರ॥ಆ! ನಮ್ಮದೀನೆಲ. ಎಲ್ಲಿ ಬೇಕಾದರೆಅಲ್ಲಿ ಕೂತುಕೊಳ್ಳುವೆನು. (ಶ್ರೇಷ್ಠಿಯಂ ತೋರಿಸಿ) ಇಲ್ಲಿ ಕೂತುಕೊಳ್ಳುತ್ತೇನೆ. (ಶೋಧನಕನತೋರಿಸಿ) ಅಲ್ಲಿ ಕೂತುಕೊಳ್ಳುತ್ತೇನೆ. (ಎಂದುಕಾರ್ಯದರ್ಶಿಯತಲೆಯಲ್ಲಿ ಕೈಯಿಟ್ಟು) ಇದೋಕೂತುಕೊಂಡೆನು (ಎಂದುನೆಲದಮೇಲೆಕೂತುಕೊಳ್ಳುತ್ತಾನೆ)

ಕಾರ್ಯ:—ನೀಂಕಾರ್ಯಾರ್ಥಿಯೋ?

ಶಕಾರ॥ಹೌದು,

ಕಾರ್ಯ:—ಆಕಜ್ಜಮಂಪೇಳ್.

ಶಕಾರ ಕಾರ್ಯವನ್ನು ಕಿವಿಯಲ್ಲಿ ಹೇಳುತ್ತೇನೆ. ನಾನು ದೊಡ್ಡ ವಂಶದಲ್ಲಿ ಹುಟ್ಟಿದವನು. ಕಂ॥ ಅರಸಿನ ಮಾವನೆ ನಮ್ಮ

ಪ್ಪರಸಿನ ಹೆಂಡತಿಯು ನಮ್ಮ ಭಗಿನೀದೇವೀ
ಅರಸೇ ಭಾವನು ನನಗಾ
ಯರಸೇ ನಮ್ಮಮ್ಮಗಳಿಯನಾದನುತಿಳಿಕೋ॥ ೨೧೪॥

ಕಾರ್ಯ:—ಎಲ್ಲಮುಂತಿಳಿದುದೇ! ಕಂ॥ ಕುಲಮಂ ಪೇಳ್ದುದರಿಂದೇಂ

ಫಲವಿಲ್ಲಿ ಸುಶೀಲವೊಂದೆಕಾರಣಮಲ್ತೇ

ಸಲಿಬೆಳೆಗುಂ ಸುಕ್ಷೇತ್ರದ
ನೆಲದೊಳು ಮಲ್ಲಲ್ಲಿ ಕಂಟಕಿದ್ರುಮತತಿಗಳ್॥ ೨೨॥

ಆದುದರಿಂ ಕಾರ್ಯಕ್ಷಮಂ ಪೇಳ್ವುದು.

ಶಕಾರ॥ನಾನೇನಪರಾಧಮಾಡಿದರೂ ಏನೂ ಮಾಡಲಾರರು. ಅದ್ದರಿಂದ ಹೀಗೆ ಹೇಳುತ್ತೇನೆ. (ಪ್ರಕಾಶವಾಗಿ) ನನಗೆಪ್ರಸನ್ನನಾದ ನಮ್ಮಭಾವನು ಎಲ್ಲಾ ತೋಟಗಳಿಗಿಂತಲೂ ದೊಡ್ಡದಾದ ಪುಷ್ಪಕರಂಡಕವೆಂಬ ಹಳೇತೋಟವನ್ನು ವಿಹಾರಾರ್ಥವಾಗಿ ನನಗೆ ಕೊಟ್ಟಿರುವನು-ಅಲ್ಲಿ ನಿತ್ಯವೂ ನೋಡುವದಕ್ಕೂ, ನೀರು ಹುಯ್ಯುವದಕ್ಕೂ ಒಣಗಿಸುವದಕ್ಕೂ ಕುಯ್ಯುವದಕ್ಕೂ ಹೋಗುತ್ತಿರುತ್ತೇನೆ. ಯಾದೃಚ್ಛಿಕ ದೈವಯೋಗದಿಂದಬಿದ್ದಿರುವಹೆಂಗಸಿನಹೆಣವನ್ನು ನೋಡಿದೆನೋಯಿಲ್ಲವೋ?

ಕಾರ್ಯ:—ಆವಪೆಣ ಮಡಿದಳೆಂದು ತಿಳಿದಪ್ಪುದು?

ಶಕಾರ॥ಅಧಿಕಾರಿಗಳೇ! ಅದೇನೋತಿಳಿಯದು. ಅಂಥಾವಳೇಪಟ್ಟಣಕ್ಕೆ ಅಲಂಕಾರವಾಗಿರುವ ವಸಂತಸೇನೆಯೆಂಬವಳು. ಅದರಿಂದವಳನ್ನೇ ಯಾರೋ ದುರ್ಮಾರ್ಗನು ಒಡವೆಯಆಶೆಗಾಗಿ ಅಲ್ಲಿ ಹೊಡೆದು ಕೊಂದಿರಬೇಕು; ನಾನಲ್ಲ" (ಎಂದುಅರ್ಧ ಹೇಳುತ್ತಾ ಮುಖವನ್ನುಮುಚ್ಚಿ ಕೊಳ್ಳುತ್ತಾನೆ)

ಕಾರ್ಯ:—ಓಹೋ ಪುರಪಾಲಕರ ಪ್ರಮಾದಂ! ಎಲೆ ಕಾಯಸ್ಥನೇ! 'ನಾನಲ್ಲ'ಎಂಬ ವ್ಯವಹಾರಪದಮಂ ಮುಂ ಬರೆವುದು.

ಕಾಯಸ್ಥ॥ ಅಪ್ಪಣೆಯಂತಾಗಲಿ (ಹಾಗೆಮಾಡಿ) ಬುದ್ಧೀ! ಬರೆದಾಯ್ತು-

ಶಕಾರ॥ (ಮನಸ್ಸಿನಲ್ಲಿ) ಓಹೋ! ಆತುರಪಟ್ಟದ್ದರಿಂದ ಈಗ ನನ್ನನ್ನು ನಾನೇ ಕೆಡಿಸಿಕೊಂಡ ಹಾಗಾಯ್ತು- ಆಗಲಿ - (ಪ್ರಕಾಶವಾಗಿ) ಏ ನಧಿಕಾರಿಗಳೇ! ನಾನೇ ನೋಡಿದೆನುಎಂಬುವಷ್ಟರಲ್ಲಿ ಯೇಗದ್ದಲಮಾಡುತ್ತೀರಿ. (ಎಂದುಕಾಲಿಂದಬರದ್ದನ್ನು ಅಳಿಸುತ್ತಾನೆ-)

ಕಾರ್ಯದರ್ಶಿ:—ನೀನೆಂತುಕಂಡೈ? ತೊಡವಿನಾಶೆಗೆ ಹೊಡೆದುದಂ-?

ಶಕಾರ॥ ಅಯ್ಯಾ! ಕೈಕಾಲುಗಳು ನೋಡಿದರೆ ಒಡವೆಯಿಟ್ಟಿದ್ದ ಗುರುತಿದೆ, ಒಡವೆಗಳ್ಳೊಂದೂ ಯಿಲ್ಲ, ಪೆಟ್ಟುತಗುಲಿದೆ ಅದರಿಂದಹಾಗೆಹೇಳಿದೆನು.

ಶ್ರೇಷ್ಠಿ ಕಾಯ॥ ಇದ್ದರೆ. ಯಿರಬಹುದು.

ಶಕಾರ॥ (ತನ್ನಲ್ಲಿ) ಸಂತೋಷ; ಸದ್ಯಕ್ಕೆ ಬದುಕಿಕೊಂಡೆನು.

ಶ್ರೇಷ್ಠಿ ಕಾಯ॥ ಬುದ್ಧೀ! ಈವ್ಯವಹಾರವು ಯಾಗಿರೆ ಸೇರಿದ್ದು?

ಕಾರ್ಯ:—ಈ ವ್ಯವಹಾರ ಮಿತ್ರರ ನಾಗಿಕ್ಕುಂ.

ಶ್ರೇಷ್ಠಿ॥ಹೇಗೆ?

ಕಾರ್ಯ:—ವಾಕ್ಯಮನನುಸರಿಸಿದುದೊಂದು, ಅರ್ಥಮನನುಸರಿಸಿದುದೊಂದು. ಅವಾಕ್ಯಾನುಸಾರದಿಂ ವಾದಿ ಪ್ರತಿವಾದಿಗಳ್ಗಂ, ಅರ್ಥಾನುಸಾರದಿಂ ಕಾರ್ಯದರ್ಶಿಗಳ್ಗಂ, ಸಂಬಂಧಂ.

ಶ್ರೇಷ್ಠಿ॥ ಆದರೆ ವಸಂತ ಸೇನೆಯ ತಾಯಿಗೆ ಈವ್ಯವಹಾರವು ಸಂಬಂಧಿಸಿದ್ದು-

ಕಾರ್ಯ:—ಅಂತೆಯೆಸರಿ- ಎಲೆ ಶೋಧನಕನೇ! ವಸಂತಸೇನೆಯ ತಾಯಂ ಬೆದರಿಸದೆಯೆ ಕರೆಯಲ್ವೇಳ್ಕುಂ.

ಶೋಧನ॥ ಅಪ್ಪಣೆ (ಎಂದುಹೋಗಿ ಸೂಳೆಯತಾಯಿ ಯಾದವೃದ್ಧೆಯಿಂ ಕೂಡಿಬಂದು) ಇತ್ತಬರಬೇಕವ್ವಾ? ಇತ್ತಬರಬೇಕು.

ವೃದ್ಧಳು॥ ನನ್ನಹುಡುಗಿ ತನ್ನಕೇಳಿಗಾಗಿ ಗೆಳೆಯನಮನೆಗೆ ಹೋಗಿದ್ದಾಳೆ. ಈ ಚಿರಂಜೀವಿಯೇಕೋ ಕರೆಯುತ್ತಾನೆ. ಅಭಿಮಾನದಿಂದ ಮನಸ್ಸು ಕಳವಳಪಡುತ್ತಿದೆ. ಆಗಲಿ. ಓಲಗದ ದಾರಿಯನ್ನು ತೋರಿಸಪ್ಪಾ;

ಶೋಧನ॥ ಅವ್ವಾ! ಹೀಗೆಬಾ (ಎಂದುಹೋಗುತ್ತಾನೆ) ಇದೇಓಲಗವು ಒಳಗೆ ಹೋಗಬಹುದು. (ಒಳಗೆ ಹೋಗುತ್ತಾರೆ).

ವೃದ್ಧಳು॥ (ಹತ್ತಿರಕ್ಕೆ ಬಂದು) ಭಾವಂದಿರಾದನಿಮಗೆ ಸುಖವಾಗಲಿ.

ಕಾರ್ಯ:—ಭದ್ರೆಯೇ! ಸ್ವಾಗತಮಕ್ಕೆ. ಕುಳ್ಳಿರಲ್ತಕ್ಕುದು.

ವೃದ್ಧ॥ ಹಾಗೇ ಆಗಲೀ (ಎಂದುಕೂತುಕೊಳ್ಳುತ್ತಾಳೆ)

ಶಕಾರ॥ ಬಂದೆಯೋ ಮುದಿತೊತ್ತಿನಮಗಳೇ! ಬಂದೆಯೋ?

ಕಾರ್ಯ:—ನೀನೇವಸಂತಸೇನೆಯ ತಾಯೆಯಲ್ತೆ?

ವೃದ್ಧಳು॥ ಹೌದು.

ಕಾರ್ಯ:—ವಸಂತಸೇನೆಯೀಗಳೆತ್ತ ಪೋದಳ್?

ವೃದ್ಧಳು॥ ಮಿತ್ರನಮನೆಗೆ.

ಕಾರ್ಯ:—ಆಕೆಯಮಿತ್ರನಪೆಸರೇಂ?

ವೃದ್ಧಳು॥ (ತನ್ನಲ್ಲಿ ತಾನು) ಹೀಗೆ ಹೇಳುವದು ಬಹಳ ನಾಚಿಕೆಕೇಡಲ್ಲವೆ. (ಪ್ರಕಾಶವಾಗಿ) ಈ ಯರ್ಥವು ಜನಕ್ಕೆ ಮರೆಯಾಗಿರಬೇಕಲ್ಲದೆ ಅಧಿಕಾರಿಗಳಿಗೆ ಅಲ್ಲ-

ಕಾರ್ಯ:—ನಾಣ್ಚಿಕೆವೇಡ. ವ್ಯವಹಾರಂನಿನ್ನಂ ಕೇಳ್ವುದು

ಶ್ರೇಷ್ಠಿಕಾಯಸ್ಥರು॥ ವ್ಯವಹಾರಕ್ಕಾಗಿ ಹೇಳಿವರೆ ದೋಷವೇನುಹೇಳು,

ವೃದ್ಧಳು॥ ವ್ಯವಹಾರವೇನು? ಹಾಗಾದರೆ ಭಾವಂದಿರು ಕೇಳಬಹುದು. ಸಾರ್ಥವಾಹನಾದ ವಿನಯದತ್ತನ ಮೊಮ್ಮಗನಾಗಿಯೂ, ಸಾಗರದತ್ತನ ಮಗನಾಗಿಯೂ, ಪ್ರಸಿದ್ಧನಾಗಿರುವ ಆರ್ಯಚಾರುದತ್ತನೆಂಬ ಬ್ರಾಹ್ಮಣನು ಅಂಗಡಿಬೀದಿಯಲ್ಲಿದ್ದಾನೆ. ಅಲ್ಲಿ ನನ್ನಮಗಳು ಪ್ರಾಯದ ಸುಖಾನುಭವವನ್ನು ಮಾಡುತ್ತಿರುವಳು.

ಮೃಚ್ಛಕಟಿಕಪ್ರಕರಣದಲ್ಲಿ

ಶಕಾರ॥ ಆರ್ಯರ್! ಕೇಳಿದಿರಾ! ಆ ಮಾತನ್ನು ಬರದು ಕೊಳ್ಳಿರಿ. ನನಗೂ ಚಾರು ದತ್ತನಿಗೂ ವಿವಾದವಾದಹಾಗಾಯ್ತು.

ಶ್ರೇಷ್ಠಿ॥ ಚಾರುದತ್ತನು ಮಿತ್ರನಾಗಿರೆ ದೋಷವೇನು?

ಕಾರ್ಯ:—ವ್ಯವಹಾರವಿದು ಚಾರುದತ್ತನನೊಂದುಗುಂ

ಶ್ರೇಷ್ಠಿ॥ ಹೌದು- ಹಾಗೆಯೇ ಕಾಣುತ್ತೆ

ಕಾರ್ಯ:—ಎಲೆ ಧನದತ್ತನೇ! ವಸಂತಸೇನೆ ಆರ್ಯಚಾರುದತ್ತನ ಮನೆಗೆ ಪೋದಳೆಂದು ಬರೆಯಯ್. ಇದೇ ವ್ಯವಹಾರಕ್ಕೆ ಮೊದಲನೆಯ ಪಾದಂ॥ ಏನಾರ್ಯಚಾರುದತ್ತನುಮನಾಂ ಕರೆಯಿಸಲಕ್ಕುಮೆ? ಆದೊಡೇಂ? ವ್ಯವಹಾರಂ ಕರೆದಪ್ಪುದು. ಎಲೆ ಶೋಧನಕನೆ! ನೀಂ ಪೋಗಿ ಆರ್ಯಚಾರುದತ್ತನಂ ಉದ್ವೇಗವಿಲ್ಲದೇ ಸ್ವೇಚ್ಛೆಯಿಂದ ಬರ್ಪಂತೆ ಪ್ರಸ್ತಾವದಿಂ ಕಾರ್ಯದರ್ಶಿಗಳ್ ತಮ್ಮಂ ನೋಡ ಲೆಳಸಿದಪರೆಂದು ಆದರದೊಡನೆ ಕರೆಯಯ್.

ಶೋಧನ॥ ಅಪ್ಪಣೆಯಂತಾಗಲಿ (ಎಂದು ಹೊಗಿ) ಚಾರುದತ್ತನೊಡನೆ ಬಂದು ಆರ್ಯನು ಬರೆ (ಬೇಕು ಬರಬೇಕು.)

ಚಾರು:—(ಯೋಚಿಸಿ) ಕಂ॥ ಚರಿತ್ರಮನೆನ್ನದು ಕುಲಮಂ

ವರಶೀಲಮುಮಂ ಸಮಂತು ಪರಿಶೀಲಿಸಿದಾ

ನರಪತಿ ತನ್ನಂ ಪಿಸದಂ

ಕರೆದುದು ಮಿದು ತನ್ನವಸ್ಥೆಯಂ ಶಂಕಿಪ್ಪುದೈ॥ ೨೨೬॥

(ತನ್ನೊಳ್ ತರ್ಕಿಸುತ.)

ಕಂ॥ ಸೆರೆತಪ್ಪಿ ತನ್ನ ತೇರೊಳ್

ಸರಣೆಯ ವಶದಿಂದೆ ಬಂದನಂತಾಂ ಬಿಡಿಸಲ್.

ಅರಸಂ ಚಾರೇಕ್ಷಣದಿಂ

ದರಿದನೊ ಏನಿಂತು ತನ್ನ ಕರೆಯಿಸಿಕೊಳ್ವಂ॥ ೨೨೭॥

ಮೇಣೇಂ ವಿಚಾರದಿಂದೇಂ? ವ್ಯವಹಾರಮಂಟಪಮನೇಪ್ಪುಗುವೆಂ. ಎಲೆ ಶೋಧನಕನೇ! ವ್ಯವಹಾರಮಂಟಪದ ಬಟ್ಟೆಯಂ ತೋರಿಸು;

ಶೋಧನ॥ ಬುದ್ಧಿ! ಬರಬೇಕು ಬರಬೇಕು (ಎಂದು ಹೋಗುತ್ತಾರೆ)

ಚಾರುದ:—(ಶಂಕೆಯಿಂದೆ) ಮತ್ತಮಿದೇಂ?

ಕಂ॥ ನಾದಿಪ್ಪುದು ಕಾಗೆ ತಬ್ಬಂ

ಸಾದಿಗಳ ಧಿಗ್ಗತಿಗೆ ಕರೆವರೆನ್ನಂ ತ್ವರೆಯಿಂ

ಆದಮುದಿರ್ಪುದೆಡಗ

ಣ್ಣೀದುಶ್ಶಕುನಂಗಳೆನ್ನ ನಳಲಿಪ್ಪುದಲ್ತೇ॥ ೨೨೮॥

ಶೋಧನ॥ ಬುದ್ಧಿ! ಅಂತಾಯೋಚನೆಯೇನೂ ಬೇಡ ಯಥೇಷ್ಟವಾಗಿ ನಿಶ್ಶಂಕೆಯಿಂದ ಬರಬೇಕು.

ಚಾರು:—(ನಡೆದು ಮುಂದೆ ನೋಡಿ) ಕಂ॥ ತರಣಿಯ ನೋಡುತ ನೊಣಗಿದ
ಮರದೊಳ್ಕುಳ್ಳಿರ್ದ್ದೊಂದು ಚಿರಜೀವಿ ಭಯಂ
ಕರವಾದ ವಾಮದೃಷ್ಟಿಯು
ನುರವಣಿಸುತ ವೆನ್ನನಿಂತು ನಿಟ್ಟಿಸುತಿರ್ಕ್ಕುಂ ॥ ೨೨೯॥

(ಮತ್ತೊಂದು ಕಡೆ ನೋಡಿ) ಏಲೆಲಾ! ಇದೇನಿಂತೆಲರುಣಿಯಕ್ಕುಮೋ?

ಕಂ॥ ದಿಟ್ಟಿಯನೆನ್ನೊಳಗಿರಿಸುತೆ
ಸೊಟ್ಟನೆ ಮೈಯಿಡುತ್ತಿದಿರ್ಪೊಲೂದುತೆ ಪೆಡೆಯಂ॥
ಸಿಟ್ಟಿಂ ನಾಲಗೆ ಸವರುತೆ
ಬಟ್ಟೆಯೊಳೊರಗಿರ್ದ್ದ ಕೃಷ್ಣಫಣಿಯಿದಿರೊಬರ್ಕ್ಕುಂ॥ ೨೩೦॥

ಮತ್ತಂ॥ ವೃ॥ ಪೊಡವಿಯೊಳಾರ್ಕೆ ಕಾಲದು ಜಗುಳ್ದ್ದಪುದೀನೆಲಮಂತು ನಾಂದುವಿ
ಲ್ಲಡಿಗಡಿಗಿಂತು ಟೇಯೊಡದತೋಳ್ ವೃಕವಂ ನೆರೆ ಕಂಪಿಸಿತ್ತು ಮೇಣ್
ಬಿಡದೆ ವಿಹಂಗವೃಂದಮದು ಕೂಗುಗುಮಾರ್ದ್ದುಗಡಾಯಿದೆಲ್ಲಮಂ
ನಡೆವಗೆ ಘೋರಮೃತ್ಯುವನಪೇಳ್ವುದು ನಿಶ್ಚಯಮಿಲ್ಲಿ ಶಂಕೆಯೇಂ॥ ೨೩೧॥
ಆದುದರಿಂದೆಂತುಂ ದೇವತೆಗಳೇ ಕುಶಲಮನೆಸಗುಗೆ.

ಶೋಧನಕ॥ ಬುದ್ಧಿ! ಇದೇ ಬಲಗವು. ಒಳಗೆ ಬರಬೇಕು

ಚಾರುದ:—(ಒಳಪೊಕ್ಕು ಎತ್ತಲುಂ ನೋಡಿ) ಆಹ! ವ್ಯವಹಾರಮಂಟಪದ ಸಿರಿಯನೇಂ ಬಣ್ಣಿಪೆಂ. ಇಲ್ಲಿಯಾದೊಡೆ:—

ವೃ॥ ಸಲಿಲಂ ಯೋಚಿಪಮಂತ್ರಿಗಳ್, ಜಲಜಮೇ ಭದ್ರಾಸನಂ, ನಕ್ರಗಳ್
ಕೆಲದಲ್ಲಿರ್ಪ್ಪಚರರ್, ಗಜಾಶ್ವತತಿಯೇ ಯಾದೋಗಣಂ, ದೂತರೇ
ಅಲೆಗಳ್, ಪಕ್ಷಿಗಳಾರ್ವ್ವವಾದಿಗಳೆ, ಪಾವ್ ಕಾಯಸ್ಥನುಂ, ನೀತಿಗಳ್
ಕಲಕಿರ್ಪ್ಪಾತಟಮಾಗೆ, ಸಿಂಧುವೆನಿಕುಂ ಹಿಂಸ್ರಂಗಳಿಂದೋಲಗಂ॥ ೨೩೨॥

ಅಂತಕ್ಕೆ. (ಎಂದು ಮುಂದೆಪುಗುತೆ, ತಲೆತಾಗಿದುದಂ ನಟಿಸಿ ಯೋಚನೆಯಿಂ)
ಅಹಹ! ಇದುವುಮೊಂದು॥ ಕಂ॥ ಅಡಿಗಡಿಗದಿರ್ದ್ದಪುದೆನ್ನೀ
ಯೆಡಗಣ್ಣಿಂನಾಡೆ ಕಾಗೆ ಯರುಚುತ್ತಿರ್ಕ್ಕುಂ
ತೊಡಕಿತು ಬಟ್ಟೆಯೊಳಾಫಣಿ
ಬಿಡುಗಣ್ಣರೆಯಿದನನಳಿಸಿ ಭವ್ಯಮನೀಗೆ॥ ೨೩೩॥
(ಎಂದು ಪೊಕ್ಕಪಂ)

ಮೃಚ್ಛಕಟಿಕಪ್ರಕರಣದಲ್ಲಿ

ಕಾರ್ಯ:—ಈತನೇ ಚಾರುದತ್ತನೋ? ಅಂತಾದೊಡೆ:—

ಕಂ॥ ಕೆಡೆಗಣ್ ಕೈ ಮೂಗು ನೊಸಲ್
ಕಡುಪೆರ್ಚಿತು ರೂಪಿದಂ ತಕಾರಣದೋಷ
ಕ್ಕೆಡೆಗಜಗವಾಶ್ವನರರೊಳ್
ಬಿಡದು ನಿಜಾಕಾರಮುಚಿತ ವೃತ್ತಮನೆಂದುಂ॥ ೨೪॥

ಚಾರು:—ಅಧಿಕಾರಿಗಳ್ಗೆ ಮಂಗಳಮಕ್ಕೆ! ಎಲೆನಿಯುಕ್ತರ್ಕೆ ತಮಗೆ ಕುಶಲಮೇ?

ಕಾರ್ಯ:—(ತ್ವರೆಯಿಂ) ಆರ್ಯಂಗೆ ಸ್ವಾಗತಮಕ್ಕೆ- ಎಲೆಶೋಧನಕಾ! ಆರ್ಯಂಗಾ ಸನಮಂ ತಂದಿರಿಸು;

ಶೋಧನ॥ (ಆಸನಮಂ ತಂದು) ಇದೋ ಆಸನವು. ಬುದ್ಧಿ! ಯಿಲ್ಲಿ ಕೂತುಕೊಳ್ಳಬೇಕು.

ಚಾರು:—(ಕುಳಿತುಕೊಂಡಪಂ)

ಶಕಾರ॥(ಕೋಪದಿಂದ) ಬಂದೆಯಾ? ಸ್ತ್ರೀಘಾತುಕನೇ! ಬಂದೆಯಾ? ಅಯ್ಯಾ! ಈ ವ್ಯವಹಾರವೇನು ನ್ಯಾಯ್ಯವೋ! ಧರ್ಮ್ಯವೋ! ಸ್ತ್ರೀಹತ್ಯೆ ಮಾಡಿದವನಿಗೂ ಆಸನವನ್ನು ಕೊಡುತ್ತೀರಲ್ಲ. (ಗರ್ವದಿಂದ) ಆಗಲಿ. ಕೊಡಿ:

ಕಾರ್ಯ:—ಆರ್ಯ ಚಾರುದತ್ತನೇ! ಈಕೆಯ ಮಗಳೊಡನೆ ನಿನಗೆ ಪ್ರೀತಿಯೋ ಪ್ರಣಯಮೋ ಪ್ರಸಕ್ತಿಯೋ ಅವುದಾದೊಡಮಿಕ್ಕುರ್ಮೇ?

ಚಾರು:—ಆರ ಮಗಳೊಡನೆ!

ಕಾರ್ಯ:—ಈಕೆಯ (ಪಂದು ವೃದ್ಧೆಯಂ ತೋರಿಸುತ್ತಾನೆ.)

ಚಾರು:—(ನೋಡಿಯೇಳ್ದು) ಆರ್ಯೆಯೇ ಮಣಿದಪೆಂ;

ವೃದ್ಧೆ॥ ಮಗನೆ! ಬಹುಕಾಲಬದುಕಪ್ಪಾ. (ತನ್ನೊಳಗೆ) ಇವನಲ್ಲಿ ಪ್ರೀತಿ ಮಾಡಿದ್ದರಿಂದ ಮಗಳ ಪ್ರಾಯವು ಸಾರ್ಥಕವಾಯಿತು.

ಕಾರ್ಯ:—ಆರ್ಯನೇ! ಗಣಿಕೆ ನಿನಗೆ ಕೆಳದಿಯೋ!

ಚಾರು:—(ನಾಣ್ಚಿ ಕೆಯ್ಯನಭಿನಯಿಪಂ)

ಶಕಾರ॥ ನಾಚಿಕೆಯನ್ನೋ ಭಯವನ್ನೋ ಮೇಲೆಹಾಕಿಕೊಂಡು ಮಾಡಿದ ಕೆಲಸವನ್ನು ಮರೆಮಾಚುತ್ತಾನೆ.

ಶ್ರೇಷ್ಠಿಕಾಯ॥ ಆರ್ಯ ಚಾರುದತ್ತನೇ! ಹೇಳು. ನಾಚಿಕೆ ಯೇಕೆ? ಇದು ವ್ಯವಹಾರವಲ್ಲವೇ?

ಚಾರು:—(ಲಜ್ಜೆಯಿಂದೆ) ಎಲೆ ಅಧಿಕಾರಿಗಳೇ? ಇಂತಪ್ಪುದಂ ಪೇಳ್ವುದೆಂತು? (ತನ್ನೊಳ್) ವೇಶ್ಯೆ ತನ್ನ ಕೆಳದಿಯೆಂದುಸಿರಲಕ್ಕುಮೆ? ಮೇಣಾದೊಡೆ ಪ್ರಾಯಮಿಲ್ಲಿಯಪರಾಧಿಯಾಕ್ಕುಂ. ಚರಿತ್ರಮಲ್ಲಂ-

ಕಾಯರ್ಥ:—ಆರ್ಯನೇ! ಕಂ॥ ಕುದುಗುಂ ವ್ಯವಹಾರಂತಾ

ನೆಡರಂ ಸಾಕ್ಷಿಪ್ಪುಹಾರ್ದ ಮಹಸತ್ಯಮನೇ
ನುಡಿನೀ ಧೈರ್ಯದಿನೀಗಳ್
ತಡೆಯಿಲ್ಲದೆ ಫಲಮನಿಲ್ಲಿ ಯಾರುಂತಿಳಿಯಲ್॥ ೨೩॥

ಚಾರು:—ಅಧಿಕಾರಿಗಳೇ! ಆರೊಡನೆ ಯೆನಗೆ ವ್ಯವಹಾರಂ?

ಶಕಾರ॥(ಆಟೋಪದಿಂದ) ಎಲಾ! ನನ್ನಸಂಗಡವ್ಯವಹಾರ;

ಚಾರು:—ನಿನ್ನೊಡನೆನಗೆವ್ಯವಹಾರಂ ದುಸ್ಸಹಮೋಸರಿ;

ಶಕಾರ॥ಎಲಾಸ್ತ್ರೀಘಾತಕನೇ? ಪಟ್ಟಣಕ್ಕೆ ಅಲಂಕಾರವಾಗಿದ್ದ ಅಂಥಾವಸಂತಸೇನೆ ಯನ್ನು ಕೊಂದು ಈಗತಪ್ಪಿಸಿ ಕೊಳ್ಳಬೇಕೆಂದು ಯೋಚಿಸುತ್ತೀಯಾ?

ಚಾರು:—ನೀನಸಂಗತನಲ್ತೇ.

ಕಾಯರ್ಥ:—ಆರ್ಯಚಾರುದತ್ತನೇ! ಇವನಿಂದೇಂ? ನನ್ನಿಯಂಪೇಳ್ ಬೆಲೆವೆಣ್ ನಿನಗೆ ಕೆಳದಿಯೋ?

ಚಾರು॥ ಅಂತಕ್ಕುಂ.

ಕಾಯರ್ಥ:—ಆರ್ಯನೇ! ವಸಂತಸೇನೆಯೆತ್ತ ಪೋದಳ್.

ಚಾರು:—ಮನೆಗೆಪೋದಳ್

ಶ್ರೇಷ್ಠಿಕಾಯಸ್ಥರು॥ ಯಾವಾಗಹೋದಳು? ಹೇಗೆಹೋದಳು? ಹೋಗುವಾಗಯಾರುಕೂಡ ಇದ್ದವರು?

ಚಾರು:— (ತನ್ನೊಳು) ಏಂಪ್ರಚ್ಛನ್ನಮಾಗಿಪೋದಳೆಂದು ಪೇಳಲೋ?

ಶ್ರೇಷ್ಠಿ॥ಅಯ್ಯಾ! ಹೇಳು-

ಚಾರು:—ಮನೆಗೆ ಪೋದಳ್- ಮತ್ತೇಂಪೇಳಲಕ್ಕುಂ?

ಶಕಾರ॥ನಮ್ಮ ಪುಷ್ಪಕರಂಡಕ ಜೀರ್ಣೋದ್ಯಾನದಲ್ಲಿ ಹಣದಾಶೆಗೆ ಬಲಾತ್ಕಾರದಿಂದ ಕೊಂದು, ಈಗ ಮನೆಗೆಹೋದಳು ಎಂದುಹೇಳುವಿಯಲ್ಲವೆ?

ಚಾರು:—ಆಃ! ಅಸಂಬದ್ಧಪ್ರಲಾಪಿಯೇ!

ಕಂ॥ ಮುಗಿಲ್ಗಳನೀರಿಂ ಗಗನದೆ
ಮಿಗೆನೆನೆಯದೆ ಚಾಷದಗ್ರಪಕ್ಷವಪೋಲ್ತೀ
ಮೊಗ ಮೊರ್ವೆಯೆ ನಿನ್ನತು ಸು
ವ್ಮಗೆಹೇಮಂ ತಾಬ್ಜದಂತೆ ನಿಷ್ಕಳಮಾಯ್ತೇಂ॥ ೨೪॥

ಕಾಯರ್ಥ:—(ಜನದಬಳಿಯಲ್ಲಿ)ಕಂ॥ ಹಿಮವಚ್ಛೈಲದ ಚಲನಂ
ಸಮುದ್ರಮುಂಮೀರೆದಷ್ಟಿ ಪರಿವುದು, ಮೆಲರಂ

ಅಮವೆ, ಳಿದು ಬಂಧಿಸುವುದುಂ
ಸಮವಪ್ಪುದು ಚಾರುದತ್ತ ಸಂದೂಷಿಪುದುಂ ॥ ೨೩೩ ॥

(ಪ್ರಕಾಶವಾಗಿ) (೨೩೪) 'ಕಡೆಗಣ್ಮಾಗು' ಎಂಬ ಪದ್ಯವನ್ನು ಹೇಳುವ
ಶಕಾರ॥ ಏನುಪಕ್ಷಪಾತದಿಂದ ವ್ಯವಹಾರವನ್ನು ನೋಡುತ್ತೀರೋ?
ಕಾರ್ಯ:—ಮೂರ್ಖನೇ ಪೋಗುತ್ತ-

ವೃ॥ ನಿನ್ನನಾಲಗೆ ಬೀಳದೇತಕೊ? ನೀಚ! ಸಂಸ್ಕೃತಿಯೋದಿಯುಂ
ನಿನ್ನಕಂಗಳು ಮೇಕೆಪೋಗವೊ? ನೋಡಿಯುಂರವಿಬಿಂಬಮಂ
ನಿನ್ನಕೈಗಳೆ ಸುಟ್ಟುಪೋಗವು? ದೀಪ್ತವಹ್ನಿಯೊಳಗಿರಿಸಿ
ನಿನ್ನದೇಹವುದೆಂತುಪೋಗದೊ! ಸಾಧುದೂಷಣೆಗೈದೊಡಂ ॥ ೨೩೫ ॥
ಆರ್ಯಚಾರುದತ್ತನು ಮಕಾರ್ಯಮ ನೆಂತುಮಾಳ್ಪಂ?
ವೃ॥ ಉದಧಿಗೆಜಲವೊಂದೇ ನಿಂದುದೆಂ ಬಂತೆಗೈದೀ
ಪದೆಯುದಬಡವರ್ಗ್ಗಂ ಕೊಟ್ಟನೊಪ್ಪೊನ್ನನಾವಂ
ಮುದದಿನವನದೆಂತು ದ್ವೇಷಿಯುಂಗೈಯ್ಯಪಾಪಾ
ಪದಗೆಲಸಮನುಂತಾಂ ಗೈವನರ್ಥಕ್ಕೆ ಪ್ರಾಜ್ಞಂ॥ ೨೩೬॥

ಶಕಾರ॥ ಏನುಪಕ್ಷಪಾತದಿಂದ ವ್ಯವಹಾರವನ್ನು ನೋಡುತ್ತೀರೋ!
ವೃದ್ಧಳು॥ ಎಲಾ ಹತಾಶನೇ! ಯಾವಮಹಾತ್ಮನು ತನ್ನಲ್ಲಿಟ್ಟಿದ್ದ ಪಡೆವೆಯ ಗಂಟನ್ನು ಕಳ್ಳರು ಹೊತ್ತುಕೊಂಡುಹೋದಾಗ ಅದಕ್ಕೆಬದಲಾಗಿ ಚತುಸ್ಸಮುದ್ರಸಾರಭೂತವಾದ ರತ್ನಾವಳಿಯನ್ನೇ ಕೊಟ್ಟನೋ? ಅಂಥಾಧನ್ಯನು ಈಗಹಣಕ್ಕಾಗಿ ಯಿಂಥಾಪಾಪದಕೆಲಸವನ್ನು ಮಾಡ್ಯಾನೇ? ಅಯ್ಯೋ ಮಗುವೇ! ವಸಂತಸೇನೇ ಬಾಮ್ಮಾ! (ಎಂದುಅಳುತ್ತಾಳೆ)
ಕಾರ್ಯ:—ಆರ್ಯಚಾರುದತ್ತನೇ! ಆಕೆಯೇಂತೇರಿಂಪೋದಳೋ? ನಡೆದುಪೋದಳೋ?
ಚಾರು:—ಆರ್ಯರೇ! ಎನ್ನಿದಿರೊಳ್ ಪೋಗಲಿಲ್ಲಂ. ತೇರೊಳ್ಪೋದಳೋ? ನಡೆದುಪೋದಳೋ! ಆನರಿಯೆಂ.

[ಕೋಪದೊಡನೆ ವೀರಕಂಬಂದಪಂ]

ವೀರಕ॥ ಕಂ॥ ಚರಣದವೊದೆಗಳ ಹೊಂದುತ
ಪರಿಭವ ದವಮಾನದಿಂದ ವೈರವಬೆಳಸೀ
ಪರಿತಾಪ ಗೊಂಡನನಗೀ
ಯಿರುಳೆಲ್ಲವು ಕಳೆದುಹೇಗೊ ಬೆಳಕಾಯ್ತು ಕಣಾ ॥ ೨೩೭॥

ಇನ್ನುಹೋಗಿ ಕಾರ್ಯದರ್ಶಿಗೆ ಬಿನ್ನಹಮಾಡುತ್ತೇನೆ. ಇದೋವ್ಯವಹಾರವು (ಎಂದುಪ್ರವೇಶಿಸಿ) ಬುದ್ಧಿಪಾದಕ್ಕೆ ಬೀಳುತ್ತೇನೆ.

ಕಾರ್ಯ:—ಪುರಪಾಲನಾಧಿಕಾರಿಯಾದ ವೀರಕನೋ! ಎಲೆ ವೀರಕನೇ! ಅದೇಂ ಬಂದೆ?

ವೀರಕನು॥ ಬುದ್ಧೀ! ಸೆರೆತಪ್ಪಿಸಿ ಕೊಂಡುಹೋದ ಆರ್ಯಕನನ್ನು ಹುಡುಕುತ್ತಾ ಮುಸುಕುಹಾಕಿದ್ದ ಬಂಡಿಯುಬರಲು, ಅದರನ್ನು ವಿಚಾರಿಸುತ್ತ ಎಲೆ ಚಂದನಕನೇ ನೀನುಬಂಡಿಯನ್ನು ನೋಡಿದ್ದೀಯಷ್ಟೆ? ನಾನೂನೋಡಬೇಕು ಎಂದು ಬರುವಷ್ಟರಲ್ಲಿಯೇ ಅವನುಕಾಲಿಂದೊದ್ದು ಕೆಡವಿದನು. ನಡೆದ ಸಂಗತಿಯನ್ನು ತಿಳಿಸಿ, ದೆನು ದಣಿಗಳಚಿತ್ತ?

ಕಾರ್ಯ:—ಎಲೈ? ಆತೇರಾರದೆಂದು ತಿಳಿದುಕೊಂಡೆಯಾ?

ವೀರಕ॥ ಬುದ್ಧೀ! ಬಂಡಿ ಆರ್ಯಚಾರುದತ್ತನದು. ಅದರಲ್ಲಿ ವಸಂತಸೇನೆಹತ್ತಿರುವಳು. ವಿಹಾರಾರ್ಥವಾಗಿ ಪುಷ್ಪಕರಂಡಕವೆಂಬ ಹಳೆಯತೋಟಕ್ಕೆ ಹೋಗುತ್ತಾಳೆಂದು ಬಂಡಿಯಾಳು ಹೇಳಿದನು.

ಶಕಾರ॥ ಆಯ್ಯಾ! ಕೇಳಿದಿರೋ ಮತ್ತಾ ಕೇಳಿ.

ಕಾರ್ಯ:—ಕಂ॥ ಸಲೆವಿಮಲವಾದ ಜ್ಯೋತ್ಸ್ನದ
ಕಲೆತುಂಬಿದ ಸೆರೆಯುನಿಂತು ರಾಹುಗ್ರಸಿಕುಂ
ಮಲ ಮಿನಿಸಿಲ್ಲದ ಜಳವುಂ
ಕಲಂಕಿ ಪೋದಪ್ಪುದುಕೂಲ ಪಾತಕೆಕೊಳದೊಳ್॥೨೪೧॥

ವೀರಕನೇ! ನಿನ್ನ ನ್ಯಾಯವಿಚಾರವುಂ ಬಳಿಕಮಾಳ್ಪೆವು. ಅದೋಬಾಗಿಲಲ್ಲಿ ಕುದುರೆಯಿರ್ಕ್ಕುಂ-ನೀನೀಗಳದನೇರಿ. ಪೋಗಿ ಪುಷ್ಪಕರಂಡಕೋದ್ಯಾನದಲ್ಲಿ ಯೆಲ್ಲಿಯಾನುಂ ಸ್ತ್ರೀದೇಹವೊಂದು ಕೆಡೆದುದೇನೋ? ತಿಳಿದ್ಬೈತರಲ್ತಕ್ಕುದು.

ವೀರಕ॥ ಬುದ್ಧೀ! ಅಪ್ಪಣೆಯುಂತಾಗಲಿ (ಎಂದು ಹೋಗಿ, ಮರಳಿ ಬಂದು) ಹೋಗಿದ್ದೆನು. ಅಲ್ಲಿ ಒಂದು ಹೆಂಗಸಿನ ಹೆಣವನ್ನಾನೋಡಿದೆನು.

ಶ್ರೇಷ್ಠಿಕಾಯಸ್ಥರು॥ ನಿನಗೆಹೆಂಗಸಿನ ಹೆಣವೆಂದು ಹೇಗೆ ತಿಳಿಯಿತು?

ವೀರಕ॥ ತಲೇಕೂದಲಿಂದಲೂ ಕೈಕಾಲುಗಳಿಂದಲೂ,

ಕಾರ್ಯ:—ಚಿಃ! ಅಕ್ಕಟಾ! ಲೋಕ ವ್ಯವಹಾರದ ವೈಷಮ್ಯ ಮೆಂತುಟೋ?

ಕಂ॥ ಎಂತೆಂತು ವಿಚಾರಿಸಿದೊಡ
ಮಂತಂತುರೆ ಕಷ್ಟವೊಂದೆ ಕಾಣ್ಗುಂ ವ್ಯವಹಾ
ರಾತನ್ಯಾಯವು ಮೊಂದಿತು
ಛೆಂತಿಪ್ಪುದೀಬುದ್ಧಿ ಕೆಸರೊಳಿರ್ದಪ ಪಶುವೋಲ್॥೨೪೨॥

ಮೃಚ್ಛಕಟಿಕಪ್ರಕರಣದಲ್ಲಿ

ಚಾರು:—(ತನ್ನೊಳಗೆ) ಕಂ॥ಅಳಿಗಳ್ ಸ್ಪಷ್ಟ ಮಲದೊಳ್
ನಿಳಿದಪ್ಪುವೋ ಒಮೇಯೆಂತು ಬಂದುಂ ಪೀರಲ್
ತಿಳಿಯು ಲ್ಪರರೊಳ ನರ್ಥಂ
ಗಳುವಂತೆ ವಿಪತ್ತಿಕಾಲ ದೊಳ್ಪ ಚಾಗುವ್ವು॥೨೪೩॥

ಕಾಯರ್:—ಆರ್ಯಚಾರುದತ್ತನೇ! ನನ್ನಿಯನುಸಿರ್ವೈ.

ಚಾರು:—ಆರ್ಯರೇ! ಕಂ॥ ಪರಗುಣ ಮತ್ಸರಿ ದುಷ್ಟಂ
ಪೆರರಂ ಕೊಲ್ವೆಣಿಕೆ ಯುಳ್ಳನುಂ ರಾಗಾಂಧಂ,
ಬರಿದಾಜಾತಿಯ ದೋಷದಿ
ನೊರೆವನದೇಂ ಪಿಡಿಯಲರ್ಹ ಮೇಯುವಿಚಾರ್ಯಂ॥೨೪೪॥

ವೃತ್ತಂ॥ ಅಲರುಳ್ಳ ಲತೆಯನುಂ ತಾ
ನಲಗೊರ್ಸುಗ ಮೆಳೆದು ಪಿಡಿದು ತರಿಯನೊಯ್ವಾವಂ,
ಅಳಿನೀಲ ದೀರ್ಘಕೇಶವು
ನೆಳೆಯುತ ಪಿಡಿದಳ್ವೆಪೆಣ್ಣ ನವನೆಂತಿರಿವಂ॥೨೪೫॥

ಶಕಾರ॥ ಅಯ್ಯಾ ಕಾರ್ಯದರ್ಶಿಗಳೇ! ಏನು ಪಕ್ಷಪಾತದಿಂದ ವ್ಯವಹಾರವನ್ನು ನೋಡುತ್ತೀರಲ್ಲ? ಸ್ತ್ರೀಘಾತುಕ ನಾದೀ ನೀಚ ಚಾರುದತ್ತನನ್ನು ಇನ್ನೂ ಆಸನದ ಮೇಲೆ ಕೂಡಿಸಿರುವಿರಲ್ಲವೆ.

ಕಾರ್ಯ:—ಎಲೆಶೋಧನಕನೇ! ಇಂತೆಸಗೈ [ಶೋಧನಕನಂತುಗೈದಪಂ]

ಚಾರು:—ವಿಚಾರಿಸುಗೆ ಅಧಿಕಾರಿಗಳ್ ವಿಚಾರಿಸುಗೆ. [ಎಂದು ಆಸನದಿಂದಿಳಿದು ನೆಲದಲ್ಲಿ ಕುಳ್ಳಿರ್ದಪಂ]

ಶಕಾರ॥ (ತನ್ನೊಳಗೆ ಸಂತೋಷದಿಂದ ಕುಣಿಯುತ್ತ) ಹೀಹೀ! ನಾನುಮಾಡಿದಪಾಪವನ್ನು ಅವನತಲೆಯಮೇಲೆಕಡೆವಿದೆನು. ಆದ್ದರಿಂದ ಚಾರುದತ್ತನು ಎಲ್ಲಿ ಕೂತಿರುವನೋ ಅಲ್ಲಿ ಕೂತುಕೊಳ್ಳುವೆನು. [ಹಾಗೆಮಾಡಿ] ಎಲಾ! ಚಾರುದತ್ತನೇ! ನನ್ನನ್ನು ನೋಡುನೋಡು ನನ್ನಿಂದಕೊಲ್ಲಲ್ಪಟ್ಟಳೆಂದು ಹೇಳುಹೇಳು,

ಚಾರು:—ಆರ್ಯರಾದಧಿಕಾರಿಗಳೇ! "ಪರಗುಣಮತ್ಸರಿ" ಮುಂತಾದ ಪೂರ್ವೋಕ್ತ ಪದ್ಯಗಳಂ ಪೇಳ್ದಪಂ; ನಿಟ್ಟುಸಿರ್ಬಿಡುತ್ತೆ ತನ್ನೊಳೆ:—

ವೃ॥ ಎಲೆಮೈತ್ರೇಯನೆ! ಏನಿದಿಂದ ವಶದಿಂದೆನ್ನಲ್ಲಿಡ ಬಂದುದ್ದೈ!
ಎಲಗೆಬ್ರಾಹ್ಮಣಿ! ನಿರ್ಮಲದ್ವಿಜಕುಲೋದ್ಭೂತೇ ವಲಂ ಸಾಧ್ವಿಯೇ!
ಎಲೆ ಹಾ! ಪುತ್ರನೆ ರೋಹಸೇನ! ಎನಗಾದೀಯಾಪದಂ ಕಾಣಲಿ
ಲ್ಲಲೆನೀಂ ನಿಷ್ಫಲದಾಟದ ವ್ಯಸನದಿಂದಾನಂದಿಪ್ಪೈ ನಿಚ್ಚವುಂ॥೨೪೬॥

ಆವಸಂತ ಸೇನೆಯ ವೃತ್ತಾಂತ ಮಂ ತಿಳಿದುಬರಲ್ಕೆ ಮಿತ್ರಸ್ತ್ರೀಯುತಂ॥ ಕಳುಹಿದ್ದೆಂ. ಮತ್ತಂ ಸುವರ್ಣಶಕಟಂಗೆಯಿಸ ಲ್ವಸಂತಸೇನೆ ರೋಹಸೇನಂಗೆ ಕೊಟ್ಟಿದ್ದ ತೊಡವುಗಳೆಲ್ಲಮನುಂ ಪ್ರತ್ಯರ್ಪಣಂಗೆಯ್ಯಲ್ವೇಳ್ಕುಮೆಂದು ಮೊರೆದಿದ್ದೆಂಅವನೇಂಪೋಗಿಬಂದನೋ?ಯಿಲ್ಲ ಮೋಇನ್ನುಮಿತ್ತಬಾರದೆಯೆ ತಳ್ವಿದಪಂ?

[ಬಳಿಕ ಆಭರಣಂಗಳಂತೆಗೆದುಕೊಂಡು ವಿದೂಷಕಂಪ್ರುಗುವಂ.]

ವಿದೂಷಕ॥ ಪ್ರಿಯಮಿತ್ರನಾದ ಆರ್ಯಚಾರುದತ್ತನು "ಎಲೆಮಿತ್ರನೇ! ವಸಂತಸೇನೆಯು ನಮ್ಮಹುಡುಗ ರೋಹಸೇನಗೆ ತನ್ನಲಂಕಾರಗಳನ್ನುಕೊಟ್ಟು ಚಿನ್ನದಬಂಡಿ ಮಾಡಿಸಿಕೋಎಂದುಹೇಳಿ ಕಳಿಸಿದ್ದಾಳೆ; ನಾವುಮತ್ತಾ ಆ ಒಡವೆಗಳನ್ನು ಇಟ್ಟುಕೊಳ್ಳ ಬಾರದಾದ್ದರಿಂದ ನೀನೇ ಆಒಡವೆಗಳನ್ನು ತೆಗದು ಕೊಂಡು ಹೋಗಿ ಆಕೆಗೆ ಕೊಟ್ಟುಬಾ" ಎಂದು ನನ್ನನ್ನು ಕಳುಹಿಸಿರುವನು. ಅದರಿಂದ ವಸಂತಸೇನೆಯು ಬಳಿಗೆ ಹೋಗುತ್ತೇನೆ. (ನಡೆದು ನೋಡಿ; ಆಕಾಶಕ್ಕೆ ಕಿವಿಗೊಟ್ಟು) ಭಾಪ! ರೇಭಿಲನೇ ರೇಭಿಲನೇ! ಏನುಹೀಗೆ ನೀನು ಬಹುಭಯಪಟ್ಟವನಂತೆ ಕಾಣುತ್ತೀಯೆ? (ಎಂಬುದಂಕೇಳಿ) ಏನು ಹೇಳುತ್ತೀಯೆ? "ಪ್ರಿಯಮಿತ್ರನಾದ ಚಾರುದತ್ತನು ವ್ಯವಹಾರಮಂಟಪಕ್ಕೆ ಕರೆಯಿಸಿ ಕೊಂಡಿದ್ದಾನೆ. ಅದೇನೋಕೊಂಚದ ಕೆಲಸವಾಗಿರಲಾರದು" ಎಂದೋ? (ಯೋಚಿಸಿ) ಆಮೇಲೆ ವಸಂತಸೇನೆಯು ಬಳಿಗೆ ಹೋಗೋಣ. ಮುಂಚೆಯೇ ವ್ಯವಹಾರಮಂಟಪಕ್ಕೆ ಹೋಗಬೇಕು (ಹೋಗಿ ನೋಡಿ) ಇದೋ ಇದೇ ಓಲಗದ ಚಾವಡಿಯು ಒಳಗೆ ಹೋಗುತ್ತೇನೆ. (ಪ್ರವೇಶಿಸಿ) ಕಾರ್ಯದರ್ಶಿಗಳಾದಧಿಕಾರಿಗಳಿಗೆ ಸುಖವಾಗಲಿ. ಆಯ್ಯಾ ನಮ್ಮಪ್ರಿಯ ಮಿತ್ರನೆಲ್ಲಿರುವನು?

ಕಾರ್ಯ:—ಇಗೋ ಇತ್ತಲಿರ್ದಪಂ.

ವಿದೂ॥ ಮಿತ್ರನೇ! ನಿನಗೆಮಂಗಳವಾಗಲಿ.

ಚಾರು:— ಆಗುವುದು.

ವಿದೂ॥ಎಲ್ಲಾ ಕ್ಷೇಮವೇನೋ?

ಚಾರ :— ಆದುವು ಮಾಗುವುದು.

ವಿದೂ॥ ಆಯ್ಯಾ ವಯಸ್ಯನೇ! ನೀನೇನೋ ಬಹು ಖಿನ್ನನಾಗಿರುವಂತೆ ಕಾಣುತ್ತೀಯೆ? ನಿನ್ನನ್ನು ಯೇತಕ್ಕೆ ಕರೆಯಿಸಿರುವರು?

ಚಾರು:—ವಯಸ್ಯನೇ! ಕಂ॥ ಖಲನೆನಿಸಿದ, ಪರಲೋಕವ
ತಿಳಿಯದ, ತನ್ನಿಂನೃಶಂಸನಿಂ ದಾಬೆಲೆವೆಣ್

ತಿಳಿಯಲ್‌ ರತಿ ರೂಪಿಣಿಯೋ
ಯುಳಿದಂ ಈಮುನೀಶ ನಿಂದುಪೇಳ್ದಪನುಂತೇ ॥ ೨೪೩ ॥

ವಿದೂ॥ ಏನು? ಏನು?

ಚಾರು:— (ಕಿವಿಯೊಳ್) ಇಂತಿಂತು.

ವಿದೂ॥ ಯಾರು ಹೀಗೆ ಹೇಳುತ್ತಾರೆ?

ಚಾರು:— (ಸನ್ನೆಯಿಂ ಶಕಾರನಂ ತೋರಿಪಂ) ತಪಸ್ವಿ ಯಾದೀ ಕೃತಾಂತನೆನ್ನ ಮೇಲ್ ಪೇಳ್ದಪಂ.

ವಿದೂ॥ (ಜನದಬಳಿ) ಹೀಗೆ ಏಕೆ ಹೇಳಬಾರದು? ಮನೆಗೆಹೋದಳು ಎಂದು.

ಚಾರು:— ಅಂತುಪೇಳ್ದೊಡಂ ಎನ್ನವಸ್ಥಾದೋಷದಿಂದಾರುಂ ಕೇಳರ್.

ವಿದೂ॥ ಅಯ್ಯಾ! ಅಯ್ಯಾ! ಆರ್ಯರೇ! ಯಾವಮಹಾರಾಯನುಸ್ಥಾಪಿಸಿರುವ, ಇದೋ ಯೆದುರಿಗೆಕಾಣುತ್ತಿರುವದೇವಾಲಯತಟಾಕಾರಾಮ ಕೂಪಯೂಪಗಳಿಂದ ಈ ಯುಜ್ಜಯಿನೀನಗರವೇ ಅಲಂಕಾರವಾಗಿರುವದೋ? ಅಂಥಾಮಹಾತ್ಮನು ಹಣಕ್ಕಾಗಿ ಯಿಂಥಾ ಕೆಟ್ಟಕೆಲಸವನ್ನುಮಾಡುವನೇ! (ಕೋಪದಿಂದ) ಎಲಾ ಯೆಲಾ ಹಾದರಗಿತ್ತಿಯಮಗನೇ! ಉಚ್ಛೃಂಖಲಕನೇ! ಹೇಳು ನನ್ನ ಯೆದುರಾಗಿ ಹೇಳು ಬಾ. ನಮ್ಮಪ್ರಿಯಮಿತ್ರನು ಪುಷ್ಪಿಸಿರುವ ಗುಲಗಂಜಿಯ ಬಳ್ಳಿಯನ್ನಾದರೂ ಎಳೆದು ಬಗ್ಗಿಸಿ ಹೂವ್ವ ಕುಯ್ಯಲಾರನಲ್ಲ. ಎಳೆದರೆ ಚಿಗುರು ತರಿದುಹೋದೀತೆಂದು ಯೋಚಿಸುವಂಥಾವನು ಇಂಥಾ ಉಭಯ ಲೋಕ ವಿರುದ್ಧವಾದ ಅಕಾರ್ಯನ್ನು ಮಾಡುವನೇನೋ? ಇರು ತೊತ್ತಿನಮಗನೇ! ಇರು. ನಿನ್ನ ಮನಸ್ಸಿನಂತೆ ಕುಟಿಲವಾದೀ ಕೋಲಿನಿಂದ ನಿನ್ನ ತಲೆಯನ್ನು ವೊಡೆಯುತ್ತೇನೆ.

ಶಕಾರ॥ (ಕೋಪದಿಂದ) ಅಯ್ಯಾ ಕೇಳಿಕೇಳಿ. ನನಗೂ ಚಾರುದತ್ತನಿಗೇನೇ ವಿವಾದವೋ ವ್ಯವಹಾರವೋ. ಈ ಕಾಗೆವೊಗದವನು ನನ್ನತಲೆಯನ್ನು ಏತಕ್ಕೆ ಒಡೆಯುವದು! ಬೇಡಲೋ ದುಷ್ಟವಟುವೇ! ತೊತ್ತಿನಮಗನೇ!

ವಿದೂ॥ (ಕೋಲನ್ನು ಮೇಲಕ್ಕೆತ್ತಿ) ಮೊದಲು ಹೇಳಿದ್ದನ್ನೇ ಹೇಳುತ್ತಾನೆ.

ಶಕಾರ॥ (ಕೋಪದಿಂದ ಎದ್ದು ಹೊಡೆಯುತ್ತಾನೆ)

ವಿದೂ॥ (ಬದುಲಾಗಿ ಹೊಡೆಯುತ್ತಾನೆ) [ಇಬ್ಬರೂ ಹೊಡೆದಾಡುವಾಗ ವಿದೂಷಕನ ಕಂಕುಳಿಂದ ಒಡೆವೆಗಳು ಬೀಳುತ್ತವೆ]

ಶಕಾರ॥ (ಅದರನ್ನು ತೆಗದುಕೊಂಡು ನೋಡಿ ಭಯದಿಂದ) ನೋಡಿ ನೋಡಿ ಆರ್ಯರೇ! ಈ ವೊಡೆವೆಗಳೆಲ್ಲವೂ ಆಕೆಯದು (ಚಾರುದತ್ತನಂ ಕುರಿತು) ಈ ಕೆಟ್ಟ ಹಣದಾಶೆಗಾಗಿ ಅವಳು ಕೊಲ್ಲಲ್ಪಟ್ಟಳಲ್ಲವೇ?

(ಅಧಿಕಾರಿಗಳೆಲ್ಲರುಂ ತಲೆವಾಗಿದಪರ್)

ಶಕಾರ:—(ಜನದಬಳಿ) ಕಂ॥ ಇದುಭೂಷಣಸಂಚಯುವಿಂ
ತಿದಱೊ ಳ್ಕಾಣಿಸುತೆ ಯೆನ್ನ ದೌರ್ಭಾಗ್ಯತೆಯಂ
ತೊದಲಿರ ಲೀಕಾಲದೆ ದೀ
ಳ್ದ ದುತಾಂಬೀಳಿಸದೆ ? ಮಾಣ್ದುದೇ ಶಿವೆ ಯೆನ್ನಂ ॥ ೧೪೮ ॥

ವಿದೂ॥ ಏಕೆ ನಡೆದ ವಿಷಯ ವೆಲ್ಲವನ್ನು ಹೇಳಬಾರದು?

ಚಾರು:—ವಯಸ್ಯನೇ! ಕಂ॥ ಅರಸನಕಣ್ ದುರ್ಬಲವಾ
ಗಿರಲೀ ತತ್ತ್ವಮನೆ ನೋಡಲಾರದು, ಮೇಣೆಂ
ತೆರೆವೆನಗೆ ದೈನ್ಯವೊಂದೇ
ಬರಲಾಣಂ ಶ್ಲಾಘ್ಯಮಲ್ತು ಮಡಿವುದೆ ಲೇಸೈ ॥ ೧೪೯ ॥

ಕಾರ್ಯ:—*ಕಷ್ಟ ವೈಕಷ್ಟಂ—ಕಂ॥ ಕ್ಷೋಣೀತನಯವಿರೋಧಿ
ಕ್ಷೀಣಬೃಹಸ್ಪತಿಯ ಪಕ್ಕದೊಳ್ಪಹು ಘೋರಂ
ಮೇಣೊಂದೇ ಳ್ದ ಗ್ರಹಮದು
ಕಾಣಿಸಿಗೊಂಡತ್ತು ಧೂಮಕೇತುವಿನಂತೆ ॥ ೨೫೦ ॥

ಶ್ರೇಷ್ಠಿ, ಕಾಯಸ್ಥರು॥ (ನೋಡಿವಸಂತಸೇನೆಯ ತಾಯಿಯನ್ನು ಕುರಿತು) ಈವೊಡವೆಗಳು
ಅವಳಿಟ್ಟದ್ದದ್ದೇ ಹೌದೋ ಅಲ್ಲವೋ ನೆಮ್ಮದಿಯಿಂದನೋಡು,

ವೃದ್ಧಳು॥ (ನೋಡಿ) ಇದು ಅದನ್ನು ಹೋಲಿಯಿದೆ. ಆದೇನೋ ಅಲ್ಲ.

ಶಕಾರನು॥ ಎಲೆ ತೊತ್ತಿನಮಗಳೇ! ಕಣ್ಣಿನಿಂದಯೋಚಿಸಿದಿ ಬಾಯಿ ಯನ್ನು ಮುಚ್ಚಿ
ಕೊಂಡಿ.

ವೃದ್ಧಳು॥ ಹತಾಶನೇ! ಆಚೆಗೆಹೋಗು.

ಶ್ರೇಷ್ಠಿ॥ ಅವಸರವಿಲ್ಲ. ನಿದಾನವಾಗಿಹೇಳು ಆದೇಯಿದುಹೌದೋ ಅಲ್ಲವೋ?

ವೃದ್ಧಳು॥ ಅಯ್ಯಾ! ಶಿಲ್ಪವು ಅತಿಚಿತ್ರವಾಗಿರುವದರಿಂದ ದೃಷ್ಟಿಯನ್ನು ಎಳೆಯುತ್ತೇವೆ
ತ್ತು ಆದೇನೋ ಅಲ್ಲ!

ಕಾರ್ಯ:—*ಅಗೇ! ಈತೊಡವುಗಳಂ ನೀಂತಿಳಿದಿರ್ಪೆಯಾ?

ವೃದ್ಧಳು॥ ಹೇಳಿದೆನಲ್ಲಾ ನನಗೊಂದೂಗೊತ್ತಾಗಲಿಲ್ಲ. ಆದರೆ ಅಕ್ಕಸಾಲಿಗನುಚಮ
ತ್ಕಾರವಾಗಿಮಾಡಿರಬಹುದು

ಕಾರ್ಯ:—*ಶ್ರೇಷ್ಠಿಯೇ? ನೋಡೈ:—

ವೃ॥ ಪೂರುಷ ಬುದ್ಧಿಯಿಂ ಸಮೆದ ಭೂಷಣಸಂಹತಿಯಂವಲಂಗುಣಾ
ಕಾರಗಳಿಂದೆಪೋಲ್ವಿತರ ವಸ್ತುಗಳಿರ್ಪವು ನಾಡೆಲೋಕದೊಳ್
ಕಾರು ಕದಂಬಕಂ ನೆರೆದು ಶಿಲ್ಪಮನಾಂತುರೆನೋಡಿತತ್ಸಮಾ
ಕಾರಮನಾಗಿ ಕೆಯ್ಸ್ವಕೃತ ಹಸ್ತತೆಯಿಂದಿದುಮಂತೆಯಿಕ್ಕುವರ್ ॥ ೨೫೧ ॥

ಶ್ರೇಷ್ಠಿ॥ ಇವು ಆರ್ಯ ಚಾರುದತ್ತನ ಸಂಬಂಧಿಗಳು

ಚಾರು:—ಅಲ್ಲ. ಅಲ್ಲ.

ಶ್ರೇಷ್ಠಿ॥ ಆದರೆ ಯಾರದು.

ಚಾರು:—ಇದೊ ಈಕೆಯ ಮಗಳದು.

ಶ್ರೇಷ್ಠಿ॥ ಆಕೆಯ ದೇಹದಿಂದ ಈಚೆಗೆ ಹೇಗೆ ಬಂದವು?

ಚಾರು*—ಅಃ! ಇನಂತು ಬಂದುವು. ಎಂತೆನೆ— ಆಟಕೆ ಸುವರ್ಣಶಕಟವಿಲ್ಲಮೆಂದ ಳ್ವ ರೋಹಸೇನನಂ ಸಂತೈಸಲ್ ವಸಂತಸೇನೆ ತನ್ನೊಡಲೊಳಿದ್ದ ತೊಡವುಗಳಂ ತೆಗದು ಕೊಟ್ಟು ಪೋದಳ್ಗಡ. ಅದನೀಗಳ್ ಪ್ರತ್ಯರ್ಪಣಂಗೆಯ್ಯಲೀತನ ಕ್ಕೈಯೊಳಾನಿತ್ತೆಂ. ಇವಂ ಕೊಂಡು ಪೋಗುತೆ ನಡುವೆಯಿತ್ತ ಬಂದಿರಲಕ್ಕುಂ-

ಶ್ರೇಷ್ಠಿ ಕಾಯಸ್ಥರು॥ ಆರ್ಯಚಾರುದತ್ತನೇ! ಇಲ್ಲಿ ಸತ್ಯವನ್ನು ಹೇಳಬೇಕು- ನೋಡು ನೋಡು—ವೃ॥ ಸತ್ಯದಿಂದ ಸುಖವೇ ಲಭಿಸುತ್ತದೈ

ಸತ್ಯಭಾಷಿ ದುರಿತಕ್ಕೆಡೆ ಯಾಗನೀ
ಸತ್ಯವೆಂಬ ಎರಡಕ್ಷರಗಳ್ ದಿಟಂ
ಸತ್ಯವಂ ಮರಸಬೇಡ ಯಸತ್ಯದಿಂ॥೨೩೨॥

ಚಾರು:—ತೊಡವುಗಳಿಂತಪ್ಪುವೆಂದಾನರಿಯೆಂ ಆದೊಡೆ ಎಮ್ಮ ಮನೆಯುತ್ತಣಿಂ ಬಂದುವೆಂದು ತಿಳಿದಿರ್ಪೆಂ.

ಶಕಾರ॥ ತೋಟಕ್ಕೆ ಹೋಗಿ ಮುಂಚೆ ಕೊಂದು ಈಗ ಕಪಟನಾಟಕದಿಂದ ಮರೆಮಾಚುತ್ತೀಯಾ

ಕಾರ್ಯ:—ಆರ್ಯಚಾರುದತ್ತನೇ? ಋತವಂ ನುಡಿಯಲಕ್ಕುದು-

ಕಂ॥ ಸನ್ನುತ ಸುಕುಮಾರಾಂಗದ
ನಿನ್ನೀಯೊಡಲಲ್ಲಿ ನಾಡೆ ಕರ್ಕಶಕಶೆಗಳ್
ಇನ್ನೀಗಳ್ಬೀಳ್ದಪ್ಪುವು ತಿಳಿ
ನನ್ನಿವಿಶಯವಿಲ್ಲಮೆಮ್ಮ ಬಯಕೆಗಳೊಡನೆ॥ ೨೩೩॥

ಚಾರು:*—ಕಂ॥ ಪಾಪಂ ತನ್ನೊಳಗಿಲ್ಲಮ
ಪಾಪಿಗಳನ್ವಯದೊಳೊಗೆದ ಕತದಿಂದೀಗಳ್
ಪಾಪಮ ನೆನ್ನೊಳಗಿಂತು
ಸ್ಥಾಪಿಸಿದೊಡೆ ಪಾಪಿಯಲ್ಲದೆನ್ನಿಂದಹುದೇಂ॥೨೩೪॥

(ತನ್ನೊಳ್) ವಸಂತಸೇನೆಯನಗಲಿದಾಂ ಬದುಕಿರ್ದು ಫಲಮೇಂ? (ಪ್ರಕಾಗೆ) ಆರ್ಯರೇ. ಪಲವಾತಿಂದೇಂ?

ಕಂ॥ ಖಲನೆನಿಸಿ ಲೋಕಮುರಚಂ
ತಿಳಿಯದ ತನ್ನಿಂ ನೃಶಂಸನಿಂ ದಾಟಿಲಿವೆಣ್
ತಿಳಿಯಲ್ ರತಿರಾಹಿಣಿಯೋ
ಯುಳಿದಂಶಮು ನೀಚನಿಂದು ಪೇಳ್ದಪನುಂತೇ॥ ೨೫॥

ಶಕಾರ॥ ಕೊಲ್ಲಲ್ಪಟ್ಟಳು. ಎಲಾ! ನೀನೂ ಹೇಳು ‹‹ ನನ್ನಿಂದ ಕೊಲ್ಲಲ್ಪಟ್ಟಳೆಂದು ›› ಮತ್ತೂ ಹೇಳು.

ಚಾರು:— ನೀನೆ ಪೇಳ್.

ಶಕಾರ॥ ಕೇಳಿ ಕೇಳಿ ಭಟ್ಟಾರಕರೇ! ಅವನೇ ಕೊಂದನಂತೆ, ನಿಸ್ಸಂಶಯವಾಗಿ ಹಾಗೆ ಹೇಳುವ ಈ ದರಿದ್ರನ ಶರೀರವನ್ನು ದಂಡಿಸಬೇಕಲ್ಲವೆ.

ಕಾರ್ಯ:— ಎಲೆ ಶೋಧನಕನೇ! ರಾಷ್ಟ್ರಿಯಂ ಪೇಳ್ದಂತೆ ಭಟರಿವನಂ ಪಿಡಿಯಲಕ್ಕುಂ. (ಭಟರ್ ಪಿಡಿದಪರ್.)

ವೃದ್ಧಳು॥ ಆರ್ಯಮಿಶ್ರರೇ! ಪ್ರಸನ್ನರಾಗಬೇಕು ಪ್ರಸನ್ನರಾಗಬೇಕು; ಯಾವನು ಕಳ್ಳರು ತೆಗೆದುಕೊಂಡು ಹೋದ (ಮುಂತಾದ ಪೂರ್ವೋಕ್ತ ವಾಕ್ಯಗಳನ್ನು ಹೇಳುತ್ತಾಳೆ.) ನನ್ನ ಮಗಳು ಸತ್ತುಹೋಗಿದ್ದರೆ ನಾನು ವಾದಿಯಷ್ಟೆ. ಆದ್ದರಿಂದ ಈ ದೀರ್ಘಾಯುವನ್ನು ಬಿಟ್ಟು ಬಿಡಿ, ಬದುಕಲಿ. ಅಥವಾ ಹಾಗಲ್ಲವೇ ಅವನಿಗೆ ಬದಲಾಗಿ ನನ್ನನ್ನು ತೆಗೆದುಕೊಳ್ಳಿರಿ.

ಶಕಾರ॥ ಆಚೆಗೆ ಹೋಗು ಗರ್ಭದಾಸಿಯೇ! ಹೋಗು. ಇವನಿಂದ ನಿನಗೇನು ?

ಕಾರ್ಯ:— ಅಗೇ ಪೋಗಲಕ್ಕುಂ. ಎಲೆ ರಾಜಪುರುಷರೇ! ಇವಳಂ ಪೊರಪೋಗಿಸಿರ್ಕೆ.

ವೃದ್ಧಳು॥ ಅಯ್ಯೋ ಮಗನೇ! ಅಯ್ಯೋ! ಎಂದು (ಅಳುತ್ತ ಹೋದಳು.)

ಶಕಾರ॥ ಇವನಿಗೆ ತಕ್ಕ ಕೆಲಸ ಕೊಟ್ಟ ಹಾಗಾಯಿತು. ಇನ್ನು ಹೋಗುತ್ತೇನೆ (ಎಂದು ಹೊರಟು ಹೋದನು.)

ಕಾರ್ಯ:— ಎಲೈ ಆರ್ಯ ಚಾರುದತ್ತನೇ! ನಿರ್ಣಯಿಪುದರೊಳೆಮಗೆ ಅಧಿಕಾರಂ, ಉಳಿದುದರೊಳ್ ರಾಯಂ. ಆದೊಡಂ ಎಲೆ ಶೋಧನಕನೇ! ನೀಂ ಪೋಗಿ ಪಾಲಕರಾಯನ ಬಳಿಯೊಳಿಂತು ಬಿನ್ನವಿಸಲ್ವೇಕ್ಕುದು. ಎಂತೆನೆ:—

ಕಂ॥ ನೇರಿದನೀತಂ ಪಾತಕಿ
ಯಾರಯೆ ವಧೆಗರ್ಹನಲ್ಲನದರಿಂ ನಾಡಿಂ
ದೂರಕೆ ತದ್ಧನದೊಡನೆಯೆ
ಪಾರಿಪುದಾ ದ್ವಿಜನನೆಂದು ಮನು ಪೇಳ್ದಿರ್ಪಂ॥ ೨೬॥

ಶೋಧನಕ॥ ಬುದ್ಧೀ! ಅಪ್ಪಣೆ (ಎಂದು ಹೋಗಿ, ಮರಳಿ ಬಂದು, ಕಣ್ಣೀರೊಡನೆ.) ಬುದ್ಧೀ! ಹೋಗಿ ಬಿನ್ನೈಸಿದೆನು. ಅದಕ್ಕಾರಾಯನು ‹‹ ಯಾವನು ಹಣದಾಸೆಗೆ

ಮೃಚ್ಛಕಟಿಕಪ್ರಕರಣದಲ್ಲಿ,

ವಸಂತಸೇನೆಯನ್ನುಕೊಂದನೋ ಅವನಕೊರಳಿಗೆ ಅದೇವೊಡವೆಗಳನ್ನುಕಟ್ಟಿ ಡಿಂಡಿಮವನ್ನು ಬಾರಿಸುತ್ತದಕ್ಷಿಣಾಶ್ಮಶಾನಕ್ಕೆ ತೆಗದುಕೊಂಡುಹೋಗಿ ತಲೆಕಡಿಯಬೇಕು, ಅಥವಾಶೂಲಕ್ಕಾದರೂ ಹಾಕಬೇಕು-ಮತ್ತುಯಾವನಾದರು ಇಂಥಾಕೆಟ್ಟಕೆಲಸವನ್ನು ಮಾಡುವನಾದರೆ ಅವನಿಗೂ ಇಂಥಾಅವಮಾನದಶಿಕ್ಷೆಯಾದೀತೆಂದು ಸಾರಿಸಬೇಕು. '' ಎಂದು ಹೇಳುತ್ತಾನೆ.

ಚಾರು:—ಆಹ! ಪಾಲಕರಾಯನುಂ ಅಸಮೀಕ್ಷ್ಯಕಾರಿಯೆ?

ಅಕ್ಕಟಾ!! ಕಂ॥ ಅವನೀಪಾಲಕರಂ ಕು
ವ್ಯವಹಾರಾನಲನೊಳಿಂತು ಬೀಳಿಸೆಸಚಿವರ್
ತವಿಸುತೆ ದೆಸೆ ತಿಳಿಯದೆಗಡ
ಯುವರುಂಕಾರ್ಪಣ್ಯದಶೆಯನೊಂದುವುದುಚಿತಂ॥೨೫೭॥

ಮತ್ತಂ ॥ ನೃಪವರಶಾಸನಮಂದೂ
ಮಿಪಪಾಂಡುರಕಾಕಸದೃಶರಾದಿಂತಪ್ಪರ್
ಅಪರಾಧವಿಲ್ಲದವರನು
ಮಪರಿಮಿತಮದಾಗೆ ಕೊಂದರಿನ್ನುಂಕೊಲ್ವರ್ ॥೨೫೮॥

ಮಿತ್ರಮೈತ್ರೇಯನೇ! ನೀಂಪೋಗು. ಎನ್ನವಚನದಿಂ ಜನನಿಗೆ ಚರಮಪ್ರಣಾಮಮಂಪೇಳ್. ಎನ್ನಮಗು ರೋಹಸೇನನಂ ಸ್ನೇಹದಿಂಪೊರೆ.

ವಿದೂ॥ ಬೇರುಕಡಿದುಹೋದಮೇಲೆ ಮರಕ್ಕೆಪಾಲನ ವೆಲ್ಲಿಯದು?

ಚಾರು:—ಅಂತೆನಲಾಗದು ಕಂ॥ ಪರಲೋಕಂಗಳನೊಂದಿದ
ನರಗ್ಗೆಗತಿಮಗನೆ ಮೇಣ್ತನುಪ್ರತಿರೂಪಂ॥
ಉರೆ ಕೆಳೆ ಯಾವುದ ನೆನ್ನ
ಲ್ಲಿರಿಸಿದೊನೀನದನೆ ರೋಹಸೇನನೊಳಿರಿಸೈ॥೨೫೯॥

ವಿದೂ॥ ಅಯ್ಯಾವಯಸ್ಯನೇ! ನಾನು ಇದುವರೆಗೂನಿನಗೆ ಪ್ರಿಯಮಿತ್ರನಾಗಿದ್ದು ಈಗ ನಿನ್ನನ್ನು ಬಿಟ್ಟುಹ್ಯಾಗೆಪ್ರಾಣಗಳನ್ನಿಟ್ಟುಕೊಂಡಿರಲಿ?

ಚಾರು:—ಆನಿತರೊಳ್ ರೋಹಸೇನನಂ ತಂದುತೋರಿಸು.

ವಿದೂ॥ ಒಳ್ಳೆಯದು - ಹಾಗೆ ಆಗಲಿ.

ಕಾರ್ಯ:—ಎಲೆ ಶೋಧನಕನೇ! ಈವಟುವ ನೋರೆಯಾಗಿಸು.

ಶೋಧನ॥ (ಹಾಗೆಯೇಮಾಡುತ್ತಾನೆ.)

ಕಾರ್ಯ:—ಎಲೋ! ಆರಲ್ಲಿ? ಚಂಡಾಲಗ್ಗೆಬೆಸನಮಂಪೇಳ್ವುದು. (ಎಂದುಚಾರುದತ್ತನಂಬಿಟ್ಟುರಾಜಪುರುಷರೆಲ್ಲರುಂಪೊರಮಟ್ಟರ್.)

ಶೋಧನ॥ ಆರ್ಯನು! ಇತ್ತಬರಬೇಕು.

ಚಾರು:—(ವ್ಯಸನದಿಂದೆ.)

ವೃ॥ ಎಲೆಹಾ! ಪುತ್ರನೇ ರೋಹಸೇನ! ತನಗಾದೀಯಾಪದಂ ನೋಡಲಿ
ಲ್ಲಲೆನೀಂನಿಷ್ಫಲದಾಟದವ್ಯಸನದಿಂದಾನಂದಿಪ್ಪೆಯಾವಗಂ
ಫಲಗೇ! ಬ್ರಾಹ್ಮಣಿ! ನಿರ್ಮಲದ್ವಿಜಕುಲೋದ್ಭೂತೇ ಕರಂಸಾಧ್ವಿಯೇ
ಖಲೆ ಮೈತ್ರೇಯನೆ! ಏನಿದಿಂತವಶದಿಂ ದೆನ್ನಲ್ಲಿ ದುರ್ಬಂದುದೋ॥ ೨೬೦॥

[ಆಕಾಶದಲ್ಲಿ ದೃಷ್ಟಿಯನಿರಿಸಿ.]

ವೃ॥ ಗರಳದಿನಗ್ನಿಯಿಂದೆಜಲದಿಂದೆ ತುಲಾಗ್ರದಿನೆನ್ನವಾದಮಂ
ಪರಿಕಿಸಿಯಿಗಾಗಳೆನ್ನತನುವೊಳ್ಕರಪತ್ರಮನೀವುದಲ್ಲದೇ
ಅರಿವಚನಕ್ಕೆ ನೀಂನಿರಪರಾಧಿಯವಿಪ್ರನನೆನ್ನನಿಕ್ಕಲಾ
ನರಕದಮಧ್ಯದಲ್ಲಿ ಮಗಮುಮ್ಮಗರಿಂದೊಡನಿಂದುಬೀಳ್ದಪೈ॥ ೨೬೧॥

ಇದೋಬಂದೆಂ (ಎಂದು ಎಲ್ಲರುಂಪೊರಮಟ್ಟರ್.)

ಇಂತೆಂಬಲ್ಲಿಗೆ ಮೃಚ್ಛಕಟಿಕ ಪ್ರಕರಣದೊಳ್

ವ್ಯವಹಾರವೆಂಬ ಒಂಭತ್ತನೆಯಅಂಕಂ

ಮುಗಿದುದು.

—*—

ಮೃಚ್ಛಕಟಿಕಪ್ರಕರಣಂ

ದಶಮಾಂಕಂ.

[ಬಳಿಕಚಂಡಾಲರಿಂದೆನಡೆಯಿಸಿಕೊಳ್ವಚಾರುದತ್ತಂ ಪುಗುವಂ.]

ಚಂಡಾಲರು॥ ಕಂ॥ ನೀನುವಿಚಾರಿಸಲಿಲ್ಲವೊ
ಯೇನ್ನೆ ನಾವೀಗ ಕೊಲೆಗೆ ವಧ್ಯವನೊಯ್ಯಲ್
ಜನ್ನಾನಿಗಳ್ಳು ಮತ್ತು ಬೇಗನೆ
ಯಾನಿಸಿ ಶೂಲಕ್ಕೆ ತಲೆಯಹೊಡೆಯುವಕಲಿಗಳ್॥ ೨೬೨॥

ಓರೆಯಾಗಿರಿ ಆರ್ಯರೇ! ಓರೆಯಾಗಿರಿ. ಇದಿಗೋ ಈಚಾರುದತ್ತನಾದರೋ

ಕಂ॥ ಕೊರಳಲಿ ಕಣಿಗಿಲೆ ಹೂವಿನ
ಸರವನು ಸಿಂಗರಿಸಿ ವಧೆಗೆ ನಾವೆಳೆದೊಯ್ಯಲ್

ಕೊರಗುವನುಮೆಲ್ಲ ಮೆಲ್ಲಗೆ
ಮೆರುಗಿಲ್ಲದೆ ಯೆಣ್ಣೆ ಮುಗಿದದೀಪದತೆರದಿಂ॥ ೨೬೩॥

ಚಾರುದತ್ತಂ:— (ವ್ಯಸನದಿಂದೆ.)

ಕಂ॥ ಕಂಬನಿಯಿಂ ನಾಂದು, ರಜಂ
ದುಂಬಿ, ಮಸಣಪೂಗಳಂಮುಡಿದು, ಚೆಂಬಾವಂ
ನಂಬೊರೆದು, ತೋರ್ದ ಪೆನ್ನೊಡ
ಲಂಬಲಿಗೆತ್ತಣಲಿದಾರ್ವ ಕಾಗೆಗಳೆಣಿಕುಂ॥ ೨೬೪॥

ಚಂಡಾಲ॥ ಓರೆಯಾಗಿರಯ್ಯಾ! ಓರೆಯಾಗಿರಿ;

ಕಂ॥ ಸಜ್ಜನರೆಯೇನುನೋಳ್ಪಿರೊ
ಉಜ್ಜಯಿನಿಯುಲಿದಿಗೊ ಕಾಲಪರಶುವಿನಿಂದಾ
ಸಜ್ಜನಖಗಗಳಿಗೆಡೆಯುಹ
ಸಜ್ಜನವೃಕ್ಷವಿದು ಕಡಿಸಿಕೊಳ್ಳುವದನ್ನಾ॥ ೨೬೫॥

ಬಾರ್ರೈ ಆರ್ಯಚಾರುದತ್ತನೇ! ಬಾರ್ರೈ.

ಚಾರು:—ಆವುದರಿಂದಾನಿಂತಪ್ಪ ದಶೆಯುನಾಂತೆನೋ ಆವಿಧಿವ್ಯಾಪಾರಂಗಳ್ ಪುರುಷ ಭಾಗ್ಯಂಗಳಿಂದಚಿಂತ್ಯಂಗಳಲ್ತೆ

ಕಂ ॥ ಒಡಲೊಳಗೆಲ್ಲ ದೆಯೊಳ್ಪಲಿ
ತೊಡೆದಿಪ್ಪರ್ರಕ್ತಚಂದನದ ಕೈಕುರುಪಿಂ
ತಿಡಿದಿರೆ ಕುಂಕುಮಚೂರ್ಣಂ
ಪಿಡಿದಿರೆ ಪಶುವಾದೆ ನಿಂತುನರನಾದಾನುಂ॥ ೨೬೬॥

(ಮುಂದೆತೋರಿಸಿ) ಆಹ! ನರರ ತಾರತಮ್ಯಮೆಂತಿಕ್ಕರ್ಣಂ?

(ಶೋಕದಿಂ) ಕಂ॥ ನಿರುಕಿಸುತೆನ್ನೀದಶೆಯುಂ
ಪುರವಾಸಿಗಳದನೆಪಳಿದು ಕಂಬನಿಬಿದುತಂ
ಪೊರೆಯಲ್ಕಾರದೆಯೆನ್ನಂ
ಸುರಲೋಕಮನೊಂದುವೆಂದು ಪೇಳುತ್ತಿಪ್ಪರ॥ ೨೬೭॥

ಚಂಡಾಲ॥ ಓರೆಯಾಗಿರಯ್ಯಾ! ಓರೆಯಾಗಿರಿ ಏನು ನೋಡುವಿರಿ!

ಕಂ॥ ದನಗಳಹೆಗೆಯುನೀಸ
ಜ್ಜನರಪ್ರಾಣಾಪದವನು ತೆಗೆದೊಯ್ಯುವ ಯಿಂ
ದ್ರನಕೇತುವನ್ನು ನಕ್ಷ
ತ್ರನಿಪಾತವ ನೋಡಬಾರದೀನಾಲ್ಕನ್ನಾ॥ ೨೬೮॥

ಮೊದಲನೆಯಚಂಡಾಲನು॥ ಎಲಾ! ಆಹೇಂತನೇ! ನೋಡುನೋಡು.

ಕಂ॥ ಪುರದಲಿಗೊಡ್ಡ ಮನುಷ್ಯನು
ಮರಣವಹೊಂದಲು ಕೃತಾಂತನಪ್ಪಣೆಯಿಂದಾ॥
ಮೊರೆಯಿಡುತಳುವದುಗಗನವಿ
ದೆರಗುವದೇತಕ್ಕೆ ಮೋಡವಿಲ್ಲದಸಿಡಿಲಾ॥ ೨೯॥

ಎರಡನೆಯವನು॥ ಎಲಾ! ಗೋಹನೇ!

ಕಂ॥ ಮೊರೆಯಿಡುತಳಲಿಲ್ಲೀಯುಂ
ಬರವೂಮಬ್ಬಿಲ್ಲದಿರಲು ಬೀಳದುಸಿಡಿಲಾ॥
ಸುರಿದಿದೆಯುಳುತಿರುವಂಗನೆ
ಯುರಗುಂಪೆಂಬಬ್ಬದಿಂದ ಕಣ್ಣೀರೊಡನೇ॥ ೩೦॥

ಮತ್ತು - ಕಂ॥ ಕೊಲ್ಲಲುವಧ್ಯವನೊಯ್ವಾ
ಗೆಲ್ಲಾ ಜನನೋಡಿನೋಡಿಯುಳುತಿರಲವರಾ॥
ಫುಲ್ಲಾಕ್ಷಿಜಲದೆನೆನನೆನ
ದೆಲ್ಲಿಯುಧೂಳೇಳಲಿಲ್ಲ ವೀಬೀದಿಯುಲ್ಲೀ॥ ೩೧॥

ಚಾರು:—(ತೋರಿಸಿಕರುಣದಿಂದೆ.)—

ಕಂ॥ ಮಗುಳ್ದೀಪೆಣ್ಗಳ್ ಪ್ರಾಸಾ
ದಗವಾಕ್ಷಾರ್ಧದೆ ಮುಖಾಬ್ಜಮಂ ಪೊರಗಿಡುತಂ॥
ಮಿಗೆತನ್ನನೋಡಿಕಣ್ಣೀ
ರುಗಿಪಹಾ! ಚಾರುದತ್ತನೆಂದುಸಿರುತ್ತಂ॥ ೩೨॥

ಚಂಡಾಲರು॥ ಬಾರೈ ಆರ್ಯಚಾರುದತ್ತನೇ! ಬಾರೈ- ಇದುಸಾರುವ ತಾಣವು- ಎಲಾ! ತಮ್ಮಟೆಯನ್ನು ಹೊಡೆಯಿರಿ- ಘಟ್ಟಿಯಾಗಿ ಸಾರಿರಿ.

ಇಬ್ಬರು॥ (ತಮ್ಮಟೆಬಡಿಯುತ್ತ.) ಕೇಳಿರಯ್ಯಾ! ಕೇಳಿ- ಇದಿಗೋ ವಿನಯದತ್ತನಂ, ಬವರ್ತಕನಮೊಮ್ಮಗನೂ, ಸಾಗರದತ್ತನಮಗನೂ, ಆದ ಆರ್ಯಚಾರುದತ್ತನಂ, ಬುವನುಹಣದಾಶೆಗೋಸ್ಕರವಾಗಿ ವಸಂತಸೇನೆಯೆಂಬಸೂಳೆಯನ್ನು ಪುಷ್ಪಕರಂಡಕವೆಂಬಹಳೆಯತೋಟದಲ್ಲಿ ಹೊಡೆದುಕೊಂದು, ಬಳಿಕಾವೊಡವೆಗಳೊಡನೆಸಿಕ್ಕಿ ತಾನೇವೊಪ್ಪಿಕೊಂಡದ್ದರಿಂದ, ಇವನನ್ನು ಎಲ್ಲರಿಗೂತೋರಿಸಿ ಕೊಲ್ಲುವಹಾಗೆ ಅಪ್ಪಣೆಯಾಗಿರುವದು. ಮತ್ತು ಶ್ರೀಮನ್ಮಹಾರಾಜಪಾಲಕರಾಯರವರು ಉಭಯಲೋಕವಿರುದ್ಧವಾದ ಇಂಥಾಕೆಟ್ಟಕೆಲಸವನ್ನು ಮತ್ತಾರ್ಯರಾದರೂಮಾಡಿದರೆ ಅವರನ್ನೂ ಹೀಗೇದಂಡಿಸುತ್ತಾರೆ.

ಚಾರು:—(ನಿರ್ವೇದದೊಡನೆ ತನ್ನೊಳ್.)

ಮೃಚ್ಛಕಟಿಕಪ್ರಕರಣದಲ್ಲಿ.

ವೃ॥ ನೇರಿದರೊಡ್ಡಿಯಜ್ಞಸಭೆಯೊಳ್ ವೇದ್ಯಕ್ತಗಳಲ್ಲದೆಂತುಮುಪ
ಸಾರುತಮಿರ್ದುದೋಣಿಗನುಘೋಷಗಳಿಂದೆಮಗೀಯ ಗೋತ್ರಮಂ
ಆರಯೆನೀಚಜಾತಿಭವರೀಮ್ರಿಯಮಾಣದಶಾರ್ದನೆಸ್ನಮಂ
ಸಾರುವರಾವಿನೊಳ್ಪರದೊಳೀಗಳದಿಂ ತುರೆಸಾರುತಿರ್ದ್ದಪರ್॥ ೨೭॥

(ಮೇಲೆನೋಡಿ ಕಿವಿಗಳಂಮುಚ್ಚಿ.) ಹಾಪ್ರಿಯೆಯೆ! ವಸಂತಸೇನೆಯೆ!

ಕಂ॥ ಶಶಿನಿರ್ಮಲರುಚಿಮಂಜುಲ
ದಶನೆಯೆ! ವಿದ್ರುಮನಿಭಾಧರೋಷ್ಠಿಯೆ! ನಿನ್ನಾ
ಶಶಿಮುಖಸುಧೆಯಂ ಪೀರ್ದುಗಂ
ವಶವಿಲ್ಲದದೆಂತೊ ಪೀರ್ವೆ ನಯಶೋವಿಷಮಂ॥ ೨೮॥

ಚಂಡಾಲರು॥ ಓರೆಯಾಗಿರಯ್ಯಾ! ಓರೆಯಾಗಿರಿ.

ಕಂ॥ ಇವನುಗುಣರತ್ನನಿಧಿಯೈ
ಇವನಾ ಸಜ್ಜನರದುಃಖಸಿಂಧುಗಳಿಗೆ ಸೇ
ತುವೆ ಯಿವನೀಪುರೊಡವೆಯು
ಇವನನ್ನಾರಿಂದಲೀಗತೆಗಪೊಯ್ವೆವೃನಾವ್॥ ೨೯॥

ಮತ್ತು - ಕಂ॥ ಎಲ್ಲಾ ಜನವೂಜಗದಲಿ
ಮೆಲ್ಲಗೆಸೇರುವದುತಾನೆಸುಖದಲ್ಲಿರುವಾ॥
ಗೆಲ್ಲಿಯುನರನುವಿಪತ್ತಿಗೆ
ತಲ್ಲಣಿಸುವಕಾಲದಲ್ಲಿ ಪ್ರಿಯದುರ್ಲಭನೈ॥ ೩೦॥

ಚಾರು:— (ಎಲ್ಲೆಡೆಯಂನೋಡಿ.)

ಕಂ॥ ಅರಿವೆಯಿ ನಾಸ್ಯವ ಮುಸುಕು
ತ್ತುರೆದೂರಕೆ ಪೋಪರೆಂತು ಮಿನ್ನೀಗೆಳೆಯರ್॥
ಪರನುಂನಂಟನೆ ಅಪ್ಪಂ
ಸಿರಿಯಿರಲದುವಿಷಮವಾದೊಡಿಲ್ಲಂಮಿತ್ರಂ॥ ೩೧॥

ಚಂಡಾಲರು॥ ಜನರುಪೋರೆಯಾದರು-ಬೀದಿಬಿಡುವಾಯಿತು-ಕೊಲೆಗುರುತುಳ್ಳಯಿವನನ್ನು ತೆಗದುಕೊಂಡು ನಡೆಯಿರಿ.

ಚಾರು:—(ನಿಟ್ಟುಸಿರ್ಬಿಡುತ್ತೆ) "ಎಲೆಮೈತ್ರೇಯನೆಯೇನಿದಿಂದವಶದಿಂ" ಎಂಬಪದ್ಯಮಂ ಪಠಿಪಂ.

[ತೆರೆಯಲ್ಲಿ] ಹಾ! ಪ್ರಿಯಮಿತ್ರನೇ! ಹಾ! ತಾತನೇ!

ಚಾರು:—(ಕೇಳ್ದು ವ್ಯಸನದಿಂ) ಎಲೋ! ಕುಲದೀಪಕನೇ! ಆಂ ನಿನ್ನತ್ರಾಣಂಬಂಪ್ರತಿಗ್ರಹಂಗೈಯಲೆಳಸಿರ್ದಪೆಂ

ಚಂಡಾಲರು॥ ಏನು ನಮ್ಮ ಕೈಯಿಂದ ಪ್ರತಿಗ್ರಹವನ್ನು ಮಾಡುವೆಯೋ?

ಚಾರು:—ಪಾಪಂಶಮಿಸುಗೆ-ದುರಾಚಾರಿಪಾಲಕರಾಯನಂತೆ ಚಂಡಾಲರಪ್ಪಿ(ಶ್ರೋತ್ರಿ)ರಿಗಳಲ್ತು- ಅದುದರಿಂದಂ ಕೇಳ್. ಪರಲೋಕಾರ್ಥಯಾದುದಂ ಮಗನಮೊಗಮಂ ನೋಡಲೆಳಸಿದ್ದಪೆಂ.

ಚಂಡಾಲರು॥ ಹಾಗೆ ಮಾಡಬಹುದು.

[ತೆರೆಯಲ್ಲಿ] ಹಾಪ್ರಿಯಮಿತ್ರನೇ! ಹಾತಾತನೇ!

ಚಾರು:—(ಕೇಳ್ದು ವ್ಯಸನದಿಂ) ಎಲೋ! ಕುಲದೀಪಕನೇ! ಆಂ ನಿನ್ನತ್ರಾಣಂ ಪ್ರತಿಗ್ರಹಂಗೈಯಲೆಳಸಿದ್ದಪೆಂ.

ಚಂಡಾಲ॥ ಎಲೌಪೌರರೇ! ಕೊಂಚದಾರಿಯಬಿಡಿ- ಇದೋ ಆರ್ಯಚಾರುದತ್ತನು ಮಗನಮುಖವನ್ನು ನೋಡಲಿ (ತೆರೆಯ ಕಡೆಯಾಗಿ) ಅಯ್ಯಾ ಇತ್ತಯಿತ್ತ, ಬಾರಲೇ ಮಗುವೇ! ಬಾ!

[ಬಳಿಕ ಬಾಲಕನನ್ನು ಕರೆದುಕೊಂಡು ವಿದೂಷಕನು ಬರುತ್ತಾನೆ.]

ವಿದೂ॥ ಮಗುವೇ! ಬೇಗಬೇಗನಡೆ ನಿಮ್ಮಪ್ಪನನ್ನು ಕೊಲ್ಲುವದಕ್ಕೆ ತೆಗದುಕೊಂಡು ಹೋಗುತ್ತಿದ್ದಾರೆ.

ಬಾಲಕ॥ ಹಾತಾತನೇ! ಓಯಪ್ಪಾ!!

ವಿದೂ॥ ಹಾ! ಪ್ರಿಯಮಿತ್ರನೇ! ನಾನು ನಿನ್ನನ್ನು ಮತ್ತೆಲ್ಲಿ ನೋಡಲೋ?

ಚಾರು:—(ಪುತ್ರನಂ ಮಿತ್ರನುಮಂ ನೋಡಿ) ಹಾಪುತ್ರನೇ! ಹಾಮಿತ್ರನೇ! (ಶೋಕದಿಂದ) ಕಷ್ಟವ್ಯೆಕಷ್ಟಂ—

ಕಂ॥ ಚಿರಕಾಲಂ ನೀರಳ್ಕಿಯು
ನಿರಲಾರೆಂಗಡೆಲೆ ಮಗನೆ ಪರಲೋಕದೊಳಾಂ
ಕರಮೆನಗೆನೀನುಮೀವುದು
ಕಿರಿದಪ್ಪುದು ಭೋಜನಂ ನಿವಾಪೋದಕಮುಂ॥ ೨೩೮॥

ಮಗಂಗೇಂ ಕುಡಲ್ತಕ್ಕುದು? (ತನ್ನಂ ನೋಡಿಕೊಂಡು; ಯಜ್ಞೋಪವೀತಮಂ ಕಂಡು.) ಆಃ! ಇದೊಂದೆನಗಿರ್ದಪುದು:

ಕಂ॥ ಭಾವಿಸಲಿದ ಮೌಕ್ತಿಕಮಿದ
ಸೌವರ್ಣಂ ಬ್ರಾಹ್ಮಣರ್ಗ್ಗೆ ಸುವಿಭೂಷಣಮೈ
ಆವುದರಿಂ ಪಿತೃಗಳ್ಗಂ
ದೇವತೆಗಳ್ಗಂ ಸುಭಾಗಮೀಯಲ್ಪಡುಗುಂ॥ ೨೩೯॥

(ಎಂದು ಯಜ್ಞೋಪವೀತಮಂ ಕೊಟ್ಟಪಂ.)

ಚಂಡಾಲ॥ ಬಾ ಚಾರುದತ್ತಾ! ಬಾ! ಹೊತ್ತಾಯಿತ್ತು

ಮೃಚ್ಛಕಟಿಕಪ್ರಕರಣದಲ್ಲಿ,

ಮತ್ತೊಬ್ಬಚಂಡಾಲ॥ ಎಲಾ! ಆರ್ಯಚಾರುದತ್ತನನ್ನು ಆರ್ಯಪದವಿಲ್ಲದೇ ಕರೆಯ ಬಹುದೇ! ಎಲಾ! ನೋಡು.

ಕಂ॥ ಹಗಲಾರಾತ್ರಿಯು ಸಂಪ
ತ್ತುಗಳಲ್ಲಿ ವಿಪತ್ತುಗಳಲಿಯುಂನುಗ್ಗುವ ದೈ
ವಗತಿಯುಸರಪಣಿಬಿಚ್ಚಲು
ಬಗೆದಕಡೆಗೆಹೋಗುವಾನೆಯೋಲನಿಮಾರ್ಯಂ॥ ೨೮೦॥

ಮತ್ತು - ಕಂ॥ ವಂದಿಸಬೇಕಿವನಿಗೆಶಿರ
ದಿಂದೀಯುಪವಾದವಿವಗೆಸುಮ್ಮನೆಬಂತೈ
ಚಂದಿರನರಾಹುಹಿಡಿದರು
ವಂದಿಸರೇಯೇನುಜನಗಳೀಜಗದೊಳಗೇ॥ ೨೮೧॥

ಬಾಲಕನು॥ ಎಲೆಲಾ! ಚಂಡಾಲರೇ! ನಮ್ಮಪ್ಪನನ್ನು ಎಲ್ಲಿಗೆಕೊಂಡುಹೋಗುವಿರಿ?

ಚಾರು:—ವತ್ಸನೇ! ಕಂ॥ ಕೊರಳೊಳ್ಕಣಿಗಿಲೆಸರವಂ
ಪೊರುತಂಪೆಗಲಲ್ಲಿ ಶೂಲಮುಂಮನದಳಲಂ॥
ನೆರೆಯಾಲಂಭನಕಿಂದ
ಧ್ವರದೊಳ್ಯಾಮಿತ್ರಮೊಂಪಜದವೋಲ್ಪೋಪೆಂ॥ ೨೮೨॥

ಚಂಡಾಲ॥ ಬಾಲಕನೇ! ಕಂ॥ ಚಂಡಾಲರುನಾವಲ್ಲವು
ಚಂಡಾಲರಕುಲದಿಮುಂಚೆಹುಟ್ಟಲ್ಲವು ಯಾ
ರಂಡಲಿಸುವರೋಸಾಧುವ
ಚಂಡಾಲರೆ ಅವರುಜಗದಿಪಾಪಿಗಳವರೇ॥ ೨೮೩॥

ಬಾಲಕ॥ ಆದರೆ ಯೋತಕ್ಕೆನಮ್ಮಪ್ಪನನ್ನುಕೊಲ್ಲುವಿರಿ?

ಚಂಡಾಲ॥ ಚಿರಂಜೀವಿಯೋ! ಇಲ್ಲಿ ಅರಸಿನಪ್ಪಣೆಯುತಪ್ಪಲ್ಲದೆನಮ್ಮತಪ್ಪೇನಾಇಲ್ಲಪ್ಪ.

ಬಾಲಕ॥ ನನ್ನನ್ನು ಕೊಲ್ಲಿರಿ ನಮ್ಮಪ್ಪನನ್ನುಬಿಟ್ಟುಬಿಡಿ.

ಚಂಡಾಲ॥ ನೀನು ಹೀಗೆ ಹೇಳುತ್ತಬಹ. ಕಾಲಬದುಕಪ್ಪಾ.

ಚಾರು:—(ಕಂಬನಿಯೊಡನೆ ಮಗನನಪ್ಪಿ ಕೊಂಡು.)

ಕಂ॥ ಇದುನೇಹದಸರ್ವಸ್ವವು
ಇದುಧನಿಕಂಗಂದರಿದ್ರಜನಕಂಸಮವ್ಯೈ॥
ಹೃದಯಕ್ಕಣ್ಪಿದುಲಾಮಚ
ಬಿದುಬಾವನ್ನಂಗಳೆಂಬವೋಲ್ಪ್ರಪ್ತಿಕರಂ॥ ೨೮೪॥

“ಕೊರಳೊಳ್ಕಣಿಗಿಸರವಂ” (ಎಂಬಪದ್ಯವಂಪಠಿಪಂ) ಬಳಿಕೆತ್ತಲುಂನೋಡುತ್ತಂ (ಮನದೊಳ್)

ಕಂ॥ ಮೊಗಮಂ ಮುಚ್ಚುತೆ ದುಗುಲದಿ
ನೊಗುವಿಗೆಯಿಂ ದೂರಕೆಯ್ದ ಧರ್ಮಜ್ಞ ಮಿತ್ರರ್॥
ಪಗೆಯುಂ ಬಂಧುವತೆಂ ವಿಭ
ವಗತಂಗೆ ವಿಪನ್ನನೆನಿಸೆ ಸಿಲ್ಕಂ ನಂಟಂ॥ ೨೮೫॥

ವಿದೂ॥ ಎಲೈ ರಾಜಾಜ್ಞಾಕಾರಿಗಳೇ! ನಮ್ಮ ಪ್ರಿಯಮಿತ್ರನನ್ನು ಬಿಟ್ಟು ನನ್ನನ್ನು ಕೊಲ್ಲಿರಿ

ಚಾರು:—ಪಾಪಂ ಶಮಿಸುಗೆ. (ನೋಡಿ ತನ್ನೊಳ್) "ಮೊಗಮಂ ಮುಚ್ಚುತೆ" (ಎಂಬ ಪದ್ಯಮಂ ಪಠಿಸಂ.) ಮೇಲೆ ನೋಡಿ, (ಪ್ರಕಾಶವಾಗಿ) "ಮುಗುಳ್ದ ಪೆಣ್ಗಳ್ ಪ್ರಾಸಾದ" ಎಂಬ ಪದ್ಯಮಂ ಮುಗುಳ್ದು ಪಠಿಸಂ.

ಚಂಡಾಲ॥ ಓರೆಯಾಗಿರಯ್ಯಾ! ಓರೆಯಾಗಿರಿ.

ಕಂ॥ ನಡುಭಾವಿಯಲ್ಲಿ ಹಗ್ಗವು
ಕಡಿಯಲು ಮುಳುಗುತ್ತಲಿರುವ ಚಿನ್ನದ ಕೊಡದೋಲ್
ಕೆಡುಜಸದಿಂ ಜೀವಾಶೆಯು
ಬಿಡುವೀ ಸತ್ಪುರುಷನನ್ನು ನೋಡುವಿರೇನೋ॥ ೨೮೬॥

ಚಾರು:—(ವ್ಯಸನದಿಂ) "ಶಶಿನಿರ್ಮಲರುಚಿ ಮಂಜುಲ" ಎಂಬ ಪದ್ಯಮಂ ಪಠಿಸಂ:

ಚಂಡಾಲ॥ ಎಲಾ! ಮಾದಿಗನೇ! ಇಲ್ಲಿ ಮತ್ತೂ ಸಾರಬೇಕು. (ಎಂದು ಹಾಗೆ ಮಾಡುವರು.)

ಚಾರು:— ಕಂ॥ ಎನ್ನೀ ವ್ಯಸನದ ದುರ್ದಶೆ
ಗಿನ್ನು ಫಲಂ ಪ್ರಾಣದಂಡಮಾದೊಡಮೀಗಳ್
ಎನ್ನಂ ಚುಚ್ಚುರ್ವುದಿಂತಿದು
ನಿನ್ನಿಂ ಹತೆಯಾದಳಾಕೆ ಯೆಂಬೀ ಘೋಷಂ॥ ೨೮೭॥

[ಬಳಿಕ ಉಪ್ಪರಿಗೆಯಲ್ಲಿದ್ದ ಬದ್ಧನಾದ ಸ್ಥಾವರಕಂ ಪ್ರವೇಶಿಪಂ.]

ಸ್ಥಾವರಕನು॥ (ಸಾರುವುದಂ ಕೇಳಿ ವ್ಯಾಕುಲದಿಂದ) ಇದೇನು ಧರ್ಮಿಷ್ಠನಾದ ಆರ್ಯ ಚಾರುದತ್ತನು ಕೊಲ್ಲಿಸಿಕೊಳ್ಳುತ್ತಾನಲ್ಲಾ. ಆಗಲಿ- ಘಟ್ಟಿಯಾಗಿ ಕೂಗುತ್ತೇನೆ-ಕೇಳಿರಯ್ಯಾ! ಕೇಳಿರಿ; ಈ ಹೊತ್ತು ನಾನು ಪುಷ್ಪಕರಂಡಕ ಜೀರ್ಣೋದ್ಯಾನಕ್ಕೆ ಬಂಡಿಯನ್ನು ತೆಗದುಕೊಂಡು ಹೋಗುವಾಗ ತನ್ನ ಬಂಡಿಯೆಂಬ ಭ್ರಾಂತಿಯಿಂದ ವಸಂತಸೇನೆ ಹತ್ತಿ ಬಂದಿದ್ದಳು. ಅಲ್ಲಿ ನಮ್ಮ ದಣಿಯು ಅವಳನ್ನು ಕಂಡು "ನನ್ನನ್ನು ನೀನು ವರಿಸಲಿಲ್ಲ" ವೆಂದು ಬಹುಬಲಾತ್ಕಾರದಿಂದ ಕೊಂದುಬಿಟ್ಟನು. ಪೂಜ್ಯನಾದಿವನು ಕೊಂದವನಲ್ಲ. ಹ್ಯಾಗೆ! ದೂರವಾದ್ದರಿಂದ ಯಾರಿಗೂ ಕೇಳಿಸದಲ್ಲಾ. ಇಲ್ಲಿನ್ನೇನು ಮಾಡಲಿ? (ಯೋಚಿಸಿ) ನಾನು ಹೀಗೆ ಮಾಡಿದರೆ ಆರ್ಯ ಚಾರುದತ್ತನು ಸಾಯಲಾರನು. ಆಗಲಿ, ಈ ಉಪ್ಪರಿಗೆಯ ಕೈಸಾಲೆಯ

ಕಿಟಕಿಯಿಂದ ಕೆಳಕ್ಕೆ ಬೀಳುತ್ತೇನೆ. ಅಥವಾ ನಾನು ಸತ್ತರೆ ಒಳ್ಳೆಯದೇ ಆಯಿತು. ಮತ್ತು ಕುಲಪುತ್ರರೆಂಬ ಪಕ್ಷಿಗಳಿಗೆ ಆಧಾರವಾದ ಆರ್ಯಚಾರುದತ್ತನೆಂಬ ಮರವು ಬಿದ್ದುಹೋಗಬಾರದಲ್ಲ. ಒಂದುವೇಳೆ ಅವನಿಗೋಸ್ಕರವಾಗಿ ನಾನು ಸತ್ತರೆ ಪರಲೋಕವಾದರೂ ಸಿಕ್ಕೀತು. (ಎಂದು ಕೆಳಕ್ಕೆ ಧುಮುಕುತ್ತಾನೆ.) ಹೀ! ಹೀ! ಆಶ್ಚರ್ಯವು. ಸಾಯಲಿಲ್ಲವಲ್ಲ. ಇದೋ ಸಂಕೋಲೆಯೊಂದೇ ಮುರಿದು ಹೋಯಿತು ಒಳ್ಳೆಯದು. ಆ ಚಂಡಾಲರ ಘೋಷವನ್ನೇ ಹುಡುಕುವೆನು. (ನೋಡಿ ಹತ್ತಿರಕ್ಕೆ ಬಂದು) ಎಲೆಲೊ! ಚಂಡಾಲರೇ! ದಾರಿಯುಬಿಡಿ; ದಾರಿಯುಬಿಡಿ.

ಚಂಡಾಲರು ॥ ಎಲಾ! ಯಾರೋ ದಾರಿಯನ್ನು ಕೇಳುವರು?

ಸ್ಥಾವರಕ ॥ ಕೇಳಿರಯ್ಯಾ! ಕೇಳಿರಿ; ನಾನು ಈ ಹೊತ್ತು ಪುಷ್ಪಕರಂಡಕೋದ್ಯಾನಕ್ಕೆ ಬಂಡಿಯನ್ನು ತೆಗೆದುಕೊಂಡು ಹೋಗುವಾಗ ವಸಂತಸೇನೆಯು ತನ್ನ ಬಂಡಿಯೆಂಬಭ್ರಾಂತಿಯಿಂದ ಹತ್ತಿ ಬಂದಿದ್ದಳು, ಅಲ್ಲಿ ನಮ್ಮ ದಣಿಯು "ನನ್ನನ್ನು ನೀನು ವರಿಸುವದಿಲ್ಲವೆ" ಎಂದು ಬಲಾತ್ಕಾರದಿಂದ ಕೊಂದನು, ಈ ಮಹಾತ್ಮನು ಕೊಂದವನಲ್ಲ.

ಚಾರು:—ಎಲೆಲೆ! ಕಂ ॥ ಇವನಾರಿಂತಪ್ಪಿಡರೊಳ್

ಜವನಾಪಾಶಕ್ಕೆ ಸಿಲ್ಕಿದೆನ್ನೊಳ್ದಯೆಯಿಂ

ತವೆ ಮಳೆಯಿಲ್ಲದೆ ಪಿರಿದೊಣ

ಗುವಪೈರೊಳ್ದ್ರೋಣಮೇಘವೆಂಬಂತೆಳೆದಂ॥೨೮೮॥

ಅಯ್ಯಾ! ನಿಮ್ಮಿಂದಂ ಕೇಳಲಾದುದೇ?

ಕಂ ॥ ಮಡಿವಿಂ ಭಯಮಿನಿಸಿಲ್ಲಂ

ಕೆಡುಗುಂ ಜಸವೊಂದೆಯೆಂದುಬೆಗಡೆನಗಿಕ್ಕುಂ॥

ನಡೆಶುದ್ಧನಾದತನಗೀ

ಮಡಿಪೇಗಡ ಪುತ್ರಜನ್ಮಕೆಣೆಯೆನಿಸಿಕ್ಕುಂ॥೨೮೯॥

ಮತ್ತಂ॥ ಪಗೆಯನೆ ಯಾಂ ಗೈಯದೊಡಂ

ಮಿಗೆಪಿಸುಣನಿ ನಲ್ಪಬುದ್ಧಿಯಿಂದೂಷಿತನಿಂ॥

ಬಗೆಯಲ್ ನಂಜಿನೊಳಾಳ್ದಾ

ಶುಗದಿಂದೆನ ಲವನಿಸಿಂತು ದೂಷಿತನಾದೆಂ॥೨೯೦॥

ಚಂಡಾಲರು ॥ ಸ್ಥಾವರಕನೇ! ನೀನು ದಿಟವಾಗಿ ಹೇಳುತ್ತೀಯೋ?

ಸ್ಥಾವರ ॥ ನಿಶ್ಚಯವಾಗಿ ಹೇಳುತ್ತೇನೆ. ನಾನು ನೋಡುತ್ತಿದ್ದೆನಾದ್ದರಿಂದಲೇ ಇವ

ಸುಯಾರಿಗಾದರೂ ಹೇಳಿಯಾನು" ಎಂದು ನನ್ನನ್ನು ಉಪ್ಪರಿಗೆಯ ಕೈಸಾಲೆಯಲ್ಲಿ ಸಂಕೋಲೆಗಳಿಂದ ಬಿಗಿಸಿಟ್ಟಿದ್ದನು.

[ಬಳಿಕ ತಿಂದು ತೇಗುತ ಶಕಾರನು ಬರುತ್ತಾನೆ.]

ಶಕಾರ॥ (ಸಂತೋಷದಿಂದ.)

ವೃ ॥ ಖಂಡಿಸಿ ಮಾಂಸದ ಪಲ್ಯವ ನಾನೀ
ಗುಂಡೆನು ಮೀನಿನ ತೊವ್ವೆಯ ಕೂಡಾ
ಪಿಂಡವ ತಿಂದೆನು ತುಪ್ಪದ ಜೆಡ್ಡಿಂ
ಮಂಡಿಸಿ ನಮ್ಮಯ ಮನೆ ಯೊಳಗೇನೇ॥ ೧೯೧॥

(ಕಿವಿಕೊಟ್ಟು ಕೇಳಿ.) ಸಾರುವ ಮಾದಿಗರ ಕಠಗು ಒಡೆದ ಕಂಚಿನ ಧ್ವನಿಯ ಹಾಗೆ ಯಿದೆ. ತಪ್ಪಟೆಯ ಶಬ್ದವೂ ಕೇಳಿಸುತ್ತೆ. ಆ ದರಿದ್ರ ಚಾರುದತ್ತನನ್ನು ಕೊಲ್ಲುವದಕ್ಕೆ ತೆಗದುಕೊಂಡು ಹೋಗುತ್ತಾರಾದೀತು. ಆದ್ದರಿಂದ ನೋಡುವೆನು ಶತ್ರುನಾಶವೆಂಬುವ್ರದು ನನ್ನ ಮನಸ್ಸಿಗೆ ಬಹಳ ಸಂತೋಷವಾದದ್ದು. ಯಾವನು ಸಾಯುತ್ತಿರುವ ಶತ್ರುವನ್ನು ನೋಡುವನೋ ಅವನಿಗೆ ಜನ್ಮಾಂತರದಲ್ಲಿ ಕಣ್ಣೋವು ಬರುವದಿಲ್ಲವೆಂದು ಕೇಳಿದ್ದೇನೆ ಆದ್ದರಿಂದೀಗ ನಮ್ಮ ಉಪ್ಪರಿಗೆಯನ್ನು ಹತ್ತಿ ಶೂರನಾದ ನನ್ನ ಪರಾಕ್ರಮವನ್ನು ನೋಡುವೆನು. (ಹಾಗೆ ಮಾಡಿ ನೋಡಿ.) ಹೀ! ಹೀ! ಈ ದರಿದ್ರ ಚಾರುದತ್ತನನ್ನು ಕೊಲ್ಲುವದಕ್ಕೆ ತೆಗದುಕೊಂಡು ಹೋದರೆ ಇಷ್ಟೊಂದು ಜನ ಸೇರಬೇಕೇ? ಒಂದು ವೇಳೆ ನಮ್ಮಂಥಾ ದೊಡ್ಡ ಮನುಷ್ಯನು ಕೊಲ್ಲಿಸಿಕೊಂಡರೆ ಇನ್ನ್ಯಾ ಹ್ಯಾಗೆ ಯಿದ್ದೀತೋ? (ನೋಡಿ) ಇದೇನು ನಮ್ಮುಪ್ಪರಿಗೆಯ ಕೈಸಾಲೆಯ ಮುಂದೆ ಸಾರದೇ ಸುಮ್ಮನೇ ನಿಂತಿದ್ದಾರೆ? (ಕೆಳಗೆ ನೋಡಿ) ಹ್ಯಾಗೆ? ಚೇಟನಾದ ಸ್ಥಾವರಕನೂ ಇಲ್ಲಿಯಿಲ್ಲ? ಒಂದು ವೇಳೆ ಇವನು ಅಲ್ಲಿಗೆ ಹೋಗಿದ್ದರೆ ರಹಸ್ಯವೇ ಕೆಟ್ಟು ಹೋದೀತು ಆದ್ದರಿಂದ ಅವನನ್ನು ಹುಡುಕುವೆನು. (ಎಂದಿಳಿದು ಹತ್ತಿರಕ್ಕೆ ಬರುತ್ತಾನೆ.)

ಸ್ಥಾವರಕ॥ (ನೋಡಿ) ಅಯ್ಯಾ! ಇವನೋ ನನ್ನ ಧಣಿ ಬರುತ್ತಿದ್ದಾನೆ.

ಚಂಡಾಲರು॥ ವೃ ॥ ಓರೆಯನಾಗಿ ಹೋಗಿರಯ್ಯ ನೀವೆಯೀಗಲೀ
ದಾರಿಯನ್ನು ಬಿಟ್ಟು ಸುಮ್ಮನಾಗಿ ನಿಲ್ಲಿರೀ
ದ್ವಾರವನ್ನು ಮುಚ್ಚಿಕೊಳ್ಳಿ ದುಷ್ಟಶೀಲದಾ
ಕ್ರೂರಕೊಂಬುವುಳ್ಳ ಗೂಳಿ ಬಪ್ಪುದಿತ್ತಲೇ॥ ೧೯೨॥

ಶಕಾರ॥ ಎಲಾ ಯೆಲಾ! ದಾರಿಬಿಡಿ! (ಹತ್ತಿರಕ್ಕೆ ಬಂದು) ಎಲೆ ಮಗನೇ! ಸ್ಥಾವರಕನೇ? ಬಾ! ಹೋಗೋಣ.

ಸ್ಥಾವರ ॥ ಛೀ! ಛೀ! ಕೆಟ್ಟಮನುಷ್ಯನೇ! ವಸಂತಸೇನೆಯನ್ನು ಕೊಂದು ಸಂತೋಷಪಟ್ಟದ್ದು ಸಾಲದೇ? ಈಗ ಸಜ್ಜನರಿಗೆ ಕಲ್ಪವೃಕ್ಷವಾದ ಆರ್ಯಚಾರುದತ್ತನನ್ನು ಕೂಡ ಕೊಲ್ಲತೊಡಗಿದೆಯಾ?

ಶಕಾರ ॥ ರತ್ನಕುಂಭಕ್ಕೆ ಸಮಾನನಾದಂಥಾ ನಾನು ಹೆಂಗುಸನ್ನು ಕೊಂದೇನೇ?

ಜನಗಳು ॥ ನೀನೇ ವಸಂತಸೇನೆಯನ್ನು ಕೊಂದದ್ದು, ಆರ್ಯಚಾರುದತ್ತನಲ್ಲ.

ಶಕಾರ ॥ ಯಾರು ಹೀಗೆ ಹೇಳುತ್ತಾರೆ?

ಜನಗಳು ॥ (ಸ್ಥಾವರಕನನ್ನು ತೋರಿಸಿ.) ಈ ಸಾಧುವು.

ಶಕಾರ ॥ (ಓರೆಯಾಗಿ ಭಯದಿಂದ.) ಹ್ಯಾಗೆ? ಅಯ್ಯೋ! ಇವನನ್ನು ನಾನು ಚೆನ್ನಾಗಿ ಕಟ್ಟಿ ಹಾಕಿರಲಿಲ್ಲವೋ? ಇವನೇ ನನ್ನ ಕೆಟ್ಟಕೆಲಸಕ್ಕೆ ಸಾಕ್ಷಿಯಾಗಿದ್ದಾನೆ. (ಯೋಚಿಸಿ) ಹೀಗೆಮಾಡುವೆನು. (ಪ್ರಕಾಶವಾಗಿ) ಅಯ್ಯಾ, ಪೌರರೇ! ಇವನು ಹೇಳುವದೆಲ್ಲವೂ ಸುಳ್ಳು. ನಿನ್ನೆ ಇವನು ನಮ್ಮಮನೆಯಲ್ಲಿ ಕಳ್ಳತನ ಮಾಡಿದ್ದರಿಂದ ಇವನನ್ನು ಹಿಡಿದು ಸಾಯುವಹಾಗೆ ಹೊಡದು ಕಟ್ಟಿಹಾಕಿದ್ದೆನು. ಆದ್ವೇಷದಿಂದ ಇವನು ಹಾಗೆ ಹೇಳಿದರೆ ಅದೆಲ್ಲವೂ ನಿಜವಾದೀತೆ? (ಓರೆಯಾಗಿ ಕೈಕಡಗವನ್ನು ತೆಗದು; ಪ್ರಕಾಶವಾಗಿ ಸ್ಥಾವರಕನಿಗೆ ಕೊಡುತ್ತಾನೆ) ಎಲಾ! ಇದರನ್ನು ತೆಗದುಕೋ, ಈಸಲ ಬೇರೆ ಹೇಳು.

ಸ್ಥಾವರಕ ॥ (ಹಿಡಿದು.) ಆಹಾ! ಅಯ್ಯಾ! ನೋಡಿರಿ ನೋಡಿರಿ ಭಂಗಾರದಿಂದ ನನ್ನನ್ನು ಮೋಸಮಾಡುತ್ತಾನೆ.

ಶಕಾರ ॥ (ಕಡಗವನ್ನು ಕಿತ್ತುಕೊಂಡು.) ಯಾವುದಕ್ಕೋಸ್ಕರ ಕಟ್ಟಿ ಹಾಕಿಸಿಕೊಂಡಿದ್ದನೋ ಅದೇ ಈ ಒಡವೆ. (ಕೋಪದಿಂದ) ಎಲೋ! ಚಂಡಾಲರೇ ಇವನನ್ನು ಖಜಾನೆಯನ್ನು ಗುಡಿಸುವದಕ್ಕೆ ಗೊತ್ತುಮಾಡಿದ್ದೆನು. ಅಲ್ಲಿ ಇವನು ಚಿನ್ನವನ್ನು ಕದ್ದದ್ದರಿಂದ ನಿನ್ನೆ ಚೆನ್ನಾಗಿ ಹೊಡಿಸಿಕೊಂಡಿದ್ದಾನೆ. ನನ್ನಮಾತಿನಲ್ಲಿ ನಿಮಗೆ ನಂಬಿಕೆ ಯಿಲ್ಲದಿದ್ದರೆ ಅವನ ಬೆನ್ನು ನೋಡಿರಿ.

ಚಂಡಾಲ ॥ (ನೋಡಿ) ಚೆನ್ನಾಗಿದೆ. ಆಳು ಬಲವಾಗಿ ಹೊಡಿಸಿಕೊಂಡಿದ್ದಾನೆ. ಏನುತಾನೆ ಹೇಳಲಾರನು.

ಸ್ಥಾವರ ॥ ಅಯ್ಯೋ! ಎಂಥಾ ಭಂಡತನ ಚಾಕರಿಯು- ನಾನು ಎಷ್ಟು ನಿಜವನ್ನು ಹೇಳಿದರೂ ಯಾರೂ ನಂಬರಲ್ಲ. (ವ್ಯಸನದಿಂದ) ಆರ್ಯಚಾರುದತ್ತನೇ! ನನ್ನ ಕೈಯಲ್ಲಾದದ್ದು ಇಷ್ಟೇ. (ಎಂದು ಕಾಲಿಗೆ ಬೀಳುತ್ತಾನೆ)

ಚಾರು:— (ಕರುಣದಿಂ)

ಸ ವೃ ॥ ಎಲೆ ಏಳೈ ಪತಿತಾರ್ತಸಾಧುಜನದೊಳ್ ಕಾರುಣ್ಯಮಂಗೈವನೇ!
ಎಲೆ ನಿಷ್ಕಾರಣಬಂಧುವೇ! ಸುಕೃತಿಯೇ! ಸದ್ಧರ್ಮಸಂಪಾದಕಾ!॥

ಸಲೆನೀನುಂ ಸೆರೆಯಿಂದಮೆನ್ನ ಬಿಡಿಸಲ್ಕೀರುಟ್ಟು ಗಂಗೈದೊಡಂ
ಫಲಮಿಲ್ಲಂ ವಿಧಿಯೊಪ್ಪದಿದೊಡದಕಿನ್ನೇಂಗೈಯಲಿಲ್ಲಂದುನೀಂ॥೨೯೩॥

ಚಂಡಾಲ॥ ಬುದ್ಧೀ! ಈ ಚೇಟನನ್ನು ಕೂಡದು ಆಚೆಗೆಳ್ಳಬೇಕು.

ಶಕಾರ॥ ಎಲಾ! ಬಾ ಈಚೆಗೆ ಬಾ! (ಎಂದು ಆಚೆಗೆಸೆಳೆದು) ಎಲೋ ಮಾದಿಗರೇ! ಯಾಕೆ ತಕ್ಕೆ ಸಾವಕಾಶಮಾಡುತ್ತೀರಿ! ಬೇಗನೆಕೊಂಡುಹೋಗಿ ಕೊಂದುಬಿಡಿ.

ಚಂಡಾಲ॥ ಅವಸರವಾಗುವದಾದರೆ ನೀವೇ ಕೊಲ್ಲಬಹುದು.

ಬಾಲಕನು॥ ಎಲೋ ಚಂಡಾಲರೇ! ನನ್ನನ್ನು ಕೊಲ್ಲಿರಿ ನಮ್ಮಪ್ಪನನ್ನು ಬಿಟ್ಟುಬಿಡಿ.

ಶಕಾರ॥ ಎಲೋ! ಇವನನ್ನೂ ಆ ಮಗನನ್ನೂ ಕೂಡ ಕೊಂದುಬಿಡಿ.

ಚಾರು:— ಈ ಮೂರ್ಖರ್ಗೆಲ್ಲಮುಂ ಸರಿವರ್ಕುಂ; ಆದುದರಿಂ ದೆಲೆಮಗುವೇ! ನೀಂ ತಾಯ್ಯ ಬಳಿಗೆ ಪೋಗು.

ಬಾಲಕ॥ ನಾನು ಹೋಗಿ ಮಾಡತಕ್ಕದ್ದೇನು?

ಚಾರು:— ಕಂ॥ ಎಲೆಮಗನೇ! ನೀನೀಗಳೆ
ಕುಲಮುನಿಗಳಯಾಶ್ರಮಕ್ಕೆ ಜನನಿಯನೊಡಗೊಂ
ಡೊಲವಿಂ ತಳ್ವದೆ ಪೋಪುದು
ಸಲೆನೀನುಂ ತನ್ನದೋಷದಿಂ ಕೆಡವೇಡ್ಯ॥೨೯೪॥

ಆದುದರಿಂದೆಲೆಮಿತ್ರನೇ! ನೀನುಮಿವನಂ ಕೊಂಡು ಪೋಗಲ್ತಕ್ಕುದು.

ವಿದೂ॥ ಅಯ್ಯಾ ವಯಸ್ಯನೇ! ನೀನು ಹಾಗೆ ತಿಳಿದಿದ್ದೀಯೇನೋ? ನಿನ್ನನ್ನು ಬಿಟ್ಟು ನಾನು ಪ್ರಾಣಗಳನ್ನಿಟ್ಟುಕೊಂಡಿರುವೆನೆ?

ಚಾರುದತ್ತಂ:— ವಯಸ್ಯನೇ! ನಿರುಪಾಧಿಕನಾದ ನಿನಗೆ ಬರಿದೆ ಪ್ರಾಣವಿಯೋಗ ಉಚಿತಮಲ್ಲಂ.

ವಿದೂ॥ (ತನ್ನಲ್ಲಿ) ಆದು ಸರಿಯಲ್ಲದಿದ್ದರೂ ಮಿತ್ರವಿರಹಿತನಾಗಿ ನಾನು ಪ್ರಾಣಗಳನ್ನಿಟ್ಟುಕೊಂಡಿರಲಾರೆನು, ಆದ್ದರಿಂದ ಈ ಹುಡುಗನನ್ನು ಅವನ ತಾಯಿಯ ಬಳಿಬಿಟ್ಟು ನಾನು ಪ್ರಾಣತ್ಯಾಗದಿಂದಲೇ ಪ್ರಿಯಮಿತ್ರನನ್ನು ಅನುಸರಿಸುವೆನು. (ಪ್ರಕಾಶವಾಗಿ) ಅಯ್ಯಾ! ಹಾಗಾದರೆ, ಇವನನ್ನೂ ಬೇಗನೇ ಕರಕೊಂಡುಹೋಗುತ್ತೇನೆ. (ಎಂದು ಕೊರಳು ಕಟ್ಟಿಕೊಂಡು ಕಾಲಿಗೆ ಬಿದ್ದು ಅಳುತ್ತಾನೆ; ಬಾಲಕನೂ ಅಳುತ್ತಾ ಬೀಳುತ್ತಾನೆ.)

ಶಕಾರ॥ ಎಲೋ ಚಂಡಾಲರೇ! ಸಪರಿವಾರನಾದೀ ಚಾರುದತ್ತನನ್ನು ಕೊಂದುಬಿಡಿಯೆಂದು ಹೇಳಿದೆನಷ್ಟೆ.

ಚಾರು:— (ಭಯಮನಭಿನಯಿಸಿ ಪಂ)

ಚಂಡಾಲ॥ ಅಯ್ಯಾ! ಮಗನೊಂದಿಗೆ ಚಾರುದತ್ತನನ್ನು ಕೊಲ್ಲಬೇಕೆಂದು ನಮಗೆ ಅರಸಿ

ನಪ್ಪಣೆಯಾಗಲಿಲ್ಲ. ಆದ್ದರಿಂದ ಎಲೋ! ಹುಡುಗನೇ! ಹೊರಟು ಹೋಗು (ಎಂದು ಹುಡುಗನನ್ನು ಆಚೆಗೆ ಕಳುಹಿಸಿ) ಎಲಾ! ಗೋಹನೇ! ಇದು ಸಾರುವದಕ್ಕೆ ಮೂರನೆಯ ತಾಣವು. ಇಲ್ಲಿ ಡಂಗುರವನ್ನು ಹೊಡಿಯಿರಿ. (ಅಂತು ಮಾಡಿ ಮತ್ತಾ ಸಾರುತ್ತಾರೆ.)

ಶಕಾರ॥ (ತನ್ನಲ್ಲಿ) ಇದೇನು? ಈ ಜನಗಳಿಗೆ ಯಿನ್ನೂ ನಂಬಿಕೆಯಿಲ್ಲವಲ್ಲ? (ಪ್ರಕಾಶವಾಗಿ) ಎಲಾ! ಚಾರುದತ್ತನೇ! ಈ ಪೌರಜನಕ್ಕೆ ನಂಬಿಕೆಯಿಲ್ಲವಾದ್ದರಿಂದ ನೀನೂ ನಿನ್ನ ನಾಲಿಗೆಯಿಂದಲೇ "ವಸಂತಸೇನೆಯನ್ನು ಕೊಂದೆನು" ಎಂದು ಹೇಳು.

ಚಾರು:— (ಸುಮ್ಮನಿದ್ದರ್ಪಂ)

ಶಕಾರ॥ ಎಲೇ ಮಾದಿಗರೇ! ಇವನು ಸುಮ್ಮನೇ ಹೇಳಲಾರನು. ಆದ್ದರಿಂದ ಈ ಬಿದಿರು ಕಟ್ಟಿಗೆಯ ತುಂಡಿನಿಂದ ಹೊಡದು ಹೊಡದು ಹೇಳಿಸಿರಿ.

ಚಂಡಾಲರು॥ (ಕೋಲನ್ನೆತ್ತಿಕೊಂಡು) ಓ ಚಾರುದತ್ತನೇ! ಹೇಳು ಹೇಳು!

ಚಾರು:— ಕಂ॥ ಈಯೆಡರ ಕಡಲೊಳ್ ಬಿದ್ದಿನ

ಗಾಯಾಸಂಮನಕೆ ಭಯವಿಷಾದಮುಮಿಲ್ಲಂ

ಪ್ರೇಯಸಿಯಂ ವಧಿಸಿದನೆಂ

ಬೀಯಪವಾದಾಗ್ನಿಯೊಂದೆ ಚುಚ್ಚುರ್ವುದೆನ್ನಂ॥೨೯॥

ಶಕಾರ॥ ಮತ್ತಾ ಹಾಗೆಯೇ ಹೇಳುತ್ತಾನೆ.)

ಚಾರು:— ಎಲೆಯೆಲಾ! ಪೌರರೇ?

ಕಂ॥ ಖಳನೆನಿಸಿದ ಪರಲೋಕವ

ತಿಳಿಯದ ತನ್ನಿಂ ನೃಶಂಸನಿಂದಾ ಬೆಲೆವೆಣ್॥

ತಿಳಿಯಲ್ ರತಿರೂಪಿಣಿಯೇ

ಯುಳಿದು ಶಮಿಸೀತನೆಂದು ಪೇಳ್ದಪನುಂತೇ॥೩೦॥

ಶಕಾರ॥ ಕೊಲ್ಲಲ್ಪಟ್ಟಳೋ?

ಚಾರು:— ಅಂತಕ್ಕೆ.

ಚಂಡಾಲರು॥ ಎಲಾ! ಇಂದು ಕೊಲ್ಲುವ ವಂತಿಗೆಯಾರದೋ?

ಎರಡನೆಯವನು॥ ಎಲಾ! ನಿನ್ನದೇ-

ಮೊದಲನೆಯವನು॥ ಎಲಾ! ನನ್ನದಾದರೆ ಹಾಗೇ ಬರದುಕೊಡು (ಎಂದು ಬರಸಿಕೊಳ್ಳುತ್ತಾ) ಎಲಾ! ಇಂದು ನನ್ನ ವಂತಿಗೆಯೇ ಆಗಿದ್ದರೆ ಸ್ವಲ್ಪ ಹೊತ್ತು ಕೊಲ್ಲದೆಯೇ ನಿಲ್ಲಿಸಿರುವೆನು.

ಎರಡನೆಯವನು॥ ಏತಕ್ಕೆ?

ಮೊದಲನೆಯವನು॥ ನಮ್ಮಪ್ಪ ಸ್ವರ್ಗಕ್ಕೆ ಹೋಗುವಾಗ "ಎಲಾ ಮಗುವೇ? ಕೊಲ್ಲುವ

ವಂತಿಗೆ ನಿನಗೆಬಂದಕಾಲದಲ್ಲಿ ಬೇಗನೆ ಕೊಲ್ಲದೇ ಕೊಂಚಹೊತ್ತುನಿಲ್ಲಿಸಿರಿ"
ಎಂದು ನನಗೆಹೇಳಿದ್ದನು.

ಎರಡನೆಯವನು॥ ಏನು ಕಾರಣ?

ಮೊದಲನೆಯವನು॥ ಯಾವಾಗಲಾದರೂ ಯಾವನಾದರೂ ಒಬ್ಬ ಸಾಧುವು ಹಣವನ್ನು ಕೊಟ್ಟು ಬಿಡಿಸುವದುಂಟು; ಯಾವಾಗಲಾದರೂ ಅರಸುಗಳಿಗೆ ಪುತ್ರೋತ್ಸವವಾದೀತು. ಆಗ ಎಲ್ಲಾ ವಧ್ಯಗಳಿಗೂ ಮೋಕ್ಷವಾಗುತ್ತೆ; ಯಾವಾಗಲಾದರೂ ಆನೆಮದಹತ್ತಿ ಕಟ್ಟುಬಿಚ್ಚಿಕೊಳ್ಳುವದುಂಟು. ಆ ಸಂಭ್ರಮದಲ್ಲಿ ಕೊಲೆ ತಪ್ಪಿಹೋಗುತ್ತೆ. ಅಥವಾ ಎಂದಾದರೂ ರಾಜ್ಯ ಬದಲಾಯಿಸುವದೂ ಉಂಟು ಆಗ ಎಲ್ಲಾ ವಧ್ಯರಿಗೂ ಮೋಕ್ಷವಾಗುವದು.

ಶಕಾರ॥ ಏನೇನು? ರಾಜ್ಯ ಬದಲಾಯಿಸುವದೋ?

ಚಂಡಾಲರು॥ ಆದ್ದರಿಂದಲೇ! ಆ ಕೊಲ್ಲುವವಂತಿಗೆಗಾಗಿ ಬರೆಹದ ಕಟ್ಟಳೆಯನ್ನು ಮಾಡಿಕೊಳ್ಳೋಣ.

ಶಕಾರ॥ ಎಲಾ! ಸಾವಕಾಶಮಾಡದೇ ಬೇಗನೆ ಕೊಂದುಬಿಡಿ (ಎಂದು ಹೇಳಿ ಚೇಟನನ್ನು ಕರಕೊಂಡು ಓರೆಯಾಗಿ ಹೋದನು.)

ಚಂಡಾಲರು॥ ಆರ್ಯ ಚಾರುದತ್ತನೇ! ನಾವು ಚಂಡಾಲರು ನ... ...ಯತ್ನವೇನಿದೆ.? ... ಅರಸಿನ ಅಪ್ಪಣೆಯು ಪರಾಧವಾಗಿರುತ್ತೆ. ಅ... ...ದ್ದರಿಂದ ಈಗಲೇ ಯೋನೇನು ನೆನೆಯಬೇಕೋ ನೆನೆಕೋ.

ಚಾರು:— ವೃ॥
ಲೌಪವದೋಷದಿಂ ಪ್ರಬಲಪೂರುಷವಾಕ್ಯದಿನಿಂದು ದೋಷವು
ದ್ಭಾವಿಸದೋಷಿಯೆಂದೆನಿಸಿಕೊಂಡೊಡಮೆನ್ನೊಳಧರ್ಮವಿಲ್ಲ ನೀ
ಣಾವೆಡೆಯೆಂತುಪೋಸುಕೃತಲೇಶಮದಿರ್ದೊಡೆ ತತ್ಪ್ರಭಾವದಿಂ
ದಾವಧುವೆತ್ತಲಿರ್ದೊಡವೊರಲ್ದರೆ ಪಾರಿಕೆ ಮತ್ಕಳಂಕಮಂ॥ ೬೯॥

ಚಂ॥ ಎಲ್ಲೈ! ಇನ್ನು ಮಾನೆತ್ತ ಪೋಗಲ್ತಕ್ಕದು!

॥ (ಮುಂದೆ ತೋರಿಸಿ) ಇದಿಗೋ ತೆಂಕಲ ಮಸಣವು ಕಾಣುತ್ತಿದೆ. ನೋಡುತ್ತಲೇ ವಧ್ಯಗಳು ಪ್ರಾಣಬಿಡುವ ಹಾಗೆ ಇದೆ ನೋಡು ನೋಡು.— ದೊಡ್ಡಗಳು ಶೂಲದಮೇಲಿರುವ ಹೆಣವನ್ನು ಕೆಳಕ್ಕೆ ಳೆಯುತ್ತಿದೆ. ಕೆಳಗೆಬಿದ್ದ ರುಂಡಗಳು ನಗುತ್ತಿರುವಂತೆ ಹಲ್ಲು ಕಿರಿದುಕೊಂಡಿದೆ.

ಚಾ॥ ಅಕ್ಕಟಾ! ಮಂದಭಾಗ್ಯನಾದಾಂ ಹತನಾದೆಂ (ಎಂದು ವ್ಯಸನದಿಂ ಕೆಳ್ಗೆ ...)

ಶಕಾ॥ ...ರ್ಪಂ.)

ಚಾರುದತ್ತನ ಸಾವನ್ನು ನೋಡದೇ ನಾನು ಹೋಗುವದಿಲ್ಲ. (ಎಂದು ಸುತ್ತಾ ನೋಡಿ) ಇದೇನು ಕೂತುಕೊಂಡ?

ಚಂಡಾಲರು॥ ಅಯ್ಯಾ! ಚಾರುದತ್ತನೇ! ಭಯಪಟ್ಟೆಯಾ?

ಚಾರು:—(ಧೈರ್ಯದಿಂದ ನಿಂತು) ಮೂರ್ಖನೇ! "ಮದಿವಿಂ ಭಯಮಿಸಿಲ್ಲ [illegible]" ಎಂಬ ಪದ್ಯವನ್ನು ಪೇಳ್ದಪಂ.

ಚಂಡಾಲರು॥ ಆರ್ಯ ಚಾರುದತ್ತನೇ! ಆಕಾಶದಲ್ಲಿ ವಾಸವಾದುವ ಸೂರ್ಯಚಂದ್ರರೂ ಕೂಡ ವಿಪತ್ತನ್ನು ಹೊಂದುತ್ತಾರೆ. ಸಾಯುವಜನರಪಾಡಿನ್ನೇನು ಹೇಳಬೇಕು? ಲೋಕದಲ್ಲಿ ಯೆದ್ದುನಿಂತವನು ಬೀಳುವದುಂಟು. ಬಿದ್ದವನೆದ್ದು ನಿಲ್ಲುವದುಂಟು ಮತ್ತಾ ಯಾವಾಗಲಾದರೂ ಸತ್ತ ಹೆಣವೂ ಕೂಡ ಬದುಕುವದುಂಟು. ಇದೆಲ್ಲವನ್ನೂ ಮನಸ್ಸಿಗೆ ತಂದುಕೊಂಡು ಸಮಾಧಾನವಾಗು (ಮಾದಿಗರನ್ನು ಕುರಿತು) ಯೆಲೋ! ಇದು ನಾಲ್ಕನೆಯ ಸಾರುವ ತಾಣವು. ಇಲ್ಲಿ ಡಂಗುರವನ್ನು ಹೊಡದು ಸಾರಿರಿ. (ಎಂದು ಹಾಗೆ ಮಾಡುತ್ತಾರೆ.)

ಚಾರು:—ಹಾ ಪ್ರಿಯೆಯೇ! ವಸಂತಸೇನೆಯೇ! "ಶಶಿನಿರ್ಮಲರುಚಿ ಮಂಜುಲ" ಎಂಬ ಪದ್ಯವಂ ಪಠಿಸಂ,

[ಬಳಿಕ ತ್ವರೆಯಿಂದ ವಸಂತಸೇನೆಯುಂ ಯತಿಯುಂ ಪ್ರಗುವರ')

ಯತಿ॥ [illegible] ಆರ್ಯವು! ಆಕಸ್ಮಿಕವಾಗಿ ಆಯಾಸಪಟ್ಟಿದ್ದ ವಸಂತಸೇನೆಯನ್ನು ಸಮಾಧಾ[illegible] ನಾನು ಈ ಸನ್ಯಾಸದಿಂದ ಸುಗೃಹೀತನಾಗಿರುವೆನು. ಎಲೇ ಸಪಡಿಸಿ ಕರತರುತ್ತಾ[illegible] ಎಲ್ಲಿಗೆ [illegible]ಕೊಂಡು ಹೋಗಬೇಕು? ಬುದ್ಧೋಪಾಸಕಳೇ! ನಿನ್ನನ್ನು [illegible] ಚಂದ್ರನನ್ನು ನೋಡಿದ ಚ

ವಸಂತ॥ ಆರ್ಯ ಚಾರುದತ್ತನ ಮನೆಗೆ. ಆತನ ದರ್ಶನದಿಂ[illegible] ಕೋರಿಯ ಹಾಗೆ ಸಂತೋಷಿಸುವೆನು.

ಯತಿ॥ (ತನ್ನಲ್ಲಿ) ಯಾವದಾರಿಯಿಂದ ಹೋಗಲಿ? (ಯೋಚಿಸಿ) ರಾಜಮಾ[illegible] ಹೋಗುತ್ತೇನೆ. ಉಪಾಸಕಳೇ! ಇದು ರಾಜಮಾರ್ಗವು ಹೀಗೆ ಬಾ! ದಾರಿಯಲ್ಲಿ ತುಂಬಾ ಜನದ ಗುಂಪಿದೆ. ದೊಡ್ಡ ಕಲಕಲಧ್ವನಿಯೂ

ವಸಂತ॥ (ಮುಂದೆ ತೋರಿಸಿ) ಇದೇನು ಮುಂದೆ ಯಿಂಥಾ ಗುಂಪು? ಅಯ್ಯಾ! [illegible] ತೋತಿಳಿದುಕೋ ಭೂಮಿಯು ವಿಷಮಭಾರವನ್ನು ಹೊತ್ತುಕೊಂಡಿ ಜ್ಜಯಿನಿಯೆಲ್ಲಾ ಒಂದು ಕಡೆಗೆ ಬಾಗಿಯಿದೆ.

ಚಂಡಾಲ॥ ಸಾರುವದಕ್ಕೆ ಇದೇ ಕಡೆಯ ತಾಣವು. ಡಂಗುರವನ್ನು ಹೊಡಿಯಿರಿ ಗಿ ಸಾರಿರಿ. (ಹಾಗೆ ಮಾಡಿ) ಅಯ್ಯಾ! ಚಾರುದತ್ತನೇ! ಕೊಂಚವಿಲ್ಲ ಬೇಡ; ಬೇಗನೇ ಕೊಲ್ಲಿಸಿಕೊಳ್ಳುವಿ.

ಚಾರು:—ಅಂತಕ್ಕೆ.

ಯತಿ॥ (ಕೇಳಿ ತ್ವರೆಯಿಂದ) ಉಪಾಸಕಳೇ! ನಿನ್ನ ಚಾರುದತ್ತನಿಂದ ಮಾರಿತ್ತ[illegible] ದು ಚಾರುದತ್ತನನ್ನು ಕೊಲ್ಲುವದಕ್ಕೆ ತೆಗದುಕೊಂಡು ಹೋಗುತ್ತಿದ್ದಾರೆ.

ವಸಂತ॥ ತ್ವರೆಯಿಂದ ಛೀ! ಛೀ! ಅಯ್ಯೋ! ಮಂದಭಾಗ್ಯಳಾದ ನನಗೋಸ್ಕರವಾಗಿ ಆರ್ಯ ಚಾರುದತ್ತನು ಕೊಲ್ಲಿಸಿಕೊಳ್ಳಬೇಕಾಯಿತೇ? ಅಯ್ಯಾ! ಬೇಗಬೇಗದಾರಿಯನ್ನು ತೋರಿಸು.

ಯತಿ॥ ಬೇಗ ಬೇಗ ಬರಬೇಕು ಜೀವಂತನಾದ ಆರ್ಯ ಚಾರುದತ್ತನನ್ನು ನೋಡುವಿ. ಅಯ್ಯಾ! ದಾರಿಯಬಿಡಿ ದಾರಿಯಬಿಡಿ!

ವಸಂತ॥ ದಾರಿ ದಾರಿ.

ಚಂಡಾಲರು॥ ಆರ್ಯ ಚಾರುದತ್ತನೇ! ಈ ತಪ್ಪು ದಣಿಗಳದಾಗಿರುತ್ತೆ ನಮ್ಮದಲ್ಲ. ಅದರಿಂದ ಏನು ನೆನಕೊಳ್ಳಬೇಕೋ ನೆನಕೋ.

ಚಾರು:—ಪಲುವಾತಿಂದೇಂ? "ದೈವದದೋಷದಿಂ ಪ್ರಬಲಪೂರುಷ" ಎಂಬಪದ್ಯಮಂ ಪಠಿಸಿದಪಂ.

ಚಂಡಾಲರು॥ (ಕತ್ತಿಯಂ ಸೆಳೆದು) ಆರ್ಯ ಚಾರುದತ್ತನೇ! ಉದ್ದವಾಗಿ ಸರಿಯಾಗಿ ನಿಲ್ಲು ಒಂದೇ ಪೆಟ್ಟಿನಿಂದ ನಿನ್ನನ್ನು ಸ್ವರ್ಗಕ್ಕೆ ಕಳಿಸುತ್ತೇವೆ.

ಚಾರು:—ಅಂತಕ್ಕೆ (ಎಂದು ಹಾಗೆಯೇ ಇರುತ್ತಾನೆ.)

ಚಂಡಾಲರು॥ (ಹೊಡೆಯ ತೊಡಗಿ, ಕೈಯಿಂದ ಕತ್ತಿಯು ನೆಲಕ್ಕೆ ಬಿದ್ದದ್ದನ್ನು ಅಭಿನಯಿಸುತ್ತಾ.) ಛೀ! ಹ್ಯಾಗೆ?

ಕಂ॥ ಖಡುಗದ ಬುಡವನು ನೆಟ್ಟಗೆ
ಹಿಡಿಯಿಂದಲೆ ಸೆಳೆದು ಹಿಡಿದರೂ ಘಕ್ಕನೆ ತಾನ್
ಸಿಡಿಲಿಗೆ ಸಮಾನವಾಗು
ತ್ತೊಡನೀ ನೆಲದಲ್ಲಿಯೇಕೆ ಬಿತ್ತೋ ಯಿಗಾ॥ ೧೯೮॥

ಹೀಗೆ ಆದ್ದರಿಂದ ಆರ್ಯ ಚಾರುದತ್ತನು ಸಾಯಲಾರನೆಂದು ತೋರುತ್ತೆ. ಭಗವತಿಯಾದ ಸಹ್ಯವಾಸಿನಿಯೇ! ಪ್ರಸನ್ನಳಾಗು ಪ್ರಸನ್ನಳಾಗು ಚಾರುದತ್ತನಿಗೆ ಮೋಕ್ಷವಾಗುವ ಹಾಗೆ ಅನುಗ್ರಹಿಸು; ಅದರಿಂದ ನಮ್ಮ ಚಂಡಾಲಕುಲಕ್ಕೇನೇ ಕೀರ್ತಿ ಬಂದೀತು.

ಮೊದಲನೆಯವನು॥ ಅಪ್ಪಣೆಯ ಮೇರೆಗೆ ಮಾಡೋಣ;

ಎರಡನೆಯವನು॥ ಆಗಲಿ ಹೀಗೆ ಮಾಡೋಣ (ಎಂದು ಇಬ್ಬರೂ ಚಾರುದತ್ತನನ್ನು ಶೂಲದ ಮೇಲೇರಿಸಲೆಳಸುತ್ತಾರೆ.)

ಚಾರು:—"ದೈವದದೋಷದಿಂ ಪ್ರಬಲ" ಎಂಬಪದ್ಯಮಂ ಪೇಳ್ದಪಂ.

ಯತಿಯು ವಸಂತಸೇನೆಯು॥ (ನೋಡಿ) ಅಯ್ಯಾ! ಬೇಡಬೇಡ ಅಯ್ಯಾ! ಇದೋ ಇವನೇ ತಕ್ಕೋಸ್ಕರ ಕೊಲ್ಲಿಸಿಕೊಳ್ಳುತ್ತಿದ್ದಾನೋ ಆ ನಿರ್ಭಾಗ್ಯಳೇ ನಾನಾಗಿದ್ದೇನೆ.

ಚಂಡಾಲ॥ (ನೋಡಿ) ಕಂ॥ ಯಾರಿವಳು ಕೇಶಪಾಶದ

ಭಾರವಹಗಲಲ್ಲಿ ಹೊರುತ ಲೆತ್ತಿದಕ್ಕೈಯಂ
ತೋರಿಸುತಬೇಡಬೇಡೆಲೆಲೊ
ಸಾರುವೆನೆಂದೊಡರುತೀಗ ಲೆತ್ತಲಿಬರುವಳ್॥ ೧೯೯॥

ವಸಂತ॥ ಆರ್ಯ ಚಾರುದತ್ತನೇ! ಇದೇನು? (ಎಂದು ಎದೆಯಲ್ಲಿ ಬೀಳುತ್ತಾಳೆ)

ಯತಿ॥ ಆರ್ಯ ಚಾರುದತ್ತನೇ! ಇದೇನು (ಎಂದುಕಾಲಿಗೆಬೀಳುತ್ತಾನೆ)

ಚಂಡಾಲ॥ (ಭಯದಿಂದ ಹತ್ತಿರಕ್ಕೆ ಬಂದು) ಇವಳೆ ವಸಂತಸೇನೆಯೋ? ಈಸಾಧುವನ್ನು ಇದು ವರಿಗೆಕೊಲ್ಲದೇಯಿದ್ದದ್ದು ಪ್ರೊಳ್ಳೆಯದಾಯಿತು.

ಯತಿ॥ (ಎದ್ದು)ಎಲಾ ಆರ್ಯ ಚಾರುದತ್ತನು ಬದುಕಿದ್ದಾನೆಯೋ?

ಚಂಡಾಲ॥ ನೂರುವರ್ಷಗಳು ಬದುಕಿರುವನು.

ವಸಂತ॥ (ಸಂತೋಷದಿಂ) ಬದುಕಿದೆನು.

ಚಂಡಾಲರು॥ ಈಸುದ್ದಿಯನ್ನು ಯಜ್ಞಶಾಲೆಯಲ್ಲಿರುವ ಪಾಲಕರಾಯನವರಿಗೆ ಅರಿಕೆ ಮಾಡೋಣ. (ಎಂದುಹೊರಟುಹೋದರು.)

ಶಕಾರ॥ (ವಸಂತಸೇನೆಯನ್ನುನೋಡಿ ಭಯದಿಂದ.) ಆಶ್ಚರ್ಯವು! ಈಗರ್ಭದಾಸಿಯನ್ನು ಯಾರುಬದುಕಿಸಿದರು? ನನ್ನಪ್ರಾಣಗಳು ಹೋದಹಾಗೆಯೇ ಸರಿ. ಆಗಲಿ. ಓಡಿಹೋಗುತ್ತೇನೆ (ಎಂದುಓಡುತ್ತಾನೆ.)

ಚಂಡಾಲರು॥ (ಬೆಂಬಿಡಿದು)ಎಲಾ! ನಮಗೆ ಅರಸು ಹೀಗೆ ಅಪ್ಪಣೆಮಾಡಿರುವನಲ್ಲವೆ?

ಎರಡನೆಯವನು॥ ಹ್ಯಾಗೆ?

ಮೊದಲನೆಯವನು॥ ಯಾರುವಸಂತಸೇನೆಯನ್ನು ಕೊಂದರೋ ಅವನನ್ನು ಕೊಲ್ಲಬೇಕೆಂದು.

ಎರಡನೆಯವನು ॥ ಆದರೆ ಆರಾಷ್ಟ್ರಿಯಶ್ಯಾಲನನ್ನು ಹುಡುಕೋಣ ನಡಿ(ಯೆಂದುಹೊರಟುಹೋದರು)

ಚಾರು:—(ಆಶ್ಚರಿಯಿಂದ)

ಕಂ॥ ಇವಳಾ ಕೈದುಗೆ ನಿಜಶೀ
ರ್ಷವಿತ್ತು ಮೃತ್ಯುಮುಖವೊಂದಿದೆನ್ನೊಳ್ಕೃಪೆಯಿಂ
ತವೆಮಳೆಯಿಲ್ಲದೆ ಪಿರಿದೊಣ
ಗುವಪೈರೊಳ್ಪ್ರೀಣಮೇಘವೆಂಬಂತಿಳಿದಳ್ ॥೨೦೦॥

(ನೋಡಿ) ಇವಳಾ ವಸಂತಸೇನೆಯೊ?
ದಿವದಿಂಬೇರೋರ್ವಳಿಂತು ಬಂದಳೊಮತ್ತಾ
ಣಾವನುಳಿಸಲಾನ್ತಂ ತಿಳಿಯದೆ
ತವೆತದ್ರೂಪಾನುರೂಪಕಾಂಭ್ರಮಿಸಿರ್ಪೆಂ॥೨೦೧॥

ವಸಂತ॥ (ಕಣ್ಣೀರುಸುರಿಸುತ ಕಾಲಿಗೆಬಿದ್ದು.) ಆರ್ಯಚಾರುದತ್ತನೇ! ಯಾವಳಿಗೋಸ್ಕರವಾಗಿನೀನು ಇಂಥಾ ಅನುಚಿತಾವಸ್ಥೆಯನ್ನು ಹೊಂದಿದೆಯೋ ಆಭಾಗ್ಯಳೇನಾನು.

[ತೆರೆಯಲ್ಲಿ] ಆಶ್ಚರ್ಯವಾಶ್ಚರ್ಯವು! ವಸಂತಸೇನೆಬದುಕಿದ್ದಾಳೆ (ಎಂದುಎಲ್ಲರೂ ಹೇಳುತ್ತಾರೆ)

ಚಾರು:—(ಕೇಳ್ದು ಭೋಂ ಕನೇಳ್ದು, ಸ್ಪರ್ಶಸುಖಮನನುಭವಿಸುತ್ತೆ ಕಣ್ತೆರೆದು ಸಂತಸದ ತೊದಲ್ನುಡಿಯಿಂದೆ) ಪ್ರಿಯೆಯೇ! ವಸಂತಸೇನೆಯೇನೋನೀಂ.?

ವಸಂತ॥ ಆನಿಭಾಗ್ಯಳೇ ನಾನು.

ಚಾರು:—(ತೋರಿಸಿಸಂತಸದಿಂದೆ) ವಸಂತಸೇನೆಯೇ ಇವಳ್;

(ಆನಂದದೊಡನೆ) ಕಂ॥ ಯಮವಶನಾಗಿರೆತಾನೀ
ಕ್ರಮದಿಂ ಕಂಬನಿಗಳಿಂದೆ ಕುಚಮಂ ನೆನೆಸು
ತ್ತಮಮೆತ್ತಣಿಂದೆ ಬಂದಳ್
ಸಮಯದೆ ಸಂಜೀವಿನೀಸುವಿದ್ಯೆಯತೆರದಿಂ॥೩೦೨॥

ಇನಿಯಳೇ! ವಸಂತಸೇನೆಯೇ!

ಕಂ॥ ಕೆಡೆದುಂ ನಿನಗೋಸುಗಮೆ
ನ್ನೊಡಲಿದು ನಿನ್ನಿಂದೆ ನಿಡಿಸಲಾದುದುಮತ್ತಂ
ಮಡಿದುಂ ಜೀವಿಪನಾವನೊ
ಕಡೆಗಾಪ್ರಿಯಸಂಗಮಪ್ರಿಮೆಯೇನಚ್ಚರಿಯೋ॥೩೦೩॥

ಮತ್ತಂ॥ ಪ್ರಿಯೆಯೇ? ನೋಡು—

ಕಂ॥ ಪರಿಣಯದೊಳೆಂತುಮೆರೆವುದೊ
ವರಂಗೆತದ್ವರ್ಣವಸ್ತ್ರಮುಂ ಪ್ರಸರಮುಂ
ವರವಾದ್ಯರವಮು ಮಂತೆಯೊ
ಸರವೀಚೆಂಬರಿನೆವಧ್ಯಪಟಹಧ್ವನಿಯುಂ॥೩೦೪॥

ವಸಂತ॥ ಆರ್ಯನಾದನೀನು ಹೀಗೆಸಾಹಸವನ್ನು ಮಾಡಬಹುದೇ?

ಚಾರು:—ಇನಿಯಳೇ! 'ನೀನೆನ್ನಿಂಕೊಲ್ಲಲ್ಪಟ್ಟೆಯ್' ಎಂದುಶಾರನಾದಪೂರ್ವಪ್ರಾಪ್ತಶತ್ರುವಿಂ ನರಕದೊಳ್ಬೀಳ್ವನಿಂದಾನಿಂತು ಕೆಡೆಯಿಸಿಗೊಂಡೆಂ.

ವಸಂತ॥ (ಕಿವಿಗಳಂಮುಚ್ಚಿ) ಪಾಪವುಶಾಂತವಾಗಲಿ ಆದುಮಾರ್ಗಗರಾಜಶ್ಯಾಲನಿಂದಲೇ ಕೊಲ್ಲಿಸಿಕೊಳ್ಳಲ್ಪಟ್ಟೆನು.

ಚಾರು:—(ಯತಿಯಂನೋಡಿ) ಆರೀತನು?

ವಸಂತ॥ ಅನಾರ್ಯನಾದ ಅವನುಕೊಂದುಹೋದಾಗ ಈಯತಿಯೇನನ್ನಂಬದುಕಿಸಿದನು

ಚೇಟ:—ಅಕಾರಣಬಂಧುವಾದಸೀನಾರ್ಯೆ!

ಯತಿಯು॥ ಆರ್ಯನಿಗೆ ಜ್ಞಾಪಕವಿರಲಾರದೇನೋ? ನಾನು ಮುಂಚೆ ಸಂವಾಹಕನೆಂಬ
ಹೆಸರಿನಿಂದ ತಮ್ಮ ಪಾದಸೇವೆ ಮಾಡುತ್ತಿದ್ದೆನು. ಆಮೇಲೆ ಜೂಜಿನಲ್ಲಿ ಹತ್ತು ಹ
ಣಕ್ಕಾಗಿ ಸೋತು ಸಿಕ್ಕಿಯಿಾಯುವಾಸಕಳಿಂದ ಆಸಾಲವನ್ನು ತೀರಿಸಿಕೊಂಡು, ಈ
ಕೆಗೆ ಪ್ರತ್ಯುಪಕಾರಾಕ್ಷಮನಾಗಿ ಆವ್ಯಸನದಿಂದಲೇ ಹೀಗೆ ಬೌದ್ಧಯತಿಯಾದೆ
ನು. ಈಕೆಯು ಬಂಡಿಬದಲಾಯಿಸುವದರಿಂದ ಪುಷ್ಪಕರಂಡಕೋದ್ಯಾನಕ್ಕೆ ಬರ
ಲು, ಆದುಷ್ಟಶಕಾರನು 'ನನ್ನನ್ನುನೀನು ಏಕೆವರಿಸಲಿಲ್ಲ' ವೆಂದು ಬಲಾತ್ಕಾರ
ದಿಂದಹೊಡೆದು ಕೆಡವಿಹೋಗಿದ್ದನು. ನಾನುಬಂದುನೋಡಿದೆನು.

[ತೆರೆಯಲ್ಲಿ]:—(ಕಲಕಲ ಮಪ್ಪುದು,):—

ವೃ॥ ಜಯಿಸುಗೆದಕ್ಷಯಜ್ಞಕೆವಿನಾಶಕನಾದವೃಷಧ್ವಜಂಹರಂ
ಜಯಿಸುಗೆಕ್ರೌಂಚಶತ್ರುವೆನಿಸಿದ್ದರ್ದನೂದ್ಭವಭೇತ್ತೃಷಣ್ಮುಖಂ
ಜಯಿಸುಗೆತಾಳ್ದಶತ್ರುಗಳವರ್ಗಮನಾರ್ಯಕನೆಂಬಗೊಲ್ಲನುಂ
ಭಯಮಿನಿಸಿಲ್ಲದೀವಿಪುಲಪೃಥ್ವಿಯನೋವುತೆಧರ್ಮದಿಂವಲಂ॥ ೩೦॥

[ಬೇಗನೆ ಶರ್ವಿಲಕಂ ಪುಗುವಂ.]

ಶರ್ವಿಲಕಂ:— ವೃ॥ ಕುನೃಪತಿಯಾದಪಾಲಕನಘಾತಿಸಿಯಾರಿಪರಾಜ್ಯದಲ್ಲಿ ಗೊ
ಲ್ಲನಮಗನಾರ್ಯಕಂಗೆ ತವೆಪಟ್ಟವಗಟ್ಟಿತದಾಜ್ಞೆಯಿಂದಮೀ
ಜನಗಳಸಂತಮಿಟ್ಟು ಪಲುಗಟ್ಟಳೆಯಾಗಿಸಿರಾಜಧಾನಿಯು
ಲ್ಲನುನಯದಿಂದಮಾಂಬಿಡಿಪೆನಾಯೆಡರೊಂದಿದಚಾರುದತ್ತನಂ॥

(ಮುಂದೆ ತೋರಿಸಿ.) ಇದೊ ಇಲ್ಲಿಜನಂಗಳಗಡಣಮಿಪ್ಪುದು. ಅಲ್ಲಿ ಯಾತನಿ
ರಲಕ್ಕುಂ. ಆಯಾರ್ಯ ಚಾರುದತ್ತಂ ಬದುರ್ಕಿರದೊಡೆ ಎಮ್ಮಾರ್ಯಕ
ರಾಯನುಜ್ಜುಗಂ ಸಫಲಮಕ್ಕುಮೇ? (ಬೇಗನೆಬೇಗನೆಬಂದು) ಎಲೆಜಾಲ್ಮರೇ!
ಓರೆಯಾಗಿರಿ. (ನೋಡಿ, ಸಂತಸದಿಂದೆ.) ಆರ್ಯ ಚಾರುದತ್ತಂ ವಸಂತಸೇನೆ
ಯೊಡನೆ ಬದ್ದುರ್ಕಿದ್ದರ್ಪನೇ ಆದೊಡೆಮ್ಮರಸನಮನೋರಥಂಗಳ್ ಸಂಪೂ
ರ್ಣಮಕ್ಕುಮಲ್ತೆ.

ವೃ॥ ಸನ್ನುತವೃತ್ತಮುಂಗುಣಮುಮುಳ್ಳ ಪಡಂಗನೆಪೋಲ್ವಕಾಂತೆಯಿಂ
ಬನ್ನದಪಾರಗಾಣದಹಪೇರ್ಗಡಲಂನೆರೆದಾಂಟುತಿರ್ಪನಂ
ಜೊನ್ನದಿನೊಪ್ಪಿರಾಜಿಪ್ಪುಪರಾಗವಿಮುಕ್ತನುಮಾದಚಂದ್ರನಂ
ತಿನ್ನೊಸೆದಿಪ್ಪನಂನಿರುಕಿಪೆಂಸುಖದಿಂದಮೆಚಾರುದತ್ತನಂ॥ ೩೧॥

ನೋಣ್ ಮಹಾಪಾಪಂಗೆಯ್ದಾನುಂ ಈತನನೆಂತುಬಳಿಸಂದಪೆಂ? ಆದೊಡಮೆಲ್ಲಿ

ತೆಯಲ್ಲಿಯುಂ ಬುಭುಕ್ಷುತ್ವಮೇಶೋಧಿಕಂ. (ಪ್ರಕಾಶವಾಗಿ ಬಳಿಗೆಬಂದು ಕೈಮುಗಿದು) ಆರ್ಯ ಚಾರುದತ್ತನೇ! ಮಣಿದಪೆಂ.

ಚಾರು:—ಅಯ್ಯಾ! ನೀನಾರ್?

ಶರ್ವಿಲಕಂ:—ಕಂ॥ ನಿನ್ನಯ ಮನೆಯೊಳಗಾವಂ
ಕನ್ನವ ಕೊರೆದೊಳಗೆಪೊಕ್ಕು ಕಳ್ದನೊ ಪೆರರಾ
ಪೊನ್ನಂ ತಾನಂತಪ್ಪಂ
ನಿನ್ನನೆ ಮರೆಪೊಕ್ಕೆನಿಂದು ಕೃತಪಾಪೌಘಂ ॥೩೦೮॥

ಚಾರು:—ಮಿತ್ರನೇ! ಅಂತೆನಲಾಗದು. ನಿನ್ನಿಂದೀ ಪ್ರಣಯಂಗೆಯ್ಯಲಾದುದು. (ಬಂದಪ್ಪಿದಪಂ.)

ಶರ್ವಿಲಕಂ:—ಮತ್ತಂ-ಕಂ॥ ಅತಿಸಾಧುವೃತ್ತನುಂ ಮಾ
ನಿತನುಂ ಸದ್ವಂಶಭವನುಮಾದಾರ್ಯಕನಿಂ
ಕ್ರತುವಾಟದೆ ಪಶುವೆಂಬೋಲ್
ಹತನಾದನವಂ ದುರಾತ್ಮ ಪಾಲಕರಾಯಂ॥ ೩೦೯॥

ಚಾರು:—ಏನೇಂ?

ಶರ್ವಿಲಕಂ:—ಕಂ॥ ಮುನ್ನಾವಂ ತ್ವದ್ಯಾನಮ
ನುನ್ನತಿಯಿಂದೇರಿ ಪಿನ್ನನೇ ಮರೆಪೊಕ್ಕಂ॥
ಸನ್ನುತನಿ ನವನಿ ಶೀಗಳ್
ಜನ್ನದೆ ಪಶುವಂತೆ ಪಾಲಕಂ ಹತನಾದಂ॥ ೩೧೦॥

ಚಾರು:—ಅಯ್ಯಾ! ಶರ್ವಿಲಕನೇ! ಅಂದು ಪಾಲಕರಾಯಂ ಪಳ್ಳಿಯ ಘೋಷದಿಂ ಕರೆಯಿಸಿ ಸೆರೆಯೊಳಿರಿಸಿರ್ದ ಆರ್ಯಕನೆಂಬನಂ ಸೆರೆವನೆಯೊಳಿರಿಸಿರಲ್ಕವನಂ ನೀಂ ಬಿಡಿಸಿದೆಯಲ್ತೇ?

ಶರ್ವಿಲ.—ನೀಂ ಪೇಳ್ದಂತೆಯೆ.

ಚಾರು:—ಆದೊಡೆ ಪ್ರಿಯಮೆಮಗೆ ಪ್ರಿಯಮೈ;

ಶರ್ವಿಲ:—ರಾಜ್ಯಮನಾಂತ ನಿನ್ನಗೆಳೆಯನಪ್ಪ ಆರ್ಯಕರಾಯನಿಂ ಉಜ್ಜಯಿನಿಯ ಬಳಿಯ ಕುಶಾವತೀಪೊಳೆಯ ದಡದೊಳ್ ರಾಜ್ಯಂ ನಿನಗೆ ದತ್ತಮಾಗಿರ್ಪುದು. ಆದರಿಂ ದಾ ಸುಹೃತ್ಪ್ರಣಯಮಂ ನೀಂ ಮೊದಲ್ ಕೈಕೊಳ್ಗೆ; (ತಿರುಗಿನೋಡಿ) ಎಲೆಲಾ! ಆರತ್ತಲ್? ಪಾಪಿಯಾದಾ ರಾಷ್ಟ್ರಿಯನಂ ಪಿಡಿತರಲ್ತಕ್ಕುದು;

[ತೆರೆಯಲ್ಲಿ]:—ಶರ್ವಿಲಕನಪ್ಪಣೆಯಂತಕ್ಕೆ.

ಶರ್ವಿಲ:—ಆರ್ಯ ಚಾರುದತ್ತನೇ! ನಿನ್ನಮಿತ್ರನಾದ ಆರ್ಯಕರಾಯಂ "ಭವದ್ಗುಣೋಪಾರ್ಜಿತಮಾದೀ ರಾಜ್ಯಮಂ ನೀಂ ಯಥೇಚ್ಛಮಾಗಿ ಉಪಯೋಗಿಸಲಕ್ಕು" ಮೆಂದು ಬಿನ್ನವಿಸಿದಪಂ.

ಮೃಚ್ಛಕಟಿಕಪ್ರಕರಣದಲ್ಲಿ.

ಚಾರು:—ಏನಸ್ಮದ್ದುರ್ಗುಣೋಪಾರ್ಜಿತವೋ ಈರಾಜ್ಯಂ?

[ತೆರೆಯಲ್ಲಿ]:—ಎಲೆಲಾ! ರಾಷ್ಟ್ರಿಯಶ್ಯಾಲಕನೇ! ಬಾ! ಬಾ! ನಿನ್ನ ಅವಿನಯಕ್ಕೆ ಫಲವನನುಭವಿಸು,

[ಬಳಿಕ ಅರಸಾಳ್ಗಳಿಂ ಪಿಂಗೈಕಟ್ಟಿಸಿಕೊಂಡ ಶಕಾರಂ ಪುಗುವಂ.]

ಶಕಾರ॥ ಆಶ್ಚರ್ಯವು.

ವೃ॥ ದೂರದೂರಬೇಗವೋಡಿಹೋಗುತಿದ್ದರೂ।
ದಾರಿಯಲ್ಲಿ ಕಟ್ಟಿಬಾಳಹುಚ್ಚುನಾಯಿಯಾ।
ಬಾರಿಯಲ್ಲಿ ಬಿದ್ದಕುಂಟುಕತ್ತೆಯಂತೆಯೊ।
ನೂರುಬಿಟ್ಟುಹೋದನಾನುಕಟ್ಟುಬಿದ್ದೆನೈ॥ ೨೧೧॥

(ದಿಕ್ಕುಗಳಂ ನೋಡಿ) ರಾಷ್ಟ್ರಿಯನಾದ ನನ್ನನ್ನು ಕಟ್ಟಿಹಿಡಿಯುವುದಕ್ಕೆ ಸುತ್ತುಮುತ್ತಲೂ ಜನಸಿದ್ಧವಾಗಿದೆ. ಈಗ ದಿಕ್ಕಿಲ್ಲದ ನಾನು ಯಾರನ್ನು ಮರೆಹೊಂದಲಿ? (ಯೋಚಿಸಿ) ಆಗಲಿ ಆಪನ್ನಶರಣನಾದ ಆ ಚಾರುದತ್ತನನ್ನೇ ಮರೆ ಹೊಗುತ್ತೇನೆ. (ಎಂದು ಬಳಿಗೆ ಹೋಗಿ) ಅಯ್ಯಾ! ಆರ್ಯ ಚಾರುದತ್ತನೇ! ಕಾಪಾಡು, (ಎಂದು ಕಾಲಿಗೆ ಬೀಳುತ್ತಾನೆ)

[ತೆರೆಯಲ್ಲಿ]:— ಆರ್ಯ ಚಾರುದತ್ತನೇ! ಬಿಡು ಬಿಡು, ಅವನನ್ನೀಗಳೇ ಕೊಂದುಬಿಡುವೆವು.

ಶಕಾರ॥ (ಚಾರುದತ್ತನಂ ಕುರಿತು) ಅಯ್ಯಾ! ದಿಕ್ಕಿಲ್ಲದವರಿಗೆ ದಿಕ್ಕಾದವನೇ! ಕಾಪಾಡು,

ಚಾರು:—(ದಯೆಯಿಂದೆ) ಅರರೇ! ಅಭಯಂ ಶರಣಾಗತಂಗಭಯಂ.

ಶರ್ವಿಲ:—(ಖೇದದಿಂದ) ಆಃ! ಇವನಂ ಚಾರುದತ್ತನ ಪಾರ್ಶ್ವದತ್ತಣಿಂ ಓರೆಯಾಗಿಸಲ್ತಕ್ಕುದು. (ಚಾರುದತ್ತನಂ ಕುರಿತು) ಅಯ್ಯಾ! ಈ ಶಠನ ಪಾಪಕ್ಕೆ ಏನೆಸಗಲ್ತಕ್ಕುದೋ, ಆಜ್ಞಾಪಿಸುಗೆ.

ಕಂ॥ ನೆರೆಬಂಧಿಸಿ ಸೆಳೆಯಲೊ? ಮೇಣ್
ಖರಕುಕ್ಕುರಗಳ್ಗೆ ತಿನ್ನವೇಳ್ಪುದೊ? ಇವನಂ।
ಇರಿಸುವುದೋ ಶೂಲದೆ? ನಿಡು
ಕರಗಸದಿಂ ಕುಯ್ದುಸೀಳ್ದು ಬಿಸುಡುವುದೋ? ಪೇಳ್॥ ೨೧೨॥

ಚಾರು:—ಆಂ ಪೇಳ್ದುದನೆ ನೀಂ ಮಾಳ್ಪಿರೋ?

ಶರ್ವಿಲ:—ಅಲ್ಲಿ ಸಂದಿಯವೇಂ?

ಶಕಾರ॥ ಅಯ್ಯಾ ಭಟ್ಟಾರಕನೇ! ಚಾರುದತ್ತನೇ! ನಾನು ಶರಣಾಗತನಾಗಿದ್ದೇನಲ್ಲಾ, ಆದ್ದರಿಂದ ಕಾಪಾಡು ಕಾಪಾಡು, ಆದರೆ ನಿನಗೆ ಹೇಗೆ ಯೋಗ್ಯವೋ ಹಾಗೆ ಮಾಡು, ಮತ್ತು ನಾನಿಂಥಾ ಕೆಲಸ ಮಾಡೋದಿಲ್ಲ.

ತೆರೆಯಲ್ಲಿ ಪೌರರು॥ ಅಯ್ಯಾ ಇವನನ್ನು ಬೇಗ ಕೊಲ್ಲಿಸಿಬಿಡಿ, ಪಾತಕಿಯಾದಿವನು ಏಕೆ ನಿಮಿತ್ತವಿನ್ನೂ ಬದುಕಿರಬೇಕು?

ವಸಂತ॥ (ಚಾರುದತ್ತನ ಕೊರಳಿಂದ ವಧ್ಯಮಾಲಿಯಂ ತೆಗದು ಶಕಾರನ ಕೊರಳಿಗೆ ಸೇರಿಸುತ್ತಾಳೆ.)

ಶಕಾರ॥ ಎಲೆಗರ್ಭದಾಸೀಪುತ್ರಿಯೇ! ಪ್ರಸನ್ನಳಾಗು, ಪ್ರಸನ್ನಳಾಗು, ಮುಂದಾ ವಿನ್ನನ್ನು ಕೊಲ್ಲೋದಿಲ್ಲ. ಆದ್ದರಿಂದ ಬದುಕಿಸು.

ಶರ್ವಿಲ:—ಎಲೆಲಾ! ಇವನಂ ಬೇಗನೆ ಓರೆಯಾಗಿಸಿರಿ. ಆರ್ಯ ಚಾರುದತ್ತನೇ! ಇವನಪಾಪಕ್ಕೆ ಪ್ರಾಯಶ್ಚಿತ್ತಮಂ ಏನೆಸಗಲ್ವೇಕ್ಕುದೋ ಅಜ್ಞಾಪಿಸುಗೆ?

ಚಾರು:—ಅಂಪೇಳ್ದುದನೇ ನೀಂಗೈದಪಿರಲ್ತೆ?

ಶರ್ವಿಲ:—ಅಲ್ಲಿ ಸಂಶಯಮೇಂ?

ಚಾರು:—ಸತ್ಯಮೋ?

ಶರ್ವಿಲ:—ಸತ್ಯಂ.

ಚಾರು:—ಅದೊಡಿವನಂ ಶೀಘ್ರಮಾಗಿ—

ಶರ್ವಿಲ।—ಏಂ ಕೊಲ್ಲಲ್ವೇಕ್ಕುದೋ?

ಚಾರು:—ಅಲ್ಲಲ್ತು—ಬಿಡಲ್ವೇಕ್ಕುದು.

ಶರ್ವಿಲ:—ಏತರ್ಕೆ?

ಚಾರು:— ಕಂ॥ ಅಸುಹೃದನುಂ ಕೃತದೋಷಂ
ಪಿಸುಣಂ ಮರೆವೊಕ್ಕು ಕಾಲ್ಗೆ ಬೀಳಲ್ಕವನಂ।
ಅಸಿಯಿಂದಿರಿಯಲ್ಕಾಗದು—

ಶರ್ವಿಲ:—ಅಂತಾದೊಡೆ ನಾಯ್ಗಳಿಂದೆ ತಿನ್ನಿಸಲಕ್ಕುಂ

ಚಾರು:—ಅಲ್ತು—ಉಪಸೆದುಪಕರಿಸಿದೊಡೆಜೀವಿತನವಂ ಹತನೈ॥ ೩೧೩॥

ಶರ್ವಿಲ:—ಏನಚ್ಚರಿಯಂ? ಅಹಾ!! ಆದೊಡಾರ್ಯಂ ಕರ್ತವ್ಯಮಂ ಪೇಳ್ಗೆ.

ಚಾರು:— ಅವನಂ ಬಿಡಲ್ವೇಕ್ಕುದು.

ಶರ್ವಿಲ:—ಇದೊ ಬಿಟ್ಟೆಂ.

ಶಕಾರ॥ ಆಶ್ಚರ್ಯವು, ಸದ್ಯಕ್ಕೆ ಬದುಕಿಕೊಂಡೆನು. (ಎಂದು ಅರಸಾಳ್ಗಳೊಡನೆ ಹೊರಟು ಹೋದನು.

[ತೆರೆಯಲ್ಲಿ.] ಕಲಕಲವಾದಪ್ರುದು. ಎಲ್ಲರುಂ ಕೇಳ್ದಪರ್.

[ಮತ್ತು ತೆರೆಯಲ್ಲಿ.] ಇದೋ ಆರ್ಯ ಚಾರುದತ್ತನ ಧರ್ಮಪತ್ನಿಯಾದ ಧೂತಾದೇವಿಯು ಸೆರಗು ಹಿಡಿದು ಅಳುವಹುಡುಗನನ್ನು ಆಚೆಗೆ ನೂಕುತ್ತ ಕಣ್ಣೀರು ಸುರಿಸುತ್ತಿರುವ ಜನಗಳಿಂದ ನಿವಾರಿಸಿಕೊಳ್ಳುತ್ತಿದ್ದರೂ ಬಿಡದೆ ಉರಿಯುವ ಬೆಂಕಿಯಲ್ಲಿ ಬೀಳುತ್ತಿದ್ದಾಳೆ.

ಮೃಚ್ಛಕಟಿಕಪ್ರಕರಣದಲ್ಲಿ,

ಶರ್ವಿಲ:—(ಕೇಳ್ದು ತೆರೆಯ ಕಡೆಯಂ ನೋಡಿ) ಏಂ ಚಂದನಕನೋ? ಇಲ್ಲಿ ಬಾ! ಅದೇನದು?

[ಚಂದನಕನು ಬರುವನು.]

ಚಂದನಕನು॥ ಆರ್ಯರು ನೋಡಲಿಲ್ಲವೇ? ಅರಮನೆಯ ಬಾಗಿಲ ಕಡೆಗೆ ಜನಸಂಮರ್ದವು ಬಹಳವಾಗಿದೆ. ನಾನೂ ಅಲ್ಲಿಗೆ ಹೋಗಿದ್ದು ಆಕೆಗೆ "ಸಾಹಸವನ್ನು ಮಾಡಬಾರದು, ಆರ್ಯಚಾರುದತ್ತನು ಬದುಕಿರುವನು" ಎಂದು ಹೇಳಿದರೂ ಲಕ್ಷ್ಯವಾಗಲಿಲ್ಲ. ದುಃಖಹೆಚ್ಚಿದ ಕಾಲದಲ್ಲಿ ಯಾರು ತಾನೇ ಹಿತವನ್ನು ಕೇಳುತ್ತಾರೆ.

ಚಾರು:—(ಉದ್ವೇಗದಿಂದ) ಹಾ ಪ್ರಿಯೆ! ಆಂ ಬರ್ದುಂಕಿರ್ದೊಡಂ ನೀನೇನಿಂತಪ್ಪ ಬೇವಸಮಂ ಗೆಯ್ದಪ್ಪೆ? (ಮೇಲೆ ನೋಡಿ ನಿಟ್ಟುಸಿರ್ಬಿಟ್ಟು)

ಕಂ॥ ಪರಿಕಿಸೆ ನಿನ್ನೀಚರಿತಂ
ಧರಾತಲಸ್ಥಿತಿ ಸಹಿಷ್ಣುವಲ್ತೆಂದಯಿತೇ!
ಪರಲೋಕಸುಖಮದಿರ್ದೊಡ
ಮರೆಸಲಿಯಲ್ತೆಳಿದು ಪತಿಯ ಸುಪತಿವ್ರತೆಯೇ॥ ೨೧೪॥

(ಎಂದು ಮೂರ್ಛೆವೋದಪಂ.)

ಶರ್ವಿಲ:—ಅಹಹಾ!! ಪ್ರಮಾದಂ ಬಂದುದು:

ವೃ॥ ಇತ್ತಲಾರ್ಯಂ ಮೋಹವಾತ॥
ನತ್ತ ಪೋಪುದುಂ ಬೇಗನೆ।
ಮತ್ತಂ ಪ್ರಯತ್ನವೈಫಲ್ಯ।
ಮೆತ್ತಲುಂ ತೋರ್ಪುದಕ್ಕಟಾ॥ ೨೧೫॥

ವಸಂತ॥ ಆರ್ಯನು ತೆಪ್ಪರಿಸಿಕೊಳ್ಳಬೇಕು. ಅಲ್ಲಿಗೆ ಹೋಗಿಯೇ ದೇವಿಯನ್ನು ಬದುಕಿಸಬೇಕು ಹಾಗೆ ಮಾಡದಿದ್ದರೆ ಅಲ್ಲಿ ಅನರ್ಥವೇ ಬಂದೀತು.

ಚಾರು:—(ತೆಪ್ಪರಿಸಿಕೊಂಡು ಬೇಗನೆದ್ದು) ಹಾ ಪ್ರಿಯೆಯೇ! ಎಲ್ಲಿಪೆ? ಎನಗೆ ಮಾರ್ನುಡಿಯಂ ನುಡಿ.

ಚಂದನಕನು॥ ಹೀಗೆ ಬರಬೇಕು ಹೀಗೆ ಬರಬೇಕು (ಎಂದೆಲ್ಲರೂ ಸುಳಿದಾಡುತ್ತಾರೆ.)

[ಬಳಿಕ ವಿದೂಷಕರದನಿಕೆಯೊಡನೆ ಧೂತಾದೇವಿಯು ರೋಹಸೇನನೆಂಬ ಮಗನಿಂದ ಎಳೆಸಿಕೊಳ್ಳುತ್ತಾ ಮೇಲೆ ಹೇಳಿದಂತೆ ಪ್ರವೇಶಿಸುವಳು.]

ಧೂತಾದೇವಿ॥ (ಕಣ್ಣೀರಿಂದ) ಮಗನೇ! ಬಿಡಪ್ಪಾ! ನನ್ನನ್ನು ಬಿಡು, ವಿಘ್ನವನ್ನು ಮಾಡಬೇಡ. ಆರ್ಯಪುತ್ರನಿಗಾದ ಅಮಂಗಳವನ್ನು ಕೇಳುವದರಿಂದ ಬಹುಭಯವಾಗುತ್ತೆ. (ಎಂದೆದ್ದು ಸೆರಗು ಸೆಳೆದುಕೊಂಡು ಬೆಂಕಿಯ ಎದುರಿಗೆ ಹೋಗುತ್ತಾಳೆ.)

ರೋಹಸೇನನು॥ ಅಮ್ಮಾ! ನನ್ನನ್ನು ಕಾಪಾಡು ನಿನ್ನನ್ನು ಬಿಟ್ಟು ನಾನು ಹ್ಯಾಗೆ ಬದುಕಿರಲೀ? (ಎಂದು ಬೇಗನೆ ಬಂದು ಮತ್ತೂ ಸೆರಗನ್ನು ಹಿಡಿಯುತ್ತಾನೆ.)

ವಿದೂ॥ ಬ್ರಾಹ್ಮಣಿಯಾದ ನಿನಗೆ ಪತಿಯನ್ನು ಬಿಟ್ಟು ಬೇರೆಯಾಗಿ ಬಿಕಯನ್ನೇ ಪುದು ಪಾಪವೆಂದು ಋಷಿಗಳು ಹೇಳಿಯಿದ್ದಾರೆ.

ಧೂತಾ॥ ಪಾಪಾಚರಣವಾದರೂ ಪೂರ್ಣಿಯಲೇ. ಮತ್ತು ಆರ್ಯಪುತ್ರನ ಅಜ್ಞೆಗಳನ್ನು ಕೇಳುವುದು ಮಾತ್ರ ಸರಿಯಲ್ಲ.

ಕಪಿಲ:—(ಮುಂದೆ ನೋಡಿ) ದೇವಿ ದೀಪಾಗ್ನಿಯು ಬಳಿಯಲ್ಲಿಯೆ ಯಿದ್ದೀಯಲ್. ಆದುದರಿಂ ತ್ವರೆಗೆಯ್ಗ, ತ್ವರೆಗೆಯ್ಗ,

ಚಾರು:—(ಬೇಗನೆ ನಡೆಬಪಂ.)

ಧೂತಾ॥ ಎಲೆ ರದನಿಕೆಯೇ! ಈ ಹುಡುಗನನ್ನು ಕೊಂಚ ಹಿಡಿದುಕೋ! ಬೇಗನೆ ಇಷ್ಟವನ್ನು ನೆರವೇರಿಸಿಕೊಳ್ಳುವೆನು.

ರದನಿಕೆ॥ (ವ್ಯಸನದಿಂದ) ನಾನೂ ನಿನ್ನ ಹಾಗೆಯೇ ಮಾಡುವವಳಲ್ಲವೇ?

ಧೂತಾದೇವಿ॥ (ವಿದೂಷಕನನ್ನು ನೋಡಿ) ಅಯ್ಯಾ! ಈ ಹುಡುಗನನ್ನು ಕೊಂಚ ನಿಲ್ಲಿಸಿಕೋ, ಇಷ್ಟಸಿದ್ಧಿಯನ್ನು ಮಾಡಿಕೊಳ್ಳುವೆನು.

ವಿದೂ॥ (ಅನುತಾಪದಿಂದ) ಇಷ್ಟಸಿದ್ಧಿಗೆ ಪ್ರಯತ್ನಿಸಿದವರು ಮುಂಚೆ ಬ್ರಾಹ್ಮಣನಿಗೆ ಮಾಡಿಸಬೇಕು. ಆದ್ದರಿಂದ ನಿನಗಿಂತಲೂ ನಾನೇ ಮುಂಚೆ ಇಷ್ಟಸಿದ್ಧಿಯನ್ನು ಮಾಡಿಕೊಳ್ಳುತ್ತೇನೆ.

ಧೂತಾದೇವಿ॥ ಎನಿಬ್ಬರಿಂದಲೂ ನಿರಾಕೃತಳಾದೆನಲ್ಲಾ? (ಹುಡುಗನನ್ನಪ್ಪಿಕೊಂಡು) ಅಪ್ಪಾ ಮಗುವೇ! ನೀನೇ ಸಮಾಧಾನವನ್ನು ಹೊಂದಪ್ಪಾ! ನಮಗೆ ಎಳ್ಳುನೀರು ಬಿಡುವುದಕ್ಕೆ ನೀನೇ ಆಗಬೇಕಲ್ಲವೆ? ಇನ್ನಾ ನಿನ್ನ ಬಯಕೆಗಳೇನು ತೀರಿತಪ್ಪಾ? (ನಿಟ್ಟುಸಿರುಬಿಟ್ಟು) ನಿನ್ನನ್ನು ಆರ್ಯಪುತ್ರನ ಹಾಗೆ ಯಾರೂ ನಿಲ್ಲಿಸಿಕೊಳುವರಿಲ್ಲವಲ್ಲಾ!

ಚಾರು:—(ಕೇಳ್ದು ಭೋಂಕನೆ ಬಳಿಗೆ ಬಂದು) ಈ ಮಗುವಂ ನಾನೇ ನಿಲ್ಲಿಸಿಗೊಂಡಪೆಂ. (ಎಂದು ಬಾಲನಂ ತೋಳ್ಗಳಿಂದೆತ್ತಿ ಯೆರ್ದೆಯಿಂದಪ್ಪಿದಪಂ.)

ಧೂತಾ॥ (ನೋಡಿ) ಇದೇನಾಶ್ಚರ್ಯವು? ಆರ್ಯಪುತ್ರನ ಸ್ವರವಿದ್ದ ಹಾಗೆಯಿದೆ. (ಮತ್ತೆ ಚೆನ್ನಾಗಿ ನೋಡಿ ಸಂತೋಷದಿಂದ) ಈತನಾರ್ಯಪುತ್ರನೇ ಸರಿ, ಸಂತೋಷವು.

ರೋಹಸೇ॥ (ನೋಡಿ ಸಂತೋಷದಿಂದ) ಆಶ್ಚರ್ಯವು! ಅಪ್ಪ ನನ್ನನ್ನಪ್ಪಿಕೊಳ್ಳುತ್ತಾನೆ. (ತಾಯಿಯಂ ಕುರಿತು) ಅಮ್ಮಾ! ಪುಣ್ಯದಿಂದ ಬೆಳೆಯುತ್ತೀಯೆ. ಅಪ್ಪನೇ ನನ್ನನ್ನು ನಿಲ್ಲಿಸಿಕೊಂಡಿದ್ದಾನೆ. (ಎಂದು ತಂದೆಯಂ ಅಪ್ಪಿಕೊಳ್ಳುತ್ತಾನೆ.)

ಚಾರು:—(ಧೂತಾದೇವಿಯನುದ್ದೇಶಿಸಿ.)

ಕಂ ॥ ಇನಿಯಂ ತಾನಿತ್ತಮಿರ
ಲ್ಕಿನಿಯಳೆ! ಇಂತಪ್ಪ ಘೋರಕಾರ್ಯಮದೇನಾ॥

ಇನನಸ್ತಮಿಸದಮುನ್ನ

ಮ್ಮನಿ ನಿಜಲೋಚನದಮುದ್ರಣಂಗೈದಪ್ಪುದೇ॥೩೧೬॥

ಧೂತಾ॥ ಆರ್ಯಪುತ್ರನೇ! ಆದ್ದರಿಂದಲೇ ಅದು ಅಚೇತನವೆನ್ನಿಸಿಕೊಳ್ಳುತ್ತಾ ಮುದ್ರಿಸಿಕೊಳ್ಳುವುದು.

ವಿದೂ॥ (ನೋಡಿಸಂತೋಷದಿಂದ) ಇದೇಕಣ್ಣುಗಳಿಂದಲೇ ಪ್ರಿಯಮಿತ್ರನನ್ನು ನೋಡಿದೆನಲ್ಲಾ. ಆಹ! ಪತಿವ್ರತೆಯ ಮಹಿಮೆಯೆಂಥಾದ್ದೋ? ಅಗ್ನಿಪ್ರವೇಶಮಾಡುವ ಪ್ರಯತ್ನದಿಂದಲೇ ಪ್ರಿಯನನ್ನು ಹೊಂದಿದಳಲ್ಲಾ. (ಚಾರುದತ್ತನಂ ಕುರಿತು,) ಜಯವಾಗಲಿ ಪ್ರಿಯಮಿತ್ರನಿಗೆಜಯವಾಗಲಿ.

ಚಾರು:—ಬಾರೈ ಮೈತ್ರೇಯನೇ! (ಎಂದಪ್ಪಿದಪಂ.)

ರದನಿಕೆ॥ ಆಹಾ! ಇದೇನು ದೈವಘಟನೆ. ಅಣ್ಣಾ! ನಮಸ್ಕಾರಮಾಡುತ್ತೇನೆ (ಎಂದು ಚಾರುದತ್ತನಕಾಲಿಗೆ ಬೀಳುತ್ತಾಳೆ.)

ಚಾರು:—(ಬೆನ್ನಮೇಲೆಕೈಯಿಟ್ಟು) ರದನಿಕೆಯೇ! ಏಳ್ (ಎಂದೆಳ್ಚಿಸುವಂ)

ಧೂತಾ॥ (ವಸಂತಸೇನೆಯಂನೋಡಿ) ದೈವಯೋಗದಿಂ ಪತಂಗಿಯು ಕ್ಷೇಮವಾಗಿರುವಳೇ?

ವಸಂತ॥ ಈಗಕ್ಷೇಮವಾಯಿತು (ಎಂದು ಒಬ್ಬರಿಗೊಬ್ಬರು ತಬ್ಬಿಕೊಳ್ಳುತ್ತಾರೆ.)

ಶರ್ವಿಲ:—ಈಗಳಾರ್ಯಂಪುಣ್ಯದಿಂ ಜೀವಿತ ಸುಹೃದ್ವರ್ಗನಾದಂ.

ಚಾರು:—ನಿಮ್ಮನುಗ್ರಹದಿಂದವೇ.

ಶರ್ವಿಲ:—ಆರ್ಯೆಯಾದವಸಂತಸೇನೆಯೇ! ಸಂತುಷ್ಟನಾದರಸಂ ನಿನ್ನಂವಧೂಶಬ್ದದಿಂದನುಗ್ರಹಿಸಿದಪಂ.

ವಸಂತ॥ ಆರ್ಯನೇ! ಕೃತಾರ್ಥಳಾದೆನು.

ಶರ್ವಿಲ:—(ವಸಂತಸೇನೆಗೆಮುಸುಕಿಟ್ಟು, ಗರುತೆಯಾಗಿಸಿ,) ಅಯ್ಯಾ! ಆರ್ಯಚಾರುದತ್ತನೇ! ಈ ಯತಿಗೇನೆಸಗಲ್ತಕ್ಕದು?

ಚಾರು:—ಪರಿವ್ರಾಜಕನೇ! ನಿನಗಭಿಮತವಾವುದೇನುಸಿರ್?

ಯತಿ॥ ಇಂಥಾನಶ್ವರಸ್ಥಿತಿಯನ್ನುನೋಡಿ ನನಗೆ ಸನ್ಯಾಸದಲ್ಲಿ ಅಭಿಮಾನವೂದ್ವಿಗುಣವಾಯಿತು,

ಚಾರು:—ಮಿತ್ರನೇ! ನಿನಗೀನಿಶ್ಚಯಂ ದೃಢವಾಯಿತೋ? ಅದೊಡೆ ಪೊಡವಿಯೊಳೆತ್ತಲುಂಸರ್ವಚೈತ್ಯಾಲಯಂಗಳಲ್ಲಿಯುಮೀತಂ ಕುಲಪತಿಯಾಗಿಕ್ಕೆ.

ಶರ್ವಿಲ:—ಆರ್ಯಂ ಪೇಳ್ದಂತಕ್ಕೆ.

ಯತಿ:—ಅದುನಮಗೆ ಪ್ರಿಯಮೆಸಗಿ.

ವಸಂತ॥ಈಗಚೆನ್ನಾಗಿ ಬದುಕಿದವಳಾದೆನು.

ಶರ್ವಿಲ:—ಸ್ಥಾವರಕಂಗೇನೆ ಸಗಲ್ತಕ್ಕದು?

ಚಾರು:—ಅವನಾಗಳುಂ ಶಾಸನಲ್ಲದಿಕ್ಕೆ; ಅಖಂಡಾಲರುಂ ಸರ್ವತಂತ್ರಾಲಗಳುಂ ಪ್ರಭುಗಳಕ್ಕೆ, ಚಂದನಕಂ ಸರ್ವ ಸೇನಾಪತಿಯಕ್ಕೆ, ಆ ರಾಷ್ಟ್ರಿಯಶ್ಯಾಲಂ ಶುಲ್ಕವಿದ್ದಂತಿಕ್ಕೆ.

ಶರ್ವಿಲ:—ಎಲ್ಲಮುಂ ಆರ್ಯಂಪೇಳ್ದಂತಕ್ಕೆ; ಅದೊಡಮಾಪಾಪಿಯಂ ಬಿಡು ಬಿಡು, ಕೊಂದಪೆಂ.

ಚಾರು:—ಶರಣಾಗತಂಗಭಯಮೀಸರಿ.

ಕಂ॥ ಅಸುಹೃದನುಂ ಕೃತದೋಷಂ
ಪಿಸುಣಾಂ ಮರೆವೊಕ್ಕು ಕಾಲ್ಗೆ ಬೀಳಲ್ಕವನಂ
ಅಸಿಯಿಂದಿರಿಯಲ್ಕನುಚಿತ
ಮೊಸೆದುಪಕರಿಸಲ್ಕೆ ಜೀವಿತಂ ಮೃತನಲ್ತೇ॥೨೧೭॥

ಶರ್ವಿಲ:—ಅದೊಡಿನ್ನೇಂ ಪ್ರಿಯಮನೆಸಗಲ್ತಕ್ಕುದೋ ಆಜ್ಞಾಪಿಸುಗೆ.?

ಚಾರು:—ಇದರತ್ತಣಿಂದಿನ್ನೇಂ ಪ್ರಿಯಮಿಕ್ಕುಂ!

ವೃ॥ ನೆರೆಶೀಲಂ ಶುದ್ಧಮಾಯ್ತೆನ್ನಡಿಯೊಳೆ ಕೆಡೆದೀ ಶತ್ರುವುಂ ಮುಕ್ತನಾದಂ
ತಿರೆಯಂ ಪಾಲಿಪ್ಪನಾಯಾರ್ಯಕನರಿಗಳನುನ್ಮೂಲನಂಗೈದು ಪುಣ್ಯೋ
ತ್ಕರದಿಂದೀಕಾಂತೆ ಬರ್ದುಂಕಿದಳೆನಗಿದೊ ಸೀನಾಪ್ತಸನ್ಮಿತ್ರನಾದ್ಯೈ
ಪಿರಿದಿನ್ನೇಂ ಲಭ್ಯಮಿಕ್ಕುಂ ಕರಮೆರೆವೆನದೇಂ ನಿನ್ನನಾಂ ಮತ್ತಮಿನ್ನಾಗಳ್॥೨೧೮॥

ವೃ॥ ಕೆಲಬರನೆಳ್ಚುತಂ ಕೆಲರ ಬೀಳಿಸುತಂ ಬರಿದಾಗಿಸುತ್ತಮೀಣ್
ಕೆಲಬರನರ್ಥದಿಂ ದೆನೆರೆತುಬ್ಬುಂತೆ ಬೀಗಿಸಿ ಮತ್ತೆ ದುಃಖದಿಂ
ಕೆಲಬರನಾಂಕುತಿಂತುರೆವಿರುದ್ಧ ಜಗತ್ಸ್ಥಿತಿಬೋಧಮಂಗುಡಲ್
ವಿಲಸಿಕುಮೀಜಲೋದ್ಧರಣಾಯಂತ್ರಘಟೀಕ್ರಮಸಕ್ತ ದೈವಮುಂ॥೨೧೯॥

ಅಂತಾದೊಡಮೀ ಭರತವಾಕ್ಯಮಿಂತಿಕ್ಕೆ

ವೃ॥ ತಿರೆಯೊಳಗೆಲ್ಲ ಪೈರ್ಗಳಿಗೆ ಕಾಲದೆ ವೃಷ್ಟಿಯುಮಕ್ಕೆ ಧೇನುಗಳ್
ಸುರಿಸುಗೆ ಪಾಲನೊಲ್ದು ಜನಸೌಖ್ಯಕೆ ತೀಡುಗೆ ತಂಬೆಲ ನೃಪರ್
ಅರಿಗಳಗೆಲ್ದು ಧರ್ಮದಿಳೆಯೋವುಗೆ ಯಜ್ಞವಗೆಯ್ಗೆ ವಿಪ್ರರುಂ
ಸಿರಿವಡೆದಿರ್ಕೆ ಸಾಧುಗಳನಂತಸುಖಂದಳೆಗೆಲ್ಲ ಲೋಕಮುಂ॥೨೨೦॥

(ಎಂದೆಲ್ಲರುಂ ಪೊರಮಟ್ಟರ್.)

ಇಂತೆಂಬಲ್ಲಿಗೆ ಮೃಚ್ಛಕಟಿಕಪ್ರಕರಣದೊಳ್

ಸಂಹಾರವೆಂಬ ಹತ್ತನೆಯ ಅಂಕಂ.

ಮುಗಿದುದು.

ಮೃಛ್ಛಕಟಿಕಪ್ರಕರಣದಲ್ಲಿ

ಕಂ॥ ಕಲಿಯೊಳ್ ತ್ರಿಸಹಸ್ರಾಬ್ದಂ
ಕಳೆಯಲ್ ಶೂದ್ರಕನೃಪಾಲನೊಗೆದೀ ಕೃತಿಯಂ
ಇಳೆಯೊಳ್ ಲೌಕಿಕದಿರವಂ
ತಿಳಿಪಲ್, ಸದಸದ್ವಿವೇಕ ಮುಣ್ಮಲ್ಪೇಳ್ದಂ॥

—(*)—

ಕಂ॥ ಸಿರಿಯುರಸನ ಪದಕಮಲದೊ
ಳಿರಿಸಿ ಶ್ರೀಚಾಮರಾಜದಯೆಯುಂ ಬಯಸು
ತ್ತೊರೆದೀ ಕನ್ನಡಗಬ್ಬವ
ನುರೆ ತಣಿದಂ ತಾನೆ ಗರಣಿಕೃಷ್ಣಾಚಾರ್ಯಂ॥

ಶ್ರೀಮತ್ಸವಿರಾರಸಮಯಸಿಂಧುಸಮುತ್ತೀರ್ಣಪರಿಗಿಸ್ಪುರೀಸನ್ನಿಹಿತ
ಗರಣಿಗ್ರಾಮವಾಸ್ತವ್ಯವೈಯಾಕರಣತಿಮ್ಮಣ್ಣಾಚಾರ್ಯಪುತ್ರನಿಂ
ಗರಣಿವೈಯಾಕರಣಕೃಷ್ಣಾಚಾರ್ಯನಿಂ ಕನ್ನಡಿಸಲ್ಪಟ್ಟ
ಕರ್ಣಾಟಕ ಮೃಚ್ಛಕಟಿಕಪ್ರಕರಣಂ

ಸಂಪೂರ್ಣವಾದುದು.

ಶ್ರೀ ಕೃಷ್ಣಾರ್ಪಣಮಸ್ತು.

ಪಟದ ನಪಹಾಸ್ಯತೆಯು ಗಡ

ಬಿಡುವನೆ ಯಾವಂಸವಂತುವ ರೆಯೆ ರಕ್ಷಣಂ ೧೩॥

ಕನು॥ ಇದೇನುಗೋಪಾಲ ನಾದಾರ್ಯಕನೋಗಿಯನ್ನು ಭಯಪಟ್ಟ ಪಕ್ಷಿಯು ಬೇಡನ ಕೈಯಲ್ಲಿ ಬಿದ್ದಹಾಗಾಯಿತು (ಯೋಚಿಸಿ) ಇವನು ಶರಣಾಗತನು - ಮತ್ತು ಆರ್ಯ ಚಾರುದತ್ತನ ಬಂಡಿಯನ್ನೇರಿರುವನು. ನನ್ನ ಪ್ರಾಣದಾಯಕನಾದ ಆರ್ಯಶರ್ವಿಲಕನಿಗೆ ಗೆಳೆಯನೂ ಆಗಿದ್ದಾನೆ. ರಾಜಾಜ್ಞೆಯೊಂದು ಕಡೆಬಲವಾಗಿದೆ, ಆದ್ದರಿಂದ ಈಗೇನುಮಾಡಬಹುದು? ಅಥವಾ ಏನಾಗುತ್ತೋ ಆಗಲಿ. ಮೊದಲೇ ಅಭಯವನ್ನು ಕೊಟ್ಟಿರುವೆನು-

ಕಂ॥ ಭಯದಿಂಮರೆ ಹೊಂದಿದವಗ

ಭಯದಾನವ ಮಾಡಿಲೋಕ ದೊಳಗಿಂತುಪಕಾ

ರಿಯೆನಿಸಿದ ವನಿಗೆ ಕೇಡುಸ

ಮಯದಲಿ ಬರಬಹುದು ಬರಲಿ ಯಾದರು ಗುಣವೇ॥೧೩॥

(ಭಯದಿಂದಿಳಿದು) ನೋಡಿದೆನು ಆರ್ಯನನ್ನು (ಅಷ್ಟರಲ್ಲಿಯೇ) ಉಃ, ಅಲ್ಲಲ್ಲ; ಆರ್ಯಳಾದ ವಸಂತಸೇನೆಯನ್ನು ಆಕೆ “ಇದು ಸರಿಯಲ್ಲವು ಇದೋ ನಾನು ಆರ್ಯಚಾರುದತ್ತನೊಂದಿಗೆ ವಿಹಾರಾರ್ಥವಾಗಿ ಹೋಗುವಾಗರಾಜಮಾರ್ಗದಲ್ಲಿ ಹೀಗೆಅವಮಾನಮಾಡುವದು ಯುಕ್ತವಲ್ಲ” ವೆಂದುಹೇಳುತ್ತಾಳೆ.

ವೀರಕ॥ ಚಂದನಕನೇ! ಇಲ್ಲಿ ನನಗೊಂದು ಸಂದೇಹವುಂಟಾಯಿತು.

ಚಂದನ॥ ನಿನಗೆಸಂಶಯವೇತಕ್ಕೆ?

ವೀರಕ॥ ಭಯದಗದ್ಗದಸ್ವರದಿಂದ “ಮುಂಚೆನೋಡಿದೆನು ಆರ್ಯನನ್ನು” ಎಂದುಹೇಳಿ ಆಮೇಲೆ “ಉಃ ಅಲ್ಲಲ್ಲ ಆರ್ಯಳಾದ ವಸಂತಸೇನೆಯನ್ನು” ಎಂದು ಹೇಳಿದಿ ಆದ್ದರಿಂದನನಗೆ ಅಪನಂಬಿಕೆ.

ಚಂದನ॥ ಎಲಾ! ನಿನಗೇಕೋ ಅಪನಂಬಿಕೆ? ನಾವುದಾಕ್ಷಿಣಾತ್ಯರು. ದ್ರಾವಿಡಾದ್ಯನೇಕ ದೇಶಭಾಷಾಭಿಜ್ಞರೂಆದ್ದರಿಂದ ದ್ರುತೋಚ್ಚಾರಣೆಯಿಂದ ಯಥೇಚ್ಛವಾಗಿ ಮಾತನಾಡುವೆವು. ಏನುಶಬ್ದವಿಚಾರವೋ ಲಿಂಗವಿಚಾರವೋ?

ವೀರಕ॥ ಸರಿಸರಿ, ಆದರೆನಾನುನಾನೋಡುತ್ತೇನೆ. ಇದುರಾಜಾಜ್ಞೆಯು ನಾನು ಅರಸಿಗೆ ಆಪ್ತನಾಗಿರುವೆನು-

ಚಂದನ॥ ಆದರೆನಾನೇನು ಆಪ್ತನಲ್ಲವಷ್ಟೆ?

ವೀರಕ॥ ಹಾಗಲ್ಲ. ನನಗೆ ಅರಸಿನಕಟ್ಟಳೆಯುಂಟು.

ಚಂದನ॥ (ಮನಸ್ಸಿನಲ್ಲಿ) ಈಗೊಲ್ಲನು ಆರ್ಯಚಾರುದತ್ತನಬಂಡಿಯನ್ನು ಹತ್ತಿ ಹೋಗುತ್ತಿದ್ದಾನೆಯೆಂದು- ಹೇಳಿದರೆ ಆಗಆರ್ಯಚಾರುದತ್ತನಿಗೂ ಶಿಕ್ಷೆಯಾದೀತು ಆದ್ದರಿಂದ ಇಲ್ಲಿ ಯೇನುಪಾಯವನ್ನು ಮಾಡಲಿ (ಯೋಚಿಸಿ) ಕರ್ಣಾಟಕಕಲ

(ಎಡಗಣ್ಣೆತ್ತು ವುದಂ ತೋರಿಸಿ). ವಯಸ್ಯನೇ! ವಸಂತಸೇನೆಯುಂ ಕಿ ಳಸಿರ್ದಪಂ ತಾಂ, ನೋಡು—

ಕಂ॥ ಇನೆಯಳ ನಾಳೆಯ ನೋಡದ
ತನಗೀಗ ಳ್ವಾಮನೇತ್ರ ಮಿಂತದಿರ್ದಪುದ್ದೈ॥
ಅನಿಮಿತ್ತ ಪರಿತಾಪಸದೆ
ಮನಮಿದು ಮುದ್ವೇಗವಾಂತು ಬೆನ್ನಳ ವಲ್ಲಂ॥ ೧೮॥

ಅದರಿಂಬಾರೈಪೋಪೆವಾಂ. (ನಡೆದು) ಇದೇನಿಂತಿದಿರೊಳ್ ಅಮಂಗಳವಾ ಮಣಕದರ್ಶನಮಪ್ಪುದು. (ಯೋಚಿಸಿ) ಈ ಯತಿಯು ಮೀಬಟ್ಟೆಯೊಳ್ ಕೆ. ಆಮುವಾಸಂಥಾನದೊಳ್ಪೋದಪೆವು

(ಎಂದೆಲ್ಲರುಂ ಪೊರಮಟ್ಟರ್.)

ಇಂತೆಂಬಲ್ಲಿಗೆ ವೃಚ್ಛಕಟಿಕ ಪ್ರಕರಣದೊಳ್

ಆರ್ಯಕಾಪಹರಣವೆಂಬ

ಏಳನೆಯ ಅಂಕಂ.

ಮುಗಿದುದು.

ಮೃಚ್ಛಕಟಿಕ ಪ್ರಕರಣಂ.

ಅಷ್ಟಮಾಂಕಂ.

[ಬಳಿಕೆಹೊದ್ದ ಕಾವಿಯುಶಾಟಿಯುಂ ಕೈಯಲಿಹಿಡಿದಯತಿಯುಪ್ಪುಗುವಂ]

ಯತಿಯು॥ ಅಜ್ಞರೇ! ಧರ್ಮವನ್ನು ಸಂಪಾದಿಸಿಕೊಳ್ಳಿರಿ.

ವೃ॥ ಹೊಟ್ಟೆಯನ್ನು ಕಟ್ಟಬೇಕು ನಿತ್ಯದಲ್ಲಿ ನೀ ವಿದೋ
ಕೆಟ್ಟಯಿಂದ್ರಿಯಂಗಳೆಂಬ ಕಳ್ಳರಿಂ ತುಮುಂಚೆಕೂ
ದಿಟ್ಟಧರ್ಮವನ್ನು ಕದ್ದು ಕೊಂಡು ಹೋಗುವರ್ಮನಂ
ಮುಟ್ಟಯೋಗ ನಿಷ್ಠರಾಗಿ ಜಾಗರೂಕ ರಾಗಿರ್ಪೈ॥೧೯॥

ಮತ್ತು ನಾನು ಈಸಂಸಾರವನ್ನುನಶ್ವರವಾಗಿ ತಿಳಿದು ಧರ್ಮ ವನ್ನೇ ಶರ ಣು ಹೊಂದಿರುವೆನು

ಕಂ॥ ಸಾಯಿಸಿ ಜನ ಪಂಚಕವನು
ಸಾಯಿಸಿ ಚಂಡಾಲನಾದದುರ್ಬಾಲವನನ್ನು
ಸಾಯಿಸಿ ಹೆಣ್ಣುಸುಗ್ರಾಮವನ
ಕಾಯುವ ಮನುಜನಿಗೆ ಸಾಕೆ ಲೋಕವೆ ಅಹುದೈ ॥೧೯೧॥

ವೃ॥ ಮಂಡೆಯು ಗಡ್ಡವು ಮುಂಡಿತ ವಾಯಿತು
ಕಂಡಿರೆ ಚಿತ್ತವು ಮುಂಡಿತವಲ್ಲಾ
ಮುಂಡಿತವಾಯಿತೆ ಚಿತ್ತವು ಯಾವನ
ಮಂಡೆಯು ಮುಂಡಿತವೇಸರಿಯವಗೇ॥೧೯-೨॥

ಕಾವಿಯ ಕಷಾಯದಲ್ಲಿ ನೆನೆದೀ ಶಾಟಿಗಳನ್ನು ರಾಜಶ್ಯಾಲಕನ ತೋಟಕ್ಕೆ ಹೋಗಿ ಕೊಳದಲ್ಲಿ ಒಗೆದುಕೊಂಡು ಬೇಗಬೇಗ ಹೋಗುವೆನು.(ಹೋಗಿ ಹಾಗೆಮಾಡುತ್ತಾನೆ)

(ತೆರೆಯಲ್ಲಿ) ಎಲಾ ದುಷ್ಟಶ್ರಮಣಕನೇ! ನಿಲ್ಲುನಿಲ್ಲು!

ಯತಿಯು॥ (ನೋಡಿಭಯದಿಂದ) ಓಹೋ!ರಾಜಶ್ಯಾಲನಾದ ಶಕಾರನೇ ಬಂದನು. ಇವನು ಒಬ್ಬಸನ್ಯಾಸಿ ತಪ್ಪುಮಾಡಿದರೆ ಎಲ್ಲಿನೋಡಿದರಲ್ಲಿ ಯೆಲ್ಲಾಸನ್ಯಾಸಿಗಳನ್ನೂ ದನದಂತೆ ಮೂಗುರಾಣಿ ಹಾಕಿ ಯೆಳೆಯಿಸುವನು. ಆದ್ದರಿಂದ ದಿಕ್ಕಿಲ್ಲದ ನಾನು ಯಾರನ್ನುಮರೆಹೊಂದಲಿ!ಆಗಲಿ ಪ್ರಭುವಾದ ಬುದ್ಧದೇವರೇ ಶರಣವು.

[ಖಡ್ಗಪಾಣಿಯಾದ ವಿಟನಿಂದ ಕೂಡಿಶಕಾರನು ಬರುವನು]

ಶಕಾರನು॥ ಎಲಾ ದುಷ್ಟಶ್ರಮಣಕನೇ! ನಿಲ್ಲು ನಿಲ್ಲು! ಪಾನಕ ದೊಳಗೆದ ವೃಳೆಯನ್ನು ತೆಗದು ಹಾಕಿದಂತೆ ನಿನ್ನ ತಲೆಯನ್ನು ತೆಗದುಬಿಡುವೆನು.

(ಎಂದು ಹೊಡೆಯುತ್ತಾನೆ-)

ವಿಟಂ:—ಎಲೆಕಾಣೇಲೀಪುತ್ರನೇ! ವೈರಾಗ್ಯದಿಂ ಕೆಂಬರಿವೆಯನಾಂತ ಭಿಕ್ಷುವಂ ಬಡಿಯಲುಚಿತಮಲ್ಲಂ. ಇದರಿಂದೇಂ?ಉದ್ಯಾನವಿದುಜನಕ್ಕೆ ಸುಖೋಪಗಮ್ಯಮಲ್ತೇ! ನೀ ನಿತ್ತ ನೋಡು:—

ಕಂ॥ನೆಲೆಯಿಲ್ಲ ದಗ್ಗ ನಲವಿನ
ನೆಲೆಯಾದೀ ಮರಗಳುಳ್ಳ ಸೊಬಗಿನ ತೋಂಟಂ
ಖಲಚಿತ್ತದಂ ತಗುಪ್ತಂ
ವಲವುಪ ಭೋಗ್ಯಂಜನಕ್ಕೆ ನವರಾಜ್ಯದವೋಲ್ ॥ ೧೯-೩॥

ಯತಿಯು॥ ಉಪಾಸಕನಿಗೆ ಸ್ವಾಗತವು. ಪ್ರಸನ್ನನಾಗಬೇಕು.

ಶಕಾರ॥ ಭಾವನೇ! ನೋಡು ನೋಡು! ನನ್ನನ್ನು ತಿರಸ್ಕರಿಸುತ್ತಿದ್ದಾನೆ.

ವಿಟಂ:—ಏಂ ಪೇಳ್ದಪಂ?